ಕರ್ನಾಟಕದ ನಿಸರ್ಗ ಚಿತ್ರಕಲೆ

(ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ)

ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಸಂಪ್ರಬಂಧ



ಸಂಶೋಧಕರು

ನಿಜಲಿಂಗ ಮುಗಳಿ

ಮಾರ್ಗದರ್ಶಕರು

ಪ್ರೊ. ಎಸ್.ಸಿ. ಪಾಟೀಲ

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
2016

ಕರ್ನಾಟಕದ ನಿಸರ್ಗ ಚಿತ್ರಕಲೆ

(ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ)

(ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ಸಂಶೋಧಕರು
ನಿಜಲಿಂಗ ಮುಗಳಿ

ಮಾರ್ಗದರ್ಶಕರು
ಪ್ರೊ. ಎಸ್. ಸಿ. ಪಾಟೀಲ
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ, ಬೆಂಗಳೂರು

ದೃಶ್ಯಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೬

ಪ್ರಮಾಣ ಪತ್ರ

ಕರ್ನಾಟಕದ ನಿಸರ್ಗ ಚಿತ್ರಕಲೆ (ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ಮಾರ್ಗದರ್ಶಕರು ಹಾಗೂ ನಿಯೋಜಿತ ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯದ ವಿಶೇಷಾಧಿಕಾರಿಗಳಾದ **ಪ್ರೊ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಪ್ರಸ್ತುತ ಈ ಸಂಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೆ ಯಾವುದೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 20.09.2016

ಸ್ಥಳ: ವಿದ್ಯಾರಣ್ಯ

(ನಿಜಲಿಂಗ ಮುಗಳಿ)
ಸಂಶೋಧನ ವಿದ್ಯಾರ್ಥಿ
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ದೃಢೀಕರಣ ಪತ್ರ

ನಿಜಲಿಂಗ ಮುಗಳಿ ಇವರು ಬರೆದು ಸಾದರಪಡಿಸಿದ **ಕರ್ನಾಟಕದ ನಿಸರ್ಗ ಚಿತ್ರಕಲೆ (ಉತ್ತರಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಈ ಎಂ.ಫಿಲ್ ಪ್ರಬಂಧವು ಮೂಲ ಸಂಶೋಧನಾ ಕೃತಿಯಾಗಿದ್ದು, ಇವರು ನನ್ನ ಮಾರ್ಗದರ್ಶನದಲ್ಲಿ ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಈ ಸಂಪ್ರಬಂಧವನ್ನು ಸಿದ್ಧಪಡಿಸಿದ್ದಾರೆ.

ಪ್ರಸ್ತುತ ಈ ಸಂಪ್ರಬಂಧ ಇಡಿಯಾಗಿ, ಇಲ್ಲವೆ ಬಿಡಿಯಾಗಿ ಈ ಮೊದಲು ಎಲ್ಲಿಯೂ ಪ್ರಕಟವಾಗಿಲ್ಲವೆಂದು ಈ ಮೂಲಕ ಧೃಢೀಕರಿಸುತ್ತೇನೆ.

ದಿನಾಂಕ: 20.09.2016

ಸ್ಥಳ: ವಿದ್ಯಾರಣ್ಯ

(ಪ್ರೊ. ಎಸ್. ಸಿ. ಪಾಟೀಲ)
ಮಾರ್ಗದರ್ಶಕರು
ವಿಶೇಷಾಧಿಕಾರಿಗಳು
ಕರ್ನಾಟಕ ಲಲಿತಕಲಾ ವಿಶ್ವವಿದ್ಯಾಲಯ,
ಪ್ರಾದೇಶಿಕ ಕಛೇರಿ, ಬೆಂಗಳೂರು

ದೃಢೀಕರಣ ಪತ್ರ

ನಿಜಲಿಂಗ ಮುಗಳಿ ಅವರು **ಕರ್ನಾಟಕದ** ನಿಸರ್ಗ **ಚಿತ್ರಕಲೆ (ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ)** ಎಂಬ ಶೀರ್ಷಿಕೆಯ ಎಂ.ಫಿಲ್ ಸಂಶೋಧನಾ ಪ್ರಬಂಧವನ್ನು **ಪ್ರೊ. ಎಸ್. ಸಿ. ಪಾಟೀಲ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಕನ್ನಡ ವಿಶ್ವವಿದ್ಯಾಲಯದ ದೃಶ್ಯಕಲಾ ವಿಭಾಗಕ್ಕೆ ಎಂ.ಫಿಲ್ ಪದವಿಗಾಗಿ ಸಲ್ಲಿಸುತ್ತಿದ್ದಾರೆ.

ದಿನಾಂಕ: ೨೨.೦೯.೨೦೧೬

ಸ್ಥಳ: ವಿದ್ಯಾರಣ್ಯ

೨೨.೯.೨೦೧೬

(ಡಾ. ಹನುಮಣ್ಣನಾಯಕ ದೊರೆ)
ಮುಖ್ಯಸ್ಥರು
ದೃಶ್ಯಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ

ಕಲಾವಿದನು ಪ್ರಕೃತಿಯನ್ನು ನೋಡಿ ಅದರಿಂದ ಪ್ರೇರಣೆಯನ್ನು ಪಡೆಯುತ್ತಾನೆ. ಅಲ್ಲಿನ ಭೂಮಿ, ಆಕಾಶ, ಪ್ರಾಣಿ, ಪಕ್ಷಿ, ಗಿಡ, ಮರ, ಪರ್ವತ, ಮೋಡಗಳಿಂದ ಮಳೆಗಾಲದ ಅದರ ಸ್ಪರ್ಶ ಜ್ಞಾನದಿಂದ ಅನೇಕ ವಿಷಯಗಳನ್ನು ತಿಳಿದುಕೊಳ್ಳುತ್ತಾನೆ. ಪ್ರಕೃತಿಯ ಸ್ಪಂದನೆಯಿಂದ ಅದರ ಪರಿಣಾಮವನ್ನು ಅನಿಸಿಕೆಯನ್ನು ಚಿತ್ರ ರಚನೆಯ ಮೂಲಕ ಅಭಿವ್ಯಕ್ತಿಗೊಳಿಸುತ್ತಾನೆ. ರೇಖೆ, ಆಕಾರ, ವರ್ಣಗಳಿಂದ ವ್ಯವಸ್ಥಿತವಾಗಿ ಸಂಯೋಜಿಸುತ್ತಾನೆ. ತಮ್ಮಲ್ಲಿದ್ದ ಪ್ರತಿಭಾವಂತಿಕೆಯಿಂದ ಪ್ರಕೃತಿಯನ್ನು ಕ್ಯಾನವಾಸಿನ ಮೇಲೆ ಅಥವಾ ಹಾಳೆಯ ಮೇಲೆ ಹಿಡಿದಿರುತ್ತಾನೆ. ಇದಕ್ಕೆ ಪ್ರಕೃತಿ ಚಿತ್ರಣವೆಂದು ಕರೆಯುತ್ತಾರೆ. ಪ್ರಕೃತಿ ಮತ್ತು ಮನುಷ್ಯನ ನಡುವೆ ಅವಿನಾಭಾವ ಸಂಬಂಧವಿದೆ. ಪ್ರಕೃತಿಯ ಒಡನಾಡಿ ಬದುಕುತ್ತಿದ್ದ ಮಾನವ ಪ್ರಕೃತಿಯಲ್ಲಿನ ರಹಸ್ಯಗಳನ್ನು ಭೇಧಿಸಿ ಅರಿಯತೊಡಗಿದ್ದಾನೆ. ಹೀಗೆ ಪ್ರಕೃತಿಯನ್ನು ಅರಿಯಲು ಮಾಡಿದ ಪ್ರಯತ್ನವೇ ಮನುಷ್ಯನ ಅರಿವಿನ ವಿಸ್ತಾರಕ್ಕೆ ಕಾರಣವಾಯಿತು. ಪ್ರಕೃತಿಯ ಈ ಅನುಭವದಿಂದ ಕಂಡುಕೊಂಡ ಸತ್ಯವನ್ನು ಇತರರಿಗೆ ಹೇಳುವುದು. ಮತ್ತು ದಾಖಲಿಸುವ ಕೆಲಸ ಮಾಡಿದ. ಹಾಗೆಯೇ ತಾನು ಕಂಡ ಪ್ರಕೃತಿಯ ವಿಸ್ಮಯಗಳನ್ನು ಸೌಂದರ್ಯವನ್ನು ಕಲೆಯ ಮೂಲಕ ಸೆರೆಹಿಡಿಯಲು ಪ್ರಯತ್ನಿಸಿದನು. ಈ ಪ್ರೇರಣೆಯಿಂದ ಬಹು ಮುಖ್ಯವಾಗಿ ನಾವು ಪ್ರಕೃತಿಯನ್ನು ಮೆಚ್ಚಿಕೊಳ್ಳುತ್ತೇವೆ ಮತ್ತು ಆನಂದಿಸುತ್ತೇವೆ. ಅನೇಕ ರೀತಿಯಲ್ಲಿ ಸ್ಫೂರ್ತಿಯನ್ನು ಪಡೆದುಕೊಳ್ಳುತ್ತೇವೆ. ಹೀಗಾಗಿ ಮಾನವನ ಬದುಕಿನಲ್ಲಿ ಅವನ ವಿಶ್ವಾಸಕ್ಕಾಗಿ ಪ್ರತಿಹಂತದಲ್ಲಿ ಪ್ರಕೃತಿಯು ಸಹಾಯಕವಾಗುತ್ತದೆ. ಇದೇ ರೀತಿ ಭಾವನಾ ಜೀವಿಯಾದ ಕಲಾವಿದ ಸಾಹಿತ್ಯ, ಸಂಗೀತಗಾರ, ನಾಟಕಕಾರ ಇವರಿಗೆಲ್ಲ ವಿಶೇಷವಾದ ಸ್ಫೂರ್ತಿಯನ್ನು ತಂದುಕೊಡುವುದರ ಮೂಲಕ ವಿಶೇಷವಾದ ಅನುಭವ ಆನಂದ ಸ್ಫೂರ್ತಿಯನ್ನು ನೀಡುತ್ತದೆ. ಬರೆಯುವವರು ನೋಡುವುದಕ್ಕಿಂತಲೂ ಭಾವನಾ ಜೀವಿವುಳ್ಳ ಪ್ರಕೃತಿಯಿಂದ ಸ್ಫೂರ್ತಿಗೊಂಡು ತಮ್ಮ ಮಾಧ್ಯಮದ ಮೂಲಕ ಪ್ರಕೃತಿಯನ್ನು ವಿವರಿಸುತ್ತಾರೆ. ಅದಕ್ಕೆ ಅನೇಕ ಅರ್ಥಗಳನ್ನು ಕೊಡುತ್ತಾರೆ. ಆದರೆ ನಿರಂತರ ಬದಲಾವಣೆಗಳಿಗೆ ಮಾರುಹೋಗುತ್ತಾರೆ ಮತ್ತು ಅದರ ಪ್ರೇರಣೆ ಹಾಗೂ

ಪರಿಣಾಮದಿಂದ ಅನೇಕ ವಿಷಯಗಳನ್ನು ಪ್ರತಿಪಾದಿಸುತ್ತಾರೆ. ಇದಕ್ಕೆ ಕ್ರೀಯಾಶೀಲತೆಯೆಂದು ಕರೆಯುತ್ತಾರೆ. ಈ ಕ್ರೀಯಾಶೀಲತೆಗೆ ನಮ್ಮ ಸುತ್ತ ಮುತ್ತಲಿನ ಪ್ರಕೃತಿಯೇ ಬಹುಮುಖ್ಯವಾಗಿರುತ್ತದೆ.

ನೀರು ಬಣ್ಣಗಳು ಬಹು ಪ್ರಾಚೀನಕಾಲದಿಂದಲೂ ಇಂದಿನವರೆಗೆ ಚಿತ್ರಕಲಾ ಕ್ಷೇತ್ರದಲ್ಲಿ ಕಲಾವಿದನ ಸಂಗಾತಿಯಾಗಿ ಬೆಳೆದುಬಂದಿದೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರಮಾಡಿ ಚಿತ್ರಗಳನ್ನು ಚಿತ್ರಿಸುವುದೇ ನೀರುಬಣ್ಣದ ವಿಧಾನ. ನೀರಿನ ಬೆರಕೆಯ ಪ್ರಮಾಣದಿಂದ ಬಣ್ಣವನ್ನು ತೆಳುವಾಗಿ ಇಲ್ಲವೆ ದಪ್ಪವಾಗಿ ಮಾಡಿಕೊಂಡು ವಿವಿಧ ಪರಿಣಾಮಗಳನ್ನು ಮೂಡಿಸಲಾಗುತ್ತದೆ. ಈ ವಿಧಾನವನ್ನು ಜಲವರ್ಣ ವಿಧಾನವೆಂದು ಕರೆಯಲಾಗುತ್ತದೆ. ಈ ಜಲವರ್ಣವನ್ನು ಹೆಚ್ಚಾಗಿ ನಿಸರ್ಗಚಿತ್ರಣ ಮಾಡಲು ಬಳಸುತ್ತಾರೆ.

ಪ್ರಕೃತಿಯಲ್ಲಿ ಕಂಡುಬರುವ ನೈಸರ್ಗಿಕ ವಸ್ತುಗಳನ್ನು ಎದುರಿಗಿಟ್ಟುಕೊಂಡು ಚಿತ್ರಿಸುವ ವಿಧಾನಕ್ಕೆ ನಿಸರ್ಗ ಚಿತ್ರಲೇಖನವೆನ್ನುತ್ತಾರೆ. ನಿಸರ್ಗ ಚಿತ್ರಲೇಖನದ ಪ್ರಾರಂಭದಲ್ಲಿ ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿ ದೊರೆಯುವ ಆಲದ ಎಲೆ, ಅರಳೆ ಎಲೆ, ಮಾವಿನ ಎಲೆ, ಕಣಗಿಲ ಎಲೆ, ಗುಲಾಬಿ, ಕ್ರೋಟನ್ ಎಲೆ, ಮುಂತಾದವುಗಳನ್ನು ವಿವಿಧ ಬಗೆಯ ಹೂವುಗಳನ್ನು ಪಕ್ಷಿಗಳ ಗರಿಗಳು, ಹಣ್ಣು–ಹಂಪಲು, ಕಾಯಿ–ಸೊಪ್ಪುಗಳನ್ನು ಅಭ್ಯಾಸ ಮಾಡಬೇಕಾಗುತ್ತದೆ. ಪ್ರಾರಂಭದಲ್ಲಿ ಒಂದೇ ಎಲೆ, ಒಂದೇ ಹೂವು; ಒಂದೇ ಹಣ್ಣು ಹೀಗೆ ಚಿತ್ರಿಸುವುದನ್ನು ಕಲಿತ ನಂತರ ನಾಲ್ಕಾರು ಎಲೆಗಳುಳ್ಳ ಟೊಂಗೆ, ನಾಲ್ಕಾರು ಹೂವುಗಳ ಗೊಂಚಲು, ನಾಲ್ಕಾರು ಹಣ್ಣುಗಳ ಗುಂಪು ಇತ್ಯಾದಿಗಳನ್ನು ಎದುರಿಗಿಟ್ಟುಕೊಂಡು ಆಕಾರ–ರಚನೆಗಳನ್ನು ಎಲೆಗಳ ಭಾಗಗಳನ್ನೂ ಅಭ್ಯಸಿಸಬೇಕಾಗುತ್ತದೆ. ನಿಸರ್ಗ ಚಿತ್ರವನ್ನು ಬಣ್ಣಗಳಿಂದ ರಚಿಸಬೇಕಾಗುತ್ತದೆಯಾದ್ದರಿಂದ ರಬ್ಬರನ್ನು ಹೆಚ್ಚಾಗಿ ಬಳಸದೇ ಸಂಪೂರ್ಣ ಚಿತ್ರವನ್ನು ಸೀಸುಕಡ್ಡಿಯಿಂದ ಚಿತ್ರಿಸುವಾಗ ತೇಲಿಸಿ ಬರೆದ ರೇಖೆಗಳಿಂದ ಚಿತ್ರಸಬೇಕಾಗುತ್ತದೆ. ನಿಸರ್ಗ ಚಿತ್ರಗಳಿಗೆ ಹೆಚ್ಚಾಗಿ ಜಲವರ್ಣವನ್ನು ಉಪಯೋಗಿಸುತ್ತಾರೆ; ಚಾರಕೋಲ, ಪೆನ್ಸಿಲ್, ಪೆನ್ನು ಕ್ರೆಯಾನ್ಸ ಮತ್ತು ತೈಲವರ್ಣದಲ್ಲಿಯೂ ನಿಸರ್ಗ ಚಿತ್ರಗಳನ್ನು ಚಿತ್ರಿಸುತ್ತಾರೆ.

ಮಾನವನ ಬದುಕಿನೊಂದಿಗೆ ಅನೇಕ ಅಗತ್ಯಗಳು ಬೆರೆತುಕೊಂಡಿವೆ. ತಿನ್ನಲು ಆಹಾರ, ಕುಡಿಯಲು ನೀರು, ಉಡಲು ಬಟ್ಟೆ ಹಾಗೂ ವಾಸಿಸಲು ಮನೆ ಇಷ್ಟೇ ಬದುಕು ಎಂದರೆ ಅದು ಅರ್ಥವಿಲ್ಲದ ಬದುಕಾದೀತು. ಜೀವನ ಅರ್ಥಪೂರ್ಣವಾಗಬೇಕಾದರೆ ಬಣ್ಣಮಯವಾಗಬೇಕು, ಹಾಗೆಂದರೇನು? ಸಾಮಾನ್ಯವಾಗಿ ನಾವು ಯಾವುದಾದರೊಂದು ಅದ್ದೂರಿಯಾದ ಕಾರ್ಯಕ್ರಮವನ್ನೋ ಪ್ರರ್ದನವನ್ನೋ ನೋಡಿದಾಗ ಕಾರ್ಯಕ್ರಮ ವರ್ಣಮಯವಾಗಿತ್ತು, ಪ್ರದರ್ಶನ ವರ್ಣರಂಜಿತವಾಗಿತ್ತು. ಎಂದು ಮುಂತಾಗಿ ಬಣ್ಣಿಸುವುದುಂಟು “ಬಣ್ಣಿಸು” ಎಂಬ ಶಬ್ದವೇ “ರಂಗನ್ನು ಲೇಪಿಸು” ಎಂದರ್ಥವನ್ನು ಕೊಡುತ್ತದೆ. ಮಾತುಗಳಿಗೆ ಬಣ್ಣಕೊಡುವುದೆಂದರೇನು? “ಹೇಳುವುದನ್ನೇ ಸುಂದರವಾಗಿ ಹೇಳು”. ಎಂಬರ್ಥವನ್ನು ಸೂಚಿಸುತ್ತದೆ. ಹಾಗಾದರೆ ಸೌಂದರ್ಯ ಬಣ್ಣದ ಮೂಲಕ ಅಭಿವ್ಯಕ್ತಿಗೊಳ್ಳುತ್ತದೆಂದಾಯಿತು.

ಕಲೆ ಅತ್ಯಂತ ವ್ಯಾಪಕ ಅರ್ಥಕೊಡುವಂಥ ಶಬ್ದ. ಯಾವ ಕೆಲಸದಲ್ಲಿ ಚಾತುರ್ಯ, ಸೌಂದರ್ಯ, ಆಕರ್ಷಕತೆ, ರಸವಂತಿಕೆ, ಲಯಾತ್ಮಕತೆ, ಬಂಧ, ಛಂದಸ್ಸು ಮತ್ತು ಅಪಾರ ಸ್ವಾತಂತ್ರ್ಯದ ಅನುಭೂತಿ–ಯಾಗುತ್ತದೆಯೋ ಅಂಥ ಕೆಲಸಕ್ಕೆ ಕಲಾತ್ಮಕ ಕೆಲಸವೆಂದೇ ಹೇಳುವುದು ವಾಡಿಕೆಯಿದೆ. ವಂಚನೆ, ಕುಟಿಲತೆ,

ಮೋಸಗಾರಿಕೆ ಮತ್ತು ವಿನಾಶಕಾರಿ ಪ್ರಚೋದನೆ ಕಲೆಯಲ್ಲಿರಕೂಡದು ಅಂದರೆ, ಯಾವುದೇ ಜೀವನ ವಿರೋಧಿ ಕೃತಿ ಕೃತಿಯಾಗುವುದಿಲ್ಲ.

ಕಲೆಯನ್ನು ಸೌಂದರ್ಯದಿಂದ ಬೇರ್ಪಡಿಸಿ ನೋಡುವುದು ಸಾಧ್ಯವಾಗುವುದಿಲ್ಲ. ಕಲೆಗೆ ಸೌಂದರ್ಯ ಅವಶ್ಯವಾದಂಥ ಸ್ವಭಾವ. ಆದರೆ, 'ಸೌಂದರ್ಯ' ಈ ಶಬ್ದದ ವ್ಯಾಖ್ಯೆಯನ್ನು ಕೊಡುವುದು ಅತ್ಯಂತ ಕಠಿಣವಾದ ವಿಷಯವೇ ಸರಿ. ಸೌಂದರ್ಯದ ಆಸ್ವಾದನೆ ವ್ಯಕ್ತಿವ್ಯಕ್ತಿಗೂ ಬದಲಾದಂತೆ, ಒಬ್ಬನೇ ವ್ಯಕ್ತಿಯ ಮಾನಸಿಕ ಸ್ಥಿತಿ, ಪರಿಸರ, ಸಮಯ ಮತ್ತು ಸಹವಾಸದಿಂದಲೂ ಬದಲಾಗುತ್ತಿರುತ್ತದೆ. ಕ್ಷಣಕ್ಷಣಕ್ಕೂ ಬದಲಾಗುವಂಥ ಈ ಸೌಂದರ್ಯಾನುಭೂತಿಯನ್ನು ಸಂವೇಧನೆಯ ಮಾನದಂಡದಿಂದ, ಒಂದು ಕಲಾಕೃತಿಯಲ್ಲಿನ ಸೌಂದರ್ಯವನ್ನು ಅನುಭವಿಸಿ ಹೇಳಲು ಬರುವುದಿಲ್ಲ. ಆದರೆ ರಸಗ್ರಹಣದ ಅನುಕೂಲಕ್ಕಾಗಿ ಕೆಲವು ನಿಯಮಗಳನ್ನು ಅರ್ಥಮಾಡಿಕೊಂಡಾಗಲೇ ಯಾವುದೇ ಒಂದು ವಿಷಯವನ್ನು ತಿಳಿದುಕೊಳ್ಳುವುದು ಸರಳವಾಗುತ್ತದೆ.

ತನ್ನ ಜೀವನದಲ್ಲಿ ಸೌಂದರ್ಯವನ್ನು ತರುವ ಅನಿವಾರ್ಯತೆ ಮನುಷ್ಯನಿಗೆ ಇರುತ್ತದೆ. ಆದ್ದರಿಂದ ತನ್ನ ಪರಿಸ್ಥಿತಿ ಮತ್ತು ಪರಿಸರವನ್ನು ಲಕ್ಷಿಸಿ, ತನಗೆ ಬೇಕಾಗುವ ಸೌಂದರ್ಯವನ್ನು ತಂದುಕೊಳ್ಳುವ ಪ್ರಯತ್ನ ಮಾಡುತ್ತಲಿರುತ್ತಾನೆ. ಮನುಷ್ಯನ ಬದುಕು ಸಾಮಾನ್ಯ ಬಂಧನಗಳಿಗೆ ಒಳಪಟ್ಟಿದ್ದರೂ, ಆಂತರಿಕವಾಗಿ ಅವನು ಮುಕ್ತನಾಗಿಯೇ ಇರುತ್ತಾನೆ. ಈ ಮುಕ್ತತೆಯಿಂದ ಅವನು ಮಾಡಿದ ಕಾರ್ಯ, ವೈಯಕ್ತಿಕವಾಗಿ ಅವನಲ್ಲಿ ಮತ್ತು ಅವನ ಸಮಾಜದಲ್ಲಿ, ಆ ಕಾರ್ಯದ ಮಹತ್ವ ಮತ್ತು ಪ್ರಭಾವಕ್ಕೆ ಅನುರೂಪವಾಗಿ, ಬದಲಾವಣೆಯನ್ನು ತರುವಲ್ಲಿ ಸಮರ್ಥವಾಗುತ್ತದೆ. ಮನುಷ್ಯ ತಾನು ಸಂಪಾದಿಸಿದ ಜ್ಞಾನದಿಂದ, ತನ್ನ ಸುತ್ತಮುತ್ತಲಿನ ವಿಶ್ವವನ್ನು ತಿಳಿದುಕೊಳ್ಳುತ್ತಾನಲ್ಲದೆ, ಅದನ್ನು ಸುಂದರಗೊಳಿಸುತ್ತಲೂ ಹೋಗುತ್ತಾನೆ. ಈ ಸುಂದರಗೊಳಿಸುವ ಕ್ರಿಯೆಯಲ್ಲಿ ಕಲಾವಿದ, ಲೇಖಕ, ತತ್ವಜ್ಞಾನಿ, ಚಿಂತಕ ಮತ್ತು ಪ್ರಜ್ಞಾವಂತ ಸಕ್ರಿಯವಾಗಿ ತೊಡಗಿರುತ್ತಾನೆ.

ಪ್ರಕೃತಿಯಿಂದಲೇ ಮನುಷ್ಯ ಕಲಾವಿದನಾಗುತ್ತಾನೆಂದು ಗೋರ್ಕಿ ಅವರು ಹೇಳಿದ ಮಾತು, ಮನುಷ್ಯನ ಸ್ವಭಾವವನ್ನೇ ಗುರುತಿಸುತ್ತದೆ. ಈ ನೈಸರ್ಗಿಕ ಸ್ವಭಾವ, ತನ್ನಷ್ಟಕ್ಕೆ ತಾನೇ ಬೆಳೆಯುತ್ತ ಮತ್ತು ಸಮರ್ಥವಾಗುತ್ತ ಹೋಗುತ್ತದೆ. ಹೀಗಾಗಿ ಎಲ್ಲ ಮನುಷ್ಯರು ಸೌಂದರ್ಯವನ್ನು ಆರಾಧಿಸುವರಾಗಿರುತ್ತಾರೆ. ಆದರೆ, ಈ ಆರಾಧನೆಯ ಪದ್ಧತಿ ಬದಲಾಗಲು ಬೇರೆ ಬೇರೆ ಪ್ರಾದೇಶಿಕ ವೈಶಿಷ್ಟ್ಯಗಳಿರುತ್ತವೆ.

ಅಧ್ಯಯನದ ಉದ್ದೇಶ

ಕಲೆಯು ಮಾನವನ ಹುಟ್ಟಿನೊಂದಿಗೆ ತನ್ನ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿದೆ. ಅದೇ ರೀತಿ ನಿಸರ್ಗ ಚಿತ್ರಕಲೆಯು ಕಲಾವಿದನಿಗೆ ಒಂದು ಬಹು ಮುಖ್ಯವಾದ ವಸ್ತು ವಿಷಯವಾಗಿದೆ. ಬಹುತೇಕ ಎಲ್ಲಾ ಕಲಾವಿದರು ಮತ್ತು ಕಲಾ ವಿದ್ಯಾರ್ಥಿಗಳು ತಮ್ಮ ಸುತ್ತ ಮುತ್ತಲಿನ ಪ್ರಕೃತಿಯ ಸೌಂದರ್ಯವನ್ನು ನೋಡಿ ನಿಸರ್ಗ ಚಿತ್ರವನ್ನು ರಚಿಸಿರುತ್ತಾರೆ. ಪ್ರಸ್ತುತ **ಕರ್ನಾಟಕದ** ನಿಸರ್ಗ **ಚಿತ್ರಕಲೆ (ಉತ್ತರ ಕರ್ನಾಟಕದ**

ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯಡಿ ಎಂ.ಫಿಲ್ ಪದವಿಗಾಗಿ ಅಧ್ಯಯನ ಮಾಡಲಾಗಿದೆ. ಚಿತ್ರಕಲೆಯ ಬಹುಮುಖ್ಯ ಅಧ್ಯಯನದ ವಿಷಯಗಳಿಗೆ ಒಂದಾಗಿರುವ "ನಿಸರ್ಗ ಚಿತ್ರಕಲೆ" ದೇಶ–ವಿದೇಶದ ಕಲಾವಿದರೆಲ್ಲರೂ ಕಡ್ಡಾಯವಾಗಿ ಅಧ್ಯಯನ ಮಾಡುವ ಬಹುಮುಖ್ಯವಾದ ವಿಷಯವಾಗಿದೆ. ಈ ವಿಷಯದ ಕುರಿತು ಭಾರತದಲ್ಲಿ, ಕರ್ನಾಟಕದಲ್ಲಿ ವಿಶೇಷವಾಗಿ ಡಿಪ್ಲೊಮಾ, ಪದವಿ, ಸ್ನಾತಕೋತ್ತರ ಪದವಿ ಹಂತದಲ್ಲಿ ಇಂದಿಗೂ ಅತ್ಯಂತ ಬಹುಬೇಡಿಕೆಯ ಮತ್ತು ಜನಪ್ರಿಯ ವಿಷಯಗಳಲ್ಲೊಂದಾಗಿರುವ ಈ ನಿಸರ್ಗ ಚಿತ್ರಕಲೆಯ ಕುರಿತು ನಡೆದ ಅಧ್ಯಯನಗಳು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಈ ದಿಸೆಯಲ್ಲಿ ಪ್ರಸ್ತುತ ಈ ಕಲಾಪ್ರಕಾರದ ಸ್ವರೂಪ ಅದರ ಅಧ್ಯಯನದ ಮಹತ್ವವನ್ನು ತಿಳಿಯಪಡಿಸುವ ಮತ್ತು ಮಹತ್ವದ ವಿಷಯಗಳನ್ನು ಇಲ್ಲಿ ದಾಖಲೀಕರಣಗೊಳಿಸುವ ಉದ್ದೇಶದೊಂದಿಗೆ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

* ನಿಸರ್ಗ ಚಿತ್ರಕಲೆ ಬೆಳೆದು ಬಂದ ಐತಿಹಾಸಿಕ ಹಿನ್ನೆಲೆಯನ್ನು ಕಟ್ಟಿಕೊಡುವ ಉದ್ದೇಶವನ್ನು ಇಲ್ಲಿ ಪ್ರಾಸಂಗಿಕವಾಗಿ ಅಧ್ಯಯನಕ್ಕೊಳಪಡಿಸುವ ಉದ್ದೇಶವಿದೆ.

* ನಿಸರ್ಗ ಚಿತ್ರಕಲೆ ರಚನೆಯ ವೈಜ್ಞಾನಿಕ ವಿಧಿವಿಧಾನಗಳನ್ನು ಮತ್ತು ಬಳಸುವ ಪರಿಕರಗಳನ್ನು ಅಧ್ಯಯನಕ್ಕೊಳಪಡಿಸುವ ಪ್ರಮುಖ ಉದ್ದೇಶವನ್ನು ಹೊಂದಲಾಗಿದೆ.

* ನಿಸರ್ಗ ಚಿತ್ರಕಲೆ ರಚನೆಯ ಸಂದರ್ಭದಲ್ಲಿ ವಿವಿಧ ಮಾಧ್ಯಮಗಳಲ್ಲಿ ಬಳಕೆಗೊಳ್ಳುತ್ತ ಬಂದಿದೆ. ಆ ಎಲ್ಲ ಮಾಧ್ಯಮಗಳ ಮತ್ತು ಅವುಗಳ ಸ್ವರೂಪಗಳ ಕುರಿತು ಸ್ಥೂಲವಾಗಿ ವಿವೇಚಿಸುವ ಉದ್ದೇಶವನ್ನು ಇಲ್ಲಿ ಹೊಂದಲಾಗಿದೆ.

* ಈ ಕ್ಷೇತ್ರದಲ್ಲಿ ಕೆಲಸ ಮಾಡದೇ ಇರುವ ಕಲಾವಿದರೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಹೀಗಾಗಿ ಬಹುಪಾಲು ಕಲಾವಿದರು ಮೊದಲು ನಿಸರ್ಗ ಕಲಾವಿದರಾಗಿರುತ್ತಾರೆ. ಇಂತಹ ಜನಪ್ರಿಯ ನಿಸರ್ಗ ಚಿತ್ರಕಲಾವಿದರ ಸಂಖ್ಯೆ ದೊಡ್ಡದಿದೆ. ಪ್ರಾತಿನಿಧಿಕವಾಗಿ ಉತ್ತರ ಕರ್ನಾಟಕದ ಕೆಲವು ಕಲಾವಿದರುಗಳನ್ನು ಮಾದರಿಗಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

* ಪ್ರತಿಯೊಬ್ಬ ನಿಸರ್ಗ ಕಲಾವಿದರ ಚಿತ್ರಗಳ ವರ್ಣವಿನ್ಯಾಸ, ತಂತ್ರಗಾರಿಕೆ ವೈವಿಧ್ಯಮವಾಗಿದ್ದು, ಆಯ್ಕೆ ಮಾಡಿದ ಕಲಾವಿದರ ವಿಶೇಷವಾದ ವೈಶಿಷ್ಟ್ಯತೆಯನ್ನು ತಂತ್ರಗಾರಿಕೆ, ಶೈಲಿ ಮುಂತಾದ ಅಂಶಗಳನ್ನು ಅಧ್ಯಯನಕ್ಕೊಳಪಡಿಸುವ ಉದ್ದೇಶವು ಇಲ್ಲಿ ಇದೆ. ಹೀಗೆ ಹಲವಾರು ಉದ್ದೇಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ನಿಸರ್ಗ ಚಿತ್ರಕಲೆ ಎಂಬ ವಿಷಯದಡಿಯಲ್ಲಿ ಸಿದ್ಧಗೊಂಡಿರುವ ಈ ಪ್ರಬಂಧವು ಅಧ್ಯಯನದ ಅನುಕೂಲತೆಗಾಗಿ ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಿದ್ದು, ಈ ಕೆಳಗೆ ಅವುಗಳನ್ನು ಸ್ಥೂಲವಾಗಿ ವಿಶ್ಲೇಷಿಸಲಾಗಿದೆ.

ಮೊದಲನೆಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನವನ್ನು ಕೈಗೆತ್ತಿಕೊಂಡಿರುವ ಉದ್ದೇಶ, ಅದರ ಸ್ವರೂಪ, ವ್ಯಾಪ್ತಿ ಮತ್ತು ವಿಧಾನವನ್ನು ಇಲ್ಲಿ ಸ್ಪಷ್ಟಪಡಿಸಲಾಗುವುದು. ಜೊತೆಗೆ ಶೀರ್ಷಿಕೆಯ ಕುರಿತು ಈ ಹಿಂದೆ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮತ್ತು ಬಳಸಿಕೊಂಡಿರುವ ಪ್ರಮುಖ ಆಕರ ಸಾಮಗ್ರಿಗಳ ಕುರಿತು ಇಲ್ಲಿ ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ನಿಸರ್ಗ ಚಿತ್ರಕಲೆ ಒಂದು ಪ್ರಮುಖ ಪ್ರಕಾರವಾಗಿದ್ದು, ಈ ಕಲೆಯನ್ನು ವಿಶ್ವದಾದ್ಯಂತಹ ಕಲಾವಿದರು ತಮ್ಮ ಅಭಿವ್ಯಕ್ತಿಯ ಪ್ರಮುಖ ಸಾಧನವನ್ನಾಗಿ ಮಾಡಿಕೊಂಡು ಕಲಾಕೃತಿಗಳನ್ನು ರಚಿಸಿದ್ದು, ಸ್ಥೂಲವಾಗಿ ಪಾಶ್ಚಿಮಾತ್ಯ, ಭಾರತ ಮತ್ತು ಕರ್ನಾಟಕದಲ್ಲಿ ಈ ಕಲಾಪ್ರಕಾರ ಬೆಳೆದು ಬಂದ ನೆಲೆ-ಹಿನ್ನೆಲೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಪ್ರತಿಯೊಂದು ಚಿತ್ರಕಲಾ ರಚನೆಗೂ ಅದರದೇ ಆದ ರಚನಾ ವಿಧಿ-ವಿಧಾನಗಳು ಮತ್ತು ಪರಿಕರಗಳು ಆಯಾ ಮಾಧ್ಯಮಕ್ಕನುಗುಣವಾಗಿ ಭಿನ್ನತೆಯನ್ನು ಹೊಂದಿರುತ್ತವೆ. ಅವುಗಳ ಸ್ವರೂಪಗಳ ಕುರಿತು ವಿಶೇಷವಾಗಿ ನಿಸರ್ಗ ಚಿತ್ರಕಲೆಯ ರಚನೆಯ ವಿಧಿ-ವಿಧಾನ ಮತ್ತು ಪರಿಕರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ನಿಸರ್ಗ ಚಿತ್ರಣದಲ್ಲಿ ವಸ್ತುವೈವಿಧ್ಯತೆ ಮತ್ತು ವಿವಿಧ ಮಾಧ್ಯಮಗಳಲ್ಲಿ ರಚನೆಯಾಗುವ ನಿಸರ್ಗ ಚಿತ್ರಣದ ಕುರಿತು ಸಂಕ್ಷಿಪ್ತವಾಗಿ ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯದಲ್ಲಿ ಕರ್ನಾಟಕದಲ್ಲಿ ನಿಸರ್ಗ ಚಿತ್ರಕಲೆಯ ಅಸಂಖ್ಯಾತ ಕಲಾವಿದರಿದ್ದು, ಪ್ರಸ್ತುತ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದಲ್ಲಿನ ಪ್ರಮುಖ ಮತ್ತು ಪ್ರಾತಿನಿಧಿಕ ನಿಸರ್ಗ ಚಿತ್ರಕಲಾವಿದರನ್ನು ಗುರುತಿಸಿ ಅವರ ಕಲಾಕೃತಿಗಳ ಕುರಿತು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯದಲ್ಲಿ ಉತ್ತರ ಕರ್ನಾಟಕದ ನಿಸರ್ಗ ಚಿತ್ರಕಲಾವಿದರ ಕಲಾಕೃತಿಗಳ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ ಇವುಗಳನ್ನು ತೌಲನಿಕವಾಗಿ ಚರ್ಚಿಸುವ ಮತ್ತು ಪ್ರಮುಖ ವೈಶಿಷ್ಟ್ಯತೆಗಳನ್ನು ಗುರುತಿಸುವ ಪ್ರಯತ್ನ ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಮೇಲಿನ ಆರು ಅಧ್ಯಾಯಗಳಲ್ಲಿ ನಡೆದ ಅಧ್ಯಯನದ ಪ್ರಮುಖ ಫಲಿತಗಳನ್ನು ಇಲ್ಲಿ ಸಮೀಕ್ಷೆಗೊಳಪಡಿಸಿ ಚರ್ಚಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

೧೯೨೫ರಲ್ಲಿ ಜಿ. ಲಿಂಗಣ್ಣಯ್ಯ ಅವರ **"ನೀರು ಬಣ್ಣದಿಂದ ಚಿತ್ರ ಬರೆಯುವ ಕ್ರಮ, ತಸಬೀರು ತೆಗೆಯುವ ಕ್ರಮ"**[೧] ಎಂಬ ಕೃತಿಯಲ್ಲಿ ಶೀರ್ಷಿಕೆಯೇ ಹೇಳುವಂತೆ ನೀರು ವರ್ಣದಿಂದ ಪ್ರಕೃತಿಯ ಸುತ್ತಮುತ್ತಲಿನ ಚಿತ್ರಗಳನ್ನು ರಚಿಸುವ ವಿಧಿ-ವಿಧಾನದ ಕುರಿತು ವಿವರಗಳಿವೆ. ಬಹುಶಃ ಕನ್ನಡದಲ್ಲಿ ಬಂದ ಮೊಟ್ಟಮೊದಲ ಚಿತ್ರಕಲಾ ಗ್ರಂಥವೆಂದು ದಾಖಲಾಗಿದೆ.[೨]

೦೧. ಜಿ. ಲಿಂಗಣ್ಣಯ್ಯ : ನೀರು ಬಣ್ಣದಿಂದ ಚಿತ್ರ ಬರೆಯುವ ಕ್ರಮ, ತಸಬೀರು ತೆಗೆಯುವ ಕ್ರಮ, ೧೯೨೫

೦೨. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು-೨೨೫

೧೯೪೭ರಲ್ಲಿ ಅಮೀನಸಾಹೇಬ ಕಮಡೋಳಿ ಅವರ **"ಡ್ರಾಯಿಂಗ್ ಶಿಕ್ಷಕ (ಸಚಿತ್ರ)"**[೩] ಕೃತಿಯಲ್ಲಿ ಚಿತ್ರಕಲೆಯ ಪ್ರಾಥಮಿಕ ಜ್ಞಾನವನ್ನು ನೀಡುವ ಕೃತಿ. ಮಾಸ್ ಡ್ರಾಯಿಂಗ್, ಸರಳಗೈ ಚಿತ್ರ, ಸೃಷ್ಟಿ ಸೌಂದರ್ಯದ ಡ್ರಾಯಿಂಗ್(ನಿಸರ್ಗ ಚಿತ್ರ), ಅಬ್ಜೆಕ್ಟ ಡ್ರಾಯಿಂಗ್, ನೆನಪಿನಿಂದ ತೆಗೆಯತಕ್ಕ ಚಿತ್ರ (ಮೆಮರಿ ಡ್ರಾಯಿಂಗ್), ಕಾಲ್ಪನಿಕ ಡ್ರಾಯಿಂಗ್, ಮನುಷ್ಯ, ಪಶು-ಪಕ್ಷಿಗಳ ಡ್ರಾಯಿಂಗ್ ಮತ್ತು ಬಣ್ಣಗಳ ಕುರಿತ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ೧೨ ಪ್ಲೇಟ್‌ಗಳಲ್ಲಿ ರೇಖಾಚಿತ್ರ, ವಸ್ತುಚಿತ್ರಣ, ನಿಸರ್ಗ ಚಿತ್ರಗಳನ್ನು ಸಂಯೋಜಿಸಲಾಗಿದೆ.[೪]

೧೯೯೪ರಲ್ಲಿ ವಿ. ಟಿ. ಕಾಳೆಯವರ **"ಚಿತ್ರಕಲಾ ದರ್ಪಣ"**[೫] ಕೃತಿಯಲ್ಲಿ ಕಲೆ ಎಂದರೇನು? ಇತಿಹಾಸಪೂರ್ವ ಕಾಲದ ಕಲೆ, ಪ್ರಾಚೀನ ಕಲಾ ಸಂಸ್ಕೃತಿಗಳು, ಭಾರತೀಯ ಕಲಾ ಪರಂಪರೆಗಳು, ಭಿತ್ತಿಚಿತ್ರಗಳು, ಕಿರುರೂಪ ಶೈಲಿಯ ಚಿತ್ರಗಳು, ಮುಸ್ಲಿಮ್ ಶೈಲಿ ಚಿತ್ರಗಳು, ದಕ್ಷಿಣ ಭಾರತದ ಚಿತ್ರಕಲೆ, ವಿಜಯನಗರ, ಮೈಸೂರು, ನಾಯಕ ಶೈಲಿಯ ಚಿತ್ರಕಲೆ, ಪಾಶ್ಚಾತ್ಯ ಕಲಾ ಸಂಪ್ರದಾಯಗಳು, ಪುನರುಜ್ಜೀವನ ಕಾಲದ ಕಲೆ, ಬಾರೋಕ್ ಕಲೆ, ರೊಕೋಕೊ ಕಲೆ, ರಮ್ಯ ಶೈಲಿ, ಬ್ರಿಟಿಷ್ ಕಲೆ, ಜಪಾನೀ ಚಿತ್ರಕಲೆ, ಅಮೇರಿಕ ಕಲೆ, ಆಧುನಿಕ ಕಲಾ ಪಂಥಗಳು, ಬೆಜೆಂಟೈನಾ ಕಲೆ, ಆಫ್ರಿಕನ್ ಕಲೆ, ಗೋಥಿಕ್ ಕಲೆ, ಜರ್ಮನ್ ಕಲೆ, ಭಾರತೀಯ ಕಲೆಯ ಪ್ರಮುಖ ಕಲಾಕೃತಿಗಳು, ವರ್ಣಗಳು ಮತ್ತು ವರ್ಣಚಿತ್ರಣ ವಿಧಾನಗಳು ಹೀಗೆ ಹಲವಾರು ಅಂಶಗಳನ್ನು ಸ್ಥೂಲವಾಗಿ ಚರ್ಚಿಸಲಾಗಿದೆ.[೬]

೧೯೯೭ರಲ್ಲಿ ಬಾಗೂರು ಮಾರ್ಕಂಡೇಯ ಅವರ **"ನೀವು ಕಲಾವಿದರಾಗಬೇಕೆ?"**[೭] ಎಂಬ ಕೃತಿಯಲ್ಲಿ ಚುಕ್ಕೆ ಚಿತ್ರಗಳು, ಕರಡು ರೇಖಾಚಿತ್ರಗಳು, ರೇಖೆಗಳಲ್ಲಿ ಪ್ರಾಣಿ, ಪಕ್ಷಿ, ಕೀಟಗಳು, ಹೂವು-ಎಲೆ-ರೇಖೆಗಳಲ್ಲಿ, ಯಥಾದರ್ಶನ ಶಾಸ್ತ್ರ, ವಸ್ತು ಚಿತ್ರ ರೇಖೆಗಳಲ್ಲಿ ಕಲ್ಪನಾ ಚಿತ್ರ (ಸ್ಮರಣ ಚಿತ್ರ) ವಿನ್ಯಾಸಗಳು, ಸರಳಗೈ ಚಿತ್ರಗಳು, ರೇಖೆಗಳಲ್ಲಿನ-ನಾಟ್ಯದ-ಹಸ್ತ-ಪಾದ-ವಿವಿಧ ಭಾವಭಂಗಿಗಳು, ವರ್ಣಚಿತ್ರಗಳಲ್ಲಿ, ಬಣ್ಣಗಳ ವಿನ್ಯಾಸ, ಪ್ರಕೃತಿ ಚಿತ್ರ, ನವ್ಯಚಿತ್ರ, ವ್ಯಕ್ತಿಚಿತ್ರಗಳು ಇವೆ.[೮]

೨೦೦೯ರಲ್ಲಿ ದಿವ್ಯಾಜ್ಯೋತಿ ಅವರು ಜೀನ್‌ಸಾಹಿ ಮತ್ತು ರೋಷನ್ ಸಾಹಿ ಅವರ ಗ್ರಂಥವನ್ನು **"ಕಲಿಕೆಯಲ್ಲಿ ಕಲೆ"**[೯] ಎಂದು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಶಿಕ್ಷಕರಿಗಾಗಿ ರಚನೆಯಾದ ಈ ಪುಸ್ತಕದಲ್ಲಿ ಮಕ್ಕಳಲ್ಲಿ ಹೊಸತನ ಮೂಡಿಸುವ ನಿಟ್ಟಿನಲ್ಲಿ ನವ ಕರ್ನಾಟಕ ಪ್ರಕಾಶನದವರು ಚಿತ್ರಕಲೆಯ ಬೆಳವಣಿಗೆ, ಯೋಜನೆ ಮತ್ತು ವ್ಯವಸ್ಥಿತಗೊಳಿಸುವುದು, ಜ್ಞಾನೇಂದ್ರಿಯಗಳು, ರೇಖೆ ಮತ್ತು ಬಣ್ಣ, ಕಲೆ ಮತ್ತು ಪರಿಸರ, ಕಲೆ ಮತ್ತು ಗಣಿತ ವಿನ್ಯಾಸಗಳು, ಆಕಾರ ಮತ್ತು ರಚನೆ, ಕಲೆ ಮತ್ತು ಭಾಷೆ, ಇನ್ನಿತರ ಪಠ್ಯದೊಂದಿಗಿನ ಕಲೆಯ ಸಂಬಂಧವನ್ನು ತೋರಿಸುವ ಚಾರ್ಟ್ ಮತ್ತು ಶಿಕ್ಷಕರ ಸ್ವಮೌಲ್ಯಮಾಪನ ಮತ್ತು ಚರ್ಚಿಸುವ ವಿಷಯಗಳ ಕುರಿತು, ಕಲೆಯಲ್ಲಿ ಶಿಕ್ಷಣ, ಶಿಕ್ಷಣದಲ್ಲಿ ಕಲೆ ಇದು ಮಕ್ಕಳ ಅರಿವನ್ನು ಹೆಚ್ಚಿಸಲು ಹಾಗೂ

---

೧೩. ಅಮೀನಸಾಹೇಬ ಕಮಡೋಳಿ : ಡ್ರಾಯಿಂಗ್ ಶಿಕ್ಷಕ (ಸಚಿತ್ರ), ಪ್ರ: ಭಾರತೀಯ ಸಾಹಿತ್ಯ ಮಂದಿರ, ಧಾರವಾಡ. ೧೯೪೭

೧೪. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು-೨೨೫

೧೫. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ, ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೧೯೯೪

೧೬. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು-೨೮, ೨೯

೧೭. ಬಾಗೂರು ಮಾರ್ಕಂಡೇಯ : ನೀವು ಕಲಾವಿದರಾಗಬೇಕೆ?. ೧೯೯೭

೧೮. ಪ್ರೊ, ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು-೨೨೬

೧೯. ದಿವ್ಯಾಜ್ಯೋತಿ (ಅನು) : ಕಲಿಕೆಯಲ್ಲಿ ಕಲೆ, ಪ್ರ: ನವಕರ್ನಾಟಕ ಪಬ್ಲಿಕೇಷನ್, ಬೆಂಗಳೂರು. ೨೦೦೯

ಸಾಮಾಜಿಕ ಬೆಳವಣಿಗೆಯನ್ನು ವೃದ್ಧಿಸಲು ಸೃಜನಾತ್ಮಕವಾಗಿಸುತ್ತದೆ ಎನ್ನುವ ನಿಟ್ಟಿನಲ್ಲಿ ಈ ಕೃತಿಯನ್ನು ರಚಿಸಿದ್ದಾರೆ.[೧೦]

ಅಧ್ಯಯನದ ವ್ಯಾಪ್ತಿ

ಕರ್ನಾಟಕದ ನಿಸರ್ಗ ಚಿತ್ರಕಲೆ ಎಂಬ ಶೀರ್ಷಿಕೆಯಡಿಯಲ್ಲಿ ಸಿದ್ಧಗೊಂಡ ಈ ಪ್ರಬಂಧವನ್ನು ಅಧ್ಯಯನದ ಅನುಕೂಲತೆಗಾಗಿ ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರುಗಳಿಗೆ ಸೀಮಿತಗೊಳಿಸಲಾಗಿದೆ. ಉಳಿದಂತೆ ನಿಸರ್ಗ ಚಿತ್ರಕಲೆಯ ನೆಲೆ–ಹಿನ್ನೆಲೆಯನ್ನು ಅಧ್ಯಯನ ಮಾಡುವಲ್ಲಿ ರಾಜ್ಯ ಮತ್ತು ಹೊರ ರಾಜ್ಯ ಹಾಗೂ ದೇಶ–ವಿದೇಶದ ಕೆಲವು ಮಾಹಿತಿಗಳನ್ನು ಪೂರಕವಾಗಿ ಬಳಸಿಕೊಂಡು ಪ್ರಬಂಧ ರಚಿಸಲಾಗಿದೆ.

ಅಧ್ಯಯನದ ವಿಧಾನ

ಕರ್ನಾಟಕದ ನಿಸರ್ಗ ಚಿತ್ರಕಲೆ (ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ) ಎಂಬ ಅಧ್ಯಯನದಲ್ಲಿ ಮುಖ್ಯವಾಗಿ ಎರಡು ರೀತಿಯ ವಿಧಾನವನ್ನು ಅನುಸರಿಸಲಾಗುವುದು.

೧. ಮೂಲ ಆಕರ ಸಾಮಗ್ರಿ　　　೨. ಆನುಷಂಗಿಕ ಆಕರ ಸಾಮಗ್ರಿ

೦೧. ಮೂಲ ಆಕರ ಸಾಮಗ್ರಿ

ಈ ಪ್ರಬಂಧದ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾಗಿ ಅಧ್ಯಯನಕ್ಕೆ ಆಯ್ದುಕೊಂಡ "ಕರ್ನಾಟಕದ ನಿಸರ್ಗ ಚಿತ್ರಕಲೆ" (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಯನ್ನಾಧರಿಸಿ ಹಾಗೂ ಉತ್ತರ ಕರ್ನಾಟಕದ ಪ್ರಮುಖ ಕಲಾವಿದರ ಕಲಾಕೃತಿಗಳನ್ನು ಆಧರಿಸಿ ಕಲೆಗೆ ಪೂರಕವಾಗಿ ಕ್ಷೇತ್ರಕಾರ್ಯಗಳಿಗೆ ಮತ್ತು ಕಲಾವಿದರಿಗೆ ಭೇಟಿ ನೀಡಿ ಸಂಬಂಧಿಸಿದ ವಿಷಯ ಸಂಗ್ರಹಣೆ ಮಾಡಿ ಮೂಲ ಆಕರಗಳಾಗಿ ಅಧ್ಯಯನಕ್ಕೊಳಪಡಿಸಲಾಗಿದೆ.

ಛಾಯಾಚಿತ್ರಣ : ಕರ್ನಾಟಕದ ನಿಸರ್ಗ ಚಿತ್ರಕಲೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಈ ಪ್ರಬಂಧದಲ್ಲಿ ನಿಸರ್ಗ ಚಿತ್ರಗಳೇ ಬಹು ಮುಖ್ಯವಾಗಿವೆ. ಹಾಗಾಗಿ ಪ್ರಮುಖ ಕಲಾವಿದರು ರಚಿಸಿದ ಚಿತ್ರಗಳ ನೆಲೆಗಳಿಗೆ ತೆರಳಿ ಛಾಯಾಚಿತ್ರಣ ಮಾಡಿಕೊಳ್ಳಲಾಗುವುದು. ಕೆಲವು ಸಂದರ್ಭದಲ್ಲಿ ವೀಡಿಯೋ ಚಿತ್ರಿಕರಣ ಮಾಡಿಕೊಂಡು ಅದನ್ನು ಛಾಯಾಚಿತ್ರಗಳಿಗೆ ಪರಿವರ್ತಿಸಿಕೊಳ್ಳಲಾಗಿದೆ.

೦೨. ಆನುಷಂಗಿಕ ಆಕರ ಸಾಮಗ್ರಿ:

ಈ ಕಿರು ಸಂಶೋಧನಾ ಪ್ರಬಂಧದಲ್ಲಿ ಪ್ರಕಟಿತ, ಅಪ್ರಕಟಿತ ಕೃತಗಳು, ಗೆಝೆಟೀಯರಗಳು, ವಿಶ್ವಕೋಶಗಳು ಪತ್ರಿಕಾ ಲೇಖನಗಳು, ಸಂಶೋಧನಾ ಪ್ರಬಂಧಗಳು, ಗ್ರಂಥಸೂಚಿಗಳು, ಶಬ್ದಕೋಶಗಳು ಹೀಗೆ ಹಲವಾರು ವಿಷಯಕ್ಕೆ ಸಂಬಂಧಿಸಿದ ಕೃತಿಗಳನ್ನು ಆನುಷಂಗಿಕವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

❑❑❑

೧೦. ಪ್ರೊ. ಎಸ್. ಸಿ. ಪಾಟೀಲ (ಸಂ.) : ಕರ್ನಾಟಕ ಚಿತ್ರಕಲಾ ವಿವರಣಾತ್ಮಕ ಗ್ರಂಥಸೂಚಿ (ಅಪ್ರಕಟಿತ ಗ್ರಂಥ), ಪು–೨೨೨

ಅಧ್ಯಾಯ : ಎರಡು

ನಿಸರ್ಗ ಚಿತ್ರಕಲೆ ಬೆಳೆದು ಬಂದ ನೆಲೆ-ಹಿನ್ನೆಲೆ

ನಿಸರ್ಗ ಚಿತ್ರಕಲೆಯೂ ಪಾಶ್ಚಾತ್ಯದಲ್ಲಾಗಲಿ ಭಾರತದಲ್ಲಾಗಲಿ ಇತಿಹಾಸ ಪೂರ್ವಕಾಲದಿಂದಲೇ ಬೆಳೆದುಕೊಂಡು ಬಂದಿದೆ. ಆದಿ ಮಾನವನಿಂದ ನಿಸರ್ಗದ ವಸ್ತುಗಳನ್ನೇ ಅಂದರೆ ಪಕ್ಷಿಗಳಾಗಲಿ, ಪ್ರಾಣಿಗಳಾಗಲಿ, ಗಿಡ-ಮರಗಳಾಗಲಿ ಅದನ್ನು ತಾನು ಇರುವ ಸ್ಥಳದಲ್ಲಿ ಅಂದರೆ ದೊಡ್ಡ ದೊಡ್ಡ ಬಂಡೆಗಳ ಕಲ್ಲಾಸರೆಯಲ್ಲಿ ಗುಹೆಗಳಲ್ಲಿ ಚಿತ್ರಗಳನ್ನು ಚಿತ್ರಿಸಿರುವುದು ಕಾಣಬಹುದು. ಪ್ರಾಣಿ, ಪಕ್ಷಿ, ಗಿಡ, ಮರಗಳು ನಿಸರ್ಗದ ಒಂದು ಭಾಗವಾಗಿದೆ ಎಂದು ಹೇಳಬಹುದು. "ಈಜಿಪ್ಟ್, ಗ್ರೀಕ್, ರೋಮನ್, ಮೆಸಪೋಟೇಮಿಯ ಅಥವಾ ಇರಾಕ್ ತೈಗ್ರಿಸ್ ಮತ್ತು ಯೂಫ್ರೇಟೀಸ್ ನದಿಗಳ ಮಧ್ಯ ಪ್ರದೇಶದಲ್ಲಿ ಈ ಪ್ರಾಚೀನ ಸಂಸ್ಕೃತಿಯು ಬೆಳೆದು ಬಂದಿತ್ತು. ಮೆಸಪೋಟೇಮಿಯ ದೇಶವು ಸುಮೇರಿಯನ್, ಅಕ್ಕೇಡಿಯನ್, ಬ್ಯಾಬಿಲೋನಿಯನ್, ಹಿತಾಯಿತ್ ಸಂಸ್ಕೃತಿಗಳ ಜನ್ಮಭೂಮಿ ಸುಮೇರಿಯನ್ ಬ್ಯಾಬಿಲೋನಿಯನ್ ಮತ್ತು ಅಸ್ಸಿರೀಯನ್ ಸಂಸ್ಕೃತಿಗಳು ಪ್ರಪಂಚದ ಕಲಾಭಂಢಾರಕ್ಕೆ ಅದ್ವಿತೀಯ ಕೊಡುಗೆಗಳನ್ನು ನೀಡಿವೆ."[೧]


ಗೋಥಿಕ್ ಯುಗದಲ್ಲಿ ನಿಸರ್ಗ ಚಿತ್ರಕಲೆ

೧೮ನೇ ಹಾಗೂ ೧೯ನೇ ಶತಮಾನಗಳಲ್ಲಿ ಗೋಥಿಕ್ ಶೈಲಿಯ ಪುನರುಜ್ಜೀವನವು ಕೇವಲ ಅದಕ್ಕೇ ಸೀಮಿತವಾಗಿರದೇ ಸಾಹಿತ್ಯ, ಲಲಿತಕಲೆ (ಅಲಂಕಾರಿಕ ವಿನ್ಯಾಸಗಳೂ ಸೇರಿದಂತೆ), ಎಲ್ಲಕ್ಕಿಂತ ಮಿಗಿಲಾಗಿ ವಾಸ್ತುಶಿಲ್ಪವನ್ನೂ ಒಳಗೊಂಡಿತ್ತು. ಕೆನ್ನೆತ್ ಕ್ಲಾರ್ಕನು ಗೋಥಿಕ್ ಪುನರುಜ್ಜೀವನವನ್ನು 'ಪ್ರಾಯಃ ಪ್ಲಾಸ್ಟಿಕ್ ಕಲೆಯಲ್ಲಿ ಇದು ಆಂಗ್ಲರ ಏಕೈಕ ಚಳುವಳಿ' ಎಂಬುದಾಗಿ ಹೇಳಿದ್ದಾನೆ. ಆದರೆ ಈ ಅದ್ಭುತ ಚಳುವಳಿ ಬಹು ಪ್ರಮುಖವಾದದು. ಇದು ಇಡಿಯ ಈ ಭೂ ಭಾಗದಲ್ಲಿಯೇ ತನ್ನ ಸಾದೃಶ್ಯವನ್ನು ಕಂಡಿತ್ತು(ಗೋಯೇತ್‌ನ ಸ್ಟ್ರಾಸ್‌ಬರ್ಗ್ ಕ್ರೈಸ್ತಮಂದಿರದ ಬಗೆಗಿನ ಪ್ರಶಂಸೆ ಇಲ್ಲಿ ಒಂದು ಒಳ್ಳೆಯ ಉದಾಹರಣೆಯಾಗುತ್ತದೆ.).

---


೧೧. ಪಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೩

ಇಂಗ್ಲಂಡಿನಲ್ಲಿ ಈ ಗೋಥಿಕ್ ಪುನರುಜ್ಜೀವನ ವ್ಯವಸ್ಥೆಯಲ್ಲಿ ಮುಖ್ಯವಾಗಿ ಎರಡು ಹಂತಗಳಿದ್ದವು. ಮೊದಲನೆಯದು ೧೮ನೇ ಶತಮಾನದ ಮಧ್ಯಾಂತರದ ಕಾಲದಲ್ಲಿ ಉದಯಿಸಿದರೆ, ಎರಡನೆಯದು ೧೯ನೇ ಶತಮಾನದ ಅಂತ್ಯದ ವೇಳೆ ತನ್ನ ಯಶಸ್ಸಿನ ಶಿಖರನ್ನೇರಿದ ಹೊರಾಸ್ ವಾಲ್‌ಪೋಲ್‌ನ 'ಸೂಡೋ ಗಾಥಿಕ್‌ವಿಲ್ಲಾ ಸ್ಟ್ರಾಬೆಲ್ ಡಿಲ್' ಎಂಬುದು. ಇದು ಟ್ವಿಕೆನ್‌ಹ್ಯಾಮ್ ಎಂಬಲ್ಲಿ ೧೭೪೮ರಲ್ಲಿ ಪ್ರಾರಂಭಗೊಂಡಿತ್ತು. ಇಲ್ಲಿ ಒಂದು ಬಹಳ ವಿಶಿಷ್ಟವಾದ ತಾಂತ್ರಿಕತೆಯು ಬಳಕೆಯಾಗಿದ್ದು, ಇದನ್ನು ಹೊರಗಿನಿಂದ ತಂದು ರೂಢಿಸಲಾದ ಶೈಲಿಗಳ ಗುಂಪಿಗೆ ಸೇರಿಸಬಹುದಾದ ರೆಕೋಕೋ ಪ್ರಯೋಗದಲ್ಲಿ ಬರುವ 'ಶೈನೋಸೆರಿ'ಗೆ ಧಾರಾಳವಾಗಿ ಹೋಲಿಸಬಹುದಾಗಿದೆ. ಇಂತಹ ಗೋಥಿಕ್ ಕಲೆಯು ಪ್ರಾಚೀನಾನ್ವೇಷಣೆಯನ್ನು ಆದರಿಸಿತ್ತು ಮತ್ತು ಚಿತ್ರಮಯ ಚಳುವಳಿಯ ಪ್ರತ್ಯಕ್ಷ, ಸಾಂಕೇತಿಕ ಸಂವೇದನೆಯೂ ಕೂಡ ಆಗಿತ್ತು.



ವಾಸ್ತುಶಿಲ್ಪದ ನೀಲಿ ನಕ್ಷೆ


ಇದು 'ಕರಡು ಚಿತ್ರಯುಗ'ದ ಒಂದು ಉತ್ಪಾದನೆಯಾಗಿತ್ತು. ಜಲವರ್ಣ ಮಾಧ್ಯಮದ ಕಲಾವಿದರಿಗೂ ಹಾಗೂ ತಗಡಿನ ಮೇಲೆ ಚಿತ್ರವನ್ನು ಕೊರೆದ ಕಲಾವಿದರಿಗೂ ಈ ಗೋಥಿಕ್ ಅವಶೇಷಗಳು ನೆಚ್ಚಿನ ವಿಷಯವಾಗಿಯೇ ಉಳಿದವು.[೨] ಚಳುವಳಿಯ ಎರಡನೇ ಹಂತದಲ್ಲಿ ಗೋಥಿಕ್ ಪುನರುಜ್ಜೀವನ ಕಾರ್ಯವು ಇನ್ನಷ್ಟು ಗಂಭೀರವಾಗಿ, ಯೋಜನಾತ್ಮಕವಾಗಿ ರೂಪಗೊಂಡಿತು. ಅಗಸ್ಟಸ್ ವೆಲ್ ಬೆ ಪೂಜಿನ್ ಹಾಗೂ ಜಾನ್ ರಸ್ಕಿನ್‌ರ ಲೇಖನವು ಹೇಳುವಂತೆ, ಗೋಥಿಕ್ ಶೈಲಿಯು ಅನಿವಾರ್ಯವಾದ ಮನಪ್ರವೃತ್ತಿಯ ವಿಚಾರವಾಯಿತು.



ವಾಸ್ತುಶಿಲ್ಪದ ನೀಲಿ ನಕ್ಷೆ

೨೨. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪು–೧೪೫

ವಾಸ್ತುಶಿಲ್ಪದ ನಕ್ಷೆಯನ್ನು ತಯಾರಿಸುವಲ್ಲಿ ವಿಶೇಷ ಪ್ರಾವಿಣ್ಯವನ್ನು ಪಡೆದಿದ್ದ ಮತ್ತು ಗೋಥಿಕ್ ಸ್ಮಾರಕಗಳನ್ನು ಯಥಾವತ್ತಾಗಿ ಚಿತ್ರಿಸುವ, ಫ್ರೆಂಚಿನವನಾದ ಅಗಸ್ಟ್‌ಚಾರ್ಲ್ಸ್ ಫ್ಯೂಜಿನ್ (ಫ್ಯೂಜಿನನ ತಂದೆ) ಈ ಚಳುವಳಿಯ ಎರಡು ಮಜಲುಗಳ ನಡುವೆ ಒಂದು ಸೇತುವೆಯನ್ನು ಗುರುತಿಸುತ್ತಾನೆ. ೧೯ನೇ ಶತಮಾನದಲ್ಲಿ ಸಾರ್ವಜನಿಕ ಕಟ್ಟಡಗಳಿಗೆ ಶ್ರೇಷ್ಠವಾದ ಶೈಲಿಯತ್ತಲೇ ವಲವಿದ್ದರೂ(ಲಂಡನಿನ ಹೊಸ ಸಭಾಮಂದಿರವೊಂದನ್ನು ಹೊರತುಪಡಿಸಿ), ಕ್ರೈಸ್ತ ಮಂದಿರಗಳಿಗೆ ಮಾತ್ರ, ಗೋಥಿಕ್ ಶೈಲಿಯೇ ನಿರ್ಮಿವಾದವಾಗಿ ಅಪೇಕ್ಷಣೀಯವಾಗಿತ್ತು. ಗೊಥಿಕ್ ಪುನರುಜ್ಜೀವನ ಕಾಲದಲ್ಲಿ ಲಲಿತಕಲೆಯ ಮಟ್ಟಿಗೆ ಹೇಳುವುದಾದರೆ, ಗೋಥಿಕ್ ಶೈಲಿಗಿಂತಲೂ, ತನ್ಮೂಲಕ ಹೊರನೋಟಕ್ಕೆ ವ್ಯಕ್ತವಾಗುತ್ತಿದ್ದ ವಿಷಯ ವಸ್ತುವೇ ಮುಖ್ಯವಾಗಿತ್ತು. ಮಧ್ಯಯುಗದಲ್ಲಿ ಈ ಐತಿಹಾಸಿಕ ವಿಷಯಗಳು ಬ್ರಿಟನ್, ಫ್ರಾನ್ಸ್ ಮತ್ತು ಜರ್ಮನಿಗಳಲ್ಲಿ ಜನಜನಿತವಾದವು ಮತ್ತು ನಜಾರೆನ್ಸ್, ಪೂರ್ವ-ರಾಫೇಲಿಟ್ಸ್, ಕಲೆ ಮತ್ತು ಕಸುರಿ ಕೆಲಸಗಳ ಚಳುವಳಿಯಂತಹ ಕೆಲವು ಆದರ್ಶ ಚಳುವಳಿಗಳು ಗೂಡಾರ್ಥವೆಂದು ಮಂಜುಕವಿದ ಈ ಮಧ್ಯಯುಗದಲ್ಲಿ ಪ್ರಚಲಿತಗೊಂಡವು.[೩]



ಜಾನ್ ರಸ್ಕಿನ್



'ದ ಗಾರ್ಡನ್ ಆಫ್ ಸನ್ ಮಿನಿಟಾವೋ' ಫ್ಲೋರೆನ್ಸ್


ಜಾನ್ ರಸ್ಕಿನ್ ೮ ಫೆಬ್ರವರಿ ೧೮೮೯ ಬ್ರುನ್ಸ್‌ವಿಕ್ ಲಂಡನಿನಲ್ಲಿ ಜನಿಸಿದನು. ಹದಿನೆಂಟನೆಯ ಶತಮಾನದಲ್ಲಿ ಖ್ಯಾತ ಕಲಾವಿದನು ಕಲಾ ವಿಮರ್ಶಕನು, ಕಟ್ಟಡಗಳ ನೀಲಿ ನಕ್ಷೆಗಳು ಮತ್ತು ನಿಸರ್ಗಚಿತ್ರ ರಚಿಸುವಲ್ಲಿ ಪ್ರಾವಿಣ್ಯವನ್ನು ಪಡೆದವನಾಗಿದ್ದನು. ಈತನು ೨೦ ಜನವರಿ ೧೯೦೦ರಲ್ಲಿ ಕಾಲವಾದನು. ಇವನು ಜೀವಿತಾವಧಿಯಲ್ಲಿ ಅನೇಕ ನಿಸರ್ಗ ಚಿತ್ರಗಳು, ಕಟ್ಟಡದ ಚಿತ್ರಗಳು, ಸಾಂಪ್ರದಾಯಿಕ ಸಂಯೋಜನೆಯ ಚಿತ್ರಗಳು ಮತ್ತು ಕಟ್ಟಡದ ನೀಲಿ ನಕ್ಷೆಯ ಚಿತ್ರಗಳನ್ನು ತೈಲವರ್ಣದಲ್ಲಿ ರಚಿಸಿದ್ದಾನೆ.

ಬಾರೋಕ್ ಯುಗದಲ್ಲಿ ನಿಸರ್ಗ ಚಿತ್ರಕಲೆ

ಕ್ರಿ.ಶ.೧೬೦೦ರಿಂದ ಕ್ರಿ.ಶ೧೭೫೦ರ ಅವಧಿಯಲ್ಲಿ ಬಾರೋಕ್ ಕಲಾಶೈಲಿಯ ಕಾಲವೆಂದು ಕರೆಯಲಾಗಿದೆ. ಈ ಕಾಲವನ್ನು ಕಲಾ ಚಟುವಟಿಕೆಗಳ ಸುಗ್ಗಿಯ ಕಾಲವೆಂದು ಹೇಳಬಹುದು. ವಾಸ್ತುಶಿಲ್ಪ, ಶಿಲ್ಪ ಹಾಗೂ ಚಿತ್ರಕಲೆ ಈ ಮೂರು ಕಲಾ ಪ್ರಕಾರಗಳನ್ನು ಸಮನ್ವಯಿಸಿದರು.

---

೦೩. ಪಿ. ಆರ್. ತಿಪ್ಪೇಸ್ವಾಮಿ (ಪ್ರ.ಸಂ.) : ಕಲಾಕೋಶ, ಪು-೧೪೫




ಗಿಯೋನಿ ಬರ್ನ್ನಿ



ಸಂಯೋಜನೆಯ ಚಿತ್ರದಲ್ಲಿ ನಿಸರ್ಗ

ಈ ಮೂರು ಕಲಾ ಪ್ರಕಾರಗಳಲ್ಲಿಯೂ ಕ್ರಿ.ಶ೧೫೯೮–೧೬೮೦ರಲ್ಲಿ ಜನಿಸಿದ ಗಿಯೋನಿ ಬರ್ನ್ನಿ ಎಂಬ ಮಹಾನ ಕಲಾವಿದನು ಅದ್ವಿತೀಯನೆನಿಸಿದನು. ಇವನು ರೋಮ ನಗರದ ಸೇಂಟ್ ಪೀಟರ್‌ನ ದೇವಾಲಯದ ಪೂರ್ಣಗೊಳಿಸುವಿಕೆಯ ಕಾಲದಲ್ಲಿ ಸಹಾಯಕನಾಗಿ ಅನೇಕ ವರ್ಷಗಳವರೆಗೆ ಕೆಲಸ ಮಾಡಿದನು. ಅಲ್ಲದೆ ಬರ್ನ್ನಿಯು ವಾಸ್ತು ಕಲೆಯ ಮತ್ತು ವರ್ಣಚಿತ್ರಕಲೆಗಳನ್ನು ಒಟ್ಟುಗೂಡಿಸಿ ಕಲೆಯ ನವೀನ ಆಕಾರವನ್ನು ನಿರ್ಮಿಸಿದನು.

ಪಶ್ಚಿಮ ಜರ್ಮನಿಯ ರೆಸಿಡೆಂಟ್ ಅರಮನೆಯ ಒಳಮಾಳಿಗೆಯಲ್ಲಿ ಚಿತ್ರಗಳನ್ನು ಚಿತ್ರಿಸಿದನು. ವೆನೇಷಿಯನ್ ಕಲಾವಿದ ಗಿಯಾಂಪಾಟಿಸ್ಟಾ ಟೀಪೋಲೋ ಎಂಬ ಇನ್ನೊಬ್ಬ ಕಲಾವಿದನು ಬರೋಕ್ ಕಲಾಶೈಲಿಯ ಮಹಾನ್ ಕಲಾವಿನಾಗಿದ್ದನು. ಟೀಪೋಲೋ ಚಿತ್ರಿಸಿದ ಈ ಅರಮನೆಯ ಒಳಮಾಳಿಗೆಯನ್ನು ನೋಡಿದಾಗ ಆಕಾಶದಲ್ಲಿರುವ ಕಿಂಡಿಯಿಂದ ಹಾರಾಡುವ ಮನುಷ್ಯಾಕೃತಿಗಳನ್ನೂ ಮೋಡಗಳನ್ನು ನೋಡುತ್ತಿರುವಂತೆ ಭಾಸವಾಗುತ್ತದೆ. ನಾವು ಅದೇ ಚಿತ್ರದ ಭಾಗವಾಗಿ ಹೋಗುವುದನ್ನೇ ಬಾರೋಕ್ ಎನ್ನುವುದು.



ಪೀಟರ್ ಪಾಲ ರೂಬೆನ್ಸ್



ದ ಕನ್‌ವರ್ಶನ್ ಚಿತ್ರದಲ್ಲಿ ನಿಸರ್ಗ


ಬಾರೋಕ್ ಶೈಲಿಯ ಮಹಾನ್ ಕಲಾವಿದನೆಂದು ವಿಶ್ವವಿಖ್ಯಾತನಾದ ಪೀಟರ್ ಪಾಲ ರೂಬೆನ್ಸ್‌ನು ಇಟಾಲಿಯಲ್ಲಿ ಎಂಟು ವರ್ಷಗಳವರೆಗೆ ಅಭ್ಯಾಸ ಮಾಡಿ ಆ್ಯಂಟ್ ವರ್ಪದ ತನ್ನ ಮನೆಗೆ ಬಂದ ನಂತರ ಆ್ಯಂಟ್ ವರ್ಪನ್ನು ಯೂರೋಪಿಯನ್ ಕಲೆಯ ಕೇಂದ್ರವನ್ನಾಗಿ ಮಾಡಿದನು. ರೂಬೆನ್ಸ್ ಚಿತ್ರಿಸಿದ ಟ್ರಾಯಂಪ್ ಆಫ್ ಲವ್ ಎಂಬ ಕಲಾಕೃತಿಯೂ ಬಂಗಾರದ ಬೆಳಕನ್ನು ಬೀರುವ ಸತ್ವಪೂರ್ಣ ಕಲಾಕೃತಿಯಾಗಿದೆಯಲ್ಲದೆ ಬಾರೋಕ್ ಕಲಾ ಶೈಲಿಯ ಮಹೋನ್ನತ ಕೃತಿಯಂದು ಪರಿಗಣಿತವಾಗಿದೆ. ನಿಜವಾದ ಬಾರೋಕ್ ಮುಕ್ತ ಶೈಲಿಯ ಈ ಚಿತ್ರವು ಚೌಕಟ್ಟಿನ ಪರಿಮಿತಿಯನ್ನು ಮೀರಿ ಚಿತ್ರತವಾದಂತೆ ಕಾಣಿಸುತ್ತದೆ.[೧೪]

ಬಾರೋಕ್ ಯುಗದ ಕಲಾವಿದರು

ಲುಡಿವಿಸಿಯೋ ಕಹ್ರಾಚಿ, ಅಗಸ್ಟಿನೋ ಕಹ್ರಾಚಿ, ಅನಿಬನಿ ಕಹ್ರಾಚಿ, ಮೈಕಲ್ ಎಂಜೆಲೋ, ಬಿರ್‍ನಿನಿ, ರೂಬೆನ್ಸ್, ರೆಂಬ್ರಾಂಟ್, ವೇರ್ಮಿರ್, ಪ್ರಾಂಜ್ ಹಾಲ್ಸ,ವೆಲಸ್ಕತ್, ಕ್ಲಾಡ್ ಲೋರೈನ್ ಮುಂತಾದವರು.

ರೊಕೋಕೊ ಯುಗದಲ್ಲಿ ನಿಸರ್ಗ ಚಿತ್ರಕಲೆ

ಕ್ರಿ.ಶ. ೧೭೦೦ರಲ್ಲಿ ರೋಕೊಕೊ ಅಥವಾ ಅತ್ಯಲಂಕಾರ ಕಲಾಶೈಲಿಯು ಯೂರೊಪಿನಲ್ಲೆಲ್ಲ ಸುಪ್ರಸಿದ್ಧವಾಗಿತ್ತು. ರೋಕೊಕೊ ಕಲೆಯ ಅಲಂಕಾರ ಪೂರ್ಣವೂ ಭಾವನಾ ಪ್ರಧಾನವೂ ಆದ ಒಂದು ಕಲಾಶೈಲಿಯಾಗಿದೆ. ಈ ಶೈಲಿಯು ಪ್ರಪ್ರಥಮವಾಗಿ ದಕ್ಷಿಣ ಜರ್ಮನಿಯ ಪ್ರಾಂತ್ಯಗಳ ಅರಮನೆಗಳು ಮತ್ತು ಚರ್ಚುಗಳ ಒಳಾವರಣಗಳನ್ನು ಅಲಂಕಾರಯುಕ್ತ ವರ್ಣಚಿತ್ರಗಳಿಂದ ಅಲಂಕರಿಸುವ ಮೂಲಕ ಪ್ರಾರಂಭವಾಯಿತು. ಚರ್ಚುಗಳ ಒಳಾವರಣಗಳು ಬಿಳಿ ಮತ್ತು ಬಂಗಾರದ ಬಣ್ಣಗಳಿಂದ ಅಲಂಕರಿಸಲ್ಪಡುತ್ತಿದ್ದವು. ಬರೋಕ್ ಶೈಲಿಯ ಸೃಜನಶೀಲ ಕುಟುಂಬದವರಾದ ಅಸಮರು ಮತ್ತು ಝಿಮ್ಮರ್‌ಮನ್ನರು ರೋಕೊಕೊ ಶೈಲಿಗೆ ತಿರುಗಿದರು.



ಗಿಯೋವನಿ ಬಾಟಿಸ್ಟಾ ಟೀಪೋಲೋ



ಅಲಂಕಾರಯುಕ್ತ ಭಿತ್ತಿಚಿತ್ರಗಳಲ್ಲಿ ನಿಸರ್ಗಚಿತ್ರ

೧೪. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೬೧

ಈ ಕಾಲದ ಸುಪ್ರಸಿದ್ಧ ಅಲಂಕರಣಕಾರನೆನಿಸಿದ ಗಿಯೋವನಿ ಬಾಟಿಸ್ಟಾ ಟೀಪೋಲೋ ಎಂಬ ವೆನೇಷಿಯನ್ ಚಿತ್ರಕಲಾವಿದನು ಅನೇಕ ಅರಮನೆಗಳ ಮತ್ತು ಚರ್ಚುಗಳ ಒಳಮಾಳಿಗೆಗಳಲ್ಲಿ ಅತ್ಯದ್ಭುತವಾದ ಅಲಂಕಾರಯುಕ್ತ ಭಿತ್ತಿಚಿತ್ರಗಳನ್ನು ರಚಿಸಿದ್ದಾನೆ. ವೇನಿಸ್ ಪಟ್ಟಣದ ರೆಝೋನಿಕೊ ಎಂಬ ಅರಮನೆಯಲ್ಲಿ ಟಿಪೊಲೋ ಚಿತ್ರಿಸಿದ ನೊಬಿಲಿಟಿ ಆ್ಯಂಡ್ ವ್ಹರ್ಚ್ಯೂ ಎಂಬ ಭಿತ್ತಿಚಿತ್ರವು ಪ್ರೇಕ್ಷಣಿಯವಾಗಿದೆ. ಬಹುಶಃ ಈ ಭಿತ್ತಿಚಿತ್ರಗಳು ಕ್ರಿ.ಶ. ೧೭೦೦ರಲ್ಲಿ ಚಿತ್ರಿತವಾದವುಗಳಾಗಿವೆ.




ವೇನಿಸ್ ಪಟ್ಟಣದ ರೆಝೋನಿಕೊ ಅರಮನೆಯಲ್ಲಿನ ಟಿಪೊಲೋ ಚಿತ್ರಿಸಿದ ನೊಬಿಲಿಟಿ ಆ್ಯಂಡ್ ವ್ಹರ್ಚ್ಯೂ ಎಂಬ ಭಿತ್ತಿಚಿತ್ರ

ರೊಕೋಕೊ ಯುಗದ ಇನ್ನೊಬ್ಬ ಮಹಾನ್ ಕಲಾವಿದ ಆಂಟೋಯಿನ್ ಪಟ್ಟಾವ ಬೆಲಿಯಂನಲ್ಲಿ ಹುಟ್ಟಿದ ವಟ್ಟಾವ ಫ್ರಾನ್ಸಿನಲ್ಲಿ ನೆಲೆಸಿ ೩೭ರ ಹರೆಯದರಲ್ಲಿಯೇ ಕಾಲವಾದನು. ಇವನು ತನ್ನ ಕಾಲದ ಸದ್ಗೃಹಸ್ತರ ಭವ್ಯ ಮಂದಿರಗಳ ಒಳಾವರಣವನ್ನು ಅತ್ಯಲಂಕೃತ ಶೈಲಿಯ ವರ್ಣಚಿತ್ರಗಳಿಂದ ಅಲಂಕರಿಸಿದ್ದನು. ಅವನು ಚಿತ್ರಿಸಿದ "ಧ್ಯಾನದೇವತೆ"ಯ ಚಿತ್ರವು ಸೌಂದರ್ಯ ಪೂರ್ಣಚಿತ್ರವಾಗಿದೆ. ಈ ರೊಕೋಕೊ ಶೈಲಿಯು ಕೇವಲ ವರ್ಣಚಿತ್ರಗಳಿಗೆ ಮಾತ್ರ ಸೀಮಿತವಾಗಿರದೇ ವಾಸ್ತುಶಿಲ್ಪ, ಶಿಲ್ಪ, ಸಂಗೀತ, ನಾಟಕ; ನಕ್ಷಾಚಿತ್ರ ಮುಂತಾದ ಅನೇಕ ಕಲಾ ಪ್ರಕಾರಗಳಿಗೂ ವ್ಯಾಪಿಸಿತು. ಈ ಕಾಲದಲ್ಲಿ ತಯಾರಿಸಲ್ಪಟ್ಟ ಅಲಂಕಾರಯುಕ್ತ ಚಾಕುವಿನಿಂದ ಹಿಡಿಕೆಗಳು ಮತ್ತು ಚಹದ ಪಾತ್ರೆಗಳು ಸುಪ್ರಸಿದ್ಧವಾಗಿದ್ದವು. ಒಟ್ಟಿನಲ್ಲಿ ಸುಖಜೀವನ ಸಾಧನವಾಗಿ ಈ ರೊಕೋಕೊ ಶೈಲಿಯು ಅಂತರಾಷ್ಟ್ರೀಯ ಮನ್ನಣೆಯನ್ನು ಗಳಿಸಿತ್ತು.


ರೊಮ್ಯಾಂಟಿಕ್ ಯುಗದಲ್ಲಿ ನಿಸರ್ಗ ಚಿತ್ರಕಲೆ

ರೋಮ್ಯಾಂಟಿಕ್ ಅಥವಾ ರಮ್ಯಶೈಲಿಯು ಶತಮಾನಗಳಿಂದಲೂ ಬೆಳೆದು ಬಂದ ಶೈಲಿಯಾಗಿದೆ ಎಂಬುದನ್ನು ಚರಿತ್ರೆಯಿಂದ ತಿಳಿಯುತ್ತೇವೆ. ಸಾಹಿತ್ಯ, ಸಂಗೀತ, ದೃಶ್ಯಕಲೆಗಳು ಮತ್ತು ವಾಸ್ತುಕಲೆಗಳೆಲ್ಲ



ಇತಿಹಾಸದೊಂದಿಗೆ ಬೆಳೆದು ಬಂದ ಈ ರಮ್ಯಶೈಲಿಯಲ್ಲಿಯೇ ರೂಪಿತಗೊಂಡವು. ಈ ಶೈಲಿಯು ಕ್ರಿ.ಶ. ೧೭೦೦ ಮತ್ತು ೧೮೦೦ರ ಮಧ್ಯಕಾದವರೆಗಿನ ಅವಧಿಯಲ್ಲಿ ಯುರೋಪಿನಲ್ಲಿ ಪ್ರಾರಂಭವಾಗಿ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಕಲಾಶೈಲಿಯ ವರೆಗೂ ತನ್ನ ಪ್ರಭಾವವನ್ನು ಪಸರಿಸಿತು. ರೋಮ್ಯಾಂಟಿಕ್ ಶೈಲಿಯು ಸಂಯುಕ್ತ ಸಂಸ್ಥಾನಗಳಲ್ಲಿ ಅತೀ ಮಹತ್ವದ ಸ್ಥಾನವನ್ನು ಪಡೆದಿತ್ತು.

ರೋಮ್ಯಾಂಟಿಕ್ ಶೈಲಿಯು ಕಲ್ಪನ ಪ್ರಧಾನವಾದ ಶೈಲಿಯಾಗಿದೆ. ರೋಮ್ಯಾಂಟಿಕ್ ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ಚಮತ್ಕಾರಗಳನ್ನೂ ಆಶ್ವರ್ಯಕರ ಭಾವನೆಗಳನ್ನೂ ತಮ್ಮ ಕಲ್ಪನೆಗಳಿಂದ ತುಂಬುತ್ತಿದ್ದರು. ಹೆಚ್ಚಾಗಿ ಈ ಕಲಾವಿದರು ಪರ್ವತ ಶ್ರೇಣಿಗಳು, ಸೂರ್ಯಾಸ್ತ, ನದಿಗಳು ಮುಂತಾದ ನೈಸರ್ಗಿಕ ವಸ್ತುಗಳನ್ನೇ ಚಿತ್ರಿಸುತ್ತಿದ್ದರು. ಜೊಸೆಫ್ ಎಂ.ಡಬ್ಲೂ. ಟರ್ನರ್ ಎಂಬ ಬ್ರಿಟಿಷ್ ಕಲಾವಿದನು ಈ ಶೈಲಿಯ ಪ್ರಬುದ್ಧ ಮತ್ತು ಪ್ರಮುಖ ಕಲಾವಿದನಾಗಿದ್ದನು.



ಜೆ.ಎಂ.ಡಬ್ಲೂ. ಟರ್ನರ್



ವೆನೀಸ್ ಬಿಡ್ಜ ಆಫ್ ಸೈಟ್




ಸಮುದ್ರದ ನಿಸರ್ಗ ಚಿತ್ರ



ಅವನ ಪ್ರಭಾವಶಾಲಿ ಕಲ್ಪನೆಯಿಂದ ಅವನು ನೋಡಿದ ವಸ್ತುಗಳು ಅದ್ಭುತ, ಪ್ರಪಂಚವಾಗಿ ಬದಲಾದವು. ಟರ್ನರ್ ಚಿತ್ರಿಸಿದ ಐತಿಹಾಸಿಕ ಮತ್ತು ಪೌರಾಣಿಕ ಘಟನೆಗಳು, ಸೂರ್ಯಾಸ್ತಗಳು, ಸಮುದ್ರದ ದೃಶ್ಯಗಳು ಮುಂತಾದ ಕಲಾಕೃತಿಗಳು ಅದ್ಭುತ ಕಲ್ಪನಾ ಶಕ್ತಿಯನ್ನು ತೋರಿಸುತ್ತವೆ.[೫]

ಜೆ.ಎಂ.ಡಬ್ಲೂ. ಟರ್ನರ್‌ನು ೧೭೭೫ ಕಾವೆಂಟ್ ಗಾರ್ಡನ್ನಿನ ಸಮೀಪ ಹಳ್ಳಿಯಲ್ಲಿ ಜನಿಸಿದ. ಇವನ ಪೂರ್ಣ ಹೆಸರು ಜೊಸಫ್ ಮೆಲ್ಲೊರ್ಡ್ ವಿಲಿಯಮ್ ಟರ್ನರ್ ಆದರೆ ಚಿತ್ರಕಲೆಯ ಲೋಕದಲ್ಲಿ ಟರ್ನರ್ ಎಂದೇ ಪ್ರಸಿದ್ಧಿ ಪಡೆದಿದ್ದಾನೆ. ಇವನು ವಿಶ್ವದಲ್ಲೇ ಅತ್ಯುತ್ತಮ ಪ್ರಕೃತಿದೃಶ್ಯ ಚಿತ್ರಗಾರನೆಂದು ಕರೆಸಿಕೊಂಡವನು. ಅಮೇರಿಕೆಯ ಸಂಯುಕ್ತ ಸಂಸ್ಥಾನಗಳ ಪ್ರಪ್ರಥಮ ರೋಮ್ಯಾಂಟಿಕ್ ಕಲಾವಿದ ಜಾರ್ಜ್ ಕ್ಯಟ್ಲಿನ್ ಎಂಬ ಕಲಾವಿದನು ಅಮೇರಿಕನ್ ಇಂಡಿಯನ್ನರ ಮತ್ತು ಅವರ ನಾಯಕರ ಚಿತ್ರಗಳನ್ನು ಚಿತ್ರಿಸಿದನು.



ಜಾರ್ಜ್ ಕ್ಯಟ್ಲಿನ್




ಬಫಲೋ ಹಾರ್ಬೊರ್ ಫ್ರಮ್ ದ ಜಾರ್ಜ್ ಕ್ಯಟ್ಲಿನ್



ದ ವೈಟ್ ಕ್ಲೌಡ್ ಹೆಡ್ ಚೀಫ್ ಆಫ್ ದಿ ಲೋವಾಸ್

೫. ಡಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೬೪

ಈ ಚಿತ್ರಗಳ ರಚನೆಗಾಗಿ ಅವನು ರೆಡ್ ಇಂಡಿಯನ್ನರೊಂದಿಗೆ ಐದು ವರ್ಷಗಳ ಕಾಲ ವಾಸವಾಗಿದ್ದು ಅನೇಕ ವರ್ಣಚಿತ್ರಗಳನ್ನೂ ರೇಖಾಚಿತ್ರಗಳನ್ನೂ ಚಿತ್ರಿಸಿಕೊಂಡನು. ಥಾಮಸ್ ಕೋಲ ಎಂಬ ಇನ್ನೊಬ್ಬ ರೋಮ್ಯಾಂಟಿಕ್ ಕಲಾವಿದನು ಸಂಯುಕ್ತ ಸಂಸ್ಥಾನಗಳ ಕಾಡು ಮೇಡುಗಳ ಭಯಾನಕ ದೃಶ್ಯಗಳನ್ನು ಚಿತ್ರಿಸಿದ್ದು ಅದ್ಭುತ ಕಲಾಕೃತಿಗಳಾಗಿವೆ.[೬]



ಥಾಮಸ್ ಕೋಲ



ಹೋಮ್ ಇನ್ ದ ವುಡ್



ದ ಡಿಪಾರ್ಚರ್

ಮಧ್ಯಕಾಲೀನ ಇಂಗ್ಲೀಷ್ ವರ್ಣಚಿತ್ರಗಳ ಗುಣಮಟ್ಟವನ್ನು ಹಸ್ತಪ್ರತಿಗಳಲ್ಲಿ ಕಾಣಬಹುದು. ಈ ಹಸ್ತಪ್ರತಿಗಳಲ್ಲಿ ವಾಕ್ಯದ ಮೊದಲಕ್ಷರವನ್ನು ಅಲಂಕಾರಗೊಳಿಸಿ ಮುಂದಿನ ಅಕ್ಷರಗಳನ್ನು ಬರೆಯಲಾಗುತ್ತಿತ್ತು. ಈ ಹಸ್ತಪ್ರತಿಗಳನ್ನು ಇಲೂಮಿನೆಟೆಡ್ ಮ್ಯಾನುಸ್ಕ್ರಿಪ್ಟ್ ಎಂದು ಕರೆಯಲಾಗುತ್ತದೆ. ಕ್ರಿ.ಶ. ೧೨ನೆಯ ಶತಮಾನದಲ್ಲಿ ರಚಿತವಾದ ಇಂಥ ಹಸ್ತಪ್ರತಿಗಳು ಅಳತೆಯಲ್ಲಿ ದೊಡ್ಡದಾಗಿದ್ದು ಉಜ್ವಲವಾಗಿ ಅಲಂಕರಿಸಿದವುಗಳಾಗಿವೆ.


೧೬. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೬೪

ನಂತರದ ಹಸ್ತಪ್ರತಿಗಳು ಚಿಕ್ಕವಾಗಿದ್ದರೂ ಅಲಂಕೃತ ಮೊದಲಕ್ಷರವನ್ನು ಹೆಚ್ಚು ಚಿತ್ತಾಕರ್ಷವೂ ಸೂಕ್ಷ್ಮವೂ ಆಗಿ ಚಿತ್ರಿಸಲ್ಪಟ್ಟವುಗಳು ಆಗಿರುತ್ತವೆ. ೧೩ನೆಯ ಶತಮಾನದ ಕೊನೆ ಹಾಗೂ ೧೪ನೆಯ ಶತಮಾನದ ಆದಿಯಲ್ಲಿ ರಚಿಸಲಾದ ಬ್ಯಾಬಲ್‌ಗಳು ಮತ್ತು ಸಾಲ್ಟರ್ಸ್‌ಗಳು ಶ್ರೀಮಂತವಾಗಿ ಅಲಂಕರಿಸಿದ ಅಂಚುಗಳ ಮತ್ತು ಸಮಕಾಲೀನ ಜನಜೀವನದ ಮನಮೋಹಕ ಸನ್ನಿವೇಶಗಳ ಚಿತ್ರಣಗಳಿಂದ ಕೂಡಿದವುಗಳಾಗಿವೆ.[೭]

ಕ್ರಿ.ಶ. ೧೬ನೆಯ ಶತಮಾನದಲ್ಲಿ ಬ್ರೀಟಿಷ್ ಕಲೆಯ ನವೋದಯವಾಯಿತು. ಈ ನವೋದಯಕ್ಕೆ ಫ್ಲೆಮಿಷ್ ಮತ್ತು ಜರ್ಮನ್ ಪ್ರಭಾವ ಕಾರಣವಾಯಿತು. ಜರ್ಮನ್ ಕಲಾವಿದ ಚಿಕ್ಕ ಹಾನ್ಸ್ ಹೋಲ್ಬೀನ ಉಜ್ವಲವಾದ ಭಾವಚಿತ್ರಗಳು ಎಂಟನೆಯ ಹೆನ್ರಿಯ ಆಸ್ಥಾನದಲ್ಲಿದ್ದು, ಮನಮೋಹಕ ಕಲಾಕೃತಿಗಳಾಗಿವೆ. ಹೋಲ್ಬೀನ್‌ನ ಅನಂತರ ಎಲಿಝಾಬೆತ್‌ರಾಣಿಯ ಕಾಲದಲ್ಲಿ ಅತ್ಯುತ್ತಮವಾದ ಕಿರುಚಿತ್ರಗಳ ಬೆಳವಣಿಗೆಯಾಯಿತು. ಈ ಕಿರುವರ್ಣಚಿತ್ರಗಳ ಶೈಲಿಯು ಪರಿಪೂರ್ಣ ಇಂಗ್ಲೀಷ್ ಶೈಲಿಯಾಗಿತ್ತು. ಕ್ರಿ.ಶ. ೧೬ ಮತ್ತು ೧೭ನೆಯ ಶತಮಾನದಲ್ಲಿ ಭಾವಚಿತ್ರವು ಪ್ರೋಟೆಸ್ಟಂಟ್ ಇಂಗ್ಲೀಷ್ ವರ್ಣಚಿತ್ರಕಲೆಯ ಪ್ರಧಾನ ಆಸಕ್ತಿಯಾಗಿತ್ತು. ಹೆಚ್ಚಾಗಿ ಫ್ಲೆಮಿಷ್ ಮತ್ತು ಡಚ್ ಕಲಾವಿದರು ತಮ್ಮ ಮಹಾಪೋಷಕರ ಇಚ್ಛೆಗನುಸಾರವಾಗಿ ತಮ್ಮ ಕಲಾಶೈಲಿಯಲ್ಲಿ ಸುಧಾರಣೆಗಳನ್ನು ತಂದುಕೊಂಡರು.




ಚಾರ್ಲ್ಸ್‌ನ ಆಸ್ಥಾನದ ಚಿತ್ರ



ವ್ಯಾನ್ ಡೈಕ್

೭. ಪಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೬೪

ಫ್ಲೆಮಿಂಗ್ ಕಲಾವಿದ ವ್ಯಾನ್ ಡೈಕ್‌ನ ಕಲಾಕೃತಿಗಳು ಒಂದನೆಯ ಚಾರ್ಲಸ್‌ನ ಆಸ್ಥಾನದ ಘನತರ ವೈಭವವನ್ನು ಪ್ರತಿಬಿಂಬಿಸುತ್ತವೆ. ಡಚ್ ಕಲಾವಿದ ಪೀಟರ್ ಲಿಲಿಯು ಬ್ರಿಟಿಷ ರಾಜ್ಯದ ಪುನಃಸ್ಥಾಪನೆಯ ನಂತರ ಅನೇಕ ನೌಕಾಪಡೆಯ ಅಧಿಕಾರಿಗಳ ಭಾವಚಿತ್ರಗಳನ್ನು ಚಿತ್ರಿಸಿದನು. ಈ ಚಿತ್ರಗಳಲ್ಲಿ ರಾಜ್ಯಸ್ಥಾಪನೆಯ ಹೋಣೆಗಾರಿಕೆಯನ್ನು ಹೊತ್ತ ಅಧಿಕಾರಿಗಳ ವ್ಯಕ್ತಿತ್ವ ಸ್ಪಷ್ಟವಾಗಿ ನಿರೂಪಿಸಲಾಗಿದೆ.[೧೮] ೧೮ನೆಯ ಶತಮಾನದ ಇಂಗ್ಲೀಷ್ ಕಲಾವಿದರು ತಮ್ಮದೇ ಆದ ಸ್ವತಂತ್ರ ಶೈಲಿಯೊಂದನ್ನು ರೂಪಿಸಿಕೊಂಡರು. ಶ್ರೀಮಂತ ಪೋಷಕರಿಂದ ಈ ಕಲಾವಿದರಿಗೆ ಬಹಳಷ್ಟು ಬೇಡಿಕೆ ಬಂದಿತು. ಈ ಶ್ರೀಮಂತರ ಭಾವಚಿತ್ರಗಳಲ್ಲಿ ಅವರ ಶ್ರೀಮಂತಿಕೆಯ ಠೀವಿ, ಹಿನ್ನಲೆಯಲ್ಲಿ ಸಂಪತ್ತು ಎದ್ದುಕಾಣುವಂತೆ ಚಿತ್ರಿಸಿರುವ ರೀತಿ ಆಗಾಧವಾಗಿದ್ದು ಏಳರಿಂದ ಎಂಟು ಅಡಿ ಎತ್ತರದ ಚಿತ್ರಗಳಾಗಿರುತ್ತವೆ.



ಗೇನ್ಸ್‌ಬರೋ




ಶ್ರೀಮತಿ ಶ್ರೀ ರಾಬರ್ಟ್ ಆಂಡ್ರೂಸ್ ಅವರ ಭಾವಚಿತ್ರದಲ್ಲಿ ನಿಸರ್ಗ

೧೮ನೆಯ ಶತಮಾನದ ಬ್ರಿಟಿಷ್ ನಡುಗಡ್ಡೆಗಳ ಶ್ರೀಮಂತ ವ್ಯಕ್ತಿಗಳ ಭಾವಚಿತ್ರಗಳನ್ನು ಚಿತ್ರಿಸಿದ ರೇನಾಲ್ಡ್ಸ್, ಗೇನ್ಸಬರೋ ಅವರ ಕೃತಿಗಳಲ್ಲಿ ಶ್ರೀಮಂತ ಬದುಕಿನ ನಯ, ನಾಜೂಕು, ವಿಲಾಸಗಳು ಸ್ಪಷ್ಟವಾಗಿ ಚಿತ್ರಿತವಾಗಿರುವುದನ್ನು ಕಾಣಬಹುದು. ಬೇರೆ ಕೆಲವು ಕಲಾವಿದರು ಭಾವಚಿತ್ರಕಲೆಯಲ್ಲಿ ಪ್ರಾವೀಣ್ಯತೆಯನ್ನು ಪಡೆಯಲೆತ್ನಿಸಿದರೆ, ಸುಪ್ರಸಿದ್ಧ ಕಲಾವಿದ ವಿಲಿಯಂ ಹೋಗಾರ್ಥನು ಕೆಳದರ್ಜೆಯ ದುಷ್ಪ ಪರಿಣಾಮಗಳನ್ನು ತಿದ್ದಿ ಸಾಮಾಜಿಕ ಪರಿವರ್ತನೆಯ ಮಹತ್ವಕಾಂಕ್ಷೆಯಿಂದ ತನ್ನ ಕಲಾಕೃತಿಗಳನ್ನು ಸೃಷ್ಟಿಸಿದನು.[೧೯]

ಛಾಯಾಚಿತ್ರದಂತಿರುವ ನಿಸರ್ಗ ಚಿತ್ರ





ಕಾನ್ಸ್ಟೇಬಲ್

೧೮. ಪಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೬೫
೧೯. ಅದೇ., ಪು-೬೬


೧೮ ಶತಮಾನದ ಅಂತ್ಯದಲ್ಲೇ ರಿಚರ್ಡ್ ವಿಲ್ಸನ್ ಮತ್ತು ಗೇನ್ಸ್‌ಬರೋ ಅವರು ತೈಲವರ್ಣಗಳಿಂದಲೂ ಹಾಗೂ ಅಲೇಕ್ಸಾಂಡರ್ ಕರ್ಝೀನ್ಸ ಅವರು ಜಲವರ್ಣಗಳಿಂದಲೂ ನಿಸರ್ಗದೃಶ್ಯಚಿತ್ರ ಚಿತ್ರಶೈಲಿಯು ೧೯ನೆಯ ಶತಮಾನದ ಆದಿಯಲ್ಲಿ ಪರಮೋಚ್ಚಸ್ಥಾನ ಪಡೆದಿರುವುದನ್ನು ಟರ್ನರ್, ಕಾನ್ಸ್‌ಟೇಬಲ್, ಕ್ರೋಮ, ಕಾಟ್ಮನ್ ಮುಂತಾದವರ ನಿಸರ್ಗದೃಶ್ಯ ಚಿತ್ರಗಳು ತೋರ್ಪಡಿಸುತ್ತವೆ. ವಿಲ್ಸನ್‌ನು ಇಟಲಿಯಲ್ಲಿದ್ದು ಕ್ಲಾಡ್‌ನನ್ನು ಅನುಸರಿಸಿಯೇ ನಿಸರ್ಗ ದೃಶ್ಯಗಳನ್ನು ಚಿತ್ರಿಸುತ್ತಿದ್ದನು. ಈ ಚಿತ್ರಗಳು ನಿಸರ್ಗದ ಭಾವಚಿತ್ರಗಳಂತೆ ಕಾಣಿಸುತ್ತವೇ ಹೊರತಾಗಿ ಕ್ಲಾಡ್‌ನ ಆದರ್ಶನೀಯ ನಿಸರ್ಗದೃಶ್ಯ ಚಿತ್ರಗಳ ಅನುಕರಣೆಯಲ್ಲ. ಕಾನ್ಸಟೇಬಲ್, ಟರ್ನರ್ ಮತ್ತು ಅನೇಕ ಜಲವರ್ಣಚಿತ್ರ ಕಲಾವಿದರು ೧೯ನೆಯ ಶತಮಾನದ ಫ್ರೆಂಚ್ ಕಲಾವಿದರಿಗೆ ಸ್ಫೂರ್ತಿ ನೀಡಿದರು ೧೯ನೆಯ ಶತಮಾನದಿಂದಿಚೆಗೆ ನೂರು ವರುಷಗಳ ಅವಧಿಯಲ್ಲಿ ಬ್ರಿಟಿಷ್ ಕಲೆಯು ವೈವಿಧ್ಯವಾಗಿ ಅರಳಿತು.[೧೦]

ಭಾರತದ ಕಲೆಯಲ್ಲಿ ನಿಸರ್ಗ ಚಿತ್ರಕಲೆ



ಭೋದಿಸತ್ವ ಪದ್ಮಪಾಣಿ

ಭಾರತದ ಅಜಂತಾ ಎಲ್ಲೋರಾದಲ್ಲಿ ಅನೇಕ ಭಿತ್ತಿಚಿತ್ರಗಳು ಮಾಡಿರುವುದನ್ನು ಕಂಡುಬರುತ್ತದೆ. ಇಲ್ಲಿ ಬುದ್ಧನ ಜೀವಿತಾವಧಿ ಮತ್ತು ಬುದ್ಧನ ನಂತರದ ಜೀವನದ ಕುರಿತಾಗಿ ಭಿತ್ತಿ ಚಿತ್ರಗಳು ಅಜಂತಾ ಎಲ್ಲೋರಾದಲ್ಲಿ ಕಾಣಬಹುದು. ಇಲ್ಲಿನ ಚಿತ್ರಗಳಿಗೆ ಬುದ್ಧನೆ ಭಿತ್ತಿಚಿತ್ರ ವಸ್ತುವಾಗಿದ್ದನು. ಭೋದಿಸತ್ವ ಪದ್ಮಪಾಣಿ, ಬುದ್ಧನು ಮಾರನನ್ನು ಗೆದ್ದ ಸನ್ನಿವೇಶ, ಮಹಾಜನಕ ಜಾತಕ, ಸಿಬಿ ಜಾತಕ ಪುಲಕೇಶಿಯ ದರ್ಬಾರು ಹೀಗೆ ಅನೇಕ ಜಾತಕ ಕಥೆಗಳಿಂದ ಭಿತ್ತಿಚಿತ್ರಗಳನ್ನು ರಚನೆ ಮಾಡಿದ್ದಾರೆ. ಭಿತ್ತಿಚಿತ್ರಗಳ ರಚನೆಯ ಸಂದರ್ಭದಲ್ಲಿ ಚಿತ್ರದ ಮೂಲ ವಸ್ತುವಿನ ಹಿಂಭಾಗ ಮತ್ತು ಮುಂಭಾಗದಲ್ಲಿ ನಿಸರ್ಗವನ್ನು ಸಂದರ್ಭಕ್ಕನು-ಗುಣವಾಗಿ ಬಳಸಿರುವುದನ್ನು ಕಾಣಬಹುದು.



ಸಿಬಿ ಜನಕ

೧೦. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು–೬೬



ಮಹಾಜನಕ ಜಾತಕ

ಪ್ರಾಚೀನ ಕಾಲದಲ್ಲಿ ಚಿತ್ರಕಲೆಗೆ ಮಹತ್ವದ ಸ್ಥಾನವಿತ್ತು. ಕಲೆ ಮತ್ತು ಧರ್ಮಗಳು ಜೊತೆಜೊತೆಯಾಗಿ ಸಾಗುತ್ತಿದ್ದವು. ಪ್ರಥಮ ತೀರ್ಥಂಕರರಾದ ಸ್ವಾಮಿ ವೃಷಭ ದೇವರು ಜೈನ ಚಿತ್ರಕಲೆಯ ಶ್ರೇಷ್ಠ ನಾಯಕರೆಂದು ಹೇಳಲ್ಪಟ್ಟರು. ಅವರು ಚಿತ್ರಗಾರರಾಗಿರಲಿಲ್ಲ. ಆದರೆ ಚಿತ್ರಕಲೆಯಲ್ಲಿ ಅಭಿರುಚಿ ಉಳ್ಳವರಾಗಿ ಅದನ್ನು ಮೇಲಕ್ಕೇರಿಸಿದರು. ಜೈನಧರ್ಮವು ವೈರಾಗ್ಯವನ್ನು ಉಪದೇಶಿಸುವಂತಹದು. ಆತ್ಮೋದ್ಧಾರ ಮಾಡುವಂತಹುದು. ತೀರ್ಥಂಕರರ ಆಧ್ಯಾತ್ಮಿಕ ವಿಚಾರಗಳನ್ನು ಸಾಮಾನ್ಯ ಜನರಿಗೆ ಮನಗಾಣಿಸುವ ಸವಾಲುವಾಗಿ ಗೋಡೆ, ತಾಳೆಗರೆ, ಮರ, ಶಿಲೆ, ಲೋಹ, ಕಾಗದ ಮುಂತಾದವುಗಳನ್ನು ಬಳಸಿ ಕೃತಿರಚನೆ ಮಾಡಿಸಿದ್ದರು. ಅದರಿಂದ ಶ್ರೇಷ್ಠವಾದ ವಿಗ್ರಹಗಳು, ಭಿತ್ತಿಚಿತ್ರಗಳು, ಸಚಿತ್ರ ಗ್ರಂಥಗಳು ನಿರ್ಮಾಣವಾದುವು.



ಜೈನ ಹಸ್ತಪ್ರತಿಗಳು

ಭಾರತದ ಸಂಸ್ಕೃತಿಯ ಮೇಲೆ ಹಿಂದೂ (ಬ್ರಾಹ್ಮಣ), ಬೌದ್ಧ, ಜೈನ ಹೀಗೆ ಮೂರು ಧರ್ಮಗಳ ಪ್ರಭಾವಗಳು ಬಿದ್ದಿವೆ. ಭಾರತೀಯ ಕಲೆಗಳು ಈ ಧಾರ್ಮಿಕ ತತ್ವಗಳ ಅಭಿವ್ಯಕ್ತಿಗಳಾಗಿ ಬಂದಿವೆ. ಜೈನರು ತಮ್ಮ ದೇವಾಲಯಗಳ ಭಂಡಾರಗಳಲ್ಲಿ ಹಸ್ತಪ್ರತಿ ಗ್ರಂಥಗಳನ್ನು ರಕ್ಷಿಸಿ ಇಟ್ಟಿರುತ್ತಾರೆ. ಹಲವು ಸಚಿತ್ರ ಗ್ರಂಥಗಳು ಬ್ರಿಟನ್, ಜರ್ಮನಿ, ಅಮೇರಿಕ ಮೊದಲಾದ ವಿದೇಶಗಳ ಕಲಾಸಂಗ್ರಹಗಳನ್ನು ಸೇರಿವೆ.



ಹಾರಾಡುವ ಅಪ್ಸರೆಯರು

ರಜಪೂತ ಕಾಲದಲ್ಲಿ ನಿಸರ್ಗ ಚಿತ್ರಕಲೆ



ವಸಂತ ರಾಗಿಣಿ

ರಜಪೂತ ಅಥವಾ ರಾಜಸ್ಥಾನಿ ಚಿತ್ರಕಲೆಯಲ್ಲಿ ಮುಖ್ಯವಾಗಿ ಎರಡು ರೀತಿಯ ಕಲಾಶೈಲಿಗಳು ಬೆಳೆದು ಬಂದಿವೆ. ಒಂದನೆಯದು ಜೈಪೂರ ಕಲಾಶೈಲಿ, ಎರಡನೆಯದು ಪಹಾಡಿ ಅಥವಾ ಪರ್ವತ ಶೈಲಿಯೆಂದು ಕರೆಯುತ್ತಾರೆ. ಜೈಪೂರವು ರಜಪೂತ ಕಲೆಯ ಕೇಂದ್ರ ಸ್ಥಾನವಾಗಿದ್ದರಿಂದ ಇದಕ್ಕೆ ಜೈಪೂರ ಶೈಲಿಯೆಂದು ಕರೆದಿದ್ದಾರೆ. ೧೬ನೆಯ ಶತಮಾನದಲ್ಲಿ ಮೂಲರೂಪದ (ಜಾನಪದ) ಚಿತ್ರಕಲೆಯು ಪಶ್ಚಿಮ ಭಾರತ ಮತ್ತು ಚಾರು ಪಂಚಶಿರ ಎಂಬ ಶೈಲಿಗಳು ಬೇರೆ ಬೇರೆ ಕಲಾ ಕೇಂದ್ರಗಳ ಬೆಳವಣಿಗೆಗೆ ತಳಹದಿಯಾಗಿ ಕೆಲಸ ಮಾಡಿವೆ. ರಜಪೂತ ಅರಸರು ತಮ್ಮ ಆಸ್ಥಾನದಲ್ಲಿ ಮೊಘಲ್ ದರ್ಬಾರದಿಂದ ವಲಸೆ ಬಂದ ಚಿತ್ರಕಾರರು ರಾಸ್ಥಾನದ ಬೇರೆ ಬೇರೆ ಸ್ಥಳಗಳಿಗೆ ಮೊಘಲ್ ಶೈಲಿಯನ್ನು ತೆಗೆದುಕೊಂಡು ಹೋದರು. ಅಲ್ಲಿನ ಸ್ಥಳಿಯ ಶೈಲಿಯ ಮೇಲೆ ಈ ಶೈಲಿಯು ಸಾಕಷ್ಟು ಪ್ರಭಾವವನ್ನು ಬೀರಿತು. ಜೈಪೂರ, ಉದಯಪೂರ, ಮಾರವಾರ (ಮಾಳವಾ), ಬೂಂದಿ, ಕೀಶನ್‌ಗಡ್, ಕೊಠಾ, ಬಿಕಾನೇರ್, ಮೇವಾ ಇವೆಲ್ಲವುಗಳು ರಜಪೂತ ಕಲೆಯ ವಿವಿಧ ಸ್ಥಾನಗಳಾಗಿವೆ. ರಜಪೂತ ಕಲೆಯಲ್ಲಿ ಮುಖ್ಯವಾಗಿ ಕೃಷ್ಣನ ಕುರಿತಾದ ಚಿತ್ರಗಳು ಮತ್ತು ರಾಗಗಳ ಆಧಾರಿತ ರಾಗಮಾಲ ಚಿತ್ರಗಳು ರಜಪೂತ ಕಲಾವಿದರ ವಸ್ತು–ವಿಷಯಗಳಾಗಿದ್ದು ಚಿತ್ರವಸ್ತುಗಳ ಹಿನ್ನಲೆ ಮುನ್ನಲೆಗಳಲ್ಲಿ ನಿಸರ್ಗವನ್ನು ಬಳಸಿ–ಕೊಂಡಿದ್ದಾರೆ.



ರಾಧಾ–ಕೃಷ್ಣ




ರಾಜನ ಮೆರವಣಿಗೆ

ಮೊಗಲರ ಕಾಲದಲ್ಲಿ ನಿಸರ್ಗ ಚಿತ್ರಕಲೆ

ಮುಸ್ಲಿಂ ಮತದಲ್ಲಿ ಮೂರ್ತಿ ಪೂಜೆಗೆ ನಿಷೇಧವಿದೆ. ಅದರ ಪ್ರಕಾರ ಯಾವುದೇ ಪ್ರಾಣಿಯನ್ನು ಚಿತ್ರಿಸುವುದು ಅಪರಾಧವಾಗಿತ್ತು. ಕ್ರೈಸ್ತ್ ಕಲಾವಿದರು ಇಗರ್ಜಿಗಳಲ್ಲಿ ತಮ್ಮ ಮತದ ವಿಚಾರಗಳನ್ನು ತಿಳಿಯಪಡಿಸಲು ದೃಷ್ಟಾಂತ ಚಿತ್ರಗಳನ್ನು ಬರೆಯುತ್ತಿದ್ದರು. ಆದರೆ ಮುಸ್ಲಿಂ ಕಲಾವಿದರು ಹಾಗೆ ಮಾಡಬಾರದಿತ್ತು. ಏಕೆಂದರೆ ದೇವನೊಬ್ಬನೆ ಮಾತ್ರ ಆಕೃತಿಗಳನ್ನು ಸೃಷ್ಟಿಸುವ ಅಧಿಕಾರವಿದೆ ಎಂದು ಅವರ ನಂಬಿಕೆ ಆಗಿತ್ತು. ಹೀಗಾಗಿ ಮುಸ್ಲಿಂ ಕಲಾವಿದರು ಸಹಜವಾಗಿಯೇ ನಿಸರ್ಗದ ಚಿತ್ರಗಳನ್ನು ಮತ್ತು ನಿಸರ್ಗದ ಒಂದು ಭಾಗವಾಗಿರುವ ಹೂ, ಬಳ್ಳಿ, ಗಿಡ, ಮರ, ಆಸ್ಥಾನದ ಚಿತ್ರ, ರಾಜ–ರಾಣಿಯರ ಭಾವಚಿತ್ರ, ಬೇಟೆಯಾಡುವುದನ್ನು ನೈಜ್ಯವಾಗಿಯೂ ಹಾಗೂ ಅಲಂಕೃತವಾಗಿಯೂ ಚಿತ್ರಿಸಿದ್ದಾರೆ.



ಜಹಾಂಗೀರ್‌ನ ಆಸ್ಥನ



ಪ್ರಾಣಿಗಳನ್ನು ಬೇಟೆಯಾಡುತ್ತಿರುವುದು





ಬಾಬರನ ಭಾವಚಿತ್ರಗಳು

ಸ್ವಾತಂತ್ರ್ಯಪೂರ್ವದ ನಿಸರ್ಗ ಚಿತ್ರಕಲಾವಿದರು

ಗಗನೇಂದ್ರನಾಥ್ ಟ್ಯಾಗೋರ್, ಅಬನೇಂದ್ರನಾಥ್ ಟ್ಯಾಗೂರ್, ರವೀಂದ್ರನಾಥ್ ಟ್ಯಾಗೂರ್, ಅಮೃತಾ ಶೇರ್‌ಗಿಲ್, ನಂದಲಾಲ್ ಬೋಸ್, ಕ್ಷಿತೀಂದ್ರನಾಥ್ ಮುಜಮದಾರ್, ಡಿ.ಪಿ. ರಾಯ ಚೌಧರಿ, ಜೈಮಿನಿ ರಾಯ್, ಕೆ.ಸಿ.ಎಸ್. ಫಣಿಕರ್, ಬಿನೋದ್ ಬಿಹಾರಿ ಮುಖರ್ಜಿ, ಎನ್.ಎಸ್ ಬೇಂದ್ರೆ ಮುಂತಾದವರು.

ಸ್ವಾತಂತ್ರ್ಯ ನಂತರದ ನಿಸರ್ಗ ಚಿತ್ರಕಲಾವಿದರು

ಎಮ್.ಎಫ್. ಹುಸೇನ್, ವಾಸುದೇವೋ ಎಸ್. ಗಾಯತೋಡೆ, ಎಸ್.ಎಚ್. ರಝಾ, ಕೆ.ಎ. ಆರಾ, ಎಫ್.ಎನ್. ಸೌಝಾ, ಶಂಕು ಚೌಧರಿ, ಬಿಕಾಸ್ ಬಟ್ಟಾಚಾರ್ಯ, ತೈಯಬ್ ಮೆಹ್ತಾ, ಕೃಷ್ಣ ಖನ್ನಾ ಮುಂತಾದವರು.

ಕರ್ನಾಟಕದಲ್ಲಿ ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಲಾ ಇತಿಹಾಸದಲ್ಲಿ ನಿಸರ್ಗ ಚಿತ್ರಣ.

'ವಸಾಹತ್ತೋತ್ತರ ಕರ್ನಾಟಕದ ನಿಸರ್ಗ ಚಿತ್ರಣಕ್ಕೆ ತನ್ನದೇ ಆದ ಐತಿಹ್ಯವನ್ನು ಹೊಂದಿದ್ದರೂ ಸಹ, ಇನ್ನಿತರ ಪ್ರಕಾರಗಳಿಗೆ ಸಿಕ್ಕಂತ ಮನ್ನಣೆ ಇದಕ್ಕೆ ಸಿಕ್ಕಿರುವುದು ವಿರಳವೆಂದೇ ಹೇಳಬಹುದು. ವೆಂಕಟಪ್ಪನವರ ಆದಿಯಾಗಿ ಆಗಲೂ ಉತ್ತರ ಕರ್ನಾಟಕದ ಬಹುತೇಕ ಕಲಾವಿದರು ನಿಸರ್ಗ ಚಿತ್ರಣದಲ್ಲಿ ತೊಡಗಿದ್ದರು, ಕೇವಲ ಬೆರಳೆಣಿಕೆಯಷ್ಟು ಕಲಾವಿದರ ಕಲಾಕೃತಿಗಳನ್ನು ಹೊರತು ಪಡಿಸಿದರೆ ನಿಸರ್ಗ ಚಿತ್ರಣಗಳನ್ನು ಕಲೆಯ ಮುಖ್ಯವಾಹಿನಿಯಾಗಿ, ಚರ್ಚೆಗೊಳಪಡಿಸುವುದಾಗಲಿ ಅಥವ ಕಲಾ ಇತಿಹಾಸದ ಪ್ರಮುಖ ಘಟ್ಟಗಳನ್ನು ಗುರುತಿಸುವ ಕಾರ್ಯ ನಡೆದಿಲ್ಲವೆಂಬ ಅಂಶವನ್ನು ಗುರುತಿಸಬಹುದು.

ಕಲಾಶಾಲೆಗಳ ಪ್ರಭಾವ

ನಿಸರ್ಗ ಪ್ರಕಾರದ ಮೇಲೆ ವಸಾಹತೊತ್ತರ ಕರ್ನಾಟಕದ ಚಿತ್ರಕಲೆಯಲ್ಲಿನ ಪ್ರಮುಖ ಕಲಾವಿದರ

ಕಲಾಕೃತಿಗಳಲ್ಲಿ ಎರಡು ಪ್ರಮುಖ ಕಲಾಶಾಲೆಗಳ ಅಭ್ಯಾಸ ಕ್ರಮದ ಪ್ರಭಾವಿತ ಶೈಲಿಗಳನ್ನು ಗುರುತಿಸುವುದಾದರೆ ಅದು ಜೆ.ಜೆ. ಕಲಾಶಾಲೆಯ ಅಭ್ಯಾಸದಿಂದ ಪ್ರಭಾವಿತ ಶೈಲಿ ಮತ್ತು ಕೊಲ್ಕತ್ತಾ, ಶಾಂತಿನಿಕೇತನದ ಬಂಗಾಲಿ ಪುನರುಜ್ಜೀವನ ಶೈಲಿ ಮತ್ತೊಂದು, ಇದಕ್ಕೂ ಮೊದಲು ಕರ್ನಾಟಕ ಕಲಾಭ್ಯಾಸಗಳನ್ನು ಸಾಂಪ್ರದಾಯಿಕ ಶೈಲಿಗಳೇ ಪ್ರಭಾವಿಸಿದ್ದು, ಬ್ರಿಟೀಷರ ಶೈಲಿಯ ಭಾರತೀಯ ಕಲಾಭ್ಯಾಸವನ್ನು ಮೈಸೂರು ರಾಜರ ಆಸ್ಥಾನ ಕಲಾವಿದರಲ್ಲಿ ಕಾಣಬಹುದು.

ಈ ಆಸ್ಥಾನ ಕೇಂದ್ರಿತ ಅಥವ ಮಹಾರಾಜರ ಪ್ರೋತ್ಸಾಹದಿಂದ ರಚಿತವಾಗುತ್ತಿದ್ದ ಕಲಾಕೃತಿಗಳು ಮಹಾರಾಜರಿಗಾಗಿ ಮಾತ್ರ ರಚಿಸುತ್ತಿದ್ದರಿಂದ ಅವು ಅರಮನೆಯ, ರಾಜನ ಒಡ್ಡೋಲಗ, ವೈಭೋಗವನ್ನು ಪ್ರತಿನಿಧಿಸುವ, ರಾಜನ ಸಂಭ್ರಮಾಚಾರಣೆಯನ್ನು ದಾಖಲಿಸುವ (ಕಾಲದ) ಕಲಾಕೃತಿಗಳಾಗಿ ಉಳಿದವೇ ಹೊರತು, ಅರಮನೆಯ ಸರಹದ್ದುಗಳನ್ನು ಮೀರಿ ಕಾಲ ಘಟ್ಟಗಳನ್ನು, ಪರಿಸರಗಳನ್ನು, ಜನಜೀವನದೊಂದಿಗೆ ಮೇಳೈಸುವ ನಿಸರ್ಗ ಚಿತ್ರಣಗಳು ಕಾಣಸಿಗುವುದೇ ಇಲ್ಲ. ಇಲ್ಲವೇ ದೊರಕಿದರೂ ಅವು ಕರ್ನಾಟಕದವರಲ್ಲದ ಕಲಾವಿದರು ಮತ್ತು ಬ್ರಿಟೀಷರಿಂದ ರಚಿತಗೊಂಡಿರುವ ಕಲಾಕೃತಿಗಳನ್ನಷ್ಟೇ ಕಾಣಬಹುದು.'[೧೧]

ಪ್ರಭುತ್ವ ಮತ್ತು ನಿಸರ್ಗ

ವಸಾಹತು ಕಾಲದಿಂದಲೇ ಪ್ರಾರಂಭಿಸಿ ಮಹಾರಾಜರ ಪ್ರೋತ್ಸಾಹದಿಂದ ಶಾಂತಿನಿಕೇತನದಲ್ಲಿ ಕಲಾವ್ಯಾಸಂಗ ಮಾಡಿ ಬಂದ ಕಲಾ ಕುಟುಂಬದ ಹಿನ್ನಲೆಯ ಕೆ. ವೆಂಕಟಪ್ಪನವರು ಈ ಮೇಲಿನ ದಾಖಲೆಗಳಿಗೆ ಅಪವಾದವೆಂಬಂತೆ ನಿಸರ್ಗ ದೃಶ್ಯಗಳ ರಚನೆಯಲ್ಲಿ ತೊಡಗಿದ್ದರು. ಇವರು ಪಡೆದುಕೊಂಡ ಶಿಕ್ಷಣದ ಪ್ರಭಾವದ ಹಿನ್ನಲೆಯಲ್ಲೇ ಈ ಚಿತ್ರಗಳನ್ನು ನೋಡುವುದಾದರೆ ಇವು ವಸಾಹತು ಶೈಲಿಗಳಿಂದ ಭಿನ್ನವಾಗಿ ನಿಲ್ಲವುದು ಇವರ ಚಿತ್ರಗಳಲ್ಲಿ ಎಲ್ಲಿಯೂ ನಮಗೆ ಪ್ರಾಚೀನ ಕಟ್ಟಡಗಳ, ಸ್ಮಾರಕಗಳ ಚಿತ್ರಗಳು ಸಿಗುವುದಿಲ್ಲ. ಅಲ್ಲಿ ಸಿಗುವುದೆಲ್ಲ ಅಪ್ಪಟ ನಿಸರ್ಗ ಚಿತ್ರಗಳು ಅಥವ ವಸಾಹತು ಶೈಲಿಯ ದಾಖಲೆಗಳಾಗಿ ಉಳಿಯಬೇಕೆಂಬ ಕಲಾರಚನೆಯನ್ನು ಧಿಕ್ಕರಿಸಲೆಂದೇ ರಚನೆಯಾದ ವಿರೋಧಿ ನೆಲೆಯಲ್ಲಿ ರಚಿತ ಕಲಾಕೃತಿಗಳು. ಇದಕ್ಕೆ ಸ್ಪಷ್ಟ ಉದಾಹರಣೆ ಕೊಡಬಹುದಾದರೆ ಅದು ವೆಂಕಟಪ್ಪನವರ ಅಗ್ರಹಾರದ ಒಂದು ಮರದ ಚಿತ್ರವನ್ನು ಉದಾಹರಿಸಬಹುದು. ಇಡೀ ಕಲಾಕೃತಿಯ ಚೌಕಟ್ಟಿನಲ್ಲಿ ಹೆಂಚಿನ ಮಾಡಿನ ಮುನ್ನಲೆಯಲ್ಲಿ ಮರವನ್ನು ಕೇಂದ್ರಿಕರಿಸಿ ಚಿತ್ರವನ್ನು ರಚಿಸಲಾಗಿದೆ. ವಸಾಹತುಗಳ ಪ್ರಭಾವವೇ ಎಲ್ಲ ಕಲಾಕೃತಿಗಳ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಕಾಲಘಟ್ಟದಲ್ಲಿ ರಚಿತವಾದ ಈ ಕಲಾಕೃತಿಯಲ್ಲಿ ಅಲ್ಲಿಯವರೆಗಿನ ಕಲಾಹಾದಿಯನ್ನೇ ಕವಲು ದಾರಿಯಲ್ಲಿ ನಡೆಸಲು ಪ್ರಯತ್ನಿಸುವುದರ ಹಿಂದೆ ಶಾಂತಿನಿಕೇತನದ ಬಂಗಾಲಿ ಪುನರುಜ್ಜೀವನದ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಬಹುದು.[೧೨]

'ಸ್ವಾತಂತ್ರ್ಯ ಪೂರ್ವದ ಮೂರು ದಶಕಗಳು ಮತ್ತು ಸ್ವಾತಂತ್ರ್ಯೋತ್ತರದ ಮೂರು ದಶಕಗಳು ಕರ್ನಾಟಕದಲ್ಲಿ, ಅದಕ್ಕೂ ಮುಂಚಿನ ಸಾಂಪ್ರದಾಯಿಕ ಶೈಲಿಯಿಂದ ಹೊರಬಂದು ಪಾಶ್ಚಿಮಾತ್ಯದ ಪ್ರಭಾವದಿಂದ

೧೧. ಡಾ. ಅ. ಲ. ನರಸಿಂಹನ್ (ಸಂ.) : ಕರ್ನಾಟಕದ ಕಲಾವಾರ್ತೆ (ಮಾಂಸೋರೆ ಅವರ ಲೇಖನ), ಪು–೩೩

೧೨. ಅದೇ., ಪು–೩೪

ಪ್ರೇರಿತವಾಗಿ ಕರ್ನಾಟಕ ಕಲಾ ಇತಿಹಾಸದ ಆಧುನಿಕ ಕಲಾ ಪರ್ವದ ಬುನಾದಿ ಕರ್ನಾಟಕ ಕಲಾಚರಿತ್ರೆಗೆ ಕಟ್ಟಿಕೊಟ್ಟ ಕಾಲವೆಂದು ಗುರುತಿಸಬಹುದು. ಕಾರಣ ಅಲ್ಲಿಯವರೆಗು ಇದ್ದ ವಂಶಪಾರಂಪರ್ಯದ ಕಲಾಭ್ಯಾಸದಿಂದ ಹೊರಗೆ ಬಂದು, ವಸಾಹತುಶಾಹಿ ಕಲಾ ಶಿಕ್ಷಣವನ್ನು ಕಲಿಸಲು ಆರಂಭಿಸಿದ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸಿಟ್ಯೂಟ್ ಮತ್ತು ಹೆಚ್ಚಿನ ವ್ಯಾಸಂಗಕ್ಕೆ ಜೆ.ಜೆ. ಕಲಾಶಾಲೆಗೆ, ಮದ್ರಾಸು ಆರ್ಟ್ ಕಾಲೇಜ್ ಹೋಗುವ ಪರಿಪಾಠ ಆರಂಭವಾದ ಕಾಲವದು. ಕೆಲವರು ಲಂಡನ್‌ನ ರಾಯಲ್ ಆರ್ಟ್ ಕಾಲೇಜಿಗೂ ಹೋಗಿ ಕಲಿತು ಬಂದರು.

ಈ ಹಿಂದೆ ಹೇಳಿದಂತೆ ಕರ್ನಾಟಕದ ಕಲಾಚರಿತ್ರೆಯ ವಸಾಹತುಶಾಹಿ ಶೈಲಿಯ ಆಧುನಿಕ ಪರ್ವದ ಆರಂಭದ ಕಾಲದಲ್ಲಿ ಮೈಸೂರು ರಾಜಾಶ್ರಯದ ಕಲಾವಿದರಷ್ಟೇ ಅಲ್ಲದೆ ಮೈಸೂರು ಪ್ರಾಂತ್ಯದಲ್ಲೇ ಆದರೆ ಮೈಸೂರಿಗೆ ದೂರದ ಪ್ರದೇಶಗಳಾದ ಧಾರವಾಡ, ಕಲ್ಬುರ್ಗಿ, ಬೆಳಗಾವಿಯಲ್ಲೂ ಕೂಡ ಈ ವಸಾಹತು ಶಾಹಿಯ ಪ್ರಭಾವದಿಂದಾಗಿ ಚಿತ್ರಕಲೆಯಲ್ಲಿ ಕಲಾಶಿಕ್ಷಣವನ್ನು ಪಡೆದು ಕಲಾಕೃತಿಗಳನ್ನು ರಚಿಸುವ ಕಲಾವಿದರ ಸಂಖ್ಯೆಯು ಜಾಸ್ತಿಯಾಯಿತು. ಅಲ್ಲಿನ ಬಹುತೇಕರು ಕಲಾ ಶಿಕ್ಷಣಕ್ಕೆ ಮುಂಬಯಿಯ ಜೆ.ಜೆಯನ್ನೇ ಆಯ್ದುಕೊಂಡದ್ದು ಹೆಚ್ಚು. ಅದರಲ್ಲಿ ಕೆಲವರು ಜೆ.ಜೆಯಲ್ಲಿ ಪ್ರವೇಶ ಸಿಗದೆ ಜಿ.ಎಸ್. ದಂಡಾವತಿಮಠರ ನೂತನ ಕಲಾಮಂದಿರದಲ್ಲಿ ಶಿಕ್ಷಣ ಪಡೆದವರು ಇದ್ದಾರೆ, ಆ ನಂತರದ ದಿನಗಳಲ್ಲಿ ಪ್ರಾರಂಭವಾದ ಡಿ.ವಿ. ಹಾಲಭಾವಿ ಕಲಾಶಾಲೆ, ಗದಗಿನ ವಿಜಯ ಕಲಾಮಂದಿರದಲ್ಲೂ ಕಲಾಶಿಕ್ಷಣ ಪ್ರಾರಂಭವಾಯಿತು. ೬೦-೭೦ರ ದಶಕದಲ್ಲಿ ಕೆನ್ ಮತ್ತು ಕರ್ನಾಟಕ ಚಿತ್ರಕಲಾ ಪರಿಷತ್ತು ಆರಂಭವಾಯಿತು.

ನಿಸರ್ಗ ಚಿತ್ರಗಳಲ್ಲಿ ಪಾಶ್ಚಿಮಾತ್ಯದ ಪ್ರಭಾವ

ಈ ಎಲ್ಲ ಬೆಳವಣಿಗೆಗಳ ಹಿಂದೆ ಸ್ವಾತಂತ್ರ್ಯ ಪೂರ್ವದಲ್ಲೇ ಬ್ರಿಟೀಷರ ಜೆ.ಜೆ. ಪ್ರಭಾವ ಕಲಾವಿದರ, ಕಲಾಕೃತಿಗಳ ರಚನೆಯಲ್ಲಿ ಆಳವಾಗಿ ಬೇರೂರಿದ್ದರಿಂದ ಅಲ್ಲಿಯವರೆಗೂ ಅಂದರೆ ವಸಾಹತುಶಾಹಿಗೂ ಮೊದಲಿನ ಸಾಂಪ್ರದಾಯಿಕ ಚಿತ್ರಗಳಲ್ಲಿ ಹಿನ್ನಲೆಯಾಗಿದ್ದ ನಿಸರ್ಗ ಚಿತ್ರಗಳ ಸಂಪ್ರದಾಯ, ಸಂಪ್ರದಾಯಿಕತೆಯಿಂದ ಹೊರಬಂದು ತಮ್ಮದೇ ಪ್ರತ್ಯೇಕ ಅಸ್ತಿತ್ವವನ್ನು ಪಡೆದುಕೊಳ್ಳತೊಡಗಿದವು. ಸಾಂಪ್ರದಾಯಿಕ ಚಿತ್ರಗಳಲ್ಲಿನ ಪೌರಾಣಿಕ, ಧಾರ್ಮಿಕ ಚಿತ್ರಗಳಲ್ಲಿ ಮುನ್ನಲೆಯ ವಿಷಯಕ್ಕೆ ಪೂರಕವಾಗಿ ಹಿನ್ನಲೆಯಲ್ಲಿ ರಚಿತವಾಗುತ್ತಿದ್ದ ಮಹಲುಗಳು, ಪರಿಸರಗಳು ಮುನ್ನಲೆಗೆ ಬಂದು ನಿಂತು ಕಲಾಕೃತಿಯ ಮೂಲವಸ್ತು ವಿಷಯವಾಗತೊಡಗಿತು. ಅಲ್ಲಿಯವರೆಗು ಸ್ಮೃತಿಯು ಉದ್ದೀಪಿಸುವಂತ ಕಾಲ್ಪನಿಕ ಭವನ ಪರಿಸರಗಳನ್ನು ತ್ಯಜಿಸಿ ನಿಸರ್ಗದಲ್ಲೇ ಕೂತು ಸ್ಥಳದಲ್ಲೇ ಚಿತ್ರ ರಚಿಸುವ ಅಭ್ಯಾಸ ಪ್ರಾರಂಭವಾಯಿತು."[೧೩]

ಈ ಮೂಲಕ ವಸಾಹತು ಶೈಲಿಯ ಸ್ಮಾರಕಗಳನ್ನು, ಕಟ್ಟಡಗಳನ್ನು, ದೇವಸ್ಥಾನಗಳನ್ನು, ಪರಿಸರಗಳನ್ನು ರಚಿಸುವದು ಪ್ರಾರಂಭವಾಯಿತು. ಕೆಲವರು ತಮ್ಮ ಆಯ್ಕೆಯ ವಿಷಯಗಳನ್ನಾಧರಿಸಿ ತಮ್ಮ ಸುತ್ತಮುತ್ತಲಿನ ಪರಿಸರವನ್ನೇ ತಮ್ಮ ಆಯ್ಕೆಯ ವಿಷಯಗಳನ್ನಾಗಿಸುತ್ತಿದ್ದರು. ಈ ಆಯ್ಕೆಯ ಪ್ರಕ್ರಿಯೆಯಲ್ಲೇ ಕಲಾವಿದರಿಗೆ ಸೌಂದರ್ಯ, ರೂಪಕ, ಪ್ರತಿಮೆ, ರಸಗ್ರಹಣಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಎದುರಿಸಿ ಅದಕ್ಕೆ ಉತ್ತರವನ್ನು

೧೩. ಡಾ. ಅ. ಲ. ನರಸಿಂಹನ್ (ಸಂ.) : ಕರ್ನಾಟಕದ ಕಲಾವಾರ್ತೆ (ಮಾಂಷೋರೆ ಅವರ ಲೇಖನ). ಪು-೩೫

ಕಂಡುಕೊಳ್ಳುವ ಪ್ರಯತ್ನವನ್ನು ಆಗಿನ ಕಲಾವಿದರ ಕಲಾಕೃತಿಗಳಲ್ಲಿ ನೋಡಬಹುದು. ಇದಕ್ಕಾಗಿ ಬಹುತೇಕ ಕಲಾವಿದರು ಪಾಶ್ಚಿಮಾತ್ಯದ ಇಸಂಗಳಿಗೆ ಶರಣಾಗಿರುವುದು ಕಾಣಬಹುದು.

ಒಂದೆಡೆ ಬಂಗಾಲಿ ಪ್ರಭಾವ ಇನ್ನೊಂದೆಡೆ ಜೆ.ಜೆ. ಕಲಾಶಾಲೆಯ ಭಾರತೀಯ ವಸಹತುಶಾಹಿಯ ಪ್ರಭಾವ, ಪಾಶ್ಚಿಮಾತ್ಯರ ಇಸಂಗಳ ಮಧ್ಯೆ ಒಂದಷ್ಟು ಕಾಲದಲ್ಲಿ ರಚಿತವಾದ ನಿಸರ್ಗ ಚಿತ್ರಗಳಲ್ಲಿ ಪ್ರಭಾವಗಳಿಂದ ಹೊರಗುಳಿದ/ಹೊರಗುಳಿಯಲು ಪ್ರಯತ್ನಿಸಿರುವ ನಿರ್ಲಿಪ್ತತೆಯನ್ನು ಬಹು ಸಂಖ್ಯೆಯಲ್ಲಿ ಕಾಣಬಹುದು. ಆ ನಿರ್ಲಿಪ್ತತೆಯ ಕರ್ನಾಟಕದ ನಿಸರ್ಗ ಚಿತ್ರಗಳಿಗೆ ಬೇರೆ ಪ್ರದೇಶಗಳಿಗಿಂತ ಭಿನ್ನವಾದ ಪ್ರದೇಶಗಳಿಗಿಂತ ಒಳಗೊಳ್ಳಬಹುದಾದ ಸಾಧ್ಯತೆಗಳನ್ನು ಹುಟ್ಟುಹಾಕಿತು.[೧೪]

ಕರ್ನಾಟಕದ ನಿಸರ್ಗ ಚಿತ್ರಕಲಾವಿದರು

ಕೆ. ವೆಂಕಟಪ್ಪ, ರುಮಾಲೆ ಚನ್ನಬಸವಯ್ಯ, ಎಸ್. ಶಂಕರ್‌ರಾವ್ ಅಳಂದಕರ್, ಎಸ್.ಎಂ. ಪಂಡಿತ್, ಎಂ. ವೀರಪ್ಪ, ಬಿ.ಕೆ. ಹುಬ್ಲಿ, ಬಸವರಾಜ ಹಳಿಜೋಳ, ವಿ.ಎಸ್. ಭಂಕೂರ್, ಎ.ಎ. ಆಲ್‌ಮೆಲ್ಕರ್, ಡಿ.ಜಿ. ಬಡಿಗೇರ್, ಜಿ.ಎಸ್. ದಂಡಾವತಿಮಠ್, ಟಿ.ಪಿ. ಅಕ್ಕಿ, ಕೆ.ಕೆ. ಹೆಬ್ಬಾರ್ ಪಿ.ಆರ್. ತಿಪ್ಪೇಸ್ವಾಮಿ, ಸೋಮಶೇಖರ್ ಸಾಲಿ ಮುಂತಾದವರು.

ಮೇಲಿನ ಈ ಎಲ್ಲಾ ಕಲಾವಿದರು ತಮ್ಮ ಕಲಾಶೈಲಿಯ ಜೊತೆ-ಜೊತೆಗೆ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ, ರಚಿಸುತ್ತಿದ್ದಾರೆ. ಉತ್ತರ ಕರ್ನಾಟಕ ನಿಸರ್ಗ ಕಲಾವಿದರ ಜೀವನ ಮತ್ತು ಅವರ ನಿಸರ್ಗ ಕಲಾಕೃತಿಗಳ ಬಗ್ಗೆ ಮುಂದಿನ ಅಧ್ಯಾಯಗಳಲ್ಲಿ ಸ್ಥೂಲವಾಗಿ ಅಧ್ಯಯನ ಮಾಡಲಾಗಿದೆ.

❑❑❑

---

೧೪. ಡಾ. ಅ. ಲ. ನರಸಿಂಹನ್ (ಸಂ.) : ಕರ್ನಾಟಕದ ಕಲಾವಾರ್ತೆ (ಮಾಂಸೋರೆ ಅವರ ಲೇಖನ), ಪು-೩೭

ಅಧ್ಯಾಯ : ಮೂರು

ನಿಸರ್ಗ ಚಿತ್ರಕಲೆಯ ರಚನಾ ವಿಧಿವಿಧಾನಗಳು ಮತ್ತು ಪರಿಕರಗಳು

ಆಕೃತಿಗಳ ಕಲ್ಪನೆಯನ್ನು ಕೊಡುವ ರೇಖೆಗಳು ಬಂದಾವು; ಅವುಗಳಲ್ಲಿ ಕಣ್ಣಿಗೆ ಕಾಣಿಸುವ ವಿವಿಧ ಬಣ್ಣಗಳು ಬಂದಾವು. ವಸ್ತುಗಳ ಮೇಲೆ ಬೆಳಕು ಬಿದ್ದು ಆ ಬೆಳಕು ನಮ್ಮ ಕಣ್ಣಿ ಹರಿದು ಬಂದಾಗ ಮಾತ್ರ ಒಡವೆ ವಸ್ತುಗಳು ನಮಗೆ ಕಾಣಿಸುತ್ತವೆ. ಆ ವಸ್ತುಗಳು ತಮ್ಮ ಮೇಲೆ ಬಿದ್ದ ಬೆಳಕಿನ ಮಾನಕ್ಕೆ ಸಮನಾಗಿ ಸ್ಪಷ್ಟವಾಗಿಯೋ, ಅಸ್ಪಷ್ಟವಾಗಿಯೋ, ಪ್ರಕಾಶಿಸುತ್ತಲೋ, ಪ್ರಕಾಶ ಹೀನವಾಗಿಯೋ ಕಾಣಿಸುವ (ಕಾಂತಿಮಾನ) ವೈವಿದ್ಯವನ್ನು ತೋರಿಸಿಯಾವು. ಚಿತ್ರದಲ್ಲಿ ಬಣ್ಣ ಮತ್ತು ರೇಖೆಗಳು ವಸ್ತುಗಳ ಗಾತ್ರದ ಕಲ್ಪನೆ ಕೊಟ್ಟಾವು. ಚಿತ್ರದಲ್ಲಿ ಬರೆದ ಅಂಗ ಭಾಗಗಳನ್ನು ವ್ಯವಸ್ಥಿತಗೊಳಿಸಿದ ರೀತಿಯಿಂದ ಅಂಥ ಅಂಗಭಾಗಗಳು ಹಿಂದಕ್ಕಿವಿಯೇ, ಮುಂದಕ್ಕಿವಿಯೇ, ಎಡಕ್ಕಿವಿಯೇ, ಬಲಕ್ಕಿವಿಯೇ ಎಂಬ ಕಲ್ಪನೆಯನ್ನು ನಮ್ಮಲ್ಲಿ ಮೂಡಬಹುದು. ನಮ್ಮಿಂದ ಅವು ಕಾಣಿಸುವ ಸಮೀಪ ದೂರಗಳ ಅಂತರಗಳನ್ನು ತಿಳಿಸಿ ಹೇಳಬಹುದು. ಅಷ್ಟೇ ಅಲ್ಲ, ಒಬ್ಬ ಚಿತ್ರಕಾರ, ತನಗೆ ಆ ಚಿತ್ರವನ್ನು ಬರೆಯುವುದಕ್ಕೆ ಎಲ್ಲಿಂದ ಪ್ರೇರಣೆ ಬಂದಿತು, ಆ ಪ್ರೇರಣೆಗೆ ತನ್ನ ಅಂತರಂಗ ಹೇಗೆ ಮಿಡಿಯಿತು, ಯಾವ ಭಾವನೆ, ಇಲ್ಲವೆ ಭಾವನೆಗಳು ತನ್ನಲ್ಲಿ ಮುಡಿದವು ಎಂಬುದನ್ನು ಸಹ ನೋಡುವಾತನಲ್ಲಿ ತನ್ನ ಕೃತಿಯಿಂದ ಮೂಡಿಸುವುದು ಸಾಧ್ಯ.

ನಾವು ಕಾಣುವ ಬಣ್ಣಗಳಿಂದಲೇ ವಿವಿಧ ವಸ್ತುಗಳ ಆಕೃತಿ, ಸೊಗಸು ಮೊದಲಾದವುಗಳ ಪರಿಚಯ ಮಾಡಿಕೊಳ್ಳುತ್ತೇವೆ. ಬಣ್ಣಗಳ ಅಭಾವವಿದ್ದಾಗ, ಎಂದರೆ ಯಾವೊಂದು ಬಣ್ಣವೂ ಕಣ್ಣಿಗೆ ಕಾಣಿಸದಿದ್ದಾಗ ಕತ್ತಲಲ್ಲವೇ? ಅಂಥ ಕತ್ತಲಲ್ಲಿ ನಾವು ಒಬ್ಬಂಟಿಯಾಗುತ್ತೇವೆ, ನಮ್ಮಲ್ಲಿ ಏಕಾಕಿತನದ ಭಯ ಹುಟ್ಟುತ್ತದೆ. ಅದರ ಬದಲು ನಾವಿರುವ ಆವರಣದಲ್ಲಿ ಬೆಳಕು ಬಿದ್ದಾಗ ಬಣ್ಣಗಳು ಕಾಣಿಸತೊಡಗಿ, ನಮ್ಮ ಸುತ್ತಲೂ ಮಿತ್ರರೋ, ವಸ್ತುಗಳೋ ಇದ್ದಾರೆಂಬ ಭಾವ ಹುಟ್ಟಿ ನಮ್ಮಲ್ಲಿ ಬದುಕಿನ ಬಗ್ಗೆ ಉತ್ಸಾಹ ಹೆಚ್ಚುತ್ತದೆ. ಕೆಲವು ಬಣ್ಣಗಳು ನಮಗೆ ಪ್ರೀಯವಾಗಿ ಕಾಣಿಸುತ್ತವೆ. ಅವುಗಳ ವೈಖರಿ ನಮಗೆ ಬೆರಗು ಬರಿಸುತ್ತದೆ. ಅಂತು,

ಬಣ್ಣಗಳು ಒಂಟಿಯಾಗಿಯೋ, ಒಂದೇ ಬಣ್ಣದ ವಿವಿಧ ವರ್ಣ ಛಾಯೆಗಳಾಗಿಯೇ, ಇಲ್ಲವೆ ವಿವಿಧ ವರ್ಣಛಾಯೆಗಳ ಮೇಳವಾಗಿಯೋ ಕಣ್ಣಿಗೆ ಕಾಣಿಸುವಾಗ ನಮ್ಮ ಮನಸ್ಸಿನಲ್ಲಿ ಆನಂದಾದಿ ಭಾವಗಳನ್ನು ಮೂಡಿಸಬಹುದು.[೧]

ಬಣ್ಣಗಳನ್ನು ಚಿತ್ರದಲ್ಲಿ ಲೇಪಿಸುವ ರೀತಿಯಿಂದ ಪ್ರೇಕ್ಷಕನಲ್ಲಿ ಭಾವನೆಗಳನ್ನು ಬಿಂಬಿಸುವುದು ಸಾಧ್ಯ. ಅವುಗಳಿಂದ ವಿವಿಧ ವಸ್ತು ರೂಪಗಳನ್ನಂತು ತೋರಿಸುವುದು ತೀರ ಸಾಮಾನ್ಯ ಕೆಲಸ. ಆ ವಸ್ತುಗಳ ಮೈ ಅಥವಾ ಮೈವಳಿಕೆ ಯಾವ ತೆರನದು ಎಂಬುದನ್ನೂ ಸೂಚಿಸುವುದು ಸಾಧ್ಯ. ಒಂದು ಕುಂಚವನ್ನು ಬಣ್ಣದಲ್ಲಿ ಅದ್ದಿ ಒಂದು ಕಾಗದದ ಹಾಳೆಯ ಮೇಲೋ, ರಟ್ಟರಿವೆಯ ಮೇಲೋ ಲೇಪಿಸಿ ಅನೇಕ ವಸ್ತುಗಳ ಕಲ್ಪನೆಯನ್ನು ಚಿತ್ರಕಾರ ನಮ್ಮಲ್ಲಿ ತೋರಿಸಲಾರದೋ, ಹಾಗೆ ನಾಯಿಯ ಚಿತ್ರ ನಾಯಿಯಾಗದು. ಅದು ಕೇವಲ ನಾಯಿಯ ಕಲ್ಪನೆಯನ್ನು ನಮ್ಮ ಮನಸ್ಸಿನಲ್ಲಿ ಮೂಡಿಸಿತು. ಭಾಷೆ ಮಾಡುವ ಕೆಲಸ ಇಂಥದ್ದೇ. ಅದು ಶಬ್ದಗಳ ಸಂಕೇತಗಳ ಮೂಲಕ ಜ್ಞಾನ, ವಿಚಾರ, ಭಾವನೆ ಮೊದಲಾದವುಗಳನ್ನು ನಮ್ಮಲ್ಲಿ ಪ್ರೇರಿಸುತ್ತದೆ. ಹೀಗೆ ಪ್ರೇರಿಸುವುದಕ್ಕೆ ಚಿತ್ರಕಾರ ಬರಿಯ ರೇಖೆಗಳನ್ನು ಬಳಸಬಹುದು. ತನ್ನ ಬಣ್ಣಗಾರಿಕೆಯಲ್ಲಿ ಆತ ತೈಲವರ್ಣಗಳಂಥ ಮಾಧ್ಯಮಗಳನ್ನು ಬಳಸಬಹುದು ಅಥವಾ ನೀರಲ್ಲಿ ಬೆರೆಯುವ ಬಣ್ಣಗಳನ್ನು ಎಂದರೆ ಜಲವರ್ಣಗಳನ್ನು ಉಪಯೋಗಿಸಬಹುದು. ಈ ಬಣ್ಣಗಳ ಸ್ವಭಾವದಿಂದಾಗಿ ಚಿತ್ರವಸ್ತುಗಳ ಮೈವಳಿಕೆ, ರೂಪ ಮೊದಲಾದವು ನಮಗೆ ವಿವಿಧ ತೇರನಾಗಿ ಕಾಣಿಸಬಹುದು.

ನಿಸರ್ಗ ಚಿತ್ರ ರಚನೆಗೆ ಮೊದಲು ನಿಸರ್ಗದ ಯಾವ ಭಾಗವನ್ನು ಚಿತ್ರ ರಚನೆಗೆ ತೆಗೆದುಕೊಳ್ಳಬೇಕು; ಯಾವ ಭಾಗವನ್ನು ತೆಗೆದುಕೊಂಡರೆ ಉತ್ತಮವಾಗಿರುತ್ತದೆ ಎಂಬುದನ್ನು ಖಚಿತ ಪಡಿಸಿಕೊಳ್ಳಬೇಕು. ನಂತರ ಚಿತ್ರ ರಚಿಸುವಾಗ ಬೆಳಕು ಬೇಕೆ ಬೇಕು ಹಾಗಾಗಿ ನಿಸರ್ಗ ಚಿತ್ರವನ್ನು ಬೆಳಕಿನಲ್ಲಿಯೇ ಚಿತ್ರಿಸುತ್ತಾರೆ. ಇದಾದನಂತರ ಪ್ರಕೃತಿಯು ತುಂಬ ದೊಡ್ಡದಾಗಿರುವುದರಿಂದ ಇಡೀ ನಿಸರ್ಗವನ್ನು ಒಂದು ಹಾಳೆಯ ಮೇಲೆ ಅಥವಾ ಒಂದು ಕ್ಯಾನ್‌ವಾಸಿನ ಮೇಲೆ ಹಿಡಿದಿಡುವುದು ತುಂಬ ಕಷ್ಟ. ಆದ್ದರಿಂದ ಪ್ರಕೃತಿಯ ಒಂದು ಭಾಗವನ್ನು ಮಾತ್ರ ಆಯ್ಕೆ ಮಾಡಿ ಚಿತ್ರವನ್ನು ರಚಿಸಬೇಕಾಗುತ್ತದೆ. ಇದಾದ ನಂತರ ನಿಸರ್ಗ ಚಿತ್ರಕ್ಕಾಗಿ ಬೇರೆ ಭಾಗವನ್ನು ಗುರುತಿಸಿಕೊಳ್ಳಬೇಕು. ನಮ್ಮ ಹಾಳೆಗೆ ತಕ್ಕಂತೆ ಅಂದರೆ ಚಿತ್ರಕ್ಕೆ ತೆಗೆದುಕೊಂಡ ಹಾಳೆ ಅಥವಾ ಕ್ಯಾನ್‌ವಾಸ್ ದೊಡ್ಡದಾಗಿದಿಯೋ ಅಥವಾ ಚಿಕ್ಕದಾಗಿದಿಯೋ, ದೊಡ್ಡ ಹಾಳೆ ಅಥವಾ ಕ್ಯಾನ್‌ವಾಸ್ ಇದ್ದರೆ ಇದರಲ್ಲಿ ನಿಸರ್ಗವನ್ನು ಎಷ್ಟರ ಮಟ್ಟಿಗೆ ಹಿಡಿದಿಡಬಹುದು ಅಥವಾ ಚಿಕ್ಕದಿದ್ದರೆ ಇದರಲ್ಲಿ ನಿಸರ್ಗ ಚಿತ್ರವನ್ನು ಎಷ್ಟು ಹಿಡಿದಿಡಬಹುದೆಂದು ನಮಗೆ ಅಂದಾಜು ಸಿಗುತ್ತದೆ. ನಂತರ ಚಿತ್ರಕ್ಕೆ ಆಯ್ಕೆ ಮಾಡಿಕೊಂಡ ಭಾಗವನ್ನು ಮೊದಲು ಸಿಸದ ಕಡ್ಡಿಯಿಂದ ಹಾಳೆಯ ಮೇಲೋ ಅಥವಾ ಕ್ಯಾನ್‌ವಾಸಿನ ಮೇಲೋ ಚಿತ್ರಿಸಬೇಕು; ಮತ್ತು ಚಿತ್ರ ರಚಿಸಬೇಕಾದರೆ ಹೆಚ್ಚಾಗಿ ರಬ್ಬರನ್ನು ಬಳಸಬಾರದು, ಒಂದು ವೇಳೆ ರಬ್ಬರನ್ನು ಹೆಚ್ಚಾಗಿ ಬಳಸುವುದರಿಂದ ಹಾಳೆಯು ಕಡುತ್ತದೆ. ಅಂದರೆ ರಬ್ಬರನ್ನು ಹೆಚ್ಚಾಗಿ ಬಳಸಿದ ಭಾಗದ ಹಾಳೆ ಎಳೆ ಎಳೆಯಾಗಿ ಹರಿಯುತ್ತದೆ; ಇದರಿಂದ ಬಣ್ಣವನ್ನು ಲೇಪನಮಾಡುವಾಗ ತೊಂದರೆಯುಂಟಾಗುತ್ತದೆ.

೦೧. ಡಾ. ಶಿವರಾಮ ಕಾರಂತ : ಕಲಾಪ್ರಪಂಚ, ಪು-೩೬

ಅಂದರೆ ಹಾಳೆಯ ಎಲ್ಲಾ ಭಾಗದಲ್ಲೂ ಸರಿಯಾಗಿ ಬಣ್ಣ ಹತ್ತಿಕೊಳ್ಳುತ್ತದೆ. ರಬ್ಬರನ್ನು ಬಳಸಿದ ಭಾಗಕ್ಕೆ ಬಣ್ಣ ಸರಿಯಾಗಿ ಲೇಪನವಾಗುವುದಿಲ್ಲ. ಹಾಳೆಯು ಎರಡು ಬದಿಯದ್ದಾಗಿದ್ದು ಒಂದು ಕಡೆ ಒರಟು ಇನ್ನೊಂದು ಕಡೆ ಮೃದುವಾಗಿರುತ್ತದೆ. ಮೃದುವಾದ ಬದಿಯ ಮೇಲೆ ಚಿತ್ರವನ್ನು ರಚಿಸಿದರೆ ಮತ್ತು ರಚಿಸಿದ ಚಿತ್ರವನ್ನು ರಬ್ಬರಿನಿಂದ ಹೊಡೆದುಹಾಕಿದರೆ ಆ ಭಾಗ ಪೂರ್ತಿಯಾಗಿ ಅಳಿಸಿ ಹೋಗುವುದಿಲ್ಲ; ಮತ್ತು ಸಿಸದ ಗೇರೆಗಳು ಹಾಗೆಯೇ ಉಳಿದುಕೊಂಡಿರುತ್ತವೆ. ಆದ್ದರಿಂದ ಮೃದುವಾದ ಹಾಳೆಯ ಬದಿಯ ಮೇಲೆ ಚಿತ್ರವನ್ನು ರಚಿಸುವುದಿಲ್ಲ. ಈ ಚಿತ್ರವಷ್ಟೇ ಅಲ್ಲದೇ ಉಳಿದ ಯಾವುದೇ ತರಹದ ಚಿತ್ರವನ್ನು ರಚಿಸಲು ಯೋಗ್ಯವಲ್ಲ. ಆದ್ದರಿಂದ ಹಾಳೆಯ ಒರಟಾದ ಬದಿಯ ಮೇಲೆ ಚಿತ್ರ ಮತ್ತು ಬಣ್ಣ ಲೇಪಿಸಲು ಯೋಗ್ಯವಾದುದರಿಂದ ಒರಟಾದ ಹಾಳೆಯ ಬದಿಯ ಮೇಲೆಯೇ ರೇಖಾಚಿತ್ರ ರಚಿಸುತ್ತಾರೆ.

ಇನ್ನೊಂದು ಮುಖ್ಯ ಕಾರಣವೇನೆಂದರೆ ಹಾಳೆಯ ಮೃದುವಾದ ಭಾಗದ ಮೇಲೆ ಬಣ್ಣವನ್ನು ಲೇಪಿಸಿದರೆ ಅದು ಹಾಳೆಯ ಮೇಲಿಂದ ಜಾರುತ್ತದೆ. ಹೀಗಾಗಿ ಹಾಳೆಯ ಒರಟು ಭಾಗದ ಮೇಲೆ ಚಿತ್ರ ರಚಿಸಲು ಅಥವಾ ಬಣ್ಣ ಲೇಪಿಸಲು ಸೂಕ್ತವಾಗಿರುತ್ತದೆ. ಇಂದು ನಾನಾ ತರಹದಲ್ಲಿ ಹಾಳೆಯು ಮಾರುಕಟ್ಟೆಯಲ್ಲಿ ಲಭ್ಯವಿವೆ. ಉದಾಹರಣೆ ಸಾದಾ ಡ್ರಾಯಿಂಗ್ ಶೀಟ್, ಬಫ್ ಡ್ರಾಯಿಂಗ್ ಶೀಟ್, ಹ್ಯಾಂಡಮೇಡ್ ಡ್ರಾಯಿಂಗ್ ಪೆಪರ್, ಕ್ಯಾನಸನ್ ಡ್ರಾಯಿಂಗ್ ಶೀಟ್ ಲಭ್ಯವಿವೆ. ಈ ಹಾಳೆಗಳೆಲ್ಲಾ ಬಿಳಿ ಮತ್ತು ಹಳದಿ ಮಿಶ್ರಿತ ಬಣ್ಣಗಳಲ್ಲಿರುತ್ತವೆ. ಇದರ ಜೊತೆಗೆ ಬಣ್ಣ-ಬಣ್ಣದ ಹಾಳೆಗಳು ಸಿಗುತ್ತವೆ. ನಿಸರ್ಗ ಚಿತ್ರಣಕ್ಕೆಂದೇ ಹ್ಯಾಂಡಮೇಡ್ ಹಾಳೆಗಳನ್ನು ತಯಾರಿಸಲಾಗುತ್ತದೆ. ಕಲಾವಿದರಾಗಲಿ ಅಥವಾ ಕಲಾವಿದ್ಯಾರ್ಥಿಗಳಾಗಲಿ ಹೆಚ್ಚಾಗಿ ಈ ಹಾಳೆಯನ್ನೇ ಉಪಯೋಗಿಸುತ್ತಾರೆ. ಯಾಕೆಂದರೆ ಇದರ ಮೇಲೆ ಚಿತ್ರಿಸಿದ ನಂತರ ಅಥವಾ ಬಣ್ಣವನ್ನು ಲೇಪನ ಮಾಡಿದ ಬಳಿಕ ನಿಸರ್ಗ ಚಿತ್ರಗಳು ತುಂಬ ಚನ್ನಾಗಿ ಕಾಣಿಸುತ್ತವೆ. ಯಾಕೆಂದರೆ ಬೇರೆ ಎಲ್ಲಾ ಹಾಳೆಗಳಿಗಿಂತಲೂ ಈ ಹ್ಯಾಂಡಮೇಡ್ ಹಾಳೆಗಳು ಬಣ್ಣಗಳನ್ನು ಹಿಡಿದುಕೊಳ್ಳುತ್ತವೆ.

ಕ್ಯಾನವಾಸ್‌ನ ಮೇಲೆಯೂ ನಿಸರ್ಗ ಚಿತ್ರಗಳನ್ನು ರಚಿಸಬಹುದು. ಆದರೆ ಕ್ಯಾನವಾಸ್‌ನ ಮೇಲೆ ತೈಲವರ್ಣ ಮತ್ತು ಅಕ್ರಾಲಿಕ್ ವರ್ಣಗಳಿಂದ ಚಿತ್ರಗಳ ರಚನೆಯನ್ನು ಮಾಡಬಹುದು. ಅನೇಕ ತರಹದ ಬಣ್ಣದ ವೈಶಿಷ್ಟಯತೆಯನ್ನು ಇಂದು ನಾವು ಮಾರುಕಟ್ಟೆಯಲ್ಲಿ ಕಾಣಬಹುದಾಗಿದೆ.

ನಿಸರ್ಗ ಚಿತ್ರರಚಿಸುವ ವಿಧಾನ

ಮೊದಲು ಹಾಳೆಯನ್ನು ಬೋರ್ಡಿಗೆ ಅಂಟಿಸಬೇಕು, ಅಂಟಿಸುವಾಗ ಗಾಳಿಯು ಹಾಳೆ ಮತ್ತೆ ಬೋರ್ಡನ ಮಧ್ಯದಲ್ಲಿ ಸೇರದ ಹಾಗೆ ಅಂಟಿಸಬೇಕು. ಅಂಟಿಸಿದ ಬಳಿಕ ಹಾಳೆಯು ಒಂದೆ ಸಮನಾಗಿ ಕಾಣಬೇಕು. ಒಂದು ವೇಳೆ ಹಾಳೆಯನ್ನು ಅಂಟಿಸಿದ ಬಳಿಕ ಹಾಳೆಯು ಉಬ್ಬು, ತಗ್ಗು ಕಂಡರೆ ಹಾಳೆಯನ್ನು ತೆಗೆದು ಇನ್ನೊಮ್ಮೆ ಸರಿಯಾಗಿ ಅಂಟಿಸಬೇಕು. ಅಂಟಿಸಿದ ಬಳಿಕ ಕುಂಚದಿಂದ ನೀರನ್ನು ತೆಗೆದುಕೊಂಡು ಇಡೀ ಹಾಳೆಗೆ ಲೇಪಿಸಬೇಕು. ನೀರನ್ನು ಹಾಳೆಗೆ ಲೇಪಿಸಿದ ಬಳಿಕ ಸ್ವಲ್ಪ ಗಾಳಿಗೆ ಒಣಗಲು ಬಿಡಬೇಕು. ಒಣಗಿದ ಬಳಿಕ ಹಾಳೆಯ ಮೇಲೆ ಸಿಸದ ಕಡ್ಡಿಯಿಂದ ಮೊದಲು ತೆಳು ರೇಖೆಗಳಿಂದ ಚಿತ್ರ ಬಿಡಿಸಬೇಕು. ಜಲವರ್ಣ ಲೇಪಿಸುವಾಗ ತುಂಬ ಜಾಗ್ರತೆಯಿಂದ ಇರಬೇಕು. ಯಾಕೆಂದರೆ ಒಂದು ಸಲ ಬಣ್ಣವನ್ನು

ಲೇಪಿಸಿದ ಬಳಿಕ ತಿದ್ದುವ ಅವಕಾಶವಿರುವುದಿಲ್ಲ. ಆದ್ದರಿಂದ ಒಂದಾದ ನಂತರ ಒಂದು ಬಣ್ಣವನ್ನು ತೆಳುವಾಗಿ ಹಾಳೆಗೆ ಹಚ್ಚಬೇಕು. ಸಿಸಿನಿಂದ ರೇಖಾಚಿತ್ರ ಪೂರ್ಣಗೊಳಿಸಿದ ನಂತರ ಮೊಟ್ಟ ಮೊದಲು ಕುಂಚದ ಸಹಾಯದಿಂದ ನಿಂಬೆ ಹಳದಿ ಬಣ್ಣವನ್ನು ತೆಳುವಾಗಿ ಹಾಳೆಗೆ ಬಣ್ಣವನ್ನು ಹಚ್ಚಬೇಕು. ಬಣ್ಣ ಹಚ್ಚುವಾಗ ಒಂದು ಸಲ ಬಣ್ಣವನ್ನು ಹಚ್ಚಿದ ಮೇಲೆ ಮತ್ತೊಮ್ಮೆ ಕುಂಚದಿಂದ ಎಳೆಯಬಾರದು. ಒಂದು ವೇಳೆ ಹೀಗೆ ಮಾಡಿದರೆ ಬಣ್ಣ ಒಣಗಿದ ಬಳಿಕ ಕುಂಚದಿಂದ ಎಳೆದ ಹೊಡೆತಗಳು ಎದ್ದು ಕಾಣುತ್ತವೆ. ಹಳದಿ ಬಣ್ಣವನ್ನು ಒಂದೇ ಸಲ ನೀರಿನಲ್ಲಿ ಮಿಶ್ರಣಮಾಡಿ ಸಮ ಪ್ರಮಾಣದಿಂದ ಮೊಟ್ಟ ಮೊದಲು ಹಾಳೆಗೆ ಲೇಪಿಸಬೇಕು. ಇದು ಒಣಗಿದ ನಂತರ ಚಿತ್ರದ ಹಿಂದಿನ ಭಾಗಕ್ಕೆ ಬಣ್ಣವನ್ನು ಕುಂಚದಿಂದ ಹಚ್ಚಬೇಕು. ಉದಾಹರಣೆ ಆಕಾಶ, ಬೆಟ್ಟ-ಗುಡ್ಡ ಮತ್ತು ಇತರೆ, ಇದಾದ ನಂತರ ಮುಖ್ಯವಾಗಿರುವ ನಿಸರ್ಗದ ವಸ್ತುಗಳನ್ನು ಅಂದರೆ ಗುಡಿಸಲಿನ ಮನೆಯಾಗಿರಬಹುದು, ಸಮುದ್ರವಾಗಿರಬಹುದು, ಸೂರ್ಯ-ಚಂದ್ರ, ಪ್ರಾಣಿ-ಪಕ್ಷಿಗಳಾಗಿರಬಹುದು, ಪ್ರಕೃತಿಯಲ್ಲಿರುವ ದಟ್ಟ ಕಾಡಾಗಿರಬಹುದು. ಹೀಗೆ ಮುಂದಿರುವ ವಸ್ತುಗಳಿಗೆ ಬಣ್ಣವನ್ನು ಲೇಪಿಸಬೇಕು. ಲೇಪಿಸುವಾಗ ಬಣ್ಣಗಳು ತೆಳುವಾಗಿರಬೇಕು. ಒಂದು ಬಾರಿ ಪೂರ್ತಿ ಚಿತ್ರವನ್ನು ತೆಳು ಬಣ್ಣದಿಂದ ರಚಿಸಿದ ಮೇಲೆ ಸ್ವಲ್ಪ ಒಣಗಲು ಬಿಟ್ಟು ನಂತರ ಎರಡನೆಯ ಬಾರಿ ಅದರ ಮೇಲೆ ಸ್ವಲ್ಪ ದಪ್ಪ ಬಣ್ಣ ಲೇಪಿಸಬೇಕು.

ಕೊನೆಯದಾಗಿ ಚಿತ್ರದಲ್ಲಿ ಬೆಳಕಿನ ಭಾಗವನ್ನು ಬಿಟ್ಟು ಎಲ್ಲೆಲ್ಲಿ ದಟ್ಟ ಮತ್ತು ನಿಖರವಾಗಿರುತ್ತದೆಯೋ ಅಲ್ಲಿ ನಿಖರ ಮತ್ತು ಪ್ರಖರ ಬಣ್ಣವನ್ನು ಹಚ್ಚಬೇಕು. ಚಿತ್ರ ರಚನೆಯ ಬಳಿಕವೆ ಮೆತ್ತಿರುವ ಹಾಳೆಯನ್ನು ಕಿತ್ತಿ ತೆಗೆಯಬಾರದು, ಹೀಗೆ ಮಾಡುವುದರಿಂದ ಹಾಳೆ ಹರಿಯಬಹುದು, ಮುದ್ದೆಯಾಗಬಹುದು, ಅಥವಾ ಹಾಳೆಗೆ ಹಚ್ಚಿದ ಬಣ್ಣಗಳು ಒಂದಕ್ಕೊಂದು ಕೂಡಿ ರಚಿಸಿದ ಚಿತ್ರ ಕೆಡಬಹುದು. ಹೀಗಾಗಿ ಚಿತ್ರ ಒಣಗಿದ ಬಳಿಕವೇ ಹಾಳೆಯನ್ನು ಕಿತ್ತಿ ತೆಗೆದು ಬೇರೆ ಹಾಳೆಯನ್ನು ಚಿತ್ರ ರಚನೆ ಮಾಡಲು ಹಚ್ಚಬೇಕು.

ನಿಸರ್ಗ ಚಿತ್ರ ರಚನೆಯಲ್ಲಿ ಮುಖ್ಯವಾಗಿ ಎರಡು ವಿಧಾನಗಳಿವೆ

೧. ಒಳಾಂಗಣ ನಿಸರ್ಗ ಚಿತ್ರಕಲೆ   ೨. ಹೊರಾಂಗಣ ನಿಸರ್ಗ ಚಿತ್ರಕಲೆ

೧. ಒಳಾಂಗಣ ನಿಸರ್ಗ ಚಿತ್ರಕಲೆ

ಇಲ್ಲಿ ಪ್ರಕೃತಿಯ ಸುಂದರ ಫೋಟೋಗಳನ್ನು ತೆಗೆದುಕೊಂಡು ಅದರಲ್ಲಿ ಯಾವುದು ಚನ್ನಾಗಿ ಕಾಣಿಸುತ್ತದೆಯೋ ಆ ಫೋಟೋವನ್ನು ನೋಡಿ, ಫೋಟೋದಲ್ಲಿ ಹೇಗೆ ಇರುತ್ತದೆಯೋ ಹಾಗೆಯೇ ಚಿತ್ರಿಸುವುದಾಗಿರುತ್ತದೆ. ಸ್ಟುಡಿಯೋ, ಕಲಾಶಾಲೆ ಮತ್ತು ಮನೆಗಳಲ್ಲಿ ನಿಸರ್ಗ ಚಿತ್ರಗಳು ಮಾಡುವುದನ್ನು ಒಳಾಂಗಣ ನಿಸರ್ಗ ಚಿತ್ರಣವೆಂದು ಕರೆಯುತ್ತಾರೆ.

೨. ಹೊರಾಂಗಣ ನಿಸರ್ಗ ಚಿತ್ರಕಲೆ

ಹೊರಾಂಗಣ ನಿಸರ್ಗ ಚಿತ್ರಕಲೆ ಎಂದರೆ ಸ್ಟುಡಿಯೋ, ಕಲಾಶಾಲೆ ಮತ್ತು ಮನೆಗಳು ಒಟ್ಟಾರೆ ನಾಲ್ಕು ಗೋಡೆಗಳ ಮಧ್ಯದಿಂದ ಹೊರಬಂದು ಸುಂದರ ಪ್ರಕೃತಿಯ ಮಡಿಲಲ್ಲೆ ಕುಳಿತು ಚಿತ್ರಿಸುವುದಕ್ಕೆ

ಹೊರಾಂಗಣವೆಂದು ಕರೆಯುತ್ತಾರೆ. ಪ್ರಕೃತಿಯಲ್ಲಿ ನಾನಾ ತರಹದ ಸ್ಥಳ, ಸ್ಮಾರಕಗಳು, ಕಟ್ಟಡಗಳು, ರಸ್ತೆ, ಬೆಟ್ಟ-ಗುಡ್ಡ, ಪ್ರಾಣಿ-ಪಕ್ಷಿಗಳನ್ನು ನೇರವಾಗಿ ಚಿತ್ರಸುವುದಕ್ಕೆ ಹೊರಾಂಗಣ ನಿಸರ್ಗ ಚಿತ್ರಣವೆಂದು ಕರೆಯುತ್ತಾರೆ.

ಈ ಒಳಾಂಗಣ ಮತ್ತು ಹೊರಾಂಗಣ ಚಿತ್ರಗಳ ವ್ಯತ್ಯಾಸವೇನೆಂದರೆ ಒಳಾಂಗಣ ನಿಸರ್ಗ ಚಿತ್ರಕಲೆಯಲ್ಲಿ ಫೋಟೋವನ್ನು ತೆಗೆದುಕೊಂಡು ಅಥವಾ ಯೋಚಿಸಿ ಚಿತ್ರಿಸುವುದು, ಕೆಲವೊಮ್ಮೆ ಚಿತ್ರರಚನೆಗೆ ಸಮ್ಮತಿಸಬಹುದು ಇಲ್ಲಾ ಕೆಲವೊಮ್ಮೆ ಸಮ್ಮತಿಸದಿರುವ ಸಾಧ್ಯತೆಗಳಿರುತ್ತವೆ. ಯಾವುದೋ ಅನಿವಾರ್ಯ. ಕಟ್ಟಲೆಗಳಿಂದ ಚಿತ್ರ ರಚಿಸಬೇಕೆಂಬ ಮನಸ್ಥಿತಿ ಇರುವ ಸಾಧ್ಯತೆಗಳೆ ಹೆಚ್ಚು. ಯಾಕೆಂದರೆ ಫೋಟೋದಲ್ಲಿರುವ ನಿಸರ್ಗವನ್ನು ನೋಡಿ ಕಲಾವಿದನ ಭಾವನೆಗೆ ತಕ್ಕ ಹಾಗೆ ತೃಪ್ತಿ ಸಿಗುವುದಿಲ್ಲ. ಆದ್ದರಿಂದ ಈ ಒಳಾಂಗಣ ನಿಸರ್ಗಚಿತ್ರ ಶೈಲಿಯು ಹೆಚ್ಚು ಪ್ರಾಶ್ಯಸ್ತ್ಯ ಪಡೆಯಲಿಲ್ಲ.

ಹೊರಾಂಗಣ ನಿಸರ್ಗ ಚಿತ್ರ ರಚಿಸಬೇಕಾದರೆ ಕಲಾವಿದನು ನಾಲ್ಕು ಗೋಡೆಗಳ ಮಧ್ಯದಿಂದ ಹೊರ ಬಂದು ಪ್ರಕೃತಿಯ ರಮಣಿಯ ದೃಶ್ಯವನ್ನು ಸ್ವತಃ ಕಣ್ಣುಗಳಿಂದ ನೇರವಾಗಿ ಆನಂದಿಸಿ ಚಿತ್ರಿಸುವ ಸಂತೋಷಕ್ಕೆ ಬೆಲೆಕಟ್ಟಲಾಗುವುದಿಲ್ಲ. ಇಲ್ಲಿ ಮುಖ್ಯವಾಗಿ ಕಲಾವಿದನ ಭಾವನೆ ನಿಸರ್ಗಕ್ಕೆ ಹೊಂದಾಣಿಕೆಯಾಗಿರುತ್ತದೆ.

ನಿಸರ್ಗ ಚಿತ್ರರಚನೆಗೆ ಬೇಕಾಗುವ ಪರಿಕರಗಳು

ಮೊಟ್ಟ ಮೊದಲು ಸಿಸದ ಕಡ್ಡಿ (ಪೆನ್ಸಿಲ್), ರಬ್ಬರ್, ಹಾಳೆಗಳು, ಕ್ಯಾನ್‌ವಾಸ್, ಜಲವರ್ಣಗಳು, ತೈಲವರ್ಣಗಳು, ಅಕ್ರಾಲಿಕ್ ವರ್ಣಗಳು ದುಂಡಾಕೃತಿಯ ಕುಂಚಗಳು, ಚಪ್ಪಟೆಯಾಕಾರದ ಕುಂಚಗಳು, ಬಣ್ಣವನ್ನು ಮಿಶ್ರಣ ಮಾಡಲು ಚೀನಿ ತಟ್ಟೆ ಅಥವಾ ಗಾಜು ಇದ್ದರೆ ಉತ್ತಮ, ಕುಂಚವನ್ನು ಒರೆಸಲು ಅರಿವೆ ತುಂಡುಗಳು, ಬಣ್ಣ ಮಿಶ್ರಣ ಮಾಡಲು ನೀರು, ನೀರು ಎರೆಡು ಪಾತ್ರೆಗಳಲ್ಲಿದ್ದರೆ ಉತ್ತಮ, ಯಾಕೆಂದರೆ ಒಂದು ಪಾತ್ರೆಯಿಂದ ಬಣ್ಣ ಮಿಶ್ರಣ ಮಾಡಲು ಇನ್ನೊಂದು ಪಾತ್ರೆಯಿಂದ ಕುಂಚವನ್ನು ಸ್ವಚ್ಛಗೊಳಿಸಲು. ದುಂಡಾಕೃತಿಯ ಮತ್ತು ಚಪ್ಪಟೆಯಾಕೃತಿಯ ಕುಂಚಗಳು ಸಾಮಾನ್ಯವಾಗಿ '೦೦೦' ಅಳತೆಯಿಂದ '೧೨'ರ ವರೆಗೆ ಲಭ್ಯವಿವೆ. ಅರ್ಧ ಇಂಚಿನಿಂದ ಸುಮಾರು ಮೂರುವರೆ ನಾಲ್ಕು ಇಂಚಿನವರೆಗೆ ಚಪ್ಪಟೆಯಾಕಾರದಲ್ಲಿ ಕುಂಚಗಳು ಲಭ್ಯವಿವೆ. ಆದರೆ ಜಲವರ್ಣದ ಕುಂಚಗಳೆ ಬೇರೆಯಾಗಿರುತ್ತವೆ ಮತ್ತು ತೈಲವರ್ಣದ ಕುಂಚಗಳೇ ಬೇರೆಯಯಾಗಿರುತ್ತವೆ ಹಾಗೂ ಅವುಗಳ ಗುಣ ಸ್ವಭಾವಗಳು ಬೇರೆಯಾಗಿರುತ್ತವೆ. ಇಂದು ಮಾರುಕಟ್ಟೆಯಲ್ಲಿ ನಾನಾ ರೀತಿಯ ಕಲಾ ಪರಿಕರಗಳು ಲಭ್ಯವಿವೆ. ಉದಾಹರಣೆ ಕುಂಚದ ಬದಲಾಗಿ ರೋಲರ್, ತ್ಯಾಪಿ ಇತ್ಯಾದಿಗಳು ಮತ್ತು ಟ್ಯುಬ್, ಬಣ್ಣದ ಚಿಕ್ಕ ಬಾಟಲಿಗಳ ಬದಲಾಗಿ ಸ್ಪ್ರೇ ಬಣ್ಣಗಳು ತಗಡಿನ ಬಾಟಲಿಗಳಲ್ಲಿ ಲಭ್ಯವಿವೆ. ಇದಕ್ಕಿಂತ ಮಿಗಿಲಾಗಿ ದೊಡ್ಡ ದೊಡ್ಡ ಯಂತ್ರಗಳು ಬಂದಿವೆ ಈ ಯಂತ್ರಗಳು ಹಾಳೆ ಅಥವಾ ಕ್ಯಾನ್‌ವಾಸನ ಮೇಲೆ ಕೆಲವೇ ಕೆಲವು ನಿಮಿಷಗಳಲ್ಲಿ ಬಣ್ಣವನ್ನು ಮುದ್ರಿಸುತ್ತವೆ.

❑❑❑

ಅಧ್ಯಾಯ : ನಾಲ್ಕು

ನಿಸರ್ಗ ಚಿತ್ರಗಳ ವಸ್ತುವೈವಿಧ್ಯತೆ ಮತ್ತು ಮಾಧ್ಯಮಗಳು

ಕಲಾವಿದ ಪ್ರಕೃತಿಯ ಸ್ಪರ್ಶ ಅನುಭವಗಳಿಂದ ತಮ್ಮ ಜ್ಞಾನ ಕೌಶಲ್ಯಗಳಿಂದ ಪ್ರಕೃತಿಯ ಸೂಕ್ಷ್ಮ ಸಂವೇದನೆ ಅದರ ಪರಿಣಾಮಗಳನ್ನು ಕಲೆಯ ಮೂಲಕ ವಿಶ್ಲೇಷಿಸುತ್ತಾನೆ. ಹೀಗಾಗಿ ಪ್ರಕೃತಿಯಿಂದ ಕಲಾವಿದ ಪ್ರಕೃತಿಯನ್ನು ಅನೇಕ ರೀತಿಯಾಗಿ ಅಭಿವ್ಯಕ್ತಿಗೋಳಿಸುತ್ತಾನೆ. ಕ್ರೀಯಾಶೀಲ ಕಲಾವಿದ ಮನಸ್ಸಿನ ಭಾವನೆಗಳಿಗೆ ಅನುಗುಣವಾಗಿ ಚಿತ್ರಗಳನ್ನು ರಚನೆ ಮಾಡುತ್ತಾನೆ. ಇದು ಕಲಾವಿದನ ದೃಷ್ಟಿಯನ್ನು ಅವಲಂಭಿಸಿರುತ್ತದೆ. ವ್ಯಕ್ತಿ ಭಿನ್ನತೆ ಮತ್ತು ಕಲ್ಪನಾ ಭಿನ್ನತೆಗಳಿಂದಾಗಿ ಕಲಾವಿದನ ವೈಯಕ್ತಿಕ ಕಲಾ ಶೈಲಿಯಾಗಿಯೂ ಪರಿಗಣಿಸಲ್ಪಡುತ್ತದೆ.

ಜಲವರ್ಣ ವಿಧಾನ[೧]

ಜಲವರ್ಣ ಚಿತ್ರಗಳನ್ನು ಸಾಮಾನ್ಯವಾಗಿ ಕಾಗದಗಳ ಮೇಲೆ, ಕೆಲವೊಮ್ಮೆ ರೇಷ್ಮೆ ಬಟ್ಟೆ, ಹಸ್ತಿದಂತ ಇಲ್ಲವೇ ಎಲುಬುಗಳ ಮೇಲೆ ಚಿತ್ರಿಸುತ್ತಾರೆ. ಬಣ್ಣಗಳನ್ನು ನೀರಿನಲ್ಲಿ ಮಿಶ್ರಣಮಾಡಿ ಚಿತ್ರಗಳನ್ನು ಚಿತ್ರಸುವುದೇ ಜಲವರ್ಣ ವಿಧಾನ. ಬಹುದಿನಗಳಿಂದಲೂ ರೇಖಾ ಚಿತ್ರಗಳಿಗೆ ಜಲವರ್ಣಗಳಿಂದ ಮುಕ್ತಾಯ ಸ್ಪರ್ಶಗಳನ್ನು ಕೊಡಲಾಗುತ್ತದೆಂಬುದನ್ನು ಲಿಯೋನಾರ್ಡೊ ಡಾ ವಿನ್ಸಿ ಮತ್ತು ಡ್ಯೂರರ್ ಅವರ ಅಸಂಖ್ಯಾತ ರೇಖಾ ಚಿತ್ರಗಳಿಂದ ತಿಳಿಯಬಹುದಾಗಿದೆ. ಈಗಲೂ ಈ ಪದ್ಧತಿಯು ರೂಢಿಯಲ್ಲಿರುತ್ತದೆಯಲ್ಲದೆ ಕಿರುವರ್ಣ ಚಿತ್ರಗಳನ್ನು ಹೆಚ್ಚಾಗಿ ಜಲವರ್ಣ ಮಾಧ್ಯಮದಲ್ಲಿಯೇ ಚಿತ್ರಸಲಾಗುತ್ತದೆ ಎಂಬುದು ಸರ್ವವಿಧಿತ. ಇಂಗ್ಲೇಂಡಿನಲ್ಲಿ ೧೮ನೇ ಶತಮಾನದ ಕೊನೆಗೆ ನಿಸರ್ಗ ದೃಶ್ಯಗಳನ್ನು ಚಿತ್ರಿಸುವ ಕಲಾವಿದರ ತಂಡವೊಂದು ಉದಯಿಸಿತು. ಈ ತಂಡದ ಕಲಾವಿದರೇ ಈ ವಿಧಾನದಲ್ಲಿ ಘನವಂತರಾದ ಯೋರೋಪಿಯನ್ ವರ್ಣ ಚಿತ್ರಕಾರರಾಗಿದ್ದ-ರೆನ್ನಬಹುದು. ಜಲವರ್ಣ ಮಾಧ್ಯಮವು ಇನ್ನುಳಿದ ಯಾವುದೇ ಮಾಧ್ಯಮಗಳಿಗಿಂತಲೂ ನಿಸರ್ಗದೃಶ್ಯ ಕಲಾಕೃತಿಗಳ ರಚನೆಗೆ ಅತ್ಯುತ್ತಮವಾದ ಮಾಧ್ಯಮವಾಗಿದೆಯಲ್ಲದೆ ಬಹು ಕಠಿಣವಾದ ಮಾಧ್ಯಮವೂ ಆಗಿದೆ.

೦೧. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೧೧೧-೧೧೩

ಮಧ್ಯಯುಗೀನ ಅನೇಕ ಅಲಂಕೃತ ಹಸ್ತಪ್ರತಿಗಳು ಜಲವರ್ಣ ಮಾಧ್ಯಮದಲ್ಲಿಯೇ ರಚಿಸಲ್ಪಟ್ಟಿವೆ. ಫ್ರೆಸ್ಕೋ ವಿಧಾನವು ಜಲವರ್ಣಗಳನ್ನು ಬಳಸಿ ಕಲಾಕೃತಿಯನ್ನು ರಚಿಸುವ ಜಲವರ್ಣ ಮಾಧ್ಯಮದ ಇನ್ನೊಂದು ಪ್ರತ್ಯೇಕ ರೂಪವಾಗಿದೆ.

ಜೆ.ಆರ್. ಕೆಝುನ್ಸ, ಥಾಮಸ್ ಜರ್ಟಿನ್, ಜೆ.ಎಸ್. ಕಾಟ್ಮನ್, ಪೀಟರ್. ಖ. ವಿಕೆಟ್ ಮುಂತಾದವರು ಸುಪ್ರಸಿದ್ಧ ಜಲವರ್ಣ ಚಿತ್ರಕಾರರಾಗಿದ್ದರು. ಪ್ರಾಯಶಃ ಇವರ ಸಮಕಾಲೀನ ಕಲಾವಿದನಾದ ಜೆ.ಎಂ.ಡಬ್ಲೂ ಟರ್ನರ್‌ನು ಸರ್ವೋತ್ಕೃಷ್ಟ ನಿಸರ್ಗ ದೃಶ್ಯ ಚಿತ್ರ ಕಲಾವಿದನಾಗಿದ್ದನು. ತೈಲವರ್ಣ ಮಾಧ್ಯಮದಲ್ಲಿ ಚಿತ್ರಿಸಿದ್ದಾನೆ. ೧೮೫೧ರಲ್ಲಿ ಟರ್ನರನು ಕಾಲವಾದ ನಂತರ ಜಲವರ್ಣ ಮಾಧ್ಯಮದ ಕಲಾವಿದರಲ್ಲಿ ಸಿಝಾನೆಯು ಸುಪ್ರಸಿದ್ಧ ಕಲಾವಿದನೆಂದು ಪರಿಗಣಿಸಲ್ಪಟ್ಟಿದ್ದಾನೆ.

ತೈಲವರ್ಣ ವಿಧಾನ

ಹಿಂದೆ ಟೆಂಪೆರಾ ವಿಧಾನದಲ್ಲಿ ಚಿತ್ರಿಸಿದ ಚಿತ್ರಗಳ ಮೇಲೆ ಗಚ್ಚಿ ಎಣ್ಣೆ ಅಥವಾ ವಾರ್ನಿಷನ್ನು ಸವರಿ ಚಿತ್ರಕ್ಕೆ ಹೊಳಪು ಬರುವಂತೆ ಮಾಡುವುದಲ್ಲದೇ ಚಿತ್ರದ ರಕ್ಷಣೆಯನ್ನೂ ಮಾಡುತ್ತಿದ್ದ ಪದ್ಧತಿಯು ಬಳಕೆಯಲ್ಲಿರುವುದರಿಂದ ಈ ತೈಲವರ್ಣ ಮಾಧ್ಯಮವು ವ್ಯಾನ್ ಆಯಿಕ್ ಸೋದರರು ಕಂಡು ಹಿಡಿಯುವುದಕ್ಕಿಂತ ಮುಂಚಿತವಾಗಿಯೇ ಬಳಕೆಯಲ್ಲಿತ್ತೆಂದು ಹೇಳಬಹುದು. ೧೫ನೆಯ ಶತಮಾನದ ಪ್ರಾರಂಭದಲ್ಲಿ ಚಿತ್ರಿತವಾದ ಅನೇಕ ತೈಲವರ್ಣ ಚಿತ್ರಗಳು ಟೆಂಪೆರಾ ವಿಧಾನದಲ್ಲಿಯೇ ಚಿತ್ರಿಸಿ ನಂತರ ಅದರ ಮೇಲೆ ಚಿತ್ರಗಳಿಗೆ ವಾರ್ನಿಷನ್ನು ಲೇಪಿಸಲಾಗಿದೆ. ೧೬ನೆಯ ಶತಮಾನಕ್ಕಿಂತ ಮೊದಲಿನ ತೈಲವರ್ಣ ಚಿತ್ರಗಳು ಮರದ ಚೌಕ್ಕಟಿನೊಂದಿಗೆ ಕ್ಯಾನವಾಸ್ ಬಟ್ಟೆಯ ಮೇಲೆ ಚಿತ್ರಿಸಿದವುಗಳಾಗಿವೆ. ೧೭ನೆಯ ಶತಮಾನದ ವಿಶ್ವವಿಖ್ಯಾತ ಚಿತ್ರಕಾರ ರೂಬೆನ್ಸ್‌ನು ಮರದ ಹಲಗೆಯ ಮೇಲೆ ಚಿತ್ರಸಲು ಹೆಚ್ಚು ಒಲವು ತೋರಿಸಿದ್ದನಾದರೂ ಕ್ಯಾನ್‌ವಾಸ್ ಬಟ್ಟೆಯ ಮೇಲೆಯೂ ಸಹ ಹೆಚ್ಚನ ಸಂಖ್ಯೆಯ ತೈಲವರ್ಣ ಚಿತ್ರಗಳನ್ನು ರಚಿಸಿದ್ದಾನೆ.[೨]

"ಸ್ಟೆಚರ್" ಎಂದು ಕರೆಯಲ್ಪಡುವ ಮರದ ಚೌಕಟ್ಟಿಗೆ ಕ್ಯಾನವಾಸ್ ಬಟ್ಟೆಯನ್ನು ಬಿಗಿಯಾಗಿ ಬಡಿದು, ಹಲಗೆಯಂತೆ ಮಾಡಿ ಅದರ ಮೇಲೆ "ಚಿತ್ರವೇದಿಕೆ"ಯನ್ನು ಸಿದ್ಧಗೊಳಿಸಿಕೊಂಡು ತೈಲವರ್ಣ ಚಿತ್ರಗಳನ್ನು ಚಿತ್ರಿಸಲಾಗುತ್ತದೆ. ಹೀಗೆ ಸಿದ್ಧಪಡಿಸಿದ ಚಿತ್ರವೇದಿಕೆಯ ಮೇಲೆ ಚಿತ್ರಿಸಿದ ತೈಲವರ್ಣ ಚಿತ್ರಗಳಿಗಾಗಿ ಬಳಸಿದ ವರ್ಣಗಳ ಉಜ್ವಲತೆಯನ್ನು ಬಟ್ಟೆಯು ಹೀರಿಕೊಳ್ಳಲಾಗದು. ಚಿತ್ರವೇದಿಕೆ ಅಥವಾ ಪ್ರಥಮ ಬಳಿತಕ್ಕೆ ಉಪಯೋಗಿಸುವ ಮಿಶ್ರ ಬಣ್ಣಕ್ಕಾಗಿ ಸೀಮೆಸುಣ್ಣ ಇಲ್ಲವೆ ಗೆಸ್ಸೊಗಳನ್ನಾಗಲೀ ಬಿಳಿ, ಹಸಿರು, ಇಲ್ಲವೆ ಕೆಂಪು ವರ್ಣಗಳನ್ನಾಗಲೀ ಬಳಸಿ ಸಿದ್ಧಪಡಿಸಿಕೊಳ್ಳಲಾಗುತ್ತದೆ. ವಿಶ್ವವಿಖ್ಯಾತ ಕಲಾವಿದ ಟಿಂಟೊರೆಟೋ ಮತ್ತು ಸ್ಪ್ಯಾನಿಷ್ ಕಲಾವಿದ ಎಲ್‌ಗ್ರೇಕೊ ಅವರು ಚಿತ್ರವೇದಿಕೆಯನ್ನು ಸಿದ್ಧಪಡಿಸಿಕೊಳ್ಳಲು ಕೆಂಪು ವರ್ಣಬಳಸುತ್ತಿದ್ದರು. ತೈಲವರ್ಣಗಳ ಬಳಕೆಯು ಕಲಾವಿದನಿಂದ ಕಲಾವಿದನಿಗೆ ಬದಲಾವಣೆಗೊಳ್ಳುತ್ತಲೇ ಬಂದಿದೆ. ವೆಲಾಸ್ಕಿ ಮತ್ತು ಗೇನ್ಸಬರೋ ಅವರು ತೈಲವರ್ಣಗಳನ್ನೂ ಸಹ ಜಲವರ್ಣಗಳಂತೆ ತೈಲವರ್ಣಗಳು ಸೀರಿನಲ್ಲಿ ಈಜುತ್ತಿರುವಂತೆ ಬಳಸಿರುವುದು ಕಂಡುಬರುತ್ತದೆ. ಈ ರೀತಿಯ ಲೇಪನವನ್ನು ಮೆರಗು ಇಲ್ಲವೆ

೦೨. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೧೧೦

ಗ್ಲೇಝ್ ಎಂದು ಕರೆಯುತ್ತಾರೆ. ಇನ್ನೊಬ್ಬ ವಿಶ್ವವಿಖ್ಯಾತ ಡಚ್ ಕಲಾವಿದ ರೆಂಬ್ರಾಂಟನು ತೈಲವರ್ಣ ಚಿತ್ರದಲ್ಲಿ ತೈಲವನ್ನು ಅಲ್ಪ ಪ್ರಮಾಣದಲ್ಲಿಯೋ ಅಥವಾ ತೈಲವಿಲ್ಲದೆಯೇ ನೇರವಾಗಿ ಬಣ್ಣಗಳನ್ನು ಬಳಸುತ್ತಿದ್ದನು. ಈ ವಿಧಾನವನ್ನು ಇಂಪ್ಯಾಸ್ಟೊ ಇಲ್ಲವೆ ದಪ್ಪನಾಗಿ ಬಣ್ಣ ಹಾಕುವ ವಿಧಾನ ಎಂದು ಕರೆಯುತ್ತಾರೆ. ತೈಲವರ್ಣ ಚಿತ್ರಕ್ಕಾಗಿ ಸಾಮಾನ್ಯವಾಗಿ ಗಸಗಸಿ ಎಣ್ಣೆ, ಅಕ್ರೋಟ ಮತ್ತು ನಾರಗಸೆಯ ಬೀಜದ ಎಣ್ಣೆಗಳನ್ನು ಮಾಧ್ಯಮವಾಗಿ ಬಳಸುತ್ತಾರೆ. ಬಣ್ಣವು ಆರಿ ಗಟ್ಟಿಯಾದಾಗ ಕ್ಯಾನ್‌ವಾಸಿನ ಮೇಲೆ ಕುಂಚವು ಸುಲಭವಾಗಿ ಒಡಾಡುವಂತೆ ಮಾಡಿಕೊಳ್ಳುವುದಕ್ಕಾಗಿ ಯಾವುದಾದರು ತೈಲ ಇಲ್ಲವೆ ಕರ್ಪುರ ತೈಲವನ್ನು ಗಟ್ಟಿಯಾದ ಬಣ್ಣದಲ್ಲಿ ಬೆರೆಸಿ ಬಣ್ಣವನ್ನು ತಿಳಿಗೊಳಿಸಲಾಗುತ್ತದೆ. ತೈಲವರ್ಣ ಚಿತ್ರಗಳು ಟೆಂಪೆರಾ ಚಿತ್ರಗಳಿಗಿಂತಲೂ ವಾಸ್ತವಕ್ಕೆ ಹೆಚ್ಚು ಹತ್ತಿರವಾಗಿ ಕಾಣಿಸುತ್ತವೆಯಲ್ಲದೆ ಈ ಮಾಧ್ಯಮದಲ್ಲಿ ತಿದ್ದುಪಡಿಗೆ ಸಾಕಷ್ಟು ಅವಕಾಶವು ಇರುತ್ತದೆ. ಈ ಮಾಧ್ಯಮದ ಬದಲಾವಣೆಯಲ್ಲಿ ವೆನೆಷಿಯನ್ ವರ್ಣಚಿತ್ರಕಾರರು ಅತಿ ಪ್ರಮುಖವಾದ ಪಾತ್ರವನ್ನಾಡಿದರು. ಮರದ ಹಲಗೆಯ ಮೇಲೆ ಟೆಂಪೆರಾ ವಿಧಾನದಿಂದ ಚಿತ್ರಿಸುವುದನ್ನು ವೆನೆಷಿಯನ್ನರು ಕ್ಯಾನ್‌ವಾಸ್ ಬಟ್ಟೆಗೆ ಬದಲಾಯಿಸಿ ಅಥವಾ ವರ್ಗಾವಣೆ ಮಾಡಿ ತೈಲ ಚಿತ್ರಗಳನ್ನು ಚಿತ್ರಿಸಲು ತೊಡಗಿದರು. ಟಿಷಿಯಾನ್‌ನು ವಿಶ್ವವಿಖ್ಯಾತ ವೆನೇಷಿಯನ್ ತೈಲವರ್ಣ ಚಿತ್ರಕಾರನೆಂದು ಖ್ಯಾತನಾಗಿದ್ದಾನೆ.[೩]

ಅಕ್ರಾಲಿಕ್ ಬಣ್ಣಗಳು

ತೈಲವರ್ಣ, ಜಲವರ್ಣ, ಟೆಂಪೆರಾ ಮತ್ತು ಫ್ರೇಸ್ಕೊ ಈ ವರ್ಣಗಳು ತುಂಬಾ ಹಳೆಯವು ಆದರೆ ಅಕ್ರಾಲಿಕ್ ವರ್ಣವು ಇತ್ತೀಚಿಗೆ ಬಂದಿದೆ ಮತ್ತು ಹೆಚ್ಚು ಕಲಾವಿದರ ಮೆಚ್ಚುಗೆಗೆ ಪಾತ್ರವಾಗಿದೆ. ಯಾಕೆಂದರೆ ಜಲವರ್ಣದ ತರಹ ಕಠಿಣವು ಇಲ್ಲ ಮತ್ತು ತೈಲವರ್ಣದ ತರಹ ಹಚ್ಚಿದ ಬಣ್ಣಗಳು ಒಣಗಲು ಸುಮಾರು ದಿನಗಳು ಬೇಕಾಗಿಲ್ಲ. ಅಕ್ರಾಲಿಕ್ ವರ್ಣದ ಇನ್ನೊಂದು ವಿಶೇಷತೆ ಎನೆಂದರೆ ಅಕ್ರಾಲಿಕ್ ವರ್ಣವನ್ನು ಜಲವರ್ಣದಂತೆಯೂ ಬಣ್ಣ ತುಂಬ ಬಹುದು. ಮತ್ತು ತೈಲವರ್ಣದಂತೆಯೂ ಸ್ಪರ್ಶ ನೀಡಬಹುದು. ಈ ಬಣ್ಣವನ್ನು ನೀರಿನಲ್ಲಿಯೇ ಮಿಶ್ರಣ ಮಾಡಬೇಕು. ಕಾಗದ, ಕ್ಯಾನ್‌ವಾಸ್, ಬಟ್ಟೆ, ಗಾಜು, ಕಟ್ಟಿಗೆ ಮುಂತಾದ ಘನ ವಸ್ತುಗಳ ಮೇಲೆ ಅಕ್ರಾಲಿಕ್ ಬಣ್ಣವನ್ನು ಬಳಸಬಹುದು.

ಫ್ಯಾಬ್‌ರಿಕ್ ಬಣ್ಣಗಳು

ಈ ವರ್ಣಗಳು ಚಿಕ್ಕ ಚಿಕ್ಕ ಗಾಜಿನ ಡಬ್ಬಿಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯವಿವೆ. ಹಾಳೆಯ ಮೇಲೆ ಮತ್ತೆ ಬಟ್ಟೆಯ ಮೇಲೆ ಫ್ಯಾಬ್ರಿಕ್ ಬಣ್ಣಗಳು ಬಳಸಬಹುದು. ಆದರೆ ಹೆಚ್ಚಾಗಿ ಈ ಬಣ್ಣಗಳು ಬಟ್ಟೆಯ ಮೇಲಿನ ಚಿತ್ರಗಳಿಗೆ ಬಣ್ಣ ತುಂಬಲು ಸೂಕ್ತವಾಗಿರುತ್ತದೆ.

ಪೋಸ್ಟರ್ ಮತ್ತು ಗ್ವಾಷ್‌ಬಣ್ಣಗಳು

ಈ ವಿಧಾನಗಳೂ ಜಲವರ್ಣ ವಿಧಾನದ ಶಾಖೆಗಳಾಗಿದ್ದು, ವರ್ಣಗಳನ್ನು ನೀರಿನಲ್ಲಿಯೇ ಬೆರೆಸಲಾಗುವುದಾದರೂ ವರ್ಣಗಳು ದಪ್ಪವಾಗಿದ್ದು ಅಪಾರದರ್ಶಕಗಳಾಗಿರುತ್ತವೆ. ಕಾಗದದ ಮೇಲೆ ಬಳಿದ ಬಣ್ಣವು ಒಣಗಿದ ನಂತರ ಗದುವು ಗುದುವಾಗಿರದೇ ಒಂದೇ ಸಮನಾಗಿ ಲೇಪಿಸಿದಂತಿರುತ್ತವೆ. ಆದ್ದರಿಂದ

೧೩. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೧೧೧

ಈ ವಿಧಾನವು ವಾಣಿಜ್ಯ ಕಲಾಕೃತಿಗಳಿಗೆ ಇಲ್ಲವೆ ವ್ಯವಹಾರಿಕ ಕಲಾಕೃತಿಗಳಲ್ಲಿ ಬಳಸಲಾಗುತ್ತದೆ. ಇಲ್ಲಿ ಬಣ್ಣಗಳು ಪ್ರಕಾಶಮಾನವಾಗಿಯೂ ಜನಸಾಮಾನ್ಯರ ಕಣ್ಣು ಕೋರೈಸುವಂತೆಯೂ, ರಂಜನೀಯವಾಗಿಯೂ ಇರಬೇಕಾದುದು ಅತ್ಯವಶಕವಾಗಿದೆ. ಸಾಮಾನ್ಯವಾಗಿ ಜಲವರ್ಣ ವಿಧಾನದಲ್ಲಿ ಬಣ್ಣಗಳನ್ನು ಪಾರದರ್ಶಕವಾಗಿ ಬಳಸಿ ವ್ಯವಹಾರಿಕ ಕಲಾಕೃತಿಗಳಿಗಿಂತ ಸೂಕ್ಷ್ಮವಾದ ವರ್ಣಸಾಂದ್ರತೆಗಳ ವೈವಿಧ್ಯ ಚಿತ್ರಣವು ಪ್ರಾಮುಖ್ಯವಾಗಿದೆ. ಹಳೆಯ ಪದ್ಧತಿಯ ಜಲವರ್ಣ ವಿಧಾನದಲ್ಲಿ ಪರಿಣಿತರೆನಿಸಿದ ಸರ್ ವಿಲಿಯಂ ನಿಕೊಲ್ಸನ್‌ರಂಥ ಕಲಾವಿದರೂ ಸಹ ಗ್ವಾಷ್ ಇಲ್ಲವೇ ಅಪಾರದರ್ಶಕ ವರ್ಣಗಳ ಬಳಕೆ ಹಾಗೂ ಪ್ರಚಾರ ಚಿತ್ರಕಲಾಕೃತಿಗಳ ರಚನೆಯಲ್ಲಿ ಅಂತರಾಷ್ಟ್ರೀಯ ಮನ್ನಣೆಗೆ ಪಾತ್ರರಾಗಿದ್ದರು. ಐಲೂಸ್ ಲಾತ್ರಕ್ ಮತ್ತೊಬ್ಬ ವಿಶ್ವವಿಖ್ಯಾತ ಪೋಸ್ಟರ್ ಚಿತ್ರಕಲಾವಿದನಲ್ಲದೇ ಭಾರತದಲ್ಲಿ ಪ್ರಪ್ರಥಮವಾಗಿ ಪೋಸ್ಟರ್ ವರ್ಣಗಳನ್ನು ಬಳಕೆಯಲ್ಲಿ ತಂದ ಕೀರ್ತಿಗೆ ಪಾತ್ರರಾಗಿದ್ದ. ಉತ್ತರ ಕರ್ನಾಟಕದ ಕನ್ನಡಿಗ ದಿ. ಡಾ॥. ಎಸ್. ಎಂ. ಪಂಡಿತರಂಥ ಕಲಾವಿದರ ಮೇಲೆ ಪ್ರಭಾವ ಬೀರಿದ ಕಲಾವಿದರಾಗಿದ್ದರು.[೪]

ಬಣ್ಣದ ಬಗೆಗಳು

ಹಸಿರು, ನೀಲಿ, ಕೆಂಪು, ಕೇಸರಿ, ಬೂದು ಹಾಗೂ ಶ್ಯಾಮ ಬಣ್ಣಗಳು ಮೂಲ ಬಣ್ಣಗಳೆಂದು ಸಾಮಾನ್ಯವಾದ ಒಂದು ತಿಳುವಳಿಕೆಯಿದೆ. ಈ ಎಲ್ಲ ಬಣ್ಣಗಳು ಕಾಮನ ಬಿಲ್ಲಿನ ಬಣ್ಣಗಳಾಗಿರುತ್ತವೆ. ಆದರೆ ಬಣ್ಣಗಳ ಉತ್ಪತ್ತಿ ಸಂದರ್ಭದಲ್ಲಿ ನೀಲಿ, ಹಳದಿ, ಹಾಗೂ ಕೆಂಪು ಬಣ್ಣಗಳು ಮಾತ್ರ ಮೂಲ ಬಣ್ಣಗಳೆಂದು ನಿರ್ಧರಿಸಲಾಗಿದೆ. ಚಿತ್ರಕಲೆಯಲ್ಲಿ ಈ ಮೂರು ಬಣ್ಣಗಳೇ ಮೂಲ ಬಣ್ಣಗಳು ಇವುಗಳ ಮಿಶ್ರಣದಿಂದ ನೂರಾರು ಸಾವಿರಾರು ಬಣ್ಣಗಳನ್ನು ಪಡೆಯಬಹುದಾಗಿದೆ.

ಬಣ್ಣಗಳ ವರ್ಗೀಕರಣ

೧. ಪ್ರಥಮ ವರ್ಗದ ಬಣ್ಣಗಳು (ಮೂಲ ವರ್ಗದ ಬಣ್ಣಗಳು)

೨. ದ್ವಿತೀಯ ವರ್ಗದ ಬಣ್ಣಗಳು

೩. ತೃತೀಯ ವರ್ಗದ ಬಣ್ಣಗಳು

ಪ್ರಥಮ ವರ್ಗದ ಬಣ್ಣಗಳು (ಮೂಲ ವರ್ಗದ ಬಣ್ಣಗಳು)

ಕೆಂಪು, ನೀಲಿ, ಹಳದಿ ಈ ಬಣ್ಣಗಳು ನೈಸರ್ಗಿಕವಾದವುಗಳಾಗಿದ್ದು. ಈ ಬಣ್ಣಗಳನ್ನು ಕೃತ್ರಿಮವಾಗಿ ತಯಾರಿಸಿಕೊಳ್ಳಲು ಸಾಧ್ಯವಾಗದು. ಈ ಕಾರಣಕ್ಕಾಗಿಯೇ ಇವುಗಳನ್ನು ಪ್ರಥಮ ಅಥವಾ ಮೂಲ ವರ್ಗದ ಬಣ್ಣಗಳೆಂದು ಕರೆಯಲಾಗಿದೆ.

ದ್ವಿತೀಯ ವರ್ಗದ ಬಣ್ಣಗಳು

ದ್ವಿತೀಯ ವರ್ಗದ ಬಣ್ಣಗಳು ಮೂಲ ಬಣ್ಣಗಳ ಮಿಶ್ರಣದಿಂದ ಹುಟ್ಟಿಕೊಳ್ಳುತ್ತವೆ. ಎರಡು ಮೂಲ ಬಣ್ಣಗಳ ಸಮ ಪ್ರಮಾಣದ ಮಿಶ್ರಣವೇ ದ್ವಿತೀಯ ವರ್ಗದ ಬಣ್ಣವಾಗುತ್ತದೆ.

ಉದಾಹರಣೆಗೆ : ೧. ಹಳದಿ ಹಾಗೂ ನೀಲಿ ಬಣ್ಣಗಳ ಸಮಪ್ರಮಾಣದ ಮಿಶ್ರಣ ಹಸಿರು.

೧೪. ವಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೧೧೩

೨. ಹಳದಿ ಹಾಗೂ ಕೆಂಪು ಬಣ್ಣಗಳ ಸಮಪ್ರಮಾಣದ ಮಿಶ್ರಣ ಕೇಸರಿ.

೩. ನೀಲಿ ಹಾಗೂ ಕೆಂಪು ಬಣ್ಣಗಳ ಸಮಪ್ರಮಾಣದ ಮಿಶ್ರಣ ನೇರಳೆ.

೪. ಹಸಿರು, ಕೇಸರಿ ಹಾಗೂ ನೇರಳೆ ಬಣ್ಣಗಳು ದ್ವಿತೀಯ ವರ್ಗದ ಬಣ್ಣಗಳು.

ತೃತೀಯ ವರ್ಗದ ಬಣ್ಣಗಳು

ತೃತೀಯ ವರ್ಗದ ಬಣ್ಣಗಳು ದ್ವಿತೀಯ ವರ್ಗದ ಬಣ್ಣಗಳ ಮಿಶ್ರಣದಿಂದ ಹುಟ್ಟಿಕೊಳ್ಳುತ್ತವೆ. ಎರಡು ದ್ವಿತೀಯ ವರ್ಗದ ಬಣ್ಣಗಳ ಸಮಪ್ರಮಾಣದ ಮಿಶ್ರಣವೇ ತೃತೀಯ ವರ್ಗದ ಬಣ್ಣಗಳಾಗುತ್ತವೆ.

ಉದಾಹರಣೆಗೆ :

೧. ಹಸಿರು ಹಾಗೂ ಕೇಸರಿ ಬಣ್ಣಗಳ ಸಮಪ್ರಮಾಣದ ಮಿಶ್ರಣ ಪಾಟೀಯ ಬಣ್ಣ ಇಲ್ಲವೆ ಸ್ಲೇಟ್ ಬಣ್ಣ.

೨. ಕೇಸರಿ ಹಾಗೂ ನೇರಳೆ ಬಣ್ಣಗಳ ಸಮಪ್ರಮಾಣದ ಮಿಶ್ರಣ ಕಂದುಗೆಂಪು ಇಲ್ಲವೆ ಬಫ್ ಬಣ್ಣ.

೩. ನೇರಳೆ ಹಾಗೂ ಹಸಿರು ಬಣ್ಣಗಳ ಸಮಪ್ರಮಾಣದ ಮಿಶ್ರಣ ಇಪ್ಪೆ ಎಲೆ ಬಣ್ಣ ಅಥವಾ ಓಲಿವ ಹಸಿರು ಬಣ್ಣ.

ಪಾಟೀಯ ಬಣ್ಣ ಇಲ್ಲವೆ ಸ್ಲೇಟ್ ಬಣ್ಣ. ಕಂದುಗೆಂಪು ಬಣ್ಣ. ಇಪ್ಪೆ ಎಲೆ ಬಣ್ಣ ಅಥವಾ ಓಲಿವ ಹಸಿರು ಬಣ್ಣಗಳು ತೃತೀಯ ವರ್ಗದ ಬಣ್ಣಗಳಾಗಿವೆ.

ಬಹುವರ್ಣಗಳು

ಹೀಗೆಯೇ ತೃತೀಯ ವರ್ಗದ ಸಮಪ್ರಮಾಣದ ಮಿಶ್ರಣದಿಂದ ಚತುರ್ಥ ವರ್ಗದ ಬಣ್ಣಗಳು ಹುಟ್ಟಿಕೊಳ್ಳುತ್ತವೆ. ಇವುಗಳನ್ನು ಬಣ್ಣಗಳೆಂದು ಕರೆಯಲಾಗುತ್ತದೆ. ಮಿಶ್ರ ಬಣ್ಣಗಳು ಅಸಂಖ್ಯಾತ ಸಂಖ್ಯೆಯಲ್ಲಿರುತ್ತವೆ. ಮುಂದೆ ಇದು ಇಂಥದೇ ಬಣ್ಣ ಎಂದು ನಿರ್ಧಿಷ್ಟ ಹೆಸರು ಹೇಳದಷ್ಟು ಉತ್ಪತ್ತಿಯಾಗುತ್ತ ಹೋಗುತ್ತವೆ. ಬಣ್ಣಗಳ ವಿಶೇಷ ಗುಣಧರ್ಮಗಳಿಂದಾಗಿ ಕಲಾವಿದನ ವೈಚಾರಿಕ ಸಂಪತ್ತು ಬೆಳೆಯುತ್ತ ಹೋಗುತ್ತದೆ. ಅಭಿವ್ಯಕ್ತಿ ಮಾರ್ಗಗಳು ವಿಸ್ತೃತಗೊಳ್ಳುತ ಸಾಗುತ್ತವೆ. ಪ್ರತಿಯೊಂದು ಬಣ್ಣವೂ ತನ್ನದೇ ಆದ ಗುಣ ಸ್ವಭಾವಗಳನ್ನು ಹೊಂದಿರುತ್ತದೆ. ಬಣ್ಣಗಳ ಗುಣಗಳನ್ನಾಧರಿಸಿ ಕಲಾವಿದ ಕಲಾಕೃತಿಯ ಮೂಲಕ ಭಾವನೆಗಳಿಗೆ ಜೀವ ಕೊಡುತ್ತಾನೆ. ತಾನು ಆರಿಸಿಕೊಂಡ ವಸ್ತುವಿನ ಯಥಾವತ್ ಚಿತ್ರವನ್ನು ಪೂರೈಸುತ್ತಾನೆ.

ಬಣ್ಣಗಳ ಗುಣಧರ್ಮಗಳು

ಕೆಂಪು– ಅಪಾಯ, ಭಯ, ಹಿಂಸೆಗಳನ್ನು ಸೂಚಿಸುತ್ತಿದ್ದರೂ ಪ್ರೇಮವನ್ನು ಪ್ರಕಟಿಸುವ ಬಣ್ಣವಾಗಿದೆ.

ಹಸಿರು– ಸಮೃದ್ಧಿ ಸೂಚಕ ವರ್ಣ.

ನೀಲಿ– ಶಾಂತತೆ, ಪರಿಶುದ್ಧವಾದ ಅನಂತತೆಗಳನ್ನು ಸುಚಿಸುವ ಬಣ್ಣ.

ಹಳದಿ– ಶ್ರೀಮಂತಿಕೆಯ ಬಣ್ಣ.

ಕೇಸರಿ– ತ್ಯಾಗ ಸಮರ್ಪಣ ಭಾವಗಳ ಸಂಕೇತಗಳ ಬಣ್ಣ.

ಕಪ್ಪು– ದುಃಖ ದಾರಿದ್ರ್ಯ ಮುಂತಾದವುಗಳ ದ್ಯೋತಕವಾಗಿದೆ.

ಬಿಳಿ– ಪರಿಶುದ್ಧತೆ.

ಹೀಗೆ ಪ್ರತಿಯೊಂದು ಬಣ್ಣವೂ ತನ್ನದೇ ಆದ ಗುಣವನ್ನು ಹೊಂದಿದ್ದು, ಬಣ್ಣಗಳ ಮಿಶ್ರಣವು ಬೇರೆ ಬೇರೆ ಗುಣಗಳ, ಭಾವನೆಗಳ ಸನ್ನಿವೇಶಗಳ ಪರಿಪೂರ್ಣ ಅಭಿವ್ಯಕ್ತಿಗೆ ಪೂರಕವಾಗಿದೆ.

ಬಣ್ಣಗಳಲ್ಲಿ ಭೇದಗಳು

ಪ್ರಖರ ಬಣ್ಣ (ವಾರ್ಮ್)ಗಳು ಹಾಗೂ ಸೌಮ್ಯ (ಕೂಲ್ಡ) ಬಣ್ಣಗಳು. ಬಣ್ಣಗಳಲ್ಲಿ ಕೆಲವು ಕಣ್ಣಿಗೆ ಚುಚ್ಚುವಂತೆ ಬಿಸಿಯಾಗಿ ಕಾಣುತ್ತವೆ. ಆದ್ದರಿಂದ ಅವುಗಳನ್ನು ಪ್ರಖರ ಬಣ್ಣ ಇಲ್ಲವೆ ವಾರ್ಮ್ ಬಣ್ಣಗಳೆಂದು ಕರೆಯುತ್ತಾರೆ. ಇನ್ನು ಕೆಲವು ಬಣ್ಣಗಳು ಕಣ್ಣಿಗೆ ತಂಪಾಗಿ ಗೋಚರಿಸಿ ಮತ್ತೆ ಮತ್ತೆ ನೋಡುವಂತೆ ಪ್ರೇರೆಪಿಸುತ್ತವೆ. ಇಂಥ ಬಣ್ಣಗಳಿಗೆ ಸೌಮ್ಯ ಬಣ್ಣ, ಇಲ್ಲವೆ ಕೂಲ್ಡ್ ಬಣ್ಣಗಳೆಂದು ಕರೆಯುತ್ತಾರೆ.

ಕೆಂಪು, ಕೇಸರಿ, ಹಳದಿ ಬಣ್ಣಗಳು ಕಣ್ಣಿಗೆ ಬಿಸಿಯಾಗಿ ಕಾಣುತ್ತವೆ. ಇಲ್ಲವೆ ಕಣ್ಣುಗಳನ್ನು ಚುಚ್ಚಿ ಕೊರೈಸುವ ಅನುಭವಗಳನ್ನು ನೀಡುತ್ತವೆ. ಆದ್ದರಿಂದ ಇವು ಪ್ರಖರ ಬಣ್ಣಗಳು.

ನೀಲಿ, ನೇರಳೆ, ಪಾಟಿ (ಸ್ಲೇಟ್)ಯ ಬಣ್ಣಗಳು ಕಣ್ಣುಗಳಿಗೆ ಚುಚ್ಚುವುದಿಲ್ಲ. ಸೌಮ್ಯವಾಗಿಯೂ ತಂಪಾಗಿಯೂ ಕಾಣಿಸುತ್ತವೆ. ಇವುಗಳನ್ನು ಸೌಮ್ಯ ಇಲ್ಲವೆ ತಂಪು ಬಣ್ಣಗಳೆಂದು ಗುತಿಸಲಾಗಿದೆ. ಹೀಗೆ ಸಾಮಾನ್ಯವಾದ "ಪ್ರಖರ ಬಣ್ಣಗಳು" ಹಾಗೂ "ಸೌಮ್ಯ ಇಲ್ಲವೆ ತಂಪು ಬಣ್ಣ"ಗಳೆಂಬ ಎರಡು ಪ್ರಭೇಧಗಳಿವೆ.

ಯಾವುದೇ ಒಂದು ಕಲಾಕೃತಿಯ ವಿಕ್ಷಣೆಯಲ್ಲಿ ತೋಡಗಿಸಿದಾಗ ಕಲಾವಿದನು ಈ ಚಿತ್ರದಲ್ಲಿ "ಪ್ರಖರ ಬಣ್ಣ ಮಾಧ್ಯಮವನ್ನು ಬಳಸಿದ್ದಾನೆಂದು ನೋಡುಗನು ತಿಳಿದುಕೊಳ್ಳಲು ಅನುಕೂಲವಾಗುತ್ತದೆಯಲ್ಲದೆ ಕಲಾವಿದನು ಆರಿಸಿಕೊಂಡ "ಚಿತ್ರವಸ್ತುವಿನ" ನಿರೂಪಣೆಯ ಸಾರ್ಥಕತೆ – ನಿರರ್ಥಕತೆಗಳನ್ನು ನಿರ್ಧರಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ ಒಬ್ಬ ಸಮರ್ಥ ಕಲಾವಿದ ಚಿತ್ರಿಸಿದ "ದರೋಡೆ" ಎಂಬ ಕಲಾಕೃತಿಯಲ್ಲಿ ಪ್ರಖರ ವರ್ಣಗಳ ಬದಲಾಗಿ ಕಣ್ಣಿಗೆ ಮುದನೀಡುವ ನೀಲಿ, ಹಸಿರು, ನೇರಳೆ ಮುಂತಾದ ತಂಪು ವರ್ಣಗಳ ಬಳಕಯೇ ಹೆಚ್ಚಾಗಿ ಸಮಗ್ರ ಕಲಾಕೃತಿಯ ನೋಟವು ಕಣ್ಣಿಗೆ ತಂಪಾಗಿ ಕಂಡು ಮನಸ್ಸಿಗೆ ಮುದ ನೀಡುವಂತಿದ್ದರೆ, ಚಿತ್ರಿಸಿದ ಕಲಾವಿದನು ಎಷ್ಟೇ ಸಮರ್ಥನಾಗಿದ್ದರೂ ಕಲಾಕೃತಿ ನಿರರ್ಥಕವೆನಿಸುತ್ತದೆ. ಚಿತ್ರವಸ್ತು ಭಯಾನಕವಾದ್ದರಿಂದ ಅದಕ್ಕೆ ಪೂರಕವಾದ ಬಣ್ಣಗಳ ಬಳಕೆಯಿಂದ ಮಾತ್ರ ಕೃತಿ ಸಾರ್ಥಕವಾಗುತ್ತದೆ. ತನ್ಮೂಲಕ ಇಚ್ಚಿತ ರಸಾನುಭೂತಿಯಾಗುತ್ತದೆ. ಮಾಧ್ಯಮವನ್ನು ದುಡಿಸಿಕೊಳ್ಳುವ ಜಾಣ್ಮೆ ಕಲಾವಿದನಿಗೆ ಅಗತ್ಯವೆನಿಸುತ್ತದೆ. ಕಲಾಕೃತಿಯಲ್ಲಿ ಬಳಕೆಯಾದ ಎಲ್ಲಾ ಬಣ್ಣಗಳಲ್ಲಿಯೂ ಕೆಂಪು ಬಣ್ಣವು ಸಾಮಾನ್ಯವಾಗಿದ್ದರೆ ಪ್ರಖರ ಬಣ್ಣಗಳಲ್ಲಿಯೂ ನೀಲಿ ಬಣ್ಣವು ಸಾಮಾನ್ಯವಾಗಿದ್ದರೆ ತಂಪು ಬಣ್ಣಗಳಲ್ಲಿಯೂ ಕಲಾಕೃತಿಯನ್ನು ರಚಿಸಲಾಗಿದೆ ಎಂದು ತಿಳಿಯಬಹುದು.

ಪಾರದರ್ಶಕ (ತೆಳು) ಬಣ್ಣಗಳು ಮತ್ತು ಅಪಾರದರ್ಶಕ (ದಟ್ಟ) ಬಣ್ಣಗಳು

ಬಣ್ಣಗಳು ಸಾಮಾನ್ಯವಾಗಿ ಎಲ್ಲವೂ ಪಾರದರ್ಶಕ ಬಣ್ಣಗಳಾಗಿವೆ. ಪಾರದರ್ಶಕ ಬಣ್ಣಗಳೆಂದರೆ ಗಾಜಿನಲ್ಲಿ ನೋಡಿದಾಗ ಹಿಂದಿರುವ ಭಾಗವೆಲ್ಲ ಕಂಡು ಬರುವಂತೆ ಯಾವುದಾದರೂ ಬಣ್ಣವನ್ನು ಕಾಗದದ ಮೇಲಾಗಲಿ ಇನ್ನಾವುದೇ ಫಲಕದ ಮೇಲಾಗಲಿ ಲೇಪಿಸಿದಾಗ ಕಾಗದ ಇಲ್ಲವೆ ಫಲಕದ ಮೇಲೆ ಈ ಮುಂಚಿತವಾಗಿಯೇ ಇದ್ದ ಕಲೆಗಳು ಲೇಪಿಸಿದ ಬಣ್ಣವನ್ನು ತೋರಿಕೊಂಡು ನಮ್ಮ ಕಣ್ಣಿಗೆ ಗೋಚರಿಸುತ್ತವೆ. ಇಂಥ ಬಣ್ಣಗಳನ್ನು ಪಾರದರ್ಶಕ ಬಣ್ಣಗಳೆಂದು ಕರೆಯುತ್ತಾರೆ. ಪಾರದರ್ಶಕ ಬಣ್ಣಗಳಲ್ಲಿ ಬಿಳಿಯ ಬಣ್ಣವನ್ನು ಬೆರೆಸಿ ಅಪಾರದರ್ಶಕ ಬಣ್ಣಗಳನ್ನು ತಯಾರಿಸಲಾಗುತ್ತದೆ. ಬಿಳಿ ಬಣ್ಣವು ಅಪಾರದರ್ಶಕ ಇಲ್ಲವೆ ದಟ್ಟ ಬಣ್ಣವಾಗಿರುತ್ತವೆ. ಅಪಾರದರ್ಶಕ ಬಣ್ಣಗಳ ಲೇಪನದಿಂದ ಕಾಗದ ಇಲ್ಲವೆ ಫಲಕಗಳ ಮೇಲೆ ಈ ಮೊದಲೇ ಇದ್ದ ಯಾವುದೇ ಕಲೆಗಳಾಗಲೀ ಗೆರೆಗಳಾಗಲಿ ಮೇಲೆದ್ದು ಕಾಣುವುದಿಲ್ಲ. ಬಣ್ಣದ ಪುಡಿಯಲ್ಲಿ ಅಂಟಿನ ನೀರು, ವಜ್ರ (ಮೀನಸರಿ) ಗ್ಲಿಸರಿನ್ ಮೊದಲದವುಗಳ ಮಿಶ್ರಣದಿಂದಲೂ ಅಪಾರದರ್ಶಕ ಇಲ್ಲವೆ ದಟ್ಟ ಬಣ್ಣಗಳು ತಯಾರಿಸಲಾಗುತ್ತದೆ. ಇಂಥ ಅಪಾರದರ್ಶಕ ಹಾಗೂ ಪಾರದರ್ಶಕ ಬಣ್ಣಗಳ ಬಳಕೆಯನ್ನು ಕರ್ನಾಟಕದ ಅನೇಕ ಪುರಾತನ ಹಸ್ತಪ್ರತಿಗಳಲ್ಲಿಯೂ, ಶ್ರೀರಂಗಪಟ್ಟಣ, ಶ್ರವಣಬೆಳಗೋಳ, ಶಿರಾ, ಮಠ ಮಂದಿರಗಳಲ್ಲಿಯೂ ಚಿತ್ರಿತವಾದ ಭಿತ್ತಿ (ಫ್ರೆಸ್ಕೊ) ಚಿತ್ರಗಳಲ್ಲಿಯೂ ಬಳಕೆ ಮಾಡಲಾಗಿದ್ದು ಬಹು ಬಣ್ಣ (ಪಾಲಿಕ್ರೋಮ್) ಕಲಾಕೃತಿಗಳಾಗಿರುವುದನ್ನು ಕಾಣಬಹುದು.

ಸಾದೃಶ್ಯ ಬಣ್ಣಗಳು

ಎರಡು ದ್ವಿತೀಯ ವರ್ಗದ ಬಣ್ಣಗಳು ಅವುಗಳ ಜನಕ ಬಣ್ಣವು ಸಾಮಾನ್ಯವಾದ ಮೂಲ ಬಣ್ಣದ ಜೊತೆಗೆ ಹೊಂದಿಕೊಳ್ಳುವುದರಿಂದ ಅಂಥ ಬಣ್ಣಗಳನ್ನು ಸಾದೃಶ್ಯ ಬಣ್ಣ (ಅನಾಲಾಗಸ್ ಬಣ್ಣಗಳು) ಎಂದು ಕರೆಯಲಾಗುತ್ತದೆ. ಆದರೆ ಈ ನೀಲಿ ಎರಡು ದ್ವಿತೀಯ ವರ್ಗದ ಹಸಿರು ಮತ್ತು ನೇರಳೆ ಬಣ್ಣಗಳಲ್ಲಿ ಸಾಮಾನ್ಯವಾಗಿರುತ್ತದೆ. ಅಂದರೆ ಅವೆರಡರಲ್ಲಿ ನೀಲಿ ಬಣ್ಣವಿರುತ್ತದೆ. ಹಸಿರು, ನೇರಳೆ ಹಾಗೂ ನೀಲಿ ಬಣ್ಣಗಳನ್ನು ಕಾಗದದ ಮೇಲೆ ಒಂದರ ಪಕ್ಕದಲ್ಲಿ ಒಂದನ್ನು ಲೇಪಿಸಿದಾಗ ಬಣ್ಣಗಳ ಸಾದೃಶ್ಯತೆಯನ್ನು ಕಾಣಬಹುದು. ಇಂಥ ಬಣ್ಣಗಳೇ ಸಾದೃಶ್ಯ ಬಣ್ಣಗಳು. ಅದರಂತೆ ಕೆಂಪು, ಕೇಸರಿ ಹಾಗೂ ನೇರಳೆ ಬಣ್ಣಗಳು ಸಾದೃಶ್ಯ ಬಣ್ಣಗಳು. ಕೇಸರಿ ಹಾಗೂ ನೇರಳೆ ಬಣ್ಣಗಳ ಜನಕ ಬಣ್ಣವು ಕೆಂಪು. ಅವೆರಡರಲ್ಲಿಯೂ ಕೆಂಪು ಬಣ್ಣವು ಸಾಮಾನ್ಯವಾಗಿದೆ.[೨೫]

ವಿರೋಧ ಬಣ್ಣಗಳು

ಮೂಲ ಬಣ್ಣಗಳಾದ ನೀಲಿ, ಹಳದಿ, ಹಾಗೂ ಕೆಂಪು ಬಣ್ಣಗಳು ಒಂದಕ್ಕೊಂದು ವಿರೋಧ ಅಥವಾ ಪ್ರತಿಕೂಲ ನೋಟವನ್ನು ಬಿಂಬಿಸುವ ಬಣ್ಣಗಳಾಗಿವೆ. ಅದರಂತೆ ಕೆಂಪು ಬಣ್ಣಕ್ಕೆ ಕಪ್ಪು ಬಣ್ಣವು ಪ್ರತಿಕೂಲವಾಗಿರುತ್ತದೆ. ಹಸಿರು ಬಣ್ಣಕ್ಕೆ ಕೆಂಪು ಬಣ್ಣವೂ, ಕಪ್ಪು ಬಣ್ಣಕ್ಕೆ ಹಳದಿ ಬಣ್ಣವೂ ಪ್ರತಿಕೂಲ ಇಲ್ಲವೇ ವಿರೋಧ ಬಣ್ಣಗಳು, ಕಪ್ಪು ಹಾಗೂ ಬಿಳಿ ಬಣ್ಣಗಳೂ ಸಹ ಪರಸ್ಪರ ವಿರೋಧಿ ಬಣ್ಣಗಳಾಗಿರುತ್ತವೆ.

---

೨೫. ಪಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೧೨೨

ಕೆಲವು ತಾಂತ್ರಿಕ ಪದಗಳು

ಛಾಯೆ (ಟೋನ್), ತಿಳಿಬಣ್ಣ(ಟಿಂಟ್), ದಟ್ಟಬಣ್ಣ(ಷೇಡ್ಸ್), ದಟ್ಟಛಾಯೆ(ಷೇಡೆಡ್ ಟಿಂಟ್), ಬಣ್ಣದ ಸಂಕರ(ಹ್ಯೂ), ಬಣ್ಣ ತರತಮ(ವ್ಯಾಲ್ಯು) ಮುಂತಾದ ಪದಗಳು ಬಣ್ಣದ ಯೋಜನೆಯಲ್ಲಿ ಬಳಕೆಯಲ್ಲಿರುತ್ತವೆ. ಛಾಯೆ ಅಥವಾ ಟೋನ್ ಬಣ್ಣಗಳ ಏರಿಳಿತವನ್ನು ತೋರಿಸುತ್ತದೆ. ಅಂದರೆ ಬಣ್ಣಗಳ ದಟ್ಟಛಾಯೆ, ತಿಳಿಛಾಯೆ ಮುಂತಾಗಿ ಏರಿಳಿತಗಳಾಗುತ್ತವೆ. **ಉದಾಹರಣೆ:** ನೀಲಿ, ತಿಳಿ ನೀಲಿ, ಹಸಿರು ಹಾಗೂ ಕೆಂಪು, ತಿಳಿಗೆಂಪು, ಕೇಸರಿ ಮುಂತಾದವುಗಳ ಬಣ್ಣಗಳಲ್ಲಿನ ಏರಿಳಿತಗಳನ್ನು ಬಿಂಬಿಸುತ್ತವೆ. ಛಾಯೆಗಳಲ್ಲಿ ಬಣ್ಣಗಳಿಗನುಸಾರವಾಗಿ ಪ್ರಖರ ಛಾಯೆ, ಸೌಮ್ಯ ಛಾಯೆ, ಕಾಂತಿಯುಕ್ತ ಹಾಗೂ ಶಾಂತಿಹೀನ ಛಾಯೆಗಳಿರುತ್ತವೆ. ಯಾವುದಾದರೊಂದು ಬಣ್ಣದಲ್ಲಿ ಬಳಿ ಬಣ್ಣವನ್ನು ಬೆರೆಸುವುದರಿಂದ ಉಂಟಾದ ಬಣ್ಣಕ್ಕೆ ತಿಳಿ ಬಣ್ಣ ಇಲ್ಲವೆ ಟಿಂಟ್ ಎನ್ನುತ್ತಾರೆ. ಕಪ್ಪು ಮಿಶ್ರಿತ ಬಣ್ಣಗಳನ್ನು ದಟ್ಟಬಣ್ಣ ಇಲ್ಲವೆ ಷೇಡ್ಸ್ ಎನ್ನುತ್ತಾರೆ. ಯಾವುದದರೊಂದು ಬಣ್ಣದಲ್ಲಿ ಕಪ್ಪು ಬಣ್ಣವನ್ನು ಬೆರೆಸುವುದರಿಂದ ಉಂಟಾಗುವ ಬಣ್ಣ ದಟ್ಟಛಾಯೆ ಇಲ್ಲವೆ ಷೇಡೆಡ್ ಟಿಂಟ್ ಎನಿಸುತ್ತದೆ. ಬೇರೆ ಬೇರೆ ರೀತಿಯ ಬಣ್ಣಗಳ ಮಿಶ್ರಣದಿಂದ ಮಧ್ಯಭಾಗವು ಬಣ್ಣದ ಸಂಕರವಾಗುತ್ತದೆ (ಹ್ಯೂ). ಯಾವುದಾದರೂ ಒಂದು ಇಲ್ಲವೆ ಹಲವು ಬಣ್ಣಗಳಲ್ಲಿ ಏರಿಳಿತಗಳನ್ನು ತೋರಿಸುವುದೇ ಬಣ್ಣ ತರತಮ. ಒಂದೇ ಬಣ್ಣದಲ್ಲಿ ಬಿಳಿ, ಕಪ್ಪು ಬಣ್ಣಗಳನ್ನು ಬರೆಸಿ ಬಣ್ಣ ತರತಮ ಇಲ್ಲವೆ ವ್ಯಾಲ್ಯುಅನ್ನು ತೋರಿಸುವುದು.

ಬಿಳಿ ಮತ್ತು ಕಪ್ಪು ಬಣ್ಣಗಳು

ಬಣ್ಣಗಳ ಬ್ರಹ್ಮಾಂಡದಲ್ಲಿ ಬಿಳಿ ಮತ್ತು ಕಪ್ಪು ಬಣ್ಣಗಳಾಗದೇ ಒಂದು ವಿಶಿಷ್ಟ ಸ್ಥಾನ. ಬಿಳಿ ಮತ್ತು ಕಪ್ಪು ಬಣ್ಣಗಳಿಗೆ ವಿಶೇಷವಾದ ಗುಣ ಸ್ವಭಾವಗಳಿದ್ದರೂ ಅವುಗಳನ್ನು ಬಣ್ಣಗಳೆಂದು ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ಅವು ಇನ್ನುಳಿದ ಎಲ್ಲ ಬಣ್ಣಗಳಲ್ಲಿ ನೆರಳು(ಷೇಡ್) ಬೆಳಕು(ಲೈಟ್)ಗಳನ್ನು ಚಿತ್ರಿಸುವ ಬಣ್ಣಗಳಾಗಿವೆ. ಆದ್ದರಿಂದಲೇ ಬಿಳಿ ಮತ್ತು ಕಪ್ಪು ಬಣ್ಣಗಳಿಗೆ ಅಗ್ರ ಮಾನ್ಯತೆ ಬಣ್ಣದಲ್ಲಿ ಬೆಳಕಿನ ವಿವಿಧ ಸ್ಥರಗಳನ್ನು ವಿಂಗಡಿಸುವಾಗ ಬಳಿ ಬಣ್ಣವನ್ನು ಬೇರೆ ಬೇರೆ ಪ್ರಮಾಣದಲ್ಲಿ ಬೆರೆಸಲಾಗುತ್ತದೆ. ಅದೇ ರೀತಿಯಲ್ಲಿ ಯಾವುದೇ ಒಂದು ಬಣ್ಣದಲ್ಲಿ ನೆರಳಿನ ವಿವಿಧ ಸ್ತರಗಳನ್ನು ವಿಂಗಡಿಸಲು ಆ ಬಣ್ಣದಲ್ಲಿ ಕಪ್ಪು ಬಣ್ಣವನ್ನು ಬೆರೆಸಲಾಗುತ್ತದೆ.

ಬಿಳಿ ಬಣ್ಣದಲ್ಲಿ ಚೈನೀಸ ಬಿಳಿ, ಟೈಟೇನಿಯಮ್ ಬಿಳಿ, ಫ್ಲೇಕ್ ಬಿಳಿ ಮುಂತಾದ ವೈವಿಧ್ಯತೆ ಇದ್ದಂತೆ, ಕಪ್ಪು ಬಣ್ಣದಲ್ಲಿಯೂ ಚೈನೀಜ ಕಪ್ಪು, ದೀಪದ ಕಪ್ಪು(ಲ್ಯಾಂಪ್) ಮೊದಲಾದ ವೈವಿಧ್ಯತೆಗಳು ಇರುತ್ತವೆ. ಉದಾಹರಣೆಗೆ ದಟ್ಟ ಹಸಿರು ಬಣ್ಣದಲ್ಲಿ ಬಿಳಿ ಬಣ್ಣವನ್ನು ಬೆರೆಸಿದಾಗ ದಟ್ಟ ಹಸಿರು ತಿಳಿ ಹಸಿರಾಗುವುದು. ತಿಳಿ ಹಸಿರಿನಲ್ಲಿ ಇನ್ನಷ್ಟು ಬಿಳಿ ಬಣ್ಣವನ್ನು ಬೆರೆಸಿದಾಗ ತಿಳಿ ಹಸಿರು ಇನ್ನಷ್ಟು ತಿಳಿಯಾಗುತ್ತದೆ. ಇದು ಹಸಿರು ಬಣ್ಣದಲ್ಲಿ ಉಂಟಾದ ಬೆಳಕು. ಅದರಂತೆ ಅದೇ ಹಸಿರು ಬಣ್ಣದಲ್ಲಿ ಕಪ್ಪು ಬಣ್ಣವನ್ನು ಬೆರೆಸಿದಾಗ ದಟ್ಟ ಹಸಿರು ಇನ್ನಷ್ಟು ದಟ್ಟವಾಗುತ್ತದೆ. ಈ ದಟ್ಟ ಹಸಿರಿನಲ್ಲಿ ಇನ್ನಷ್ಟು ಕಪ್ಪು ಬಣ್ಣವನ್ನು ಬೆರೆಸಿದಾಗ ಮತ್ತಷ್ಟು ದಟ್ಟಗಾಗುತ್ತದೆ. ಇದು ಹಸಿರು ಬಣ್ಣದಲ್ಲಿ ಉಂಟಾದ ನೆರಳು. ಹೀಗೆಯೇ ಯಾವುದಾದರು

ಒಂದು ಬಣ್ಣವನ್ನು ತಿಳಿಗೊಳಿಸಲು ಅಥವಾ ಆ ಬಣ್ಣದಲ್ಲಿ ಬೆಳಕನ್ನುಂಟು ಮಾಡಲು ಕಪ್ಪು ಬಣ್ಣವನ್ನು ಬೆರೆಸಲಾಗುತ್ತದೆ.

ಚಿತ್ರಕಲಾಕೃತಿಯನ್ನು ರೂಪಿಸುವಾಗ ಬಿಳಿ ಬಣ್ಣವನ್ನೂ ಕಪ್ಪು ಬಣ್ಣವನ್ನೂ ಬೆರೆಸುವ ವಿಧಾನಕ್ಕೆ ಮಿಶ್ರಮಾಧ್ಯಮ ಇಲ್ಲವೆ ಮಿಕ್ಸ್ ಮೀಡಿಯಮ್ ಎಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ ಈ ಪದ ತೀರ ಇತ್ತೀಚಿನದೆಂದು ತೋರುತ್ತದೆ. ಜಲವರ್ಣ ಮಾಧ್ಯಮದಲ್ಲಿಯೂ ತೈಲವರ್ಣದಲ್ಲಿಯೂ ಈ ವಿಧಾನದಿಂದಲೇ ಹಿಂದಿನ ಕಲಾವಿದರೂ ಸಮಕಾಲೀನ ಹಿರಿಯ ಕಲಾವಿದರೂ ತಮ್ಮ ಕಲಾಕೃತಿಗಳನ್ನು ರಚಿಸುವ ಪರಿಪಾಠವನ್ನು ಮೈಗೂಡಿಸಿಕೊಂಡಿದ್ದರು. ಈಗ ಮಿಶ್ರ ಮಾಧ್ಯಮ ಕೇವಲ ಜಲವರ್ಣಕ್ಕೆ ಮಾತ್ರ ಸೀಮಿತವಾಗಿದ್ದು ಹೊಸ ಹೊಸ ಆವಿಷ್ಕಾರಗಳ ಪರಿಣಾಮವಾಗಿ ಮಿಶ್ರಮಾಧ್ಯಮ ವಿಧಾನವು ಜಲವರ್ಣದಲ್ಲಿ ಕಣ್ಮರೆಯಾಗುತ್ತ ನಡೆದಿದೆ. ಬಿಳಿ ಬಣ್ಣದ ಮಿಶ್ರಣವಿಲ್ಲದೆ ಎಲ್ಲಾ ಬಣ್ಣಗಳಲ್ಲಿಯೂ ನೆರಳು ಬೆಳಕಿನ ಪರಿಣಾಮವನ್ನುಂಟು ಮಾಡಲು ಸಾಧ್ಯವಿದೆ. ಎಂಬುದನ್ನು ಕಮಡೋಳಿ, ಎಸ್.ಎನ್.ಸ್ವಾಮಿ, ಎಸ್‌ಪಿ,ಅಕ್ಕಿ, ಸುಬ್ರಹ್ಮಣ್ಯರಾಜು, ಹಳಿಜೋಳ ಮುಂತಾದ ಹಿರಿಯ ಸಮಕಾಲೀನ ಕಲಾವಿದರು ಹೊಸ ಪದ್ಧತಿಗೆ ಹೊಂದಿಕೊಂಡು ಪ್ರಬುದ್ಧ ಕಲಾಕೃತಿಗಳನ್ನು ರಚಿಸುವಲ್ಲಿ ಸಿದ್ಧಹಸ್ತರಾಗಿದ್ದಾರೆ. ಈ ವಿಧನ ನಿಸರ್ಗ ಚಿತ್ರಗಳು ಭೂಮಿಯ ದೃಶ್ಯಗಳು, ಭಾವ ಚಿತ್ರಗಳು, ಸ್ತಬ್ದ ಚಿತ್ರಗಳೇ ಮುಂತಾದ ಕಲಾಕೃತಿಗಳಿಗೆ ಸೀಮಿತವಾಗಿರುತ್ತದೆ. ಚಿತ್ರ ಸಂಯೋಜನೆ (ಕಾಂಪೋಜಿಷನ್)ನಲ್ಲಿ ಮಾತ್ರ ಮಿಶ್ರಮಾಧ್ಯಮ ಅನಿವಾರ್ಯವಾಗುತ್ತದೆಯಾದರೂ ಎನ್. ಹನುಮಯ್ಯ, ಎಂ.ಎ. ಚೆಟ್ಟಿ ಮುಂತಾದ ಹಿರಿಯ ಕಲಾವಿದರು ಮಿಶ್ರ ಮಾಧ್ಯಮದಲ್ಲಿ ಅತ್ಯುತಮ ನಿಸರ್ಗ ಚಿತ್ರಗಳನ್ನು ಚಿತ್ರಿಸಿದ್ದಾರೆ.

ಕಲೆ ಮನುಷ್ಯನ ಮನಸ್ಸನ್ನು ಮುದಗೊಳಿಸಿ ಅವನಲ್ಲಿ ವಿಶಿಷ್ಟವಾದ ಸಂಸ್ಕಾರವನ್ನು ಮೂಡಿಸುತ್ತದೆ. ಮನಸ್ಸನ್ನು ಎತ್ತರ ಎತ್ತಕೊಯ್ದು ಸಂಸ್ಕಾರಗೊಂಡ, ಹದವಾದ ವ್ಯಕ್ತತ್ವವನ್ನು ರೂಪಿಸಲು ನೆರವಾಗುತ್ತದೆ. ಭೌತಿಕ ಜೀವನದ ಹೋರಾಟದಲ್ಲಿ ತೊಳಲುವ ಮಾನವ ಕಲೆಯನ್ನು ಆರಾಧಿಸದ್ದರೆ ಅವನ ಪಾಲಿಗೆ ಮಾನಸಿಕ ಸೌಖ್ಯ ದೂರವಾಗುತ್ತದೆ. ಜೀವನದಲ್ಲಿ ನೆಮ್ಮದಿ ಗುಣಗಳನ್ನು ಜಾಗೃತಗೊಳಿಸಲು, ಸೌಂದರ್ಯ ಪ್ರಜ್ಞೆಯನ್ನು ಎಚ್ಚರಿಸಲು, ಒಳ್ಳೆಯದರ ಕಡೆ ಅವನು ಸದಾ ಆಲೋಚಿಸುವಂತೆ ಮಾಡಲು ಕಲೆ ಒಂದು ಚಿರಂಜೀವಿಯಂತೆ ಅವನ ಪಾಲಿಗೆ ಲಭ್ಯವಾಗುತ್ತದೆ. ಶರೀರದ ಬೆಳವಣಿಗೆಗೆ ಆಹಾರ ಎಷ್ಟು ಅಗತ್ಯವೋ ಮನಸ್ಸಿನ ಬೆಳವಣಿಗೆಗೆ, ಸಂಸ್ಕಾರಕ್ಕೆ ಕಲೆ ಅಷ್ಟೇ ಅವಶ್ಯಕ. ಮಾನವ ಸಂಸ್ಕೃತಿಯಲ್ಲಿ ಕಲೆಗೆ ಅಗ್ರಸ್ಥಾನವಿದೆ. ಆದಿ ಕಾಲದಿಂದಲೂ ಕಲೆ ಮನುಷ್ಯನ ಕೈ ಹಿಡಿದುಕೊಂಡೇ ಬಂದಿದೆ. ಪ್ರತಿಭೆಯ ಮೂಸೆಯಲ್ಲಿ ಅರಳಿ ನಿಲ್ಲುವ ಇದು ಅವನ ದಿನ ನಿತ್ಯದ ವ್ಯವಹಾರದಲ್ಲಿ ತೋರಿ ಬರುತ್ತದೆ. ತನ್ನನ್ನು ಅಲಂಕರಿಸಿಕೊಳ್ಳುವುದರಲ್ಲಿ, ತನ್ನ ಕೆಲಸ ಕಾರ್ಯಗಳನ್ನು ಹಗುರ ಮಾಡಿಕೊಳ್ಳುವುದರಲ್ಲಿ ಶ್ರಮವನ್ನು ಮರೆತು ಕೆಲಕಾಲ ಆನಂದದಲ್ಲಿ ಮೈಮರೆಯುವಲ್ಲಿ ಕಲೆ ಅವನಿಗೆ ಸಹಾಯಕ. ಅದು ಹಾಡಿನ ರೂಪದಲ್ಲಿರಬಹುದು, ಚಿತ್ರದ ರೂಪದಲ್ಲಿರಬಹುದು, ಶಿಲ್ಪದಲ್ಲಿರಬಹುದು, ಕುಣಿತದ ರೂಪದಲ್ಲಿರಬಹುದು. ಬೆಳವಣಿಗೆಯನ್ನು ಪಡೆದುಕೊಂಡಂತೆ ರೂಪಗೊಂಡು ಚಿತ್ರ, ಶಿಲ್ಪ, ಸಾಹಿತ್ಯ, ಸಂಗೀತ, ನೃತ್ಯ, ನಾಟಕ ಮೊದಲಾದ ಲಲಿತಕಲಾ ಪ್ರಕಾರಗಳಲ್ಲಿ ಪ್ರೌಢಕಲೆಯಾಗಿ

ಮಾರ್ಪಡಬಹುದು. ಆರಂಭದಲ್ಲಿ ಮನುಷ್ಯ ಬದುಕಿನ ಎಲ್ಲ ಸ್ಥರಗಳಲ್ಲಿಯೂ ಸರಳ ರೂಪದಲ್ಲಿ ಕಲೆಯನ್ನು ತನಗೆ ಅರಿವಿಲ್ಲದಂತೆಯೇ ಸಮಾವೇಶಗೊಳಿಸಿಕೊಂಡೇ ಬಂದ.

ನಿಸರ್ಗ ಚಿತ್ರಕಲೆಯ ವಸ್ತುವೈವಿಧ್ಯತೆ

ವಿವಿಧ ವಿನ್ಯಾಸಗಳಲ್ಲಿ ಮನೆಗಳನ್ನು ಗುಡಿಗಳನ್ನು ಕಟ್ಟಿಕೊಂಡ. ಮನೆಯ ಕಂಬಗಳಲ್ಲಿ ಕಲೆಯನ್ನು ಬಿತ್ತಿದ. ಹಾಕುವ ಬಟ್ಟೆಗಳಲ್ಲಿ ಕಲೆಯನ್ನು ಒತ್ತಿದ. ಅವನ ಹಾಡು, ಕತೆ, ಗಾದೆ, ಒಗಟು ಎಲ್ಲವೂ ಕಲೆಯಾಯಿತು. ಅವನು ನಲಿದು ಇತರರನ್ನು ನಲಿಸಿದ. ಮೊದಲು ಸರಳವಾದ ಕಲೆಗಳು ಕಾಲ ಬೆಳೆದಂತೆ, ಮನುಷ್ಯನ ಬುದ್ಧಿ ವಿಕಾಸದಂತೆ ಸಂಕೀರ್ಣ ಕಲೆಗಳಾದವು. ಜನಪದ ಕಲೆಗಳಂತೆಯೇ ಪ್ರೌಢಕಲೆಗಳು ಹುಟ್ಟಿಕೊಂಡವು. ಅವುಗಳಿಗೆ ಶಾಸ್ತ್ರೀಯತೆಯ ಔಕಟ್ಟು ಬಂದು ಉನ್ನತ ಕಲೆಗಳೆನಿಸಿದವು.

ಶಾಸ್ತ್ರೀಯ ಸಂಗೀತ, ಶಾಸ್ತ್ರೀಯ ನೃತ್ಯ, ಪ್ರೌಢ ಚಿತ್ರಕಲೆ, ಪ್ರೌಢ ಶಿಲ್ಪಕಲೆ, ಪ್ರೌಢ ಸಾಹಿತ್ಯ ಇದಕ್ಕೆಲ್ಲ ತಾಯಿ ಬೇರು ಜನಪದ ಕಲೆಯಲ್ಲಿಯೇ ಇದೆ ಎಂಬುದನ್ನು ಮರೆಯುವಂತಿಲ್ಲ. ಅನಂತರ ಕಾಲದಿಂದ ನಡೆದುಬಂದ ಜನಪದ ಕಲೆಯ ತೆಕ್ಕೆಯಿಂದಲೇ ಉನ್ನತ ಕಲೆಗಳು ಸಿಡಿದು ಸ್ವತಂತ್ರವಾಗಿ ಬೆಳೆದುಕೊಂಡಿವೆ. ಅವು ನಗರಗಳಂತೆ, ಪಟ್ಟಣಗಳಂತೆ, ಅಲ್ಲಿನ ಉದ್ಯಾನವನಗಳಂತೆ ಶೋಭಿಸಿದರೆ ಜನಪದ ಕಲೆಗಳು ಗಿರಿವನ ಶೋಭಿತೆಯಾದ ನಿಸರ್ಗದಂತೆ ಅನಂತ ವೈವಿಧ್ಯಗಳಲ್ಲಿ ಕಂಡುಬರುತ್ತವೆ. ಪ್ರೌಢ ಕಲೆಗಳು ಒಂದು ಕಡೆ ಬೆಳೆದು ಹೋದಂತೆ, ಜನಪದ ಕಲೆಗಳು ಜನಪದ ಸಂಸ್ಕೃತಿಯಲ್ಲಿ ನಿಚ್ಚಳವಾಗಿ ಉಳಿದು ಬಂದಿವೆ.

ಮೊದಲಿನಿಂದಲು ನಿಸರ್ಗ ಚಿತ್ರಕಲೆ ಇದ್ದೇ ಇದೆ, ಆದರೆ ಪ್ರತ್ಯಕವಾಗಿ ಇರಲಿಲ್ಲ; ಸಂಯೋಜನೆಯ ಚಿತ್ರಗಳಲ್ಲಿ ನಾವು ನಿಸರ್ಗದ ವಿವಿಧ ದೃಶ್ಯಗಳನ್ನು ಕಾಣಬಹುದು ಅಥವಾ ಭಿತ್ತಿ ಚಿತ್ರದಲ್ಲಿ ನಿಸರ್ಗದ ಚಿತ್ರಗಳನ್ನು ಕಾಣಬಹುದು ಅಥವಾ ಚಿಕ್ಕ ಪ್ರತಿಯ ಚಿತ್ರ ಅಂದರೆ ಚಿಕಣಿ ಚಿತ್ರಗಳಲ್ಲಿ ನಿಸರ್ಗದ ಚಿತ್ರಗಳು ಕಾಣಬಹುದು ಅಥವಾ ಹಸ್ತಪ್ರತಿ, ತಾಳೆಗರಿಗಳ ಮೇಲೆ ಸಾಂಧಾರ್ಭಿಕ ಚಿತ್ರಗಳಲ್ಲಿ ನಿಸರ್ಗ ಚಿತ್ರಗಳನ್ನು ಕಾಣಬಹುದಾಗಿದೆ.

ಬುದ್ಧನ ಜೀವನದ ಕುರಿತು ರಚಿಸಲಾದ ಚಿತ್ರಗಳಲ್ಲಿ ನಿಸರ್ಗವನ್ನು ಹಿನ್ನಲೆಯಾಗಿ ಬಳಸಿಕೊಂಡಿದ್ದು ಅಜಂತಾದ ಗುಹೆಗಳಲ್ಲಿ ಕಂಡು ಬರುತ್ತವೆ. ರಜಪೂತ, ರಾಜಸ್ಥಾನಿ ಚಿತ್ರಗಳಲ್ಲಿ ಸಾಕಷ್ಟು ಚಿತ್ರಗಳಲ್ಲಿ ನಿಸರ್ಗವನ್ನು ಹಿನ್ನಲೆ-ಮುನ್ನಲೇಯಾಗಿ ಬಳಸಿಕೊಂಡಿದ್ದು ಕಂಡುಬರುತ್ತದೆ. ಉದಾಹರಣೆ: ಕ್ರಿ.ಶ ೧೭೩೦ ಬಾಸೋಹ್ಲಿ. ಗೋಪಿಯರೊಡನೆ ಕೃಷ್ಣ, ಗೀತಗೋವಿಂದ ಮಾಲಿಕೆಯ ಒಂದು ಚಿತ್ರದಲ್ಲಿ ಪ್ರಕೃತಿಯಲ್ಲಿ ಕೃಷ್ಣ ಗೋಪಿಯರೊಡನೆ ಇರುವ ಚಿತ್ರದ ಹಿನ್ನಲೆಯಲ್ಲಿ ಬಿಳಿ ವರ್ಣದ ಬೆಟ್ಟ, ಅನೇಕ ಗಿಡ-ಮರಗಳನ್ನು ವಿವಿಧ ಆಕೃತಿ ಮತ್ತು ಬಣ್ಣಗಳಲ್ಲಿ ಕಾಣಬಹುದು. ೧೭೫೦ ಕಿಷನ್‌ಘಢ್ ಮರಗಳ ತೋಪಿನಲ್ಲಿ ರಾಧಾ ಮತ್ತು ಕೃಷ್ಮನ ಚಿತ್ರದಲ್ಲಿಯೂ ನಿಸರ್ಗವನ್ನು ಹಿನ್ನಲೆ-ಮುನ್ನಲೆಯಾಗಿ ಬಳಸಿಕೊಂಡಿರುವುದು ಕಂಡುಬರುತ್ತದೆ. ಇಲ್ಲಿ ರಾಧಾ ಮತ್ತು ಕೃಷ್ಣ ಇವರು ಹಸಿರು ಹಾಸಿಗೆ ವನದಲ್ಲಿ ಕಳಿತಿದ್ದಾರೆ, ಸುತ್ತ-ಮುತ್ತಲೆಲ್ಲ ಗಿಡ-ಮರಗಳು ಆವರಿಸಿವೆ, ಮುಂದೆ ಹಳ್ಳದಲ್ಲಿ ದೋಣಿಯ ಮುಖಾಂತರ ಜನರು ಪ್ರಯಾಣಿಸುವುದನ್ನು

ಕಾಣಬಹುದು. ಗಿಡ-ಮರಗಳ ಹಿಂದೆ ಮಾತನಾಡುತ್ತಿರುವ ಇಬ್ಬರು ಮಹಿಳೆಯರ ಹಿಂದೆ ದೊಡ್ಡದಾದ ಅರಮನೆಯ ಕಟ್ಟಡ ಮತ್ತು ನೀಲಿ ಬಣ್ಣದಲ್ಲಿ ಆಕಾಶ ಕಾಣಿಸುತ್ತದೆ. ಕ್ರಿಶ ಸುಮಾರು ೧೭೮೫-೯೦ ಕಾಂಗಾ. ರಾಗಿಣಿ ಭೈರವಿ ಚಿತ್ರದಲ್ಲಿ ಹಿಂದೆ ವಿಶಾಲವಾದ ಆಕಾಶ ಕಾಣಿಸುತ್ತದೆ. ದೂರದಲ್ಲಿ ಅರಮನೆಯ ದೃಶ್ಯವು ಗೋಚರವಾಗುತ್ತದೆ. ಅರಮನೆಗೆ ಹೋಗಲು ದಾರಿಕಂಡು ಬರುತ್ತದೆ. ಚಿತ್ರದ ಮುನ್ನಲೆಯಲ್ಲಿ ದೊಡ್ಡದಾದ ಒಂದು ಮರವಿದೆ, ಮರದ ಕೆಳಗೆ ಶಿವಲಿಂಗವಿದೆ, ಈ ಶಿಲಿಂಗಕ್ಕೆ ರಾಣಿಯು ಕೈ ಮುಗಿದು ಪೂಜೆ ಸಲ್ಲಿಸುತ್ತಿರುವ ಚಿತ್ರವಿದೆ. ರಾಣಿಯ ಹಿಂದೆ ಸೇವಕೀಯು ಪೂಜಾ ಸಾಮಗ್ರಿಗಳು ಹಿಡಿದಿರುವುದನ್ನು ಕಂಡುಬರುತ್ತದೆ. ಕ್ರಿ.ಶ. ಸುಮಾರು ೧೮೦೦-೨೫, ಜೋಧಪೂರ, ಉಯ್ಯಾಲೆಯಾಡುತ್ತಿರುವ ಮಹಿಳೆಯರ ಚಿತ್ರವಿದೆ. ಇದರಲ್ಲಿ ಆಕಾಶ, ವಿಶಾಲವಾದ ನೆಲ ಕಂಡುಬರುತ್ತದೆ. ಚಿತ್ರದ ಮುನ್ನಲೆಯಲ್ಲಿ ದೊಡ್ಡದಾದ ಮರವಿದೆ, ಆ ಮರಕ್ಕೆ ಉಯ್ಯಾಲೆಯನ್ನು ಕಟ್ಟಿ ಆಡುತ್ತಿರುವ ಮಹಿಳೆಯರಿದ್ದಾರೆ. ಒರ್ವ ಮಹಿಳೆ ಮರಕ್ಕೆ ತೆಕ್ಕೆಗೆ ತೆಗೆದುಕೊಂಡಿರುವ ಸ್ಯಾಶ್ಯವಿದೆ, ಇನ್ನೊರ್ವ ಮಹಿಳೆ ಹಸಿರು ಹುಲ್ಲುಗಾವಲಿನ ಮೇಲೆ ಕುಳಿತಿರುವ ಚಿತ್ರವಿದೆ.

ಜಹಾಂಗೀರನ ಕಾಲದಲ್ಲಿ (೧೬೦೫-೧೬೨೭) ಭಾವ ಚಿತ್ರಕಲೆ ಮತ್ತು ದರಬಾರಿನ ದೃಶ್ಯಗಳ ಚಿತ್ರಕಲೆಯು ಕ್ರಾಂತಿಕಾರಕವಾದ ಬೆಳವಣಿಗೆಯನ್ನು ಹೊಂದಿತು. ಅಕ್ಬರನ ಕಾಲದಲ್ಲಿನ ಕಲಾವಿದರ ಸಂಖ್ಯೆಯನ್ನು ಜಹಾಂಗೀರನು ಕಡಿಮೆಗೊಳಿಸಿ ಶ್ರೇಷ್ಠರೆನಿಸಿದ ಕೆಲವೇ ಕೆಲವು ಕಲಾವಿದರನ್ನು ಉಳಿಸಿಕೊಂಡನು. ನಕಲು ಚಿತ್ರಗಳ ಬದಲಗಿ ಸ್ವತಂತ್ರರವಾದ ಚಿತ್ರಗಳ ರಚನೆಗೆ ಹೆಚ್ಚು ಪ್ರೋತ್ಸಾಹವನ್ನು ನೀಡಿದನು. ಹೆಚ್ಚಿನ ಸಂಖ್ಯೆಯ ಸಭಾಸದಸ್ಯರುಳ್ಳ ದರಬಾರು, ಒಂದೇ ವರ್ಗದ ಹಿನ್ನಲೆಯುಳ್ಳ ಏಕಾಂಗಿ ಇಲ್ಲವೇ ಗುಂಪಿನವಲ್ಲಿರುವ ಸಭಾಸದರು, ದರಬಾರು ಇಲ್ಲವೇ ಶಿಖರಗಳಲ್ಲಿ ಜಹಾಂಗೀರನೊಂದಿಗೆ ಪಾಲುಗೊಂಡ ನೆಚ್ಚಿನ ಚಿತ್ರಕಲಾವಿದರು, ಜಹಾಂಗೀರನ ಭಾವಚಿತ್ರ ಇಲ್ಲವೇ ಅವನ ಪ್ರೀತಿಯ ಪಕ್ಷಿಗಳು, ಪ್ರಾಣಿಗಳು, ಹೂಗಳು ಮುಂತಾದ ಚಿತ್ರಗಳನ್ನು ಕಾಣಬಹುದು. "ಯುಗದ ಕೌತುಕ"ನೆಂದೇ ಹೆಸರುಗಳಿಸಿದ ಮನಸೂರ ಎಂಬ ಕಲಾವಿದನು ಪಕ್ಷಿ ಮತ್ತು ಪ್ರಾಣಿಗಳು ಮುಂತಾದ ನೈಸರ್ಗಿಕ ವಸ್ತುಗಳನ್ನು ಚಿತ್ರಸುವುದರಲ್ಲಿ ಅದ್ವಿತಿಯನೆನಿಸಿದ್ದನು.

ಮೊಘಲರ ಕಾಲದಲ್ಲಿಯೂ ಅನೇಕ ಸಾಂಧಾರ್ಭಿಕವಾಗಿ ಬಳಸಿಕೊಂಡಿರುವ ನಿಸರ್ಗ ಚಿತ್ರಗಳನ್ನು ಕಾಣಬಹುದು. ರಾಜ-ರಾಣಿಯರ ಭಾವಚಿತ್ರಗಳಲ್ಲಿ ಅಥವಾ ಶ್ರೀಮಂಥ ವರ್ಗದವರ ಭಾವಚಿತ್ರದ ಹಿನ್ನಲೆಯಾಗಿ ನಿಸರ್ಗವನ್ನು ಬಳಸಿಕೊಂಡಿರುವುದನ್ನು ಕಾಣಬಹುದು.

ವಿಜಯನಗರದ ಪತನದ ನಂತರ ಪ್ರಬಲರಾದ ಮೈಸೂರು ಅರಸರ ವಿಜಯನಗರ ಕಲಾ ಶೈಲಿಯನ್ನು, ಪರಂಪರೆಯನ್ನು ಮೈಸೂರಿನದೇ ಆದ ಚೌಕಟ್ಟಿನಲ್ಲಿ ಬೆಳೆದುಕೊಂಡು ಬಂದರಲ್ಲದೇ ಕರ್ನಾಟಕದ ಚಿತ್ರಕಲಾ ಪರಂಪರೆಗೆ ಪುನರ್ಜನ್ಮ ನೀಡಿ ಪುಣ್ಯಭಾಗಿಗಳೂ ಆದರು. ಮೈಸೂರು ಅರಸರ ಕಾಲದಲ್ಲಿ ಅನೇಕ ದೇವಾಲಯಗಳು, ಕಟ್ಟಡಗಳು ನಿರ್ಮಿತವಾದವಷ್ಟೇ ಅಲ್ಲ ಭಿತ್ತಿ ಚಿತ್ರಗಳಿಂದ ಅಲಂಕರಿಸಲ್ಪಟ್ಟವು. ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ ಉನ್ನತ ಕಲಾದೃಷ್ಟಿಯನ್ನು ವ್ಯಕ್ತ ಪಡಿಸುತ್ತವೆ. ಮೈಸೂರಿನ ವೆಂಕಟ ರಮಣಸ್ವಾಮಿ ದೇವಾಲಯ, ಮುಡುಕುತೊರೆಯ ಮಲ್ಲಿಕಾರ್ಜುನ ದೇವಾಲಯಗಳಲ್ಲಿ ಚಿತ್ರತವಾದ ಶೈವ, ವೈಷ್ಣವ ಧರ್ಮಗಳಿಗೆ

ಸಂಬಂಧಿಸಿದ ಭಿತ್ತಿ ಚಿತ್ರಗಳು ಮುಮ್ಮಡಿಯವರ ಸರ್ವಧರ್ಮ ಸಮನ್ವಯತೆಯ ಮನೋವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ. ಒಟ್ಟು ೧೮೮೬ ವರ್ಣರಂಜಿತ ರೇಖಾಚಿತ್ರಗಳನ್ನೊಳಗೊಂಡು ಈ ಶ್ರೀ ತತ್ವನಿಧಿ ಮೈಸೂರ ಶೈಲಿಯ ಬೃಹತ್ ಭಂಡಾರವೆಂದೇ ಹೇಳಬಹುದು. ಇದರಲ್ಲಿ ಸಾಂಧಾರ್ಭಿಕವಾಗಿ ವಿಷಯದ ಹಿನ್ನಲೆಯಲ್ಲಿ ನಿಸರ್ಗವನ್ನು ಬಳಸಿಕೊಳ್ಳಲಾಗಿದೆ.[೧೬]

ಭಾರತದಲ್ಲಿ ರವಿವರ್ಮನ ಸಂಯೋಜನೆಯ ಚಿತ್ರಗಳಲ್ಲಿ ನಿಸರ್ಗ ಚಿತ್ರಣವು ಹಿನ್ನಲೆಯಾಗಿ ಬಳಸಿಕೊಂಡಿದ್ದು ಕಂಡುಬರುತ್ತದೆ. ಪಾಶ್ಚಾತ್ಯ ದೇಶದ ರೆಂಬ್ರಾಂಡ್, ಪೀಟರ್ ಪೌಲ ರೂಬೆನ್ಸ್‌ನ ಸಂಯೋಜನೆಯ ಚಿತ್ರಗಳಲ್ಲಿ ನಿಸರ್ಗ ಚಿತ್ರಣವನ್ನು ಹಿನ್ನಲೆಯಾಗಿ ಬಳಸಿಕೊಂಡಿರುವುದನ್ನು ಕಾಣಬಹುದು.

ಡಾ. ಎಸ್.ಎಂ. ಪಂಡಿತರ ಸಂಯೋಜನೆಯ ಚಿತ್ರದಲ್ಲೂ ಕೆ.ಕೆ. ಹೆಬ್ಬಾರ, ಕೆ. ವೆಂಕಟಪ್ಪ, ಹೀರಾಲಾಲ್ ಮಲ್ಕಾರಿಯವರ ಸಂಯೋಜನೆಯ ಚಿತ್ರಗಳಲ್ಲಿಯೂ ಸಂಧರ್ಭಕ್ಕನುಸಾರವಾಗಿ ನಿಸರ್ಗ ಚಿತ್ರಕಲೆಯನ್ನು ಚಿತ್ರಿಸಿದುದ್ದನ್ನು ಕಂಡುಬರುತ್ತದೆ. ಭಾರತದಲ್ಲಾಗಲಿ ಅಥವಾ ಪಾಶ್ಚಿಮಾತ್ಯ ದೇಶಗಳಲ್ಲಾಗಲಿ ೧೯ನೆಯ ಶತಮಾನದ ನಂತರ ನಿಸರ್ಗ ಚಿತ್ರಕಲೆಗೆ ಒಂದು ವ್ಯವಸ್ತಿತವಾದ ರೂಪ ದೊರಕಿತು. ಆದರೆ ಪಾಶ್ಚಾತ್ಯರಲ್ಲಿ ೧೯ನೇ ಶತಮಾನಕ್ಕಿಂತ ಮುಂಚೆಯೇ ಟರ್ನರ್, ವ್ಯಾನ್‌ಘಾಗ್, ಎಡ್ವರ್ಡ ಮೂಂಕರ ನಿಸರ್ಗ ಚಿತ್ರಗಳನ್ನು ಮಾಡಿರುವುದನ್ನು ಕಂಡುಬರುತ್ತವೆ.

೧೯ನೇ ಶತಮಾನದ ನಂತರ ಅನೇಕ ಹೊಸ ಕಲಾವಿದರು ಮತ್ತು ಹಳೆ ಕಲಾವಿದರುಗಳು ಸೇರಿ ತಮ್ಮದೇಯಾದ ಪಂಥಗಳನ್ನು ಮಾಡಿಕೊಂಡು, ತಮ್ಮದೆಯಾದ ನೀತಿ-ನಿಯಮಗಳನ್ನು ಹಾಕಿಕೊಂಡು ಚಿತ್ರ ರಚನೆಯಲ್ಲಿ ತೊಡಗಿದರು; ನಿಸರ್ಗ ಚಿತ್ರ, ಸಂಯೋಜನೆ ಚಿತ್ರ ಮತ್ತು ಭಾವಚಿತ್ರಗಳೇ ಬೇರೆ ಎಂದು ತೊರಿಸಿಕೊಟ್ಟರು. ನಿಸರ್ಗ ಚಿತ್ರಕಲೆಯ ವಸ್ತು ವಿಷಯವೆಂದರೆ ಮನೆಯ ಹೊರಗೆ ಎಂದರೆ ವಿಶಾಲ ಪರಿಸರದಲ್ಲಿರುವ ಅನೇಕ ವಸ್ತುಗಳು ಕಲಾವಿದನಿಗೆ ವಿಷಯುಗಳಾಗಿರುತ್ತವೆ. ಉದಾಹರಣೆ: ಸಮುದ್ರಗಳಾಗಿರಬಹುದು, ಸಮುದ್ರದ ಅಲೆಗಳಾಗಿರಬಹುದು, ಗುಡ್ಡ-ಬೆಟ್ಟಗಳಾಗಿರಬಹುದು, ಪ್ರಾಣಿ-ಪಕ್ಷಿಗಳಾಗಿರಬಹುದು, ಹಳ್ಳಿ ಜನ-ಜೀವನವಾಗಿರಬಹುದು, ಕಾಡು-ಮೇಡುಗಳಾಗಿರಬಹುದು, ಗುಡಿಸಲುಗಳಾಗಿರಬಹುದು, ನಗರದ ಕಟ್ಟಡಗಳಾಗಿರಬಹುದು, ನಗರ ಕಟ್ಟಡ ಬೀದಿಗಳಾಗಿರಬಹುದು, ಹಳೆಯ ಕಟ್ಟಡಗಳಾಗಿರಬಹುದು, ಹಳೆಯ ಸ್ಮಾರಕಗಳಾಗಿರಬಹುದು ಮುಂತಾದವುಗಳು ಹೀಗೆ ಅನೇಕ ವಸ್ತುಗಳು ಕಲಾವಿದನಿಗೆ ವಿಷಯಗಳಾಗಿ ಚಿತ್ರ ರಚನೆಗೆ ಸ್ಪೂರ್ತಿಯಾಗಿ ದೊರಕುತ್ತವೆ.

ನಿಸರ್ಗ ಚಿತ್ರಗಳಿಗೆ ಅನೇಕ ಮಾಧ್ಯಮಗಳುಂಟು. ನಿಸರ್ಗ ಚಿತ್ರಕಲೆಗೆಂದೆ ಜಲವರ್ಣಗಳು ತಯಾರಿಲಾಗುತ್ತದೆ. ಜೊತೆಗೆ ತೈಲವರ್ಣಗಳು, ಅಕ್ರಾಲಿಕ್ ವರ್ಣಗಳು, ಫ್ಯಾಬ್ರಿಕ್ ಬಣ್ಣಗಳು, ಟ್ಯೂಬಿನಲ್ಲಿ ಅಥವಾ ಚಿಕ್ಕ ಬಾಟಲಿಗಳಲ್ಲಿ ಲಭ್ಯವಿವೆ. ಸ್ಪ್ರೇ ಬಣ್ಣಗಳು ಕೂಡ ಇಂದು ಲಭ್ಯವಿವೆ. ಇವುಗಳಲ್ಲದೇ ಪೆನ್ನು, ಪೆನ್ಸಿಲ್, ಚಾರ್‌ಕೋಲ್‌ಗಳಿಂದಲೂ ನಿಸರ್ಗ ಚಿತ್ರ ರಚನೆಯನ್ನು ಮಾಡಬಹುದು.

---

೧೬. ಪಿ. ಟಿ. ಕಾಳೆ : ಚಿತ್ರಕಲಾ ದರ್ಪಣ : ಪು-೫೪

ಕಪ್ಪು ಪೆನ್ಸಿಲಿನಿಂದ ನಿಸರ್ಗ ಚಿತ್ರವನ್ನು ಬಿಡಿಸಿದರೆ ಚಿತ್ರದಲ್ಲಿ ಕಪ್ಪು ಬಿಳುಪಿನ ಸಹಾಯದಿಂದ ನಿಸರ್ಗದ ನೆರಳು ಬೆಳಕಿನ ದೃಶ್ಯವನ್ನು ಚಿತ್ರಿಸಬಹುದು. ಇದೇ ರೀತಿ ಚಾರಕೋಲ್ ಕೂಡ ಕಪ್ಪು ಬಣ್ಣದಲ್ಲಿಯೇ ಇರುವುದರಿಂದ ಪೆನ್ಸಿಲ್‌ಗೂ ಚಾರಕೋಲ್‌ಗೂ ಹೆಚ್ಚು ವ್ಯತ್ಯಾಸ ಕಂಡು ಬರುವುದಿಲ್ಲ. ಆದರೆ ಚಾರಕೋಲ್‌ನಿಂದ ಚಿತ್ರಿಸಿದ ಚಿತ್ರ ತುಂಬ ಕಡದ್ದಾಗಿ ಕಾಣುತ್ತದೆ ಮತ್ತು ಚಿತ್ರದ ಮೇಲೆ ಕೈಯಿಂದ ಸವರಿದರೆ ಚಿತ್ರ ಮಾಸಿಹೋಗುತ್ತದೆ. ಆದ್ದರಿಂದ ಚಾರಕೋಲ್‌ನಿಂದ ಚಿತ್ರಸಿದ ನಂತರ ಚಿತ್ರಕ್ಕೆ ಫೇವಿಕಾಲ್ ವಾರ್ನಿಶನಿಂದ ಸ್ಪ್ರೇಮಾಡಿ ಸಂರಕ್ಷಿಸಲಾಗುತ್ತದೆ. ಬಣ್ಣದ ಪೆನ್ಸಿಲ್‌ಗಳಿಂದಲೂ ನಿಸರ್ಗ ಚಿತ್ರಗಳನ್ನು ಬಿಡಿಸಬಹುದು ಆದರೆ ಈ ಬಣ್ಣದ ಪೆನ್ಸಿಲ್‌ಗಳು ತುಂಬ ತೆಳುವಾಗಿ ಬಣ್ಣ ಮೂಡುತ್ತವೆ ಮತ್ತು ಚಿತ್ರಗಳು ಮಬ್ಬಾಗಿ ಕಾಣಿಸುತ್ತವೆ.

ಕ್ರಯಾನ್ ಬಣ್ಣಗಳು

(ಚಾಕ್) ಖಡುದಂತೆ ಆಕಾರ ಹೊಂದಿದ್ದು, ಎಣ್ಣೆ ತರಹ ಜಿಗಟು ಜಿಗಟಾಗಿರುತ್ತದೆ. ಈ ಕ್ರಯಾನನ್ನು ಹಾಳೆಯ ಮೇಲೆ ಮೂಡಿಸಿದರೆ ಬಣ್ಣದ ಲೇಪನ ಸಪಾಟಾಗಿ ಕಾಣದೆ ವರಟು ವರಟಾಗಿ ಕಾಣಿಸುತ್ತದೆ. ಇದರಿಂದಲೂ ನಿಸರ್ಗ ಚಿತ್ರವನ್ನು ಮಾಡಬಹುದು.

ಸ್ಕೆಚ್ಚ್ ಪೆನ್ನುಗಳು

ಸ್ಕೆಚ್ಚ್ ಪೆನ್ನುಗಳಿಂದಲೂ ಚಿತ್ರಗಳನ್ನು ರಚಿಸಬಹುದು ಆದರೆ ಬಣ್ಣಗಳನ್ನು ತುಂಬಲು ಗೋಗ್ಯವಾದ ಸಾಧನವಲ್ಲ ಯಾಕೆಂದರೆ ಸ್ಕೆಚ್ಚ್ ಪೆನ್ನುಗಳಿಂದ ಬಣ್ಣಗಳು ತುಂಬಿದರೆ ಸ್ಕೆಚ್ಚ್ ಪೆನ್ನಿನಿಂದ ಹೇಗೆ ಬಣ್ಣ ತುಂಬುತ್ತೇವೆಯೋ ಹಾಗೆಯೇ ಎಳೆ ಎಳೆಯಾಗಿ ರೇಖೆಯು ಎದ್ದು ಕಾಣುತ್ತವೆ ಮತ್ತು ಹಾಳೆಯು ಪದರು ಪದರಾಗಿ ಕಿತ್ತುತ್ತದೆ.

❑❑❑

ಅಧ್ಯಾಯ : ಐದು

ಉತ್ತರ ಕರ್ನಾಟಕದ ಪ್ರಾತಿನಿಧಿಕ ನಿಸರ್ಗ ಚಿತ್ರಕಲಾವಿದರು ಮತ್ತು ಕಲಾಕೃತಿಗಳು

೫.೧. ಅಮೀನ ಸಾಹೇಬ ಕಮಡೋಳಿ

ಕಲಾದೇವತೆಯೇ ಮೈವೆತ್ತಿದಂತಿದ್ದ ಅಮೀನ ಸಾಹೇಬ ಕಮಡೋಳಿಯವರು ಮುಟ್ಟಿದೆಲ್ಲಾ ಕಲಾಕೃತಿಯಾಗುತ್ತಿತ್ತು ಎಂಬುದು ಅತಿಶಯವಲ್ಲ. ನಿಸರ್ಗ ಚಿತ್ರಗಳು, ಭಾವಚಿತ್ರಗಳು, ಸಂಯೋಜನೆ ಚಿತ್ರಗಳು ಮುಂತಾದ ಕಲಾವಿಷಯಗಳು. ಅದರಂತೆ ಅವುಗಳ ಮಾಧ್ಯಮ, ತೈಲವರ್ಣ, ಜಲವರ್ಣ, ಮೇಣವರ್ಣ ಯಾವುದೇ ಆಗಿರಲಿ ಕಮಡೋಳಿಯವರು ಹಸ್ತಕೌಶಲದ ನೈಪುಣ್ಯಕ್ಕೆ ಒಳಗಾದರೆ ಸಾಕು ಒಂದೊಂದೂ ಅಪೂರ್ವ ಕಲಾಕೃತಿಯಾಗಿ ನಿಲ್ಲುತ್ತವೆ. ಆ ಕಲಾಕೃತಿಯು ಪ್ರದರ್ಶಿತವಾದಾಗ ನೂರಾರು ಕಲಾಪ್ರೇಮಿಗಳ ಹೃದಯವನ್ನು ಸೂರೆಗೊಳುತಿತ್ತು. ಕಲಾ ವಿಮರ್ಶಕರಿಂದ ಮೆಚ್ಚುಗೆ, ಪ್ರಶಂಸೆಗಳನ್ನು ಪಡೆಯುತ್ತಿತ್ತು. ಈ ಅಭಿಪ್ರಾಯ ಅವರ ಒಂದೆರಡು ಕಲಾಕೃತಿಗಳನ್ನು ಕುರಿತು ಹೇಳಿದುದಲ್ಲ. ಅವರ ಪ್ರತಿಭಾ ಕುಂಚದಿಂದ ಮೂಡಿಬಂದ ಎಲ್ಲ ಕಲಾಕೃತಿಳಿಗೂ ಅನ್ವಯಿಸುತ್ತದೆ. ಕಮಡೋಳಿ ಮುಂಬಯಿಯಲ್ಲಿ ಕಲಾ ವಿದ್ಯಾರ್ಥಿಯಾಗಿದ್ದ ಅವಧಿಯಿಂದ ಕಲಾಭ್ಯಾಸವನ್ನು ಪೂರೈಸಿ, ಅಲ್ಲಿಯೇ ಕಲಾ ಶಿಕ್ಷಕರಾಗಿ, ಕೃತಿಗಳನ್ನು ರಚಿಸಿ ದೇಶದಾದ್ಯಂತ ನಡೆಯುತ್ತಿದ್ದ ಪ್ರಮುಖ ಮತ್ತು ಪ್ರಖ್ಯಾತ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿದ ಸುಮಾರು ೧೧ ವರ್ಷಗಳ ಅವಧಿಯಲ್ಲಿ ಅವರು ಐವತ್ತಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಸಂಪಾದಿಸಿದರು. ಇದಲ್ಲದೆ ಲಂಡನ್ನಿನಲ್ಲಿಯೂ ಇವರ ಕಲಾಕೃತಿಳು ಪ್ರದರ್ಶನಗೊಂಡು ವಿಮರ್ಷಕರಿಂದ ಮೆಚ್ಚುಗೆ ಪಡೆದುದು ಅವರ ಕಲಾಜೀವನದ ಮೈಲುಗಲ್ಲಿಗೆ ಮೆರಗು ಕೊಟ್ಟಿದೆ.

ಯಾವುದೇ ಕಲಾವಿದನು ತನ್ನ ಆಸಕ್ತಿಯ ಯಾವುದೇ ಒಂದು ವಿಷಯದಲ್ಲಿ, ತನಗೆ ಇಷ್ಟವಾದ ಒಂದು ಮಾಧ್ಯಮದಲ್ಲಿ ಪ್ರೌಢಿಮೆ, ನೈಪುಣ್ಯಗಳನ್ನು ಪಡೆಯುವುದು ಸಾಮಾನ್ಯ ಮತ್ತು ಸಾಧ್ಯ. ಆದರೆ ಕಮಡೋಳಿಯ ಆಯಸ್ಕಾಂತದಂತಹ ಪ್ರತಿಭೆ, ಸರ್ವಗ್ರಾಹಿಯಾದ ಆಸಕ್ತಿ, ಅದರೊಟ್ಟಿಗೆ ಸೃಜನಶೀಲತೆ,

ಪ್ರಯೋಗಶೀಲತೆಗಳು ಹಾಸುಹೊಕ್ಕಾಗಿ ಬೆಳೆದು ನಿಂತ ವ್ಯಕ್ತಿತ್ವ ಅಂತೆಯೇ ಕಲೆಯ ಯಾವ ವಿಷಯವಾದರೂ ಸರಿ, ಯಾವ ಮಾಧ್ಯಮವಾದರೂ ಸರಿ, ಆತ್ಮವಿಶ್ವಾಸದಿಂದ ಚಿತ್ರಿಸಬಲ್ಲ ಕಲಾವಂತಿಕೆ ಅವರಿಗೆ ದೈವದತ್ತ. ಅವರದು ಚಿತ್ರಕಲೆಗೆ ಸಂಬಂಧಿಸಿದ ಎಲ್ಲವನ್ನು ಅರಿತು ಅರಗಿಸಿಕೊಂಡ ವ್ಯಕ್ತಿತ್ವ.

ಕಮಡೋಳಿಯವರಿಗೆ ನಿಸರ್ಗ ಚಿತ್ರಣ ವಿದ್ಯಾರ್ಥಿ ದೆಸೆಯಿಂದಲೂ ಪ್ರೀಯವಾದ ವಿಷಯ. ವಿದ್ಯಾರ್ಥಿಯಾಗಿದ್ದಾಗ ಮುಂಬಯಿಯ ಸುತ್ತಮುತ್ತಲಿನ ಖಂಡಾಲಾ ಮುಂತಾದ ಘಟ್ಟದ ಪ್ರದೇಶಗಳನ್ನು ಸುತ್ತಿ, ಅಲ್ಲಿನ ವರ್ಣರಂಜಿತ ಸಸ್ಯರಾಶಿ, ತುರುಮರಾದಿಗಳನ್ನು, ಧೀಮಂತ ಗಿರಿ ಸಾಲುಗಳನ್ನು ಗಗನತಲದ ವಿಸ್ಮಯಕಾರಿ ಮೇಘಾವಳಿಯನ್ನು ಒಟ್ಟಿನಲ್ಲಿ ನಿಸರ್ಗದ ಬೆಡಗು, ಭಿನ್ನಾಣಗಳನ್ನು, ನಿಸರ್ಗ ಚಿತ್ರಗಳನ್ನು ಆಯಾ ಸ್ಥಳದಲ್ಲಿಯೇ ರಚಿಸಿ ಪೂರ್ತಿಗೊಳಿಸುತ್ತಿದ್ದದು ಅವರ ವೈಶಿಷ್ಟ್ಯ. ನಿಸರ್ಗದ ರಮಣಿಯ ದೃಶ್ಯಗಳಿಗೆ ಮಾರುಹೋದ ಅವರು ಆದೃಶ್ಯಗಳನ್ನು ತಮ್ಮ ಚಿತ್ರದೆದುರು ವರ್ಣಿಸುತ್ತಿದ್ದದ್ದು ಸ್ವಾಭಾವಿಕ.

ನಿಸರ್ಗ ಚಿತ್ರರಚನೆ ಬರಿಗುಡ್ಡ, ಗಿಡ, ಮೋಡಗಳನ್ನು ಚಿತ್ರಿಸುವುದಲ್ಲ. ಬದಲಾಗಿ ಆಯಾ ಪ್ರದೇಶದ ಪರಿಸರದ ವೈಶಿಷ್ಟಗಳನ್ನು ಚಿತ್ರದಲ್ಲಿ ತುಂಬಬೇಕಲ್ಲದೆ ಅದರಲ್ಲಿ "ಗಾಳಿ ಸುಳಿದಾಡುವ" ಅನುಭವವೂ ಆಗಬೇಕು. ಮಳೆ, ಬಿಸಿಲು, ಮೋಡಕವಿದ ವಾತಾವಾರಣ ಪ್ರತಿಯೋಂದರ ಅನುಭವವೂ ಚಿತ್ರದಿಂದ ನಮಗಾಗಬೇಕು. ಅಲ್ಲದೆ ನಾವು ಸದ್ಯ ಇರುವ ವಾತಾವರಣವನ್ನು ಮರೆಯುವಂತೆ ಮಾಡಿ ಚಿತ್ರದಲ್ಲಿರುವ ವಾತಾವರಣದೊಡನೆ ಒಂದಾಗುವ ಅನುಭವವನ್ನು ಅವು ತಂದು ಕೊಡಬೇಕು ಎನ್ನುತ್ತಿದ್ದರು. ಅವರ ಮಾತಿನ ಇಂಗಿತವನ್ನು ಅರಿಯಲು ಪ್ರಯತ್ನಿಸಿದಾಗ ಕಲಾವಿದ ಕಮಡೋಳಿಗೆ ನಿಸರ್ಗವು ಅವರ ಚಿತ್ರದ "ವಿಷಯ'ವಾಗುತ್ತಿರಲಿಲ್ಲ. ಅವರ ಚಿತ್ರವೇ 'ನಿಸರ್ಗ'ವಾಗಿರುತ್ತಿತ್ತು ಎಂಬ ಕಲ್ಪನೆ ಮೂಡುತ್ತದೆ.

ಎಲಿಫೆಂಟ್ ಸೈಜಿನ ಕಾಗದಗಳ ಮೇಲೆ ತಾಸೆರಡು ತಾಸುಗಳಲ್ಲಿ ನಿಸರ್ಗ ಚಿತ್ರವನ್ನು ಜಲವರ್ಣದಲ್ಲಿ ಸ್ಥಳದಲ್ಲೇ ಪೂರ್ತಿಯಾಗಿ ಅವರು ರಚಿಸುತ್ತಿದ್ದರೆಂದು ಅವರ ಸ್ನೇಹಿತರು ಆಶ್ಚರ್ಯದಿಂದ ಹೇಳುವ ಮಾತುಗಳು ನಿಸರ್ಗ ಚಿತ್ರ ರಚನೆಯಲ್ಲಿ ಕಮಡೋಳಿಗಿದ್ದ ಅಸಾಧಾರಣವಾದ ಕಲಾ ಪ್ರೌಢಿಮೆ ಮತ್ತು ಅವರ ಕಲಾ ಅಧ್ಯಯನದ ಪ್ರೌಢತನವನ್ನು ಸೂಚಿಸುತ್ತದೆ. ಕಾಗದ ಮೇಲೆ ಬಣ್ಣಗಳ ಹರಡುವಿಕೆ. ಬಣ್ಣಗಳ ಬೆರೆಯುವಿಕೆಗಳನ್ನು ಸತತಾಭ್ಯಾಸದಿಂದ ಕಂಡುಕೊಂಡು ಕುಂಚದ ಮೇಲೆ ಹಿಡಿತವನ್ನು ಸಾಧಿಸಿದ ಕಲಾವಿದನಿಗೆ ಮಾತ್ರ ಸಾಧ್ಯವಾಗುವ ಚಿತ್ರಣವಿದು. ಇಂತಹ ಚಿತ್ರಗಳಲ್ಲಿ ಕಲಾವಿದನ ಪ್ರತಿಭೆ ಪಾದರಸದಂತೆ ಕೆಲಸ ಮಾಡಬೇಕಾಗುತ್ತದೆ. ಕಾರಣ ನಿಸರ್ಗದಲ್ಲಿಯ ಒಂದು ಚಲುವಿನ ತಾಣವನ್ನು ಅದು ಸುಂದರವಾಗಿ ಕಾಣುವ ಗಳಿಗೆಯಲ್ಲಿ ಅದನ್ನು ಹಿಡಿದಿಡಬೇಕಾಗುತ್ತದೆ. ಕಲಾವಿದನ ಅಭಿರುಚಿ, ಮನೋಧರ್ಮ, ಕಲಾ ಸಾಧನೆಗಳ ಮಾನದಂಡವಾಗಬಲ್ಲ ಇಂಥ ಚಿತ್ರಗಳನ್ನು ನೀರಾಟವಾಡಿದಂತೆ ಚಿತ್ರಿಸಿದ ಕಮಡೋಳಿ ಶ್ರೇಷ್ಠ ದರ್ಜೆಯ ನಿಸರ್ಗ ಚಿತ್ರಗಾರ ಎಂಬುದರಲ್ಲಿ ಸಂದೇಶಹವಿಲ್ಲ. ಕಮಡೋಳಿಯ ಕಲಾಕೃತಿಗಳು ಎಲ್ಲಿದ್ದರೂ ಕಲಾವಿಮರ್ಶಕರಿಂದ ಪ್ರಶಂಸೆ ಪಡೆದಿವೆ. ನಿಸರ್ಗದ ಚೆಲುವಾದ ಸ್ಥಳದ ಆಯ್ಕೆ. ಚಿತ್ರದ ಸಂಯೋಜನೆಯ ತೇಲು, ವರ್ಣಗಳ ಹೊಸತನ, ಕಣ್ಣಿಗೆ ಹಿತವನ್ನುಂಟು ಮಾಡುವ ಶೀತಲವರ್ಣ ವಿನ್ಯಾಸಗಳು ಅವರ ನಿಸರ್ಗ ಚಿತ್ರಗಳಲ್ಲಿ ಕಂಡು ಬರುವ ಗುಣವಿಶೇಷಗಳು.

ಸುಂದರ ನಿಸರ್ಗ ದೃಶ್ಯಗಳಿಂದ ಶಿಲ್ಪ ಮತ್ತು ವಾಸ್ತುಶಿಲ್ಪಗಳಿಗಾಗಿ ಪ್ರಸಿದ್ಧವಾದ-ಹಿಮಾಲಯದ ಕೆಲವು ಭಾಗ, ಕಾಶ್ಮೀರ, ಸಿಮ್ಲಾ, ನೈನಿತಾಲ, ಮಹಾಬಳೇಶ್ವರ, ಆಗ್ರಾ, ಮುಂಬಯಿ, ಗೋವಾ ಮತ್ತು ಕರ್ನಾಟಕದ ನಿಸರ್ಗ ಚಿತ್ರಗಳನ್ನು ಕಮಡೋಳಿ ರಚಿಸಿದ್ದುಂಟು. ನಿಸರ್ಗ ಚಿತ್ರಗಳಿಗಾಗಿ ಅವರು ಆಯ್ಕೆ ಮಾಡಿಕೊಳ್ಳುತ್ತಿದ್ದ ದೃಶ್ಯಗಳು, ಅದನ್ನು ಚಿತ್ರಿಸುವ ರೀತಿ ಅನನ್ಯವಾದುದು. ದಿ॥ ಅನಕೃ ಅವರು ಕಮಡೋಳಿಯ ನಿಸರ್ಗ ಚಿತ್ರಗಳನ್ನು ಮೆಚ್ಚಿ ಆ ಬಗ್ಗೆ ವಿವರಗಳನ್ನೊಳಗೊಂಡ ಲೇಖನವನ್ನೆ ಬರೆದಿದ್ದಾರೆ. ಅವರ ನಿಸರ್ಗ ಚಿತ್ರಗಳ ನೋಟಗಳು: ಗೋವಾ ನೋಟಗಳು, ಪ್ರಕೃತಿಯ ವಿವಿಧ ಚೆಲುವು ಸೊಬಗುಗಳನ್ನು ಸಾರುತ್ತೆ; ಕಮಡೋಳಿಯವರ ಲಕ್ಷ್ಮೇಶ್ವರದ ಸೋಮನಾಥ ದೇವಾಲಯ, ಹಂಪೆಯ ಕಲ್ಲಿನ ರಥ, ಶ್ರೀರಂಗಪಟ್ಟಣದ ದರಿಯಾ ದೌಲತ್, ವಿಜಯಪುರದ ಇಬ್ರಾಹಿಂ ರೋಜಾ ಈ ಎಲ್ಲಾ ಕಲಾಕೃತಿಗಳು ನೋಡುಗರ ಮನಸ್ಸನ್ನು ಮಂತ್ರ ಮುಗ್ಧವಾಗಿಸುತ್ತವೆ. ಹೀಗೆ ಕಲಾವಿದರಿಂದ, ಸಹೃದಯರಿಂದ, ಕಲಾವಿಮರ್ಶಕರಿಂದ ಪ್ರಶಂಸಿಸಲ್ಪಟ್ಟ ಕಮಡೋಳಿಯ ನಿಸರ್ಗ ಚಿತ್ರಗಳು ಭಾರತದಲ್ಲಿ ಹಲವಾರು ವೈಯಕ್ತಿಕ ಸಂಗ್ರಹಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಇರುವಂತೆ ಪರದೇಶಗಳಿಗೂ ಸೇರಿವೆ. ಲಂಡನ್ ಮತ್ತು ಅಮೇರಿಕಗಳಲ್ಲಿ ಅವರ ಅನೇಕ ಕಲಾಕೃತಿಗಳು ಇರುವುದು ತಿಳಿದು ಬರುತ್ತದೆ. ಇದನ್ನು ಲಕ್ಷಿಸಿದಾಗ. ಕಮಡೋಳಿಯ ಅಂತರಾಷ್ಟ್ರೀಯ ಮಟ್ಟದ ಕಲಾಪ್ರತಿಭೆಯ ಬಗೆಗೆ ಹೆಮ್ಮೆಯುಂಟಾಗುತ್ತದೆ.

ಕಲಾವಿದ ಅಮೀನ ಸಾಹೇಬ ಕಮಡೋಳಿ ಸುಮಾರು ೧೯೦೦ರಲ್ಲಿ ಲಕ್ಷ್ಮೇಶ್ವರದ ಸುಸಂಸ್ಕೃತ ಮನೆತನವೊಂದರಲ್ಲಿ ಜನಿಸಿದರು. ಇದು ಸೌಂದರ್ಯ ಪ್ರಜ್ಞೆಯುಳ್ಳ ಕಣ್ಣಿಗೆ ಕಲೆಯ ನೆಲೆಯಾಗಿ ಕಾಣುವುದು ಸಹಜ. ಸುತ್ತಲಿನ ಕಲಾ ವಾತಾವರಣವನ್ನು ಮೈಮನಗಳಲ್ಲಿ ತುಂಬಿಕೊಂಡು ಬೆಳೆಯುತ್ತಿದ್ದ ಅಮೀನ ಸಾಹೇಬ ವಿದ್ಯಾರ್ಜನೆಗಾಗಿ ಶಾಲೆಯನ್ನು ಸೇರಿದಾದರೂ ಅವರ ಆಸೆ-ಆಸಕ್ತಿಯಿದ್ದುದು ಚಿತ್ರಕಲೆಯಲ್ಲಿ. ಸದಾ ಚಿತ್ರಕಲೆಯ ಗುಂಗು. ಈ ಎಳೆಯ ಜೀವನದ ಕಲಾಭಿಲಾಷೆಯನ್ನು ಗುರುತಿಸಿದ ಹಿತೈಷಿಗಳು ಮುಂಬಯಿಯ ಸರ್.ಜೆ.ಜೆ ಕಲಾ ಶಾಲೆ ಸೇರಲು ಸಲಹೆ ಮಾಡಿದರು. ಇದರಿಂದ ಕಮಡೋಳಿಯ ಬೆಂಗಾವಲಾಗಿ ನಿಂತರು ಅವರ ಅಣ್ಣ ಇಮಾಮ ಸಾಹೇಬರು. ಅವರು ತಂದೆ-ತಾಯಿಗಳಿಲ್ಲದ ಕೊರತೆಯನ್ನು ಕಮಡೋಳಿಯ ಪಾಲಿಗೆ ನೀಗಿಸಿದರು.

೧೯೧೮ರ ಸುಮಾರಿಗೆ ಅಮೀನ ಸಾಹೇಬ ಮುಂಬೈಗೆ ಪ್ರಯಣ ಮಾಡಿದರು. ಜೆ.ಜೆ ಕಲಾಶಾಲೆಗೆ ಸೇರಿದರು. ಅವರ ಜೀವನದಲ್ಲಿ ಈ ಸಂದರ್ಭ ಸ್ಮರಣೀಯ. ತನ್ನ ಹುಟ್ಟೂರಿನ ಕಲಾ ವಾತಾವರಣ ಹೃದಯದಲ್ಲಿ ತುಂಬಿದ್ದರೂ ಅಭಿವ್ಯಕ್ತಿಗೆ ಅವಕಾಶವಿರಲಿಲ್ಲ. ಮುಂಬೈಯ ಕಲಾಶಾಲೆಯ ವಾತಾವರಣ ಅಭಿವ್ಯಕ್ತಿಯ ರಾಜಮಾರ್ಗವನ್ನು ತೋರಿಸಿಕೊಟ್ಟಿತು. ಮುಂಬೈಯಂತಹ ಪಟ್ಟಣದಲ್ಲಿ ಖರ್ಚು, ವೆಚ್ಚಗಳನ್ನು ತೂಗಿಸಿಕೊಂಡು ಕಲಾಭ್ಯಾಸವನ್ನು ನಡೆಸುವುದು ಕಷ್ಟಕರವಾಗಿತ್ತು. ಆದರೆ ಅಣ್ಣ ಇಮಾಮ ಸಾಹೇಬರ ಪ್ರೋತ್ಸಾಹ, ಬೆಂಬಲದಿಂದ ಎಲ್ಲ ಕಷ್ಟಗಳನ್ನು ಸಹಿಸಿಕೊಂಡು ಕಲಾ ಸಾಧನೆಯನ್ನು ಮುಂದುವರೆಸಿಕೊಂಡು ಹೋಗಲು ಪ್ರೇರಣೆ ಕೊಟ್ಟಿದ್ದವು.[೧]

---

೧೧. ಹಿರೇಮಠ ಬಿ. ಕೆ. : ಅಮೀನ ಸಾಹೇಬ ಕಮಡೊಳ್ಳಿ, ಪು-

ಜೆ.ಜೆ. ಕಲಾಶಾಲೆಯಲ್ಲಿ ಸಾಧಾರಣ ವಿದ್ಯಾರ್ಥಿಗೆ ಪ್ರವೇಶವೇ ಸಿಕ್ಕುತ್ತಿರಲಿಲ್ಲ. ಹೀಗಿರುವಾಗ ಕಮಡೋಳಿ ಪ್ರವೇಶ ಪಡೆದರಷ್ಟೇ ಅಲ್ಲ. ಶಾಲೆಯ ಪ್ರತಿಭಾವಂತ ವಿದ್ಯಾರ್ಥಿಯಾಗಿ ಪ್ರಸಿದ್ಧರಾದರು. ೧೯೧೮ರಲ್ಲಿ ಇಲ್ಲಿ ಪ್ರವೇಶ ಪಡೆದು ೧೯೨೩ರ ವರೆಗೂ ಅಲ್ಲಿ ವಿದ್ಯಾರ್ಥಿಯಾಗಿದ್ದರು. ತಮ್ಮ ವಿದ್ಯಾರ್ಥಿ ಜೀವನದುದ್ದಕ್ಕೂ ಪ್ರತಿಭಾ ಪುರಸ್ಕಾರ ಶಿಷ್ಯ ವೇತನಗಳನ್ನು ಪಡೆದಿದ್ದರು. ತಮಗೆ ದೊರೆತ ಎಲ್ಲ ಅವಕಾಶಗಳನ್ನು ತಮ್ಮ ಕಲಾಭಿವೃದ್ಧಿಗಾಗಿ ಬಳಸಿಕೊಂಡು ನಿರ್ದೇಶಕರ, ಅಧ್ಯಾಪಕರ ಅಚ್ಚು ಮೆಚ್ಚಿನ ಶಿಷ್ಯರಾಗಿದ್ದರು. ಪ್ರತಿ ವರ್ಷದ ಕೊನೆಗೆ ಕಲಾಶಾಲೆಯಲ್ಲಿ ನಡೆಯುತ್ತಿದ್ದ ಕಲಾ ಪ್ರದರ್ಶನಗಳಲ್ಲಿ ಉತ್ತಮ ಕಲಾಕೃತಿ ಪ್ರಶಸ್ತಿ, ಬಹುಮಾನಗಳ ಮಾತು ಬಂದಾಗಲೆಲ್ಲ ಅಮೀನ ಸಾಹೇಬರ ಹೆಸರೇ ಕೇಳಿ ಬರುವಂತಾಯಿತು ಎಂಬುದು ಅವರ ವಿದ್ಯಾರ್ಥಿ ಜೀವನದ ಸಾರ್ಥಕತೆಯನ್ನು ತೋರಿಸುತ್ತದೆ. ಹೀಗೆ ವಿದ್ಯಾರ್ಥಿಯಾಗಿ ಒಂದೆರಡು ವರ್ಷಗಳ ಕಳೆಯುವುದರೊಳಗಾಗಿ ಕಮಡೋಳಿ ಒಬ್ಬ ಪ್ರತಿಭಾವಂತ ಕಲಾವಿದರಾಗಿ ಹೆಸರಾದರು. ೧೯೨೦ರಲ್ಲಿ Advanced Painting ಅಭ್ಯಾಸ ಮಾಡುತ್ತಿರುವಾಗ ಭಿತ್ತಿಚಿತ್ರ ರಚನಾ ಅಭ್ಯಾಸವನ್ನು ಕೈಗೊಂಡಿದ್ದು, ಅದರಲ್ಲಿ ಅಸಾಧಾರಣ ಪ್ರಾವೀಣ್ಯವನ್ನು ಸಾಧಿಸಿದರು. ಅದಕ್ಕಾಗಿ ಗವರ್ನರಿಂದ ಪ್ರಶಸ್ತಿ ಪತ್ರವನ್ನು ಕೂಡ ಪಡೆದರು. ಇದೇ ಸಮಯದಲ್ಲಿ ಮುಂಬಯಿಯ ಆರ್ಟ್ ಸೊಸೈಟಿ ಏರ್ಪಡಿಸಿದ್ದ ಕಲಾ ಪ್ರದರ್ಶನದಲ್ಲಿ ಇವರ ಜಲವರ್ಣದ ಕೃತಿಗೆ ಬಹುಮಾನ ದೊರಕಿತು.

ಮುಂಬಯಿಯ ಆರ್ಟ್ ಸೊಸೈಟಿಯು ಏರ್ಪಡಿಸಿದ್ದ ಕಲಾ ಪ್ರದರ್ಶನದಲ್ಲಿ ಅವರ 'Sketch in a Garden' ಎಂಬ ಕಲಾಕೃತಿಗೆ ಬಹುಮಾನ ಸಿಕ್ಕಿತು. ೧೯೨೨ರಲ್ಲಿ ಆಗ ಆರ್ಟ್ ಸೊಸೈಟಿ ನಡೆಸಿದ ಕಲಾ ಪ್ರದರ್ಶನದಲ್ಲಿ 'Taj at Agra: Southern mecca Jumma Masjid' ಮತ್ತು 'Sketch at Lakshmeshwari' ಎಂಬ ಜಲವರ್ಣದ ನಿಸರ್ಗ ಚಿತ್ರಗಳಿಗೆ ಬಹುಮಾನ ಪ್ರಶಸ್ತಿಗಳು ದೊರಕಿದವು. ಆಗಲೇ 'ಮಾರ್ಕಂಡೇಯ ಕೃತಿಗೂ ಬಹುಮಾನ ಬಂದಿತ್ತಲ್ಲದೆ. ಆ ಕೃತಿಯ ಶ್ರೇಷ್ಠತೆಯನ್ನು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ ಕೊಂಡಾಡಿದೆ.[೨]

೧೯೨೩ರಲ್ಲಿ ಕಮಡೋಳಿ 'ಆರ್ಟ್ ಸೊಸೈಟಿಗಾಗಿ ಅಭ್ಯಾಸ ಮಾಡುತ್ತಿದ್ದಾಗ ಮುಂಬಯಿ ಆಟ ಸೊಸೈಟಿಯ ಕಲಾ ಪ್ರರ್ದಶನದಲ್ಲಿ ಅವರ 'Bombay from Malabar Hill' ಎಂಬ ಜಲವರ್ಣದ ನಿಸರ್ಗ ಚಿತ್ರಕ್ಕೆ ಬಹುಮಾನ ದೊರಕಿತು. ಹೀಗೆ ವಿದ್ಯಾರ್ಥಿ ದೆಸೆಯಲ್ಲಿಯೇ ಉನ್ನತ ಮಟ್ಟದ ಕಲಾವಿದರಲ್ಲಿ ಕಂಡು ಬರುವ ಕಲಾ ಪ್ರಜ್ಞೆ, ಕಲಾ ಪ್ರಾವಿಣ್ಯತೆ ಕಮಡೋಳಿಯವರು ಗಳಿಸಿದ್ದು ಪ್ರಥಮ ವರ್ಗವನ್ನು ಮತ್ತು ಪ್ರಥಮ ಸ್ಥಾನವನ್ನು ಎಂಬುದು ಅವರ ವಿದ್ಯಾರ್ಥಿ ಜೀವನದ ಪ್ರತಿಭಾ ಸಂಪತ್ತತೆಯ ನಿದರ್ಶನ. ಕಲಾ ಶಾಲೆಯ ಪ್ರಾಚಾರ್ಯಗುರುಗಳಾದ ಗ್ಲಾಡಸ್ಟನ್ ಸಾಲೋಮನ್, ಧುರಂಧರ, ಪ್ರಸಿದ್ಧ ಟಿನ್‌ಡಾಡ್, ಚುಡೇಕರ್ ಅವರುಗಳು ಕಮಡೋಳಿಯವರ ಅಸಾಧಾರಣ ಪ್ರತಿಭೆಯನ್ನು ಕಂಡು ಪ್ರೋತ್ಸಾಹಿಸಿದ್ದಾರೆ.

ಕಮಡೋಳಿಯವರ ಮೊದಲವೃತ್ತಿ ಕಲಾ ಶಿಕ್ಷಕರ ವೃತ್ತಿ. ಅದನ್ನು ಆಂಗ್ಲೋ ಉರ್ದು ಮಾಧ್ಯಮಿಕ ಶಾಲೆಯಲ್ಲಿ ಕಲಾಶಿಕ್ಷಕ ವೃತ್ತಿಯನ್ನು ಅತ್ಯಂತ ಪ್ರಾಮಾಣಿಕವಾಗಿ ನಿರ್ವಹಿಸಿ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿದ್ದ

೦೨. ಹಿರೇಮಠ ಬಿ. ಕೆ. : ಅಮೀನ ಸಾಹೇಬ ಕಮಡೊಳ್ಳಿ, ಪು–

ಕಲಾಶಕ್ತಿಗೆ ಚಾಲನೆಯನ್ನು ಕೊಡುತ್ತ ತಮ್ಮ ಪಾಲಿನ ಸೇವೆಯನ್ನು ೧೯೫೬ರ ವರೆಗೂ ಸಲ್ಲಿಸಿ. ಅದೇ ವರ್ಷಕ್ಕೆ ನಿವೃತ್ತರಾದರು. ನಿವೃತ್ತಿಯ ನಂತರದಲ್ಲಿ ಕಲಾಭಿವೃದ್ಧಿಗೆ ಸಂಬಂಧಿಸಿದ ಹಲವಾರು ರಚನಾತ್ಮಕ ಯೋಜನೆಗಳನ್ನು ಕಾರ್ಯಗತಗೊಳಸಬೇಕೆಂಬ ಹಿರಿದಾದ ಹಂಬಲ ಅವರದಾಗಿತ್ತು. ಆದರೆ, ಬದುಕಿನ ಸಾಣೆಕಲ್ಲಿನಲ್ಲಿ ಶ್ರೀಗಂಧದಂತೆ ತೇಯ್ದು ಕಲಾ ಪರಿಮಳವನ್ನು ಬೀರಿದ ಅವರ ದೇಹ ಕ್ಷೀಣಿಸಿತ್ತು. ನಿವೃತ್ತರಾದ ವರ್ಷವೇ ಸಪ್ಟೆಂಬರ್ ತಿಂಗಳು ಕಲಾವಿದ ಕಮಡೋಳಿಯವರು ನಿಧನ ಹೊಂದಿದರು. ಅವರ ಕಲಾ ಯಾತ್ರೆ ತೀರ ಅನಿರೀಕ್ಷಿತವಾಗಿ ಕೊನೆಗೊಂಡಿತು.[೩]

ಚಿತ್ರ–೧ ಹಿಮಾಲಯದ ದೃಶ್ಯ

ಕಮಡೋಳಿಯವರ ಒಂದು ನಿಸರ್ಗಚಿತ್ರದಲ್ಲಿ ಹಿಮಾಲಯದ ಸೊಬಗನ್ನು ತಮ್ಮ ಕುಂಚಗಳಿಂದ ಸೆರೆ ಹಿಡಿದಿದ್ದಾರೆ. ನೀಲಿ ಆಕಾಶದೆತ್ತರಕ್ಕೆ ಹಿಮಾಲಯ ಹಿಮದ ಬೆಟ್ಟ ಬಿಳಿ ಮತ್ತು ನೀಲಿ ವರ್ಣದಿಂದ ಕೂಡಿದ್ದು, ಹಿಮಬೆಟ್ಟದ ಮುಂದೆ ಬಲಭಾಗದಲ್ಲಿ ಮತ್ತೊಂದು ಬೆಟ್ಟವಿದೆ ಅದು ಗಿಡ–ಮರಗಳಿಂದ, ಕಲ್ಲು ಮಣ್ಣುಗಳಿಂದ ಕೂಡಿದೆ. ಈ ಬೆಟ್ಟದ ಎಡಭಾಗದಲ್ಲಿ ಅನೇಕ ನೀಲಗಿರಿಯ ಮುಗಿಲೆತ್ತರದ ಮರಗಳನ್ನು ಹಸಿರು, ತಿಳಿಹಸಿರು, ನೀಲಿ, ಕಡುಗೆಂಪು, ಹಳದಿ ಮಿಶ್ರಿತ ಹಸಿರು ಕಂದು ಬಣ್ಣಗಳಿಂದ ನಿಜವಾಗಿಯೂ ನೀಲಿಗಿರಿ ಮರಗಳಿವೆ ಎನ್ನುವ ಭ್ರಮೆಯನ್ನುಂಟು ಮಾಡುತ್ತವೆ. ತೀರ ಮುಂದೆ ನೆಲದ ಸಾಲು ಕಲ್ಲು ಬಂಡೆಗಳು, ಹಳದಿ, ಕಡುಹಳದಿ, ಕಂದು ಮಿಶ್ರಿತ ಕೆಂಪು ಬಣ್ಣಗಳಿಂದ ಚಿತ್ರಿಸಲಾಗಿದೆ. ಅಲ್ಲಲ್ಲಿ ದೊಡ್ಡ ಮತ್ತು ಚಿಕ್ಕ ಮರ–ಗಿಡಗಳನ್ನು ದೂರ ಮತ್ತು ಸಮೀಪದ ದೃಶ್ಯಂತರವನ್ನು ತೋರಿಸಲು ಸಹಾಯಕಾರಿಯಾಗಿ ಚಿತ್ರಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ ಈ ಕಲಾಕೃತಿಯನ್ನು ನೋಡಿದಾಗ ಬರಿ ಚಿತ್ರವಾಗಿರದೆ ನಿಜವಾಗಿಯೂ ನೋಡುಗ ಆ ಹಿಮಾಲಯದ ಪರಿಸರದಲ್ಲಿರುವಂತೆ ಭಾಸವಾಗುತ್ತದೆ.

ಚಿತ್ರ–೨ ಕೋಟೆಯ ಪ್ರವೇಶ ದ್ವಾರ

ಕಮಡೋಳಿಯವರ ಇನ್ನೊಂದು ನಿಸರ್ಗ ಚಿತ್ರದಲ್ಲಿ ಕೋಟೆಯ ಕಟ್ಟಡದ ಮುಖ್ಯ ದ್ವಾರ ಬಾಗಿಲಿನ ಚಿತ್ರಣವಿದೆ. ಹಾಳೆಯ ಒಂದು ಮೂರು ಭಾಗದಷ್ಟು ದ್ವಾರ ಬಾಗಿಲು ಮತ್ತು ಗೋಡೆಯನ್ನು ಚಿತ್ರಿಸಿದ್ದು, ಒಂದು ಭಾಗದಷ್ಟು ನೆಲ ಮತ್ತು ರಸ್ತೆಯನ್ನು ಚಿತ್ರಿಸಲಾಗಿದೆ. ಕೋಟೆಯ ಮುಖ್ಯದ್ವಾರದ ಮೇಲೆ ಮುಸ್ಲಿಂ ಶೈಲಿಯ ಕಮಾನುಗಳಿದ್ದು ಕೆಳಗೆ ದೊಡ್ಡದಾದ ದ್ವಾರ ಬಾಗಿಲು ನಿರ್ಮಿತವಾಗಿದ್ದು, ದ್ವಾರದ ಒಂದು ಬಾಗಿಲು ಮುಚ್ಚಿದಂತೆ ಚಿತ್ರಿಸಲಾಗಿದ್ದು, ಕಡು ಹಳದಿ, ಹಳದಿ, ಕಡುಕೆಂಪು, ಕಂದು ಬಣ್ಣಗಳಿಂದ ಚಿತ್ರಿಸಲಾಗಿದೆ; ಮತ್ತು ನೆರಳು ಬೆಳಕಿನ ಛಾಯಾಂಕನವನ್ನು ಅದ್ಭುತವಾಗಿದೆ. ತೆರೆದ ದ್ವಾರ ಬಾಗಿಲಿನಿಂದ ಜನರು ನಡೆದಾಡುತ್ತಿರುವುದನ್ನು ವಿವಿಧ ಬಣ್ಣಗಳಿಂದ ಮಾರ್ಮಿಕವಾಗಿ ಕುಂಚದ ಹೊಡೆತದಿಂದ ಚಿತ್ರಿಸಲಾಗಿದೆ.

ದ್ವಾರಬಾಗಿಲಿನ ಮುಂದೆ ಕಲ್ಲು ಮಣ್ಣು ಮತ್ತು ಹುಲ್ಲುಗಾವಲಿನು ನೆಲವಿದೆ ಪಕ್ಕದಲ್ಲಿ ನಡೆದಾಡುವ ದಾರಿಯನ್ನು ಸೂರ್ಯನು ಬೆಳಕಿನ ಪ್ರಭಾವದಿಂದ ರಸ್ತೆ ಅದ್ಭುತವಾಗಿ ಕಾಣಿಸುವಂತೆ ಚಿತ್ರಸಲಾಗಿದೆ. ಈ ಕಲಾಕೃತಿಯೂ ನೋಡುಗರಿಗೆ ನಿಜವಾದ ಕೋಟೆಯ ದೃಶ್ಯವು ಕಣ್ಣೆದುರಿಗೆ ಬರುವಂತೆ ಕಮಡೋಳಿಯವರು ಚಿತ್ರಿಸಿದ್ದಾರೆ.


೦೩. ಹಿರೇಮಠ ಬಿ. ಕೆ. : ಅಮೀನ ಸಾಹೇಬ ಕಮಡೊಳ್ಳಿ, ಪು–

ಅಮೀನ ಸಾಹೇಬ ಕಮಡೋಳಿಯವರ ನಿಸರ್ಗ ಕಲಾಕೃತಿಗಳು





ಜಲವರ್ಣ   ಹಿಮಾಲಯದ ದೃಶ್ಯ



ಜಲವರ್ಣ   ಕೋಟೆಯ ಪ್ರವೇಶ ದ್ವಾರ

೫.೨. ಎಂ. ಎ. ಚೆಟ್ಟಿ

"ಭಾರತೀಯರು ನಿಸರ್ಗದ ನಿಗೂಢತೆಯಲ್ಲೂ, ಅದರ ಅದ್ಭುತ ಸೌಂದರ್ಯದಲ್ಲೂ ಬದುಕಿನ ಗಾಢತೆಯನ್ನು ಹಾಗೂ ಶಿವಚೈತನ್ಯವನ್ನು ಕಂಡವರು. ಆ ಶಕ್ತಿಯನ್ನೆ ಕುರಿತು ಚಿಂತಿಸಿ ಪ್ರೀತಿಸಿದರು. ಆರಾಧಿಸಿದರು. ಅದರಲ್ಲೇ ಪರಮ ಶಾಂತಿಯನ್ನು ಕಂಡುಕೊಂಡರು. ಕೊನೆಗೆ ಅದನ್ನೇ ಜೀವನದ ಮುಕ್ತಿಯ ಸಾಧನವನ್ನಾಗಿಸಿಕೊಂಡರು" ಈ ಹಿನ್ನೆಲೆಯಲ್ಲಿ ಮೈತಾಳಿದ ಕಲಾಪ್ರಕಾರಗಳೇ ವ್ಯಕ್ತಿ ಮತ್ತು ಸಮಷ್ಠಿಹಿತಕ್ಕೆ ಆನಂದವನ್ನು ನೀಡುವಂತಹವುಗಳಾಗಿವೆ. ಲಲಿತ ಕಲೆಗಳಲ್ಲಿ ಒಂದಾದ ಚಿತ್ರಕಲೆ ಗಮನಾರ್ಹವಾದ ಕಲೆಯಾಗಿದ್ದು. ಈ ಕ್ಷೇತ್ರಕ್ಕಾಗಿ ಅರ್ಪಿಸಿಕೊಂಡ ಚಿತ್ರಕಾರ ಚೆಟ್ಟಿಯವರು ಚಿತ್ರಕಲೆಯೂ ಅವರ ಬದುಕಿನ ದೈವ, ದೇವರು ಅದರಲ್ಲಿಯೇ ಜೀವನದ ಸಾರ್ಥಕವನ್ನು ಕೂಡ ಕಂಡುಕೊಂಡವರು.

ಬೆಳಗಾವಿ ಜಿಲ್ಲೆಯ ಅಥಣಿ ಒಂದು ತಾಲ್ಲೂಕಾ ಪಟ್ಟಣ. ತಾಲ್ಲೂಕಿನ ಉತ್ತರ ಮತ್ತು ಪಶ್ಚಿಮಕ್ಕೆ ಮಹಾರಾಷ್ಟ್ರ ರಾಜ್ಯವೂ. ನೈಋತ್ಯಕ್ಕೆ ಚಿಕ್ಕೋಡಿ ತಾಲ್ಲೂಕು. ದಕ್ಷಿಣದಲ್ಲಿ ರಾಯಬಾಗ ತಾಲ್ಲೂಕು ಪೂರ್ವ ಮತ್ತು ಆಗ್ನೇಯಕ್ಕೆ ವಿಜಯಪುರ ಮತ್ತು ಜಮಖಂಡಿ ತಾಲ್ಲೂಕುಗಳಿವೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಗಡಿ ಪ್ರದೇಶ ಇದಾದ್ದರಿಂದ ಆ ಭಾಗದ ಜನರ ಭಾಷೆಯ ಮೇಲೆ ಮರಾಠಿ ಭಾಷೆಯ ಪ್ರಭಾವವನ್ನು ಇಲ್ಲಿ ಕಾಣಬಹುದು.

ಜನನ, ಬಾಲ್ಯ, ಶಿಕ್ಷಣ

ಚೆಟ್ಟಿಯವರ ಅಜ್ಜ ಸಂಗಪ್ಪನವರಿಗೆ ಮೂವರು ಗಂಡು ಮಕ್ಕಳು ಅಡಿವೆಪ್ಪ, ಗುರಪ್ಪ ಮತ್ತು ಬಶೆಟಪ್ಪ. ಇವರಲ್ಲಿ ಅಡಿವೆಪ್ಪನವರು ಚಟ್ಟಿಯವರ ತಂದೆ. ಇವರ ತಾಯಿ ಶಿವಗಂಗಮ್ಮ. ಇವರ ನಾಲ್ಕನೆಯ ಮಗನಾಗಿ ೧೯೦೭ನೇಯ ಮಾರ್ಚ ೮ ರಂದು ಚೆಟ್ಟಿಯವರು ಜನ್ಮ ತಾಳಿದರು. ಇವರ ಜನ್ಮದಿನಾಂಕವನ್ನು ಅಭಿನಂದನ ಗ್ರಂಥ ಹಾಗೂ ಚಿತ್ರಕಲಾ ಅಕಾಡೆಮಿಯಿಂದ ಪ್ರಕಟವಾದ ಗ್ರಂಥದಲ್ಲಿ ಫೆಬ್ರವರಿ ೮ ರಂದು ನಮೂದಿಸಿದ್ದಾರೆ. ಆದರೆ ಚೆಟ್ಟಿಯವರು ೬ನೆಯಲ್ಲಿ ಶಾಲೆ ಕಲಿಯುವುದನ್ನು ಬಿಟ್ಟು ಇಂಗ್ಲಿಂಷ್ ಕಲಿಯುವ ಸಲುವಾಗಿ ಬೇರೆ ಶಾಲೆಗೆ ಸೇರುವ ಸಂದರ್ಭದಲ್ಲಿ ಶಾಲೆ ಬಿಟ್ಟ ಬಗ್ಗೆ ಶಾಲೆಯಿಂದ ಪ್ರಮಾಣಪತ್ರ ತೆಗೆದುಕೊಂಡಿದ್ದಾರೆ. ಅದರಲ್ಲಿ ಅವರ ಜನ್ಮ ದಿನಾಂಕ ೧೯೦೭ನೆಯ ಮಾರ್ಚ ೮ ರಂದು ದಾಖಲಾಗಿದೆ.

ಚೆಟ್ಟಿಯವರಿಗೆ ಐದು ವರ್ಷ ತುಂಬಿದಾಗ ಅಂದರೆ ೧೯೧೨ರಲ್ಲಿ ಅಥಣಿಯಲ್ಲಿ ಮನೆಗೆ ಸಮೀಪದಲ್ಲಿ ಮಿರ್ಜಿ ಹೆಸರಿನ ಕನ್ನಡ ಶಾಲೆ ಇದ್ದು ಇದಕ್ಕೆ ಖಾವಾಸ್ಕರ ವಾಡೆ ಎಂದು ಕರೆಯುವರು. ಮೊದಲು ರಾಜವಾಡೆ ಇದ್ದದ್ದು ಅದು ನಶಿಸಿಹೋದದ್ದರಿಂದ ಆ ಸ್ಥಳದಲ್ಲಿ ಈ ಶಾಲೆಯನ್ನು ಪ್ರಾರಂಭಿಸಲಾಯಿತು. ಇಲ್ಲಿ ೧೯೧೭ರ ವರೆಗೆ ಐದನೇ ತರಗತಿಯವರೆಗೆ ಕಲಿತರು ೧೯೧೫ರಲ್ಲಿ ಅಥಣಿ ಊರಲ್ಲಿ ಪ್ಲೇಗ ಬೇನೆ ಪ್ರಾರಂಭವಾಯಿತು. ಎಲ್ಲಿ ನೋಡಿದರಲ್ಲಿ ಹೆಣಗಳುರುಳತೊಡಗಿದವು. ಆ ಊರಿಗೆ ಬಂದ ಪ್ಲೇಗು ಚೆಟ್ಟಿಯವರ ಮನೆಗೂ ಬಂದು ಅವರ ತಂದೆಯನ್ನೇ ಬಲಿ ತೆಗೆದುಕೊಂಡಿತು. ತಂದೆ ತೀರಿಕೊಂಡ ನಂತರ ಚಿಕ್ಕಪ್ಪನವರಾದ ಬಶೆಟಪ್ಪನವರ ಆಶ್ರಯದಲ್ಲಿ ಬೆಳೆಸಿದರು. ಅವಿಭಕ್ತ ಕುಟುಂಬವಾಗಿದ್ದರಿಂದ ಕುಟುಂಬದ ಮಕ್ಕಳಿಗೂ,

ತಂದೆಯ ಪ್ರೀತಿ, ವಾತ್ಸಲ್ಯ ಕೊರತೆಯಾಗದಂತೆ ನೋಡಿಕೊಂಡರು. ಚೆಟ್ಟಿಯವರ ತಂದೆಯವರು ಲಿಂಗೈಕ್ಯರಾದ ಕೆಲವೇ ದಿನಗಳಲ್ಲಿ ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಬಶೆಟ್ಟಪ್ಪನವರಿಗೆ ಹುಕ್ಕೇರಿಗೆ ಸರ್ಕಲ್ ಇನ್ಸ್‌ಪೆಕ್ಟರ್‌ರಾಗಿ ವರ್ಗವಾಯಿತು. ಆಗ ನಾಲ್ಕನೆಯ ತರಗತಿಯಲ್ಲಿ ಓದುತ್ತಿದ್ದ ಚೆಟ್ಟಿಯವರು ಅಥಣಿಯನ್ನು ಬಿಟ್ಟು ಬಂದು ಹುಕ್ಕೇರಿಯಲ್ಲಿ ೧೯೧೮ ರಲ್ಲಿ ಕನ್ನಡ ಗಂಡು ಮಕ್ಕಳ ಶಾಲೆಯಲ್ಲಿ ಮತ್ತೆ ಐದನೆ ತರಗತಿಗೆ ಪ್ರವೇಶ ಪಡೆದರು. "ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬಂತೆ ಚಿಕ್ಕಂದಿನಲೇ ಅವರ ಕಲಾ ವ್ಯಕ್ತಿತ್ವದ ಲಕ್ಷಣಗಳು ಕಂಡುಬಂದವು. ಇದನ್ನು ಗುರುತಿಸಿದ ಕಲಾಶಿಕ್ಷಕರಾಗಿದ್ದ ನಾಯಕ ಮಾಸ್ತರರು ಖಡುಕೊಟ್ಟು ಕರಿ ಹಲಗೆಯ ಮೇಲೆ ಚಿತ್ರ ತೆಗೆಯಲು ಹಚ್ಚುತ್ತಿದ್ದರು. "ಲೇ ತಮ್ಯಾ, ದಿನಾ ಹಿಂಗ ಚಿತ್ರ ತೆಗೆಯುವ ಸಾಧನಾ ಮಾಡು ಮುಂದ ಒಂದಿಲ್ಲೊಂದು ದಿನ ದೊಡ್ಡ ಚಿತ್ರಗಾರ ಆಗತಿ." ಎಂದು ಹೃದಯತುಂಬಿ ಹರಸಿದರು. ಅದೇ ಅವರ ಮುನ್ನಡೆಗೆ ಸ್ಫೂರ್ತಿ ಆಯಿತು. ಕಲಾ ಪ್ರಪಂಚದಲ್ಲಿ ಸ್ಥಿರವಾಗಿ ನಿಲ್ಲಲು ಕಾರಣವಾಯಿತು."[೧೪]

೧೯೨೦ರ ವರೆಗೆ ಹುಕ್ಕೇರಿಯಲ್ಲಿ ೭ನೇ ತರಗತಿಯವರೆಗೂ ಕಲಿತು ಮುಲ್ಕಿ ಪರೀಕ್ಷೆ ತೇರ್ಗಡೆಯಾದರು. ಅದೇ ವೇಳೆ ಅವರು ಮತ್ತೇ ಅಥಣಿಗೆ ಬರಬೇಕಾಯಿತು. 'ವರ್ಗದ ವಿಷಯಗಳಲ್ಲಿ ಅವರು ಅಷ್ಟೊಂದು ಪ್ರತಿಭಾವಂತರೆನಿಸಿರಲಿಲ್ಲ. ಅವರ ಬುದ್ಧಿ ಶಕ್ತಿ ಚಿತ್ರಕಲಾ ಪ್ರಪಂಚಕ್ಕೆ ಅಮೋಘ ಫಲಗಳನ್ನೀಯುವ ಅವರ ಕಲಾವೃಕ್ಷದ ಬೀಜಗಳು ಇಂಗ್ಲೀಷ್ ೧ನೇ, ೨ನೇ ಇಯತ್ತೆಯ ಓದಿನಲ್ಲಿ ಕಾಣುತ್ತಿರಲಿಲ್ಲ" ಎಂದು ಅವರ ಬಾಲ್ಯದ ಮಿತ್ರರಾದ ಅಥಣಿಯ ಶ್ರೀ ಆರ್.ಪಿ. ಕುಲಕರ್ಣಿಯವರು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. ಎಂದರೆ ಚೆಟ್ಟಿಯವರಿಗೆ ಪಠ್ಯವಿಷಯಕ್ಕಿಂತಲೂ ಹೆಚ್ಚಾಗಿ ಚಿತ್ರಕಲೆಯಲ್ಲೆ ಆಸಕ್ತಿ ಹೆಚ್ಚಾಗಿದ್ದದ್ದು ತಿಳಿದುಬರುತ್ತದೆ. ಆಗಲೇ ಅವರು ರವಿವರ್ಮನ ಲಕ್ಷ್ಮಿ, ಸರಸ್ವತಿ, ಗಣಪತಿಯ ಚಿತ್ರಗಳನ್ನು ನಕಲು ಮಾಡುತ್ತಿದ್ದರು "೧೯೨೧ರಲ್ಲಿ ಡ್ರಾಯಿಂಗ ಎಲಿಮೆಂಟ್ರಿ ಗ್ರೇಡ್ ಪಾಸಾಗಿ ೧೯೨೨ರಲ್ಲಿ ಇಂಟರ್ ಮೀಡಿಯಟ್ ಗ್ರೇಡ್ ಪರೀಕ್ಷೆಯಲ್ಲಿ ೧ನೇ ನಂಬರನಲ್ಲಿ ಪಾಸಾದೇನು"[೧೫] ಎಂದು ಹೇಳುವ ಚೆಟ್ಟಿಯವರು ೧೯೨೪ರ ವರೆಗೆ ಮ್ಯಾಟ್ರಿಕ್ ಕಲಿತು ಉತ್ತೀರ್ಣರಾದರು.

೧೯೨೪ರಲ್ಲಿ ಚೆಟ್ಟಿಯವರು ಮ್ಯಾಟ್ರಿಕ್ ಪರೀಕ್ಷೆಗೆ ಕುಳಿತಾಗ ಅವರ ಚಿಕ್ಕಪ್ಪನವರಿಗೆ ಶಿರಸ್ತೆದಾರರಾಗಿ ಬಡ್ತಿ ಹೊಂದಿ ಬೆಳಗಾವಿಗೆ ವರ್ಗವಾದರು. ಚೆಟ್ಟಿಯವರು ಬೆಳಗಾವಿಗೆ ಬಂದರು. ಚಿಕ್ಕಂದಿನಿಂದಲೇ ಕಲೆಯಲ್ಲಿ ಆಸಕ್ತಿಯನ್ನು ಬೆಳಸಿಕೊಂಡ ಇವರಿಗೆ ಕಲಾಶಾಲೆಗೆ ಸೇರಬೇಕೆಂಬ ತವಕ ಆಗ ಹುಟ್ಟಿಕೊಂಡಿತು. ಆಗ ಅವರ ಮನಸ್ಸಿನಲ್ಲಿ ದ್ವಂದ್ವ ಪ್ರಾರಂಭವಾಯಿತು. "ಒಂದು ಕಡೆ ಕಲೆ ಎಳೆಯುತ್ತಿದ್ದರೆ ಇನ್ನೊಂದು ಕಡೆ ಬಿ.ಎ., ಎಲ್.ಎಲ್.ಬಿ ಮುಗಿಸಬೇಕು ನಮ್ಮ ಚಿಕ್ಕಪ್ಪನವರಂತೆ ಸರಕಾರಿ ಅಧಿಕಾರಿಯಾಗಬೇಕೆಂಬ ಸೆಳೆತ ಈ ಎಳೆತ-ಸೆಳೆತಗಳ ಮಧ್ಯದಲ್ಲಿ ಹೊಯ್ದಾಡಿ ಒಂದು ನಿರ್ಧಾರಕ್ಕೆ ಬಂದರು. ಆ ನಿರ್ಧಾರ ಯಾವುದೆಂದರೆ ಕಲೆಯ ಅಭ್ಯಾಸ ಮಾಡುವುದು. ಕಲಾ ಅಧ್ಯಯನಕ್ಕೆ ಮುಂಬಯಿಗೆ ಹೋಗುವ ಸಂಕಲ್ಪವನ್ನು ಆ ಸಂದರ್ಭದಲ್ಲಿ ತೆಗೆದುಕೊಂಡರು.

---

೧೪. ಡಾ. ಲಕ್ಷ್ಮೀದೇವಿ ಗವಾಯಿ : ಕಲಾವಿದ ಎಂ.ಎ.ಚೆಟ್ಟಿ ಜೀವನ ಮತ್ತು ಕಲಾಕೃತಿಗಳು-ಒಂದು ಅಧ್ಯಯನ, (ಅ.ಪ್ರ.ಪಿಎಚ್.ಡಿ.ಮ.ಪ್ರ) ಪು-೧೧೭

೧೫. ಎಂ. ಎ. ಚೆಟ್ಟಿಯವರು ಬರೆದ ಅಪ್ರಕಟಿತ ಹಸ್ತಪ್ರತಿಯಿಂದ

ಒಂದು ದಿನ ಆ ಸಮಯ ಕೂಡಿ ಬಂದಿತು. ಚೆಟ್ಟಿಯವರು ಮುಂಬೈಗೆ ಕಲಾ ಅಭ್ಯಾಸಕ್ಕಾಗಿ ಹೋಗುತ್ತೇನೆಂದು ಹೇಳಿದಾಗ ಚಿಕ್ಕಪ್ಪ ಅವರಿಗೆ ಆಕಾಶವೇ ತಲೆಯ ಮೇಲೆ ಕಳಚಿ ಬಿದ್ದಾಂತಾಯಿತು. ಆಗ ಕಲಿಯುವದಕ್ಕೆ ಶಿರಸಂಗಿ ಲಿಂಗರಾಜ ಟ್ರಸ್ಟ್ ಫಂಡಿನಿಂದ ಸ್ಕಾಲರ್ ಶಿಪ್ ಹಣವೂ ದೊರೆಯಿತು. ಈ ಎಲ್ಲ ಅನುಕೂಲತೆಗಳಿಂದ ಮುಂಬಯಿಯ ಜೆ.ಜೆ ಕಲಾಶಾಲೆಗೆ ಸೇರಿ ಸಮಗ್ರ ಆರು ವರ್ಷಗಳ ಕಾಲ ಡ್ರಾಯಿಂಗ್ ಹಾಗೂ ಪೇಂಟಿಂಗ್‌ದಲ್ಲಿ ಅಭ್ಯಾಸ ಮಾಡಿ ಡಿಪ್ಲೋಮಾ ಪದವಿಯಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕದೊಂದಿಗೆ ಪಾಸು ಮಾಡಿದರು.

೧೯೩೪ರಲ್ಲಿ ಡಿಪ್ಲೋಮಾ ಮುಗಿಸಿಕೊಂಡು ಸೊಲ್ಲಾಪುರಕ್ಕೆ ಬಂದ ಮೇಲೆ. ಅಲ್ಲಿ ಶ್ರೀ ಮಲ್ಲಿಕಾರ್ಜುನಪ್ಪಣ್ಣಾ ಲಂಬಿ ಅವರ ಆಶ್ರಯಕೊಟ್ಟರು. ಅವರ ಮನೆಯಲ್ಲಿ ಊಟ ಮುಗಿಸಿಕೊಂಡು ಕಾಡಾದಿ ಅಣ್ಣಾ ಅವರ ಅಂಗಡಿಯ ಮೂರನೆಯ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದರು. "ನನ್ನ ಕಲೆಯ ಬಗ್ಗೆ ಅತ್ಯಂತ ಅಭಿಮಾನವಿರಿಸಿಕೊಂಡವರಲ್ಲಿ ಅಲ್ಲಿಯ ವಾರದ ಬಾಬಾ ಸಾಹೇಬರು ಒಬ್ಬರು"[೬] ಎಂದು ಸ್ಮರಿಸುವ ಚೆಟ್ಟಿಯವರು ಇಲ್ಲಿಯೇ ಮೊಟ್ಟಮೊದಲು ತಮ್ಮ ವೃತ್ತಿ ಜೀವನ ಆರಂಭಿಸಿದ್ದು. ಸೊಲ್ಲಾಪುರದಲ್ಲಿದ್ದಾಗ ತಮ್ಮ ಚಿಕಪ್ಪನವರ ಆರ್ಥಿಕ ಪರಿಸ್ಥಿತಿಯನ್ನರಿತು ಸಾಕಷ್ಟು ಚಿತ್ರಗಳ ರಚನೆ ಮಾಡಿ ಬಂದ ಹಣವನ್ನು ಆಗ್ಗಾಗೆ ಕಳಿಸುತ್ತಿದ್ದರು. ಅವರಿಗಾಗಿ ರೇಷ್ಮೆ ರುಮಾಲು-ಕೋಟು, ಶರ್ಟುಗಳ ಬಟ್ಟೆ ಧೋತ್ರ ತೆಗೆದುಕೊಂಡು ಹೋಗುತ್ತಿದ್ದರು. ಆ ಕಾಲದಲ್ಲಿ ಜರ್ಮನ್ ಸಿಲ್ವರ್ ತಾಟುಗಳು ಅತ್ಯಂತ ಪ್ರಸಿದ್ಧವಾಗಿದ್ದವೆಂದು ತಿಳಿದುಬರುತ್ತದೆ. ಈಗಿನ ಸ್ಟೀಲು ತಟ್ಟೆಗಳಲ್ಲಿ ಊಟ ಮಾಡುವುದು ಪ್ರತಿಷ್ಠಿತವಾದಂತೆ ಆಗ ಜರ್ಮನ್ ಸಿಲ್ವರ್ ಬಳಸುತ್ತಿದ್ದರು. ಆಗಿನ ಪೇಟೆಯ ಬಗ್ಗೆ ಆ ಕಾಲದ ಹಣದ ಮೌಲ್ಯವನ್ನು ನಾವಿಲ್ಲಿ ಗಮನಿಸಬಹುದು. "ಆಗ ಒಂದು ರೂಪಾಯಿಗೆ ಒಂದು ಜರ್ಮನ್ ಸಿಲ್ವರ್ ತಾಟು ಒಂದುವರೆ ರೂಪಾಯಿಗೆ ಒಂದು ಚರಿಗೆ, ಎಂಟಾಣೆಗೊಂದು ಲೋಟ, ನಾನು ಆಗಾಗ್ಗೆ ಅವುಗಳನ್ನು ಊರಿಗೆ ಒಯ್ದು ಸಾಕಷ್ಟು ಸಾಮಾನುಗಳನ್ನು ಮಾಡಿದ್ದೆ"[೭] ಎಂದು ಚೆಟ್ಟಿಯವರು ತಮ್ಮ ಸೊಲ್ಲಾಪುರದ ವಾಸ್ತವ್ಯ ತಮ್ಮ ಬದುಕಿನಲ್ಲಿ ಒಂದು ತಿರುವನ್ನು ತಂದಿತೆಂದು ಹೇಳಿದ್ದಾರೆ.

೧೯೨೮ರಲ್ಲಿ ಚೆಟ್ಟಿಯವರ ಮದುವೆ ಆಯಿತು. ಅಥಣಿಯ ಜಿಂಝುರವಾಡ ಮನೆತನದ ಹೆಣ್ಣುಮಗಳು ಅವರ ಸೋದರ ಮಾವನಾದ ಶ್ರೀ ಸಾತಪ್ಪ ಹಾಗೂ ನೀಲಮ್ಮನವರ ಮಗಳಾದ ಸುಂದರಮ್ಮನವರನ್ನು ಮದುವೆಯಾದರು. ಮುಂಬೈಯಿಂದ ನೇರವಾಗಿ ಸೊಲ್ಲಾಪುರಕ್ಕೆ ಬಂದು ಅಲ್ಲಿ ಎಂಟು ವರ್ಷಗಳ ಕಾಲ ಕಲಾವೃತ್ತಿಯನ್ನು ಕೈಗೊಂಡ ಸಂದರ್ಭದಲ್ಲಿ ಬೆಳಗಾವಿಯಿಂದ ಗದುಗಿಗೆ ಮಾಮಲೇದಾರರಾಗಿ ಬಂದಿದ್ದ ಚಿಕ್ಕಪ್ಪ ಅವರು ಸೊಲ್ಲಾಪುರ ಬಿಟ್ಟು ಬರಬೇಕು ಎಂದು ತಾರು ಕೊಟ್ಟಿದರು. ಅಂದೇ ಸೊಲ್ಲಾಪುರಕ್ಕೆ ಶರಣು ಹೊಡೆದು ಗದುಗಿಗೆ ಬಂದರು. ಆಗ ಗದುಗಿನ ಜೋಡು ಹನುಮಂತ ದೇವರ ಗುಡಿಯ ಎದುರಿನ ಮನೆಯಲ್ಲಿ ಇವರ ಚಿಕ್ಕಪ್ಪ ವಾಸವಾಗಿದ್ದರು. ಮುಂದೆ ಚೆಟ್ಟಿಯವರು ಗದುಗಿನಲ್ಲಿಯೇ ಇರುವ ನಿರ್ಧಾರವನ್ನು ತೆಗೆದುಕೊಂಡರು.

---

೦೬. ಡಾ. ಲಕ್ಷ್ಮೀದೇವಿ ಗವಾಯಿ : ಕಲಾಪಿದ ಎಂ.ಎ.ಚೆಟ್ಟಿ ಜೀವನ ಮತ್ತು ಕಲಾಕೃತಿಗಳು-ಒಂದು ಅಧ್ಯಯನ. (ಅ.ಪ್ರ.ಪಿಎಚ್.ಡಿ.ಮ.ಪ್ರ) ಪು-೧೨೮

೦೭. ಅದೇ., ಪು-೧೩೪

೧೯೪೦ರಲ್ಲಿ ಅವರ ಚಿಕ್ಕಪ್ಪ ಮಾಮಲೇದಾರಕಿಯಿಂದ ನಿವೃತ್ತಿ ಹೊಂದಿ ಅಥಣಿಗೆ ಹೋದರು. ಹೋಗುವ ಮುನ್ನ ಇಡೀ ಸಂಸಾರದ ಭಾರ ಇವರ ಮೇಲೆ ಹಾಕಿದರು. ಹಾಗೇ ಒಂದು ಮಾತನ್ನು ತಿಳಿಹೇಳಿದರು. "ಬದುಕಿನಲ್ಲಿ ನಾವು ನಮ್ಮ ಶೀಲ ಸಚ್ಚಾರಿತ್ರ್ಯದಿಂದ ಪ್ರತಿಷ್ಠೆಯನ್ನು ಗಳಿಸಿಕೊಂಡರೆ ಮಾತ್ರ ಎಲ್ಲರ ಬಾಯಿಯಲ್ಲಿ ಉಳಿಯುತ್ತೇವೆ. ಹಣ ಕಳೆದುಕೊಂಡರೆ ಮತ್ತೆ ದುಡಿದು ಗಳಿಸಬಹುದು. ಗುಣಕಳೆದುಕೊಂಡರೆ ಮುಗಿಯಿತು ಜೀವನ ಇತಿಶ್ರೀ" ಎಂದು ಹೇಳಿದರು. "ಸೃಷ್ಟಿಯಲ್ಲಿರುವ ಕಹಿಯನ್ನು ನುಂಗಿ ಸಿಹಿಯನ್ನು ಮಾತ್ರ ನೀಡುವ ಮಹಾಯೋಗಿಗಳು ಕಲಾಕಾರರು' ಎನ್ನುವಂತೆ ಚೆಟ್ಟಿಯವರು ಸಹಿತ ತಮ್ಮ ಜೀವನದ ಎಡರು ತೊಡರುಗಳನ್ನು ಲೆಕ್ಕಿಸದೆ ನಿರಂತರ ಕಲಾ ಸೇವೆಗೆ ತಮ್ಮ ಜೀವನವನ್ನು ಮುಡುಪಾಗಿಟ್ಟವರು. ಇವರು ಕಾಶ್ಮೀರದಿಂದ ಕನ್ಯಾಕುಮಾರಿಯವರಿಗೆ ಸಂಚರಿಸಿದ್ದಾರೆ. ಧಾರವಾಡ, ಬೆಂಗಳೂರು, ಮುಂಬಯಿ, ಸೊಲ್ಲಾಪುರ, ಅಕ್ಕಲಕೋಟ, ದೆಹಲಿ, ಗ್ವಾಲಿಯರ್, ಇಂದೋರ್ ಮೊದಲಾದ ಪ್ರಮುಖ ನಗರಗಳಲ್ಲಿ ಇವರ ಚಿತ್ರಗಳಿವೆ.

ಚಟ್ಟಿಯವರು ಗದುಗಿನ ವಿಜಯ ಕಲಾಮಂದಿರದಲ್ಲಿ ಮೂವತ್ತೆರಡು ವರ್ಷ ಕಲಾಶಿಕ್ಷಕರಾಗಿ ಉಪಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಚೆಟ್ಟಿಯವರ ಏಕವ್ಯಕ್ತಿ ಕಲಾ ಪ್ರದರ್ಶನಗಳು ಅತಿ ವಿರಳ, ಅವರೇ ಹೇಳುವಂತೆ "ಪ್ರಚಾರಕ್ಕಾಗಿ ನಾನೆಂದೂ ಹಂಬಲಿಸಿಲ್ಲ. ಪ್ರಸಿದ್ಧಿಯ ಹುಟ್ಟು-ಹವ್ಯಾಸ ನನಲ್ಲಿ ಇರದೇ ಇರುವುದರಿಂದ ನನ್ನ ಕಲೆಯ ಏಕವ್ಯಕ್ತಿ ಕಲಾ ಪ್ರದರ್ಶನ ಅತ್ಯಂತ ಕಡಿಮೆ" ಎಂದು ಹೇಳುತ್ತಾರೆ. ಹಿಂದೊಮ್ಮೆ ಗದುಗಿನ ವಿಜಯ ಕಲಾಮಂದಿರದಲ್ಲಿ ಸಾಮೂಹಿಕ ಚಿತ್ರಕಲಾ ಪ್ರದರ್ಶನವೇರ್ಪಟ್ಟಿತ್ತು. ಅಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ರ್‍ಯಾಂಗ್ಲರ್ ಡಿ.ಸಿ. ಪಾಟೆಯವರು ಚೆಟ್ಟಿಯವರ ಚಿತ್ರಗಳನ್ನು ಕಂಡು ಮಂತ್ರ ಮುಗ್ಧರಾಗಿ ವಿದೇಶಕ್ಕೆ ಹೋಗಿ ಬಂದವರಿಗಿಂತಲೂ ಇಲ್ಲಿಯೇ ಇರುವ ಶ್ರೀ ಮುರಿಗೆಪ್ಪನವರ ಚಿತ್ರಗಳು ಎಷ್ಟೋ ಪಾಲು ಮೇಲುವಾಗಿವೆ ಎಂದು ಪ್ರಶಂಸಿದ್ದಾರೆ.

- ಸಹೃದಯ, ಸರಳ ಸಜ್ಜನಿಕೆಯ, ನಿರಾಡಂಬರ ನಿರಹಂಕಾರದ ಇವರ ನಡತೆಗೆ ನಾಡಿನ ಜನರೇ ಹೆಚ್ಚು ಸನ್ಮಾನ ಪುರಸ್ಕಾರಗಳನ್ನು ನೀಡಿ ಗೌರವಿಸಿದ್ದಾರೆ. ನಾಡಿನ ಅನೇಕ ಮಠ-ಮಾನ್ಯಗಳು, ಸಂಘ ಸಂಸ್ಥೆಗಳು ಸನ್ಮಾನಿಸಿವೆ.
- ದಿಲ್ಲಿಯ ಆಲ್ ಇಂಡಿಯಾ ಸೊಸೈಟಿಯವರು ರಜತ ಪದಕವಿತ್ತು ದಿಲ್ಲಿಗೆ ಆಮಂತ್ರಿಸಿ ಗೌರವಿಸಿದ್ದಾರೆ.

ಕಲಾಗುರುಗಳಾದ ದುರಂಧರ ಹಾಗೂ ತಾಸ್ಕರ್ ಅವರಾದ ಜಲವರ್ಣ ಚಿತ್ರ ರಚನೆಯ ತಂತ್ರವನ್ನು ಅರಿತ ಎಂ.ಸಿ. ಚೆಟ್ಟಿಯವರು ಈ ಮಾಧ್ಯಮದಲ್ಲಿ ಅದ್ಭುತ ಸಾಧನೆ ಮಾಡಿದ ಕಲಾವಿದರು. ಅಕಾಡೆಮಿಕ್ ಶೈಲಿಯನ್ನು ರೂಢಿಸಿಕೊಂಡು ಬಂದ ಚೆಟ್ಟಿಯವರು ಜಲವರ್ಣಗಳನ್ನು ಪ್ರಯೋಗಿಸಿ ಅಭಿವ್ಯಕ್ತಿಗಳಿಸಿದ ಚಿತ್ರಗಳು ಅನೇಕ. ಪಾರದರ್ಶಕ ಜಲವರ್ಣಗಳಲ್ಲಿ ಬಿಳುಪನ್ನು ಬಳಸುವುದಿಲ್ಲ. ವರ್ಣದ ಬಿಳುಪನ್ನು ಕುಂಚದಿಂದಲೇ ನಿಯಂತ್ರಿಸುವುದನ್ನು ಕರಗತ ಮಾಡಿಕೊಂಡಿದ್ದಾರೆ. ಜಲವರ್ಣ ಚಿತ್ರಗಳನ್ನು ರಚಿಸುವುದೆಂದರೆ ಕಲಾವಿದನಿಗೊಂದು ಸವಾಲು ಇದ್ದಂತೆ ಆಗ ಒದ್ದೆ ತಂತ್ರದಲ್ಲಿಯೇ ಹೆಚ್ಚು ಜಲವರ್ಣ ಚಿತ್ರಗಳನ್ನು ರಚಿಸುತ್ತಿದ್ದರು. ಚೆಟ್ಟಿಯವರು ಕೂಡಾ ರಚಿಸಿದ್ದಾರೆ. "ಒದ್ದೆ ತಂತ್ರ ಕಲಾವಿದನಿಗೆ ಒಂದು ಸವಾಲಿನಂತೆ. ನೀರಿನಿಂದ ಒದ್ದೆ

ಮಾಡಿದ ಕಾಗದ ಮೇಲೆ ಬಣ್ಣ ಚೆಲ್ಲಿದಾಗ ಅವು ಎಲ್ಲೆಂದರಲ್ಲಿ ಓಡಾಡತೊಡಗುತ್ತವೆ. ಅವನ್ನು ತಹಬಂದಿಗೆ ತರುವ ಹಂತದಲ್ಲಿ ಕಲಾವಿದ ಸಾಕಷ್ಟು ಕಸರತ್ತು ಮಾಡಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಪರಿಶ್ರಮ ಹಾಗೂ ತಾಲೀಮು ಬೇಕಾಗುತ್ತದೆ" ಅಂತಹ ಒಂದು ಸಾಧನೆ ಚೆಟ್ಟಿಯವರಲ್ಲಿತ್ತು. ಚೆಟ್ಟಿಯವರು ತೈಲ ವರ್ಣಗಳಲ್ಲಿಯೂ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ.

ಚಿತ್ರ-೩. ಮಸೀದಿಯ ದೃಶ್ಯ, ಕಲಬುರ್ಗಿ

ಕಲಬುರ್ಗಿಯಲ್ಲಿನ ದೊಡ್ಡ ಮಸೀದಿಗಳಲ್ಲಿ ಇದೊಂದು. ಖಾಜಾ ಬಂದೇ ನವಾಜ್ ಮಸೀದಿಯ ಹಿಂಭಾಗದಲ್ಲಿ ಈ ದೃಶ್ಯವು ಕಂಡುಬರುತ್ತದೆ. ಎಂ. ಎ. ಚೆಟ್ಟಿಯವರ ಈ ಕಲಾಕೃತಿಯಲ್ಲಿ ನೆರಳು ಬೆಳಕಿನ ಸಂಯೋಜನೆಯು ಅತ್ಯಂತ ನೈಜರೂಪದಲ್ಲಿ ಕಂಡುಬಂದಿವೆ. ಕಟ್ಟಡದ ಶೈಲಿ, ವಾಸ್ತು, ಜನರ ಓಡಾಟದ ದೃಶ್ಯವು ನೋಡುಗರಲ್ಲಿ ಆಕರ್ಷಣೆಯನ್ನುಂಟು ಮಾಡುತ್ತದೆ. ಎಂ. ಎ. ಚೆಟ್ಟಿಯವರು ರಚಿಸಿದ ಹಲವಾರು ನಿಸರ್ಗ ಚಿತ್ರಗಳಲ್ಲಿ ಕಟ್ಟಡಗಳ ಹತ್ತಿರ ಅಥವಾ ಮರಗಳ ಹತ್ತಿರ ಒಂದು ವಸ್ತುವನ್ನು ಸಂಯೋಜಿಸಿ ಅಲ್ಲಿ ನಿಸರ್ಗ ಮತ್ತು ಮಾನವ ನಿರ್ಮಿತ ವಸ್ತುಗಳ ಸಮ್ಮಿಲನಗಳು ಕಂಡುಬರುತ್ತವೆ.

ಚಿತ್ರ-೪. ಮರದ ಬೊಡ್ಡೆಯ ಚಿತ್ರ

ಎಂ. ಎ. ಚೆಟ್ಟಿಯವರ ಕಲಾಕೃತಿಗಳಲ್ಲಿ ಅಧಿಕವಾಗಿ ಕಂಡುಬರುವುದು ಮರದ ಬೊಡ್ಡೆಯ ಚಿತ್ರಗಳು. ಒಂದು ಚಿತ್ರಕ್ಕೆ ಪ್ರಶಸ್ತಿಯೂ ಲಭಿಸಿದೆ. ಮರದ ಬೊಡ್ಡೆಯನ್ನೇ ಪ್ರಮುಖ ಕೇಂದ್ರವಾಗಿ ಚಿತ್ರದಲ್ಲಿ ಚಿತ್ರಿಸಿರುವುದರಿಂದ ಅದರ ಒಂದು ಸಂಪೂರ್ಣ ಆಕೃತಿಯ ರಚನೆಗೆ ಮಹತ್ವ ನೀಡಿದ್ದು ಕಂಡು ಬರುತ್ತದೆ. ತೈಲ ವರ್ಣದಲ್ಲೇ ಅಪಾರದರ್ಶಕದ ರೀತಿಯಲ್ಲಿ ಈ ಚಿತ್ರ ನೈಜ್ಯವಾಗಿ ಚಿತ್ರಿತಗೊಂಡಿದೆ. ಬೊಡ್ಡೆಯ ಮೇಲೆ ಬೆಳಕು ನೆರಳಿನ ವಿಂಗಡಣೆ. ಮರದ ತೊಗಟೆಯ ವರ್ಣ ಅದರ ನೈಜ್ಯ ಮೈವಳಿಕೆಗೆ ಪೂರಕವಾಗಿದೆ. ನೆರಳಿನ ಭಾಗದಲ್ಲೂ ಬೇರೆ ಬೇರೆ ವರ್ಣಗಳನ್ನು ಇಲ್ಲಿ ಲೇಪಿಸಿರುವುದನ್ನು ಕಾಣುತ್ತೇವೆ. ಮೇಲ್ಭಾಗ ಅಲ್ಲಲ್ಲಿ ಕೆತ್ತಿದಂತಿದೆ. ಇಂತಹ ಪರಿಣಾಮ ಬೀರುವ ಚೆಟ್ಟಿಯವರ ಕುಂಚಗಾರಿಕೆಯ ಕೈಚಳಕ ಅತ್ಯಂತ ಪ್ರಭಾವ ಶಾಲಿಯಾದುದು. ಅಂತೆಯೇ ನಮ್ಮ ಮನಸ್ಸಿನಲ್ಲಿ ಆ ಭಾವನೆಗಳು ಥಟ್ಟನೆ ಹೊಳೆಯುತ್ತವೆ. ಗಿಡದ ಎಲೆಗಳನ್ನು ಕುಂಚ ಸಣ್ಣ ಸಣ್ಣ ಹೊಡೆತಗಳಿಂದ ಚಿತ್ರಿಸಿದ್ದಾರೆ. ಇದರಿಂದ ಅಲ್ಲಿಯೂ ನೆರಳು ಬೆಳಕಿನ ವಿಂಗಡಣೆ ಸ್ಪಷ್ಟವಾಗಿದೆ. ಹಿನ್ನಲೆಯಲ್ಲೂ ಸಾಲು ಮರಗಳಿವೆ. ಆ ಗಿಡ ಮರಗಳ ಮಧ್ಯದಿಂದ ಹರಿದು ಬಂದ ಬೆಳಕು ಭೂಮಿಯ ಮೇಲೆ ಚೆಲ್ಲಿ ಅಲ್ಲಲ್ಲಿ ನೆರಳನ್ನು ನಿರ್ಮಿಸಿದನ್ನು ಕಾಣಬಹುದು. ಬಣ್ಣ, ಬೆಡಗುಗಳನ್ನು ತಮ್ಮ ಚಿತ್ರಗಳಲ್ಲಿ ಸೆರೆಹಿಡಿಯುವುದರಲ್ಲಿ ಚೆಟ್ಟಿಯವರು ನಿಸ್ಸೀಮರೆನಿಸಿದ್ದಾರೆ. ಯಾವುದೇ ವಸ್ತುವಿರಲಿ ಅದರ ಪ್ರತಿಯೊಂದು ಭಾಗಕ್ಕೂ ಅಷ್ಟೇ ಪ್ರಾಮುಖ್ಯತೆ ನೀಡಿ ಅಷ್ಟೇ ಸತತ ಅಭ್ಯಾಸದ ಪರಿಣಾಮ ನಾವು ಇಂತಹ ಚಿತ್ರಗಳಲ್ಲಿ ಗುರ್ತಿಸಬಹುದಾಗಿದೆ.

ನಿಸರ್ಗ ಚಿತ್ರಗಳಲ್ಲಿಯ ವರ್ಣಗಾರಿಕೆ


ನಿಸರ್ಗ ಚಿತ್ರದಲ್ಲಿ ವಿವಿಧ ಆಕೃತಿಗಳು ಹಂಚಿ ಚಿತ್ರಿಸುವ ಜಾಣ್ಮೆ ಇರಬೇಕಾಗುತ್ತದೆ ಕೆಲವೊಮ್ಮೆ ಕೆಲವು ಬೇಡವಾದ ಆಕೃತಿಗಳನ್ನು ತೆಗೆದು ಹಾಕಬೇಕಾಗುತ್ತದೆ. ಇದೇ ಕಲಾವಿದನಿಗೂ ಕ್ಯಾಮರಾಕ್ಕೂ ಇರುವ

ಎಂ.ಎ. ಚೆಟ್ಟಿಯವರ ನಿಸರ್ಗ ಕಲಾಕೃತಿಗಳು





ಜಲವರ್ಣ ಮಸೀದಿಯ ದೃಶ್ಯ ಕಲಬುರಗಿ



ಜಲವರ್ಣ ಮರದ ಬೊಡ್ಡೆಯ ಚಿತ್ರ

ವ್ಯತ್ಯಾಸ ಇಂತಹ ಚಿತ್ರಗಳಲ್ಲಿ ನೆಲ, ನೀರು ಆಕಾಶಗಳ ಕಟ್ಟಡಗಳನ್ನು ವಿವಿಧ ರೀತಿಯ ವೈಭವಗಳನ್ನು ಸೂಕ್ಷ್ಮವರ್ಣಗಳ ವೈವಿಧ್ಯದಿಂದ ಚಿತ್ರಿಸಿದ್ದಾರೆ. ಮೊದಲಹಂತದಲ್ಲಿ ಅವರು ಮುಂಬೈನಲ್ಲಿ ಇದ್ದಾಗ ಚಿತ್ರಿಸಿದ ಚಿತ್ರವಿದು. ಮುಂಬೈಯಿಯ ಆಗಿನ ಕಾಲದ ಕಟ್ಟಡಗಳ ವಿನ್ಯಾಸವನ್ನು ತಮ್ಮ ಚಿತ್ರದಲ್ಲಿ ಸೆರೆಹಿಡಿದಿದ್ದಾರೆ. ಆಕಾಶದಲ್ಲಿಯೇ ಮೊಡಗಳು ನೈಜ್ಯವಾಗಿ ಚಿತ್ರಿತವಾಗಿವೆ. ವಾಸ್ತುಗಳ ವಿನ್ಯಾಸವನ್ನು ವಿವರವಾಗಿ ಚಿತ್ರಿಸಿದ್ದಾರೆ. ಬೆಳಕು ನೆರಳಿನ ವಿಂಗಡಣೆಯಿಂದ ಚಿತ್ರದ ಬಲಭಾಗದ ಕಟ್ಟಡದ ನೆರಳು ಅದರ ಎದುರುಗಿನ ಕಟ್ಟಡದವರೆಗೆ ಅಲ್ಲಲ್ಲಿ ಹರಡಿದಂತೆ ಚಿತ್ರಿಸಿದ್ದಾರಲ್ಲದೇ ಮೇಲಿನಿಂದ ಈ ದೃಶ್ಯವನ್ನು ಚಿತ್ರಿಸಿದ್ದರಿಂದ ಕೆಳಗಿನ ಜನರನ್ನು ಗುಂಪಾಗಿ ಹೋಗುತ್ತಿರುವಂತೆ ಕಂಡರೂ ದೂರದಿಂದ ಆಕೃತಿಗಳ ನಿಖರ ರೂಪದಂತೆ ಪರಿಣಾಮಕಾರಿಯಾಗಿ ವರ್ಣಲೇಪನ ಮಾಡಿದ್ದಾರೆ. ವರ್ಣಗಳ ಮುಖಾಂತರವೇ ಅವು ಎಷ್ಟು ಹಳೆಯ ಕಟ್ಟಡಗಳೆಂಬುದು ಗೋಚರವಾಗುತ್ತದೆ. ಮೊದಮೊದಲು ಚಿತ್ರಿಸಿದಂಥ ಚಿತ್ರಗಳು ಇವಾದ್ದರಿಂದ ಇಲ್ಲಿ ಪಾಶ್ಚಾತ್ಯ ಶೈಲಿಯ ಪ್ರಭಾವ ಕಾಣುತ್ತೇವೆ. ಚಿತ್ರದಲ್ಲಿ ದೃಶ್ಯಂತರವಿದೆ. ಜನರ ಸಂಚಾರದಿಂದ ಚಿತ್ರದಲ್ಲಿ ಚಲನೆಯನ್ನು ಕಾಣುತ್ತೇವೆ.

ಸಂಯೋಜನಾ ಚಿತ್ರಗಳಲ್ಲಿಯ ವರ್ಣಗಾರಿಕೆ

ಈ ಚಿತ್ರಗಳಲ್ಲಿಯೂ ನಾವು ಮೂರು ಹಂತಗಳನ್ನು ಕಾಣುತ್ತೇವೆ. ಮೊದಮೊದಲು ಅಂದರೆ ಕಲಾಭ್ಯಾಸ ಮುಗಿದ ತಕ್ಷಣ ರಚಿಸಿದ ಚಿತ್ರಗಳು, ಎರಡನೆಯದಾಗಿ ಅನೇಕ ಧಾರ್ಮಿಕ, ಐತಿಹಾಸಿಕ ವಿಷಯಗಳ ಚಿತ್ರಗಳು, ತದನಂತರದಲ್ಲಿ ಇತ್ತೀಚೆಗೆ ಚಿತ್ರಿಸಿದ ಸಾಮಾಜಿಕ, ಜಾನಪದ ವಿಷಯಗಳ ಮೇಲೆ ಚಿತ್ರಿಸಿದ ಚಿತ್ರಗಳು. ಇಲ್ಲಿ ಆಕೃತಿಗಳ ಜೊತೆಗೆ ಅವರ ವರ್ಣಗಾರಿಕೆಯೂ ಹಂತಹಂತವಾಗಿ ಬದಲಾವಣೆ ಆಗಿರುವುದನ್ನು ಗಮನಿಸುತ್ತೇವೆ. ಅದನ್ನು ಈ ಚಿತ್ರಗಳ ಮೂಲಕ ಮನನ ಮಾಡಿಕೊಳ್ಳಬೇಕಾಗಿದೆ.

೫.೩. ಎಂ.ವಿ. ಮಿಣಜಗಿ

ಇದು ಪಣ್ಯಭೂಮಿ. ಈ ನೆಲದ ಕಣಕಣಗಳಲ್ಲಿ ದೈವಶಕ್ತಿ ತುಂಬಿಕೊಂಡಿದೆ. ಇಲ್ಲಿ ಅನೇಕ ಮಹಾಪುರುಷರು, ವಿಭೂತಿ ಪುರುಷರು, ರಸ ಋಷಿಗಳು, ಕವಿಗಳು, ಕಲಾವಿದರು ಬಾಳಿ ಬೆಳಗಿದ್ದಾರೆ. ಈ ಮಹಾನ್ ವ್ಯಕ್ತಿಗಳ ಸಾಲಿನಲ್ಲಿ ಹಿರಿಯ ಕಲಾವಿದರಾದ ಡಾ. ಎಂ.ವಿ. ಮಿಣಜಗಿಯವರೂ ಒಬ್ಬರು. ಇವರು ತಮ್ಮ ಕಲೆಯಿಂದ ಸತ್ಯ-ಸೌಂದರ್ಯದ ದರ್ಶನ ಮಾಡಿಸಿ ನಾಡನ್ನು, ರಾಷ್ಟ್ರವನ್ನು ಬೆಳಗಿದ ಧೀಮಂತ ಪುರುಷರು. ಇವರು ಚಿತ್ರಕಲಾವಿದರು, ಶಿಕ್ಷಣ ತಜ್ಞರು, ಶಿಕ್ಷಕರು, ಭಾರತೀಯ ಚಿತ್ರಕಲೆಗೆ ಹೊಸತಿರುವು ನೀಡಿ, ಕಲಾಶಾಲೆ ತೆರೆದು ನಮ್ಮ ಕನಸುಗಳಿಗೆ ಕಲ್ಪನೆಗಳಿಗೆ, ವಿಚಾರಗಳಿಗೆ, ಸಾಕಾರರೂಪ ನೀಡಿದವರು. ಸಂಕಲ್ಪ, ನಿಷ್ಠೆ, ಶ್ರಮ, ಶ್ರದ್ಧೆಗಳಿಂದ ನಾಡಿನಲ್ಲಿ ತಮ್ಮ ಕಲಾಶಾಲೆಯನ್ನು ಆದರ್ಶ ಶಾಲೆಯನ್ನಾಗಿ ಮಾಡಿದವರು.

ಡಾ. ಮಿಣಜಗಿಯವರ ಹೆಸರು ಚಿತ್ರಕಲಾ ಪ್ರಪಂಚದಲ್ಲಿ ಬಹುನ್ನತ ಸ್ಥಾನದಲ್ಲಿ ನಿಲ್ಲುತ್ತದೆ. ದೇಶ-ವಿದೇಶದ ಜನರನ್ನು ಅವರ ಚಿತ್ರಗಳು ಮಂತ್ರ ಮುಗ್ಧಗೊಳಿಸಿವೆ. ಇವರು ಕಲಾಕ್ಷೇತ್ರದಲ್ಲಿ ತಮ್ಮೊಬ್ಬರ ಕಲ್ಯಾಣ ಬಯಸದೆ ಸಮಸ್ತ ಕಲಾವಿದರ ಒಳಿತನ್ನೇ ಬಯಸಿ ನಾಡಿಗಾಗಿ, ದೇಶಕ್ಕಾಗಿ ದುಡಿದವರು. ವಿದೇಶಗಳಲ್ಲಿ ಬದುಕಿದರೂ ತಾಯಿನೆಲವನ್ನು ಬಹುವಾಗಿ ಪ್ರೀತಿಸುತ್ತಿದ್ದರು. ಇಲ್ಲಿಯ ಭವ್ಯ ಪರಂಪರೆಯನ್ನು ಗೌರವಿಸಿದರು.

ಸಂಪ್ರದಾಯದ ನೆರಳಲ್ಲಿ ಬದುಕಿದರು. ಅವರ ನಡೆ-ನುಡಿ ಬದುಕು ಮೆಚ್ಚುವಂಥದು. "ಬೆಳಕಿನ ಪರಿಭಾಷೆ ಪುಸ್ತಕದಲ್ಲಿ ಸಿಕ್ಕುವುದಿಲ್ಲ; ಅದನ್ನು ಪಡೆಯಲು ನೀನೆ ದೀಪವಾಗಿ ಉರಿಯುವುದನ್ನು ಕಲಿ" ಎನ್ನುವ ಮುನಿ ರೂಪಚಂದರ ಮಾತು ಡಾ. ಮಿಜಣಗಿಯವರ ತ್ಯಾಗದ ಬದುಕನ್ನು ಅರಿತಾಗ ನೆನಪಾಗುತ್ತದೆ. ಇವರು ಕಲೆಗಾಗಿ ತಮ್ಮನ್ನು ತಾವೇ ಉರಿಸಿಕೊಂಡು ಚಿತ್ರಕಲಾ ಕ್ಷೇತ್ರದಲ್ಲಿ ಬೆಳಕಾದರು.


ಡಾ. ಮಿಣಜಗಿಯವರು ನಡೆದು ಬಂದ ದಾರಿ ವೀಕ್ಷಿಸಿದಾಗ ಅದು ಸರಳ ಸುಂದರವಿರಲಿಲ್ಲ. ಗುರಿ ತಲುಪಲು ಕಲ್ಲು ಮುಳ್ಳುಗಳಲ್ಲಿ ಹಾದು ಬಂದಿದ್ದಾರೆ. ಬಿಸಿಲು, ಮಳೆ, ಚಳಿ ಗಮನಿಸಿದೆ ಚಲಿಸಿದ್ದಾರೆ. ಗುರಿತಲುಪುವ ಹುಮ್ಮಸ್ಸಿನಲ್ಲಿ ಆಯಾಸವಿಲ್ಲದಂತೆ ನಡೆದಿದ್ದಾರೆ. ಮಹೋನ್ನತ ಗುರಿಸಾಧಿಸುವ ಉತ್ಸುಕತೆಯಲ್ಲಿ ನೂರಾರು ಸುಂದರ ಕನಸುಗಳಲ್ಲಿ ಎಂಥ ಪಯಣವೂ ಸುಖಪ್ರದ. ಆ ದೀರ್ಘ ಶ್ರಮದ ದಾರಿ, ಚಲಿಸಿದ ಮಾರ್ಗ ಬದುಕನ್ನು ಎತ್ತರಕ್ಕೊಯ್ದು, ಆದರ್ಶ ಮಾಡಿದೆ. ಇಂತಹ ಮಹಾನ್ ವ್ಯಕ್ತಿಗೆ ಜನ್ಮ ನೀಡದ ಭಾಗ್ಯ ಕನ್ನಡ ನಾಡಿನ ವಿಜಯಪುರಕ್ಕೆ ಸಲ್ಲುತ್ತದೆ. ೧೯೦೧ ಜನವರಿ ೩೦ ರಂದು ವ್ಯಾಪರಸ್ಥ ಶ್ರೀಮಂತ ಮನೆಯಲ್ಲಿ ಶ್ರೀಯುತ ವೀರಪ್ಪ ಶ್ರೀಮತಿ ಶರಣವ್ವ ದಂಪತಿಗಳ ಉದರದಿಂದ ಜನ್ಮತಾಳಿದ ಭಾಗ್ಯ ಮಿಣಜಗಿಯವರದು. ತಂದೆ ತಾಯಿಗಳ ಪ್ರೀತಿಯ ಮಗನಾಗಿ ಮಡಿವಾಳಪ್ಪ ಬೆಳೆದ. ಒಳ್ಳೆ ಸಂಸ್ಕಾರ, ಸಂಸ್ಕೃತಿ ಬಾಲ್ಯದಿಂದಲೇ ದೊರೆತುದು ಅವರ ಶ್ರೇಷ್ಠ ಬದುಕಿಗೆ ಕಾರಣವಾಯಿತು. ವಿಧಿಯ ವಿಕೃತ ದೃಷ್ಟಿ ಮಡಿವಾಳಪ್ಪನವರಿಗೆ ತಾಗಿದಾಗ ಬಾಲ್ಯದಲ್ಲಿಯೇ ತಾಯಿಯನ್ನು ಕಳೆದುಕೊಂಡರು. ತಂದೆ ಆ ಸ್ಥಾನವನ್ನು ತುಂಬಲು ಪ್ರಯತ್ನಿಸಿ, ಮಗನನ್ನು ಪ್ರೀತಿ ವಾತ್ಸಲ್ಯದಿಂದ ಬೆಳೆಸಿದರು. ವಿಧಿಯ ಪೆಟ್ಟು ಮತ್ತೆ ಬಿದ್ದಾಗ ಇದ್ದೊಬ್ಬ ಹಿರಿಯ ಸಹೋದರನನ್ನೂ ಕಳೆದುಕೊಂಡು ಏಕಾಂಗಿಯಾದರು.[೮]

ಪ್ರಾಥಮಿಕ, ಮಾಧ್ಯಮಿಕ ಓದು ಬಿಜಾಪುರದಲ್ಲೇ ನಡೆಯಿತು. ಓದಿದ್ದು ಮರಾಠಿ ಮಾಧ್ಯಮ. "ಬೆಳೆವ ಸಿರಿ ಮೊಳಕೆಯಲ್ಲಿಯೇ ನೋಡಾ" ಎನ್ನುವಂತೆ ಬಾಲ್ಯದಲ್ಲೆಯೇ ಮಿಣಜಗಿಯವರು ಕಲಾಪ್ರತಿಭೆ ಪ್ರದರ್ಶಿಸಿ ಗೆಳೆಯರ, ಗುರುಗಳ ಮನಮೆಚ್ಚಿಸಿದರು. ೧೧-೧೨ ವರ್ಷದ ವಿದ್ಯಾರ್ಥಿ ಜೀವನದಲ್ಲಿಯೇ ಚಿತ್ರ, ಸಂಗೀತ ಕಲೆಗಳಲ್ಲಿ ಆಸಕ್ತಿ. ಮಿಣಜಗಿಯವರು ಬೆಳೆದಂತೆ ಅವರಲ್ಲಿ ಸುಪ್ತವಾಗಿದ್ದ ಕಲಾಚೇತನ ಜಾಗೃತವಾಗುತ್ತಾ, ಮನಸ್ಸು ಉಳಿದೆಲ್ಲ ವಿಚಾರಗಳಿಗಿಂತ ಹೆಚ್ಚು ಕಲೆಯತ್ತವಾಲಿತು. ಮನಸ್ಸು ಚಿತ್ರ ಕಲೆಯಿಂದ ತುಂಬಿ ತುಳುಕಿತು. ಆಗಲೇ ಅವರು ಮುಂಬಯಿಯ ಜೆ.ಜೆ ಕಲಾಶಾಲೆಗೆ ಸೇರಿದ್ದು. ಸತತ ಪ್ರಯತ್ನದಿಂದ ಪರಿಶ್ರಮದಿಂದ ಅಭ್ಯಾಸಿಸಿ 'ಆರ್ಟ್ ಮಾಸ್ಟರ್' ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದರು. ೧೯೨೮ ಅದೇ ಸ್ಕೂಲಿನಿಂದ 'ಡಿಪ್ಲೋಮಾ ಇನ್ ಪೇಂಟಿಂಗ್' ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಪ್ರಪ್ರಥಮ ವಿದ್ಯಾರ್ಥಿ ಇವರಾದರು. ಇವರ ಪ್ರತಿಭೆ, ಆಸಕ್ತಿ, ಪ್ರಯತ್ನ ಇಂಗ್ಲೆಂಡಿನ "ರಾಯಲ್ ಕಾಲೇಜ ಆಫ್ ಆರ್ಟ್ಸ್"ನ ಮೆಟ್ಟಿಲು ಹತ್ತುವಂತೆ ಮಾಡಿತು. ೧೯೨೯ರಲ್ಲಿ ಇವರ ಉಚ್ಚ ವ್ಯಾಸಂಗ ಪ್ರಾರಂಭಗೊಂಡಿತು. ಸರ್ ವಿಲಯಂ ರಾಥನ್ ಸ್ಟೇನರ್ ಮಾರ್ಗದರ್ಶನದಲ್ಲಿ ಕಲಾವ್ಯಾಸಂಗ ನಡೆದು ಆಧುನಿಕ ಕಲಾತಂತ್ರಗಳಿಂದ ಪರಿಣಿತಿಯನ್ನು ಪಡೆದು, ಅಲ್ಲಿಯ ಸಂಸ್ಕೃತಿಯ ಪರಂಪರೆ, ತಾಂತ್ರಿಕ ಬದಲಾವಣೆಗಳನ್ನು ಅರಿತು ಗುರುವೃಂದವನ್ನು ಕಲಾಭಿಮಾನಿಗಳ ಮನಸ್ಸನ್ನು ಸೂರೆಗೊಂಡರು.

---

೧೮. ಅನ್ನದಾನಿ ಹಿರೇಮಠ : ಎಂ. ವಿ. ಮಿಣಜಿಗಿ, ಪು-

ಎಂ.ವಿ. ಮಿಣಜಿಗಿಯವರ ನಿಸರ್ಗ ಕಲಾಕೃತಿಗಳು





ಜಲವರ್ಣ ಮಾಥೆರಾನ್ ದೃಶ್ಯ



ತೈಲವರ್ಣ ನಿಸರ್ಗ ಚಿತ್ರ

ಚಿತ್ರ-೫. ಮಾಥೆರಾನ ದೃಶ್ಯ

ಈ ಚಿತ್ರವು ಜಲವರ್ಣದಿಂದ ಚಿತ್ರಿಸಲಾಗಿದ್ದು, ಈ ಚಿತ್ರವು ಬೆಟ್ಟದಿಂದ ಕೂಡಿದ್ದು ಕಂಡು ಬರುತ್ತದೆ. ಚಿತ್ರದಲ್ಲಿ ಆಕಾಶವು ವಿಶಾಲವಾಗಿ ತಿಳಿನೀಲಿ ಬಣ್ಣದಿಂದ ಹರಡಿಕೊಂಡಿದೆ. ಕಡುಹಳದಿ, ತಿಳಿಹಳದಿ, ನೀಲಿ ಮಿಶ್ರಿತ ಹಸಿರು ಬಣ್ಣದಿಂದ ಬೆಟ್ಟವನ್ನು ಚಿತ್ರಿಸಲಾಗಿದ್ದು, ಅದರ ಮುಂದೆ ಇರುವ ಬೆಟ್ಟವನ್ನು ಕೆಂಪು, ಕಡುಕೆಂಪು, ತಿಳಿಕಂದು, ಕಡುಕಂದು, ನೀಲಿ ಮಿಶ್ರಿತ ಕಂದು ಬಣ್ಣಗಳಿಂದ ಚಿತ್ರಿಸಲಾಗಿದ್ದು, ಹಳದಿ, ತಿಳಿಹಳದಿ, ಕಡುನೀಲಿ, ನೀಲಿ, ತಿಳಿನೀಲಿ, ಕಂದು, ಕಡುಕಂದು ಮತ್ತು ತಿಳಿಕಂದು ಬಣ್ಣಗಳಿಂದ ನೀಲಗಿರಿ ಮರವನ್ನು ಚಿತ್ರಿಸಲಾಗಿದೆ. ಈ ಚಿತ್ರವು ನೋಡುಗರನ್ನು ಬೆಟ್ಟ ದೂರವಿರುವ ಭಾಸವನ್ನು ಉಂಟುಮಾಡುತ್ತದೆ.

ಚಿತ್ರ-೬ ನಿಸರ್ಗ ಚಿತ್ರ

ಇನ್ನೊಂದು ನಿಸರ್ಗ ಚಿತ್ರವು ತೈಲವರ್ಣದಲ್ಲಿ ಚಿತ್ರಿಸಲಾಗಿದೆ. ಈ ಚಿತ್ರದಲ್ಲಿಯೂ ಆಕಾಶವನ್ನು ವಿಶಾಲಾವಾಗಿ ನೀಲಿ ಮತ್ತು ತಿಳಿನೀಲಿ ಬಣ್ಣದಿಂದ ಚಿತ್ರಿಸಲಾಗಿದ್ದು ಅಲ್ಲಲ್ಲಿ ಹಳದಿ ಬಣ್ಣದಿಂದ ಚಿತ್ರಿಸಲಾಗಿದೆ. ಬಿಳಿ ಮಿಶ್ರಿತ ನೀಲಿ, ಕಂದು ಮತ್ತು ಕಡುಕಂದು ಬಣ್ಣದಿಂದ ಬೆಟ್ಟವನ್ನು ದೂರದಲ್ಲಿರುವಂತೆ ಚಿತ್ರಿಸಲಾಗಿದೆ. ಮಧ್ಯದಲ್ಲಿ ಹಳ್ಳ ಹರಿದು ಹೋಗುತ್ತಿರುವುದನ್ನು ತಿಳಿ ನೀಲಿ, ಬಿಳಿ ಮಿಶ್ರಿತ ನೀಲಿ ಮತ್ತು ನೇರಳೆ ಬಣ್ಣದಿಂದ ಚಿತ್ರಿಸಲಾಗಿದು, ಮುಂದೆ ಕಂದು, ಕಡುಕಂದು, ತಿಳಿಕಂದು, ಕಡುಹಸಿರು, ತಿಳಿಹಸಿರು, ಹಳದಿ ಮಿಶ್ರಿತ ಹಸಿರು, ಹಳದಿ ಬಣ್ಣಗಳನ್ನು ಕುಂಚದ ಸಹಾಯದಿಂದ ಪ್ಯಾಚ್ ಪ್ಯಾಚ್ ಆಗಿ ಬಣ್ಣಗಳನ್ನು ಹಚ್ಚಿರುವುದನ್ನು ಕಂಡುಬರುತ್ತದೆ. ಬೆಟ್ಟದ ಮುಂದೆ ಹಸಿರು, ಕಡುಹಸಿರು, ತಿಳಿಹಸಿರು, ಕಂದುಗೆಂಪು ಮತ್ತು ಕಂದು ಬಣ್ಣಗಳಿಂದ ಗಿಡ-ಮರಗಳನ್ನು ಚಿತ್ರಿಸಿದ್ದಾರೆ.

೫.೪. ಶಂಕರಗೌಡ ಬೆಟ್ಟದೂರ

ಭಾರತೀಯ ಐತಿಹಾಸಿಕ ಹಿನ್ನಲೆಯಲ್ಲಿ ಅನೇಕ ಸಾಂಸ್ಕೃತಿಕ ಕಲೆಗಳು ಮಾನವ ಜೀವನದಿಂದ ಹಿಡಿದು ಆಧುನಿಕ ಜೀವನದವರೆಗೂ ನಡೆದು ಬಂದ್ದಿದ್ದು ಒಂದಲ್ಲ ಒಂದು ಆವಿಷ್ಕಾರಗಳು ಲಲಿತಕಲೆಗಳಲ್ಲೆ ಹೆಚ್ಚಾಗಿ ದೃಶ್ಯಾತ್ಮಕ ಕಲೆಗಳಲ್ಲಿ ಬೆಳವಣಿಗೆಯನ್ನು ಕಾಣಬಹುದಾಗಿದೆ, ನಮ್ಮ ಉತ್ತರ ಕರ್ನಾಟಕವು ಅನೇಕ ಧೀಮಂತ ರಾಜ ಮಹಾರಾಜಗಳು ಆಳಿದಂತಹ ನಾಡಾಗಿದೆ. ಲಲಿತಕಲೆಗಳ ಉಳಿವಿಗೆ ಪ್ರಮುಖರಾದ ಕಲಾವಿದರನ್ನು ಕಾಣಬಹುದಾಗಿದ್ದು, ಚಿತ್ರಕಲಾ ಜಗತ್ತಿನಲ್ಲಿ ಕಲಾವಿದರ ಚರಿತ್ರೆಯನ್ನು ಬಿಚ್ಚಿಡುವುದನ್ನು ನಾವು ನೋಡಬಹುದು. ಅದರಂತೆ ಉತ್ತರ ಕರ್ನಾಟಕದ ಖನಿಜ ಮತ್ತು ವಿದ್ಯುತ್ ಸ್ಥಾವರಕ್ಕೆ ಹೆಸರಾದ ರಾಯಚೂರಿನಲ್ಲಿಯ ಅನೇಕ ಕಲಾವಿದರಲ್ಲಿ ಪ್ರಮುಖವಾಗಿದ್ದವರಲ್ಲಿ ಶಂಕರಗೌಡ ಬೆಟ್ಟದೂರು ಒಬ್ಬರು. ಇವರು ರಾಯಚೂರು ಜಿಲ್ಲೆಯಿಂದ ಸುಮಾರು ೨೫ ಕಿ.ಮೀ ದೂರದಲ್ಲಿ ಬೆಟ್ಟದೂರು ಎನ್ನುವ ಪುಟ್ಟ ಗ್ರಾಮದಲ್ಲಿ ಗೌಡಮನೆತನದ ಬಸವಣ್ಣಗೌಡ ಪಾಟೀಲ ಮತ್ತು ನೀಲಮ್ಮ ಎಂಬ ದಂಪತಿಗಳಿಗೆ ೨ನೇ ಮಗನಾಗಿ ಜನಿಸಿದರು. ಇವರ ತಂದೆ ೫೦ ಎಕರೆ ನೀರಾವರಿ ಜಮೀನಗಳನ್ನು ಹೊಂದಿದ್ದರು.

ಶಂಕರಗೌಡರು ಬೆಟ್ಟದೂರಿನಲ್ಲಿ ದಿನಾಂಕ ೧೪-೪-೧೯೨೮ರಲ್ಲಿ ಜನಿಸಿದರು. ಇವರ ಬಾಲ್ಯ ಪರಿಸರವು ಕಷ್ಟಕರವಾಗಿತ್ತು. ಪ್ರಾಥಮಿಕ ಶಿಕ್ಷಣಕ್ಕೆ ೧೯೪೦ ರಲ್ಲಿ ನೀರಮಾನ್ವಿ ಎಂಬ ಊರಿನಲ್ಲಿ ಆರಂಭಗೊಂಡಿತು.

ಮೂರನೇ ತರಗತಿಯವರೆಗೆ ಓದಿದ ನಂತರ ಒಂದು ವರ್ಷ ಶಾಲೆ ಬಿಟ್ಟು ೧೯೪೨ ರಲ್ಲಿ ಮಾನ್ವಿಯಲ್ಲಿ ತಾವೇ ಖುದ್ದಾಗಿ ಶಾಲೆ ಕಲಿಯುವ ಪ್ರಮೇಸಯ ಪ್ರಮೆಯ ಪಡೆದುಕೊಂಡರು. ಇವರ ಅಣ್ಣನವರಾದ ಚನ್ನಬಸಪ್ಪನವರು ಹೈದರಾಬಾದನಲ್ಲಿ ಶಿಕ್ಷಣ ಪಡೆದಿದ್ದಾರೆ. ಇವರು ಆ ಸಮಾಜದಿಂದ ಇಂಟರ್ ಮೀಡಿಯೆಟ್ ಡ್ರಾಯಿಂಗ್ ಪರೀಕ್ಷೆ ಬರೆದಿದ್ದರು. ಅಣ್ಣನ ಚಿತ್ರಗಳು ಗೌಡರ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ಅಂದಿನಿಂದ ದಿನಪತ್ರಿಕೆ, ವಾರಪತ್ರಿಕೆ, ಮ್ಯಾಗ್‌ಜಿನ್‌ನಲ್ಲಿ ಬರುವ ಚಿತ್ರಗಳನ್ನು ನಕಲು ಮಾಡಲು ಪ್ರಯತ್ನಿಸಿದರು. ಮುಂದೆ ಅವರ ಅಣ್ಣನಂತೆ ಚಿತ್ರಕಲೆ ಪರೀಕ್ಷೆ ಬರೆಯಬೇಕೆಂದು ಹಾಗೂ ದೊಡ್ಡ ಕಲಾವಿದನಾಗಬೇಕೆಂದು ಗುರಿ ಇಟ್ಟುಕೊಂಡು ಚಿತ್ರ ಬರೆಯುವಲ್ಲಿ ಮುಂದಾದರು. ಐದನೇಯ ತರಗತಿಯನ್ನು ರಾಯಚೂರಿನಲ್ಲಿರುವ ಹರ್ಮ್‌ದರ್ದ ಶಾಲೆಗೆ ೧೯೪೩ರಲ್ಲಿ ಪ್ರವೇಶ ಪಡೆದು ಇಲ್ಲಿಯ ಪ್ರಕೃತಿ ಚಿತ್ರಗಳನ್ನು ಯಥಾವತ್ತಾಗಿ ಯಾವುದೇ ಪರೀಕ್ಷೆ ತೆಗೆದುಕೊಳ್ಳಲು ಆಗದೆ ಪ್ರಾಥಮಿಕ ಶಿಕ್ಷಣದಲ್ಲಿ ಬರಿ ಚಿತ್ರದ ಅಭ್ಯಾಸದಲ್ಲಿ ಕಾಲ ಕಳೆಯಬೇಕಾಯಿತು.

ನಂತರ ಪ್ರಾರಂಭಿಸಿದ ವರ್ಷದಲ್ಲಿ ಮುಂಬಯಿಯ ಎಲಿಮೆಂಟರಿ ಡ್ರಾಯಿಂಗ್ ಗ್ರೇಡ್ ಪರೀಕ್ಷೆ ಇಡಲು ಪ್ರಾರಂಭ ಮಾಡಿದರು ಹಾಗೂ ಇವರ ಮಿಡೀವಲ್ ಡ್ರಾಯಿಂಗ್ ಕೂಡಲು ಮುಂದಾದ ಇವರು ಬಸವರಾಜ ಹಲವಲಿ ಮಾರ್ಗದರ್ಶಕರಾಗಿ ಅಲ್ಲಿನ ಪರೀಕ್ಷೆಯ ಚಿತ್ರಕಲಾ ವಿಷಯ ತಿಳಿಸಿ ಚಿತ್ರ ಬರೆಯುವಲ್ಲಿ ಹಾಗೂ ಹೆಚ್ಚಾಗಿ ಕಲಿಯುವಲ್ಲಿ ಪ್ರೋತ್ಸಾಹಿಸಿದರು. ೧೯೪೪-೪೫ರಲ್ಲಿ ಮದ್ರಾಸಿನ ಕಲಾ ಪರೀಕ್ಷೆಗೆ ಕುಳಿತುಕೊಳುವ ಅವಕಾಶ ಸಿಕ್ಕಿತು. ಇದರಲ್ಲಿ ೪ ವಿದ್ಯಾರ್ಥಿಗಳು ಹಮಾದರ್ದ ಶಾಲೆಯಿಂದ ಮತ್ತು ಒಬ್ಬ ವಿದ್ಯಾರ್ಥಿ ಸರಕಾರಿ ಶಾಲೆಯಿಂದ ಕುಳಿತರು. ಅದರಲ್ಲಿ ಇವರಿಗೆ ಬಂದಂತಹ ವಿಷಯ ನಿಸರ್ಗ ಚಿತ್ರಣ, ನಕ್ಷಾ ಚಿತ್ರಣ ಮತ್ತು ವಸ್ತು ಚಿತ್ರಣ ಮುಂತಾದವು. ಈ ಪರೀಕ್ಷೆಯಲ್ಲಿ ಗೌಡರೊಬ್ಬರೇ ಉತ್ತೀರ್ಣರಾಗಿದ್ದರು. ಆಗ ಪರೀಕ್ಷಾಕೇಂದ್ರ ಬಳ್ಳಾರಿಯಲ್ಲಿತ್ತು. ಶಾಲಾ ದಿನಗಳಲ್ಲಿ ಗುಲಬರ್ಗಾದಲ್ಲಿನ ಸಂಸ್ಥೆ ಚಿತ್ರಕಲಾ ಸಭೆಯಲ್ಲಿ ಭಾಗವಹಿಸಿ ರಾಯಚೂರು ಮತ್ತು ಗುಲಬರ್ಗಾ ವಿಭಾಗದಲ್ಲಿಯೇ ಪ್ರಥಮ ಸ್ಥಾನ ಪಡೆದರು. ಇದೆ ಇವರಿಗೆ ಸ್ಫೂರ್ತಿ ತಂದತಾಯಿತು. ದಿನ ಮತ್ತು ವಾರ ಪತ್ರಿಕೆಗಳಲ್ಲಿ ಬರುವ ನಂದಲಾಲರ ಚಿತ್ರಗಳು ಇವರ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರಿದವು. ೧೦ನೇ ತರಗತಿಗೆ ಗುಲಬರ್ಗಾ ಸರಕಾರಿ ಮಲ್ಟಿ ಪರ್ಪಸ್ ಹೈಸ್ಕೂಲಿನಲ್ಲಿ ಪ್ರವೇಶ ಪಡೆದರು ಅಲ್ಲಿಯೂ ಕೂಡ ನಂದಲಾಲ್ ಬೋಸರವರ ಈಶ್ಯಾನ್ಯ ಪತ್ರಿಕೆಗಳಿಲ್ಲಿ ಪ್ರಕಟವಾದುದ್ದನ್ನು ನೋಡಿ ವಿಚಾರಿಸಿ ಶಾಂತಿನಿಕೇತನಕ್ಕೆ ಹೋಗುವ ಮಾರ್ಗವನ್ನು ಕಂಡುಕೊಂಡರು. ಕೇಂದ್ರ ಶಿಕ್ಷರ ಪ್ರೇರಣೆಯಂತೆ ಹೈದರಾಬಾದಿನ ಇಂಟರ್ ಮೀಡಿಯಟ ಪರೀಕ್ಷೆ ಪಾಸಾಗಲು ಹೈದರಾಬಾದಿಗೆ ತೆರಳಿದರು. ಗೌಡರ ಗೆಳೆಯರಾದ ದೇವೇಂದ್ರ ಕುಮಾರ್ ಹಕಾರಿ ಮತ್ತು ಹೆಸರಾಂತ ಸಾಹಿತಿಯಾದ ಮುಖ್ಯ ಗುರುಗಳಾದ ವೀರೇಶವರು ಮತ್ತು ಡಾ. ಪಂಚಾಕ್ಷರಿ ಹಿರೇಮಠರು ಓದುವುದಕ್ಕಾಗಲಿ ಚಿತ್ರಕಲೆಯನ್ನು ಮುಂದುವರೆಸು ಎಂದು ಗೌಡರನ್ನು ಪ್ರೋತ್ಸಾಹಿಸಿದರು. ಇವರುಗಳ ಮಾತಿಗೆ ಬೆಲೆಕೊಟ್ಟು ಇಂಟರ್ ಮೀಡಿಯಟ್ ಅರ್ಧಕ್ಕೆ ನಿಲ್ಲಿಸಿ ಊರು ಸೇರಬೇಕಾದ ಪರಿಸ್ಥಿತಿ ಬಂದಿತು.

ಊರಿಗೆ ಹೋಗಿ ತಮ್ಮ ತಂದೆಯವರ ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಶಾಂತಿ ನಿಕೇತನಕ್ಕೆ ಹೋಗುವ ಇಚ್ಚೆಯನ್ನು ಹೇಳಿದರು. ಬಂಗಾಳಕ್ಕೆ ಕಳುಹಿಸಲು ಒಪ್ಪದೆ ರಾಯಚೂರಿಗೆ ಹತ್ತಿರವಾಗುವ

ಹೈದರಾಬಾದನಲ್ಲಿ ಮುಂದುವರೆಸು ಎಂದರು. ನಂದಲಾಲ್ ಬೋಸರವರ ಚಿತ್ರವನ್ನು ನೋಡಿ ಕಲಿ ಎಂದು ತಂದೆಯವರು ಹೇಳಿದರು. ಇವರ ತಂದೆಯವರಿಗೆ ಇವರ ಮದುವೆಗೆ ಒಪ್ಪಿಸಲು ಒಳ್ಳೆಯ ಉಪಾಯವೆಂದು, ನೀನು ಮದುವೆಯಾದರೆ ನಾನು ಬಂಗಾಳಕ್ಕೆ ಕಳುಹಿಸುತ್ತೇನೆ ಎಂದು ಸವಾಲೊಡ್ಡಿದರು.

ಚಿತ್ರಕಲೆ ಕಲಿಕೆಯ ಮಹಾದಾಸೆಯಿಂದ ಬಾಳಸಂಗಾತಿಯಾದ ಪಾರ್ವತಿಯವರನ್ನು ೧೯೫೦ರಲ್ಲಿ ಮದುವೆಯಾದರು, ಆದರೆ ತಂದೆ ಕೊಟ್ಟ ಮಾತು ಮುಂದೆ ವಿರುದ್ಧವಾಗತೊಡಗಿತ್ತು. ಗೌಡರ ಸೋದರ ಮಾವನಿಂದ ಬಂಗಾಳಕ್ಕೆ ಹೋಗಬಾರದು ಎಂದು ವಿರೋಧವಾಯಿತು. ಆದರೆ ಇದಕ್ಕೆ ಬಗ್ಗದೆ ಗೌಡರು ಹೋಗಲು ಹಠ ಹಿಡಿದರು. ಇವರ ಹಟದಂತೆ ಶಾಂತಿನಿಕೇತನದ ಕಲಾಶಿಕ್ಷಣಕ್ಕೆ ಪ್ರವೇಶ ಅರ್ಜಿಯನ್ನು ಸಲ್ಲಿಸಿದರು. ಆದರೆ ಇವರಿಗೆ ಸ್ಥಳಾವಕಾಶವಿಲ್ಲ ಎಂದು ಮರು ಪತ್ರ ಬಂದಿತ್ತು. ಶಾಂತಿನಿಕೇತನದಲ್ಲಿ ಕಲಿಯುವ ಛಲದಿಂದ ಶಾಂತಿನಿಕೇತನದ ಹತ್ತಿರ ಒಂದು ಹಳ್ಳಿಯಲ್ಲಿ ಒಂದು ವರ್ಷಕಾಲ ಕಳೆದರು. ಪುನಃ ಮುಂದಿನ ವರ್ಷ ಪಡೆದೆ ಪಡೆಯುತ್ತೇನೆಂದು ನಂತರ ಬಂದು ಅರ್ಜಿಯಲ್ಲಿ ಶಾಂತಿನಿಕೇತನದಲ್ಲಿ ಅಭ್ಯಾಸ ಮಾಡಿರುವ ಹಳೇಯ ವಿದ್ಯಾರ್ಥಿಯು ಯಾರೇ ಆಗಿರಲಿ ಅಂತವರು ಶಿಫಾರಸ್ಸು ಮಾಡಿದರೆ ಮಾತ್ರ ಪ್ರವೇಶವನ್ನು ಕೊಡುತ್ತೇವೆ ಎಂದು ಬರೆದಿತ್ತು. ಆಗ ಹೈದರಾಬಾದ ಕಲಾಶಾಲೆಯ ಪ್ರಾಂಶುಪಾರು ಹಾಗೂ ಶಾಂತಿನಿಕೇತನ ಹಳೆಯ ವಿದ್ಯಾರ್ಥಿಯಾದ ಮುಖರ್ಜಿಯವರು ಗೌಡರಿಗೆ ಶಿಫಾರಸ್ಸು ಮಾಡಿದಾಗ ಯಾವುದೇ ತೊಂದರೆ ಇಲ್ಲದೆ ೧೯೫೧ರಲ್ಲಿ ಪ್ರವೇಶ ಪಡೆದರು. ಆ ಸಮಯದಲ್ಲಿ ಶಾಂತಿನಿಕೇತನಕ್ಕೆ ನಂದಲಾಲ್ ಬೋಸರು ಪ್ರಾಂಶುಪಾಲರಾಗಿದ್ದರು. ಗೌಡರ ಕಲಾಕೃತಿಗಳಲ್ಲಿನ ಬಣ್ಣಗಳ ಮೈವಳಿಕೆ ಹಾಗೂ ರೇಖೆಗಳ ಲಾಲಿತ್ಯಗಳು ಉನ್ನತ ಮಟ್ಟದಲ್ಲಿ ಕಂಡುಬಂದಿದ್ದು, ಅವರು ಹೆಚ್ಚಾಗಿ ಜಲವರ್ಣಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರ ಕಲಾಕೃತಿಗಳಲ್ಲಿ ಬಂಗಾಳ ಶೈಲಿಯ ಕಲಾವಿದರಾದ ನಂದಲಾಲ ಬೋಸರವರ ಪ್ರಭಾವ ತುಂಬಾ ಕಾಣುತ್ತದೆ. ಗೌಡರು ಉನ್ನತ ವ್ಯಾಸಂಗಕ್ಕಾಗಿ ಶಾಂತಿನಿಕೇತನದಲ್ಲಿರುವುದರಿಂದ ಸಹಜವಾಗಿಯೇ ಬಂಗಾಳ ಕಲಾಪರಿಸರ, ಕಲಾವಿದರ ಪ್ರಭಾವ ಇವರ ಕಲಾಕೃತಿಗಳಲ್ಲಿಯೂ ಕಂಡುಬರುತ್ತದೆ. ಶಂಕರಗೌಡರು ಅನೇಕ ನಿಸರ್ಗ ಚಿತ್ರಗಳನ್ನು ರಚಿಸಿದ್ದು ಅವುಗಳಲ್ಲಿ ಮಾದರಿಯಾಗಿ ಕೆಲವೊಂದನ್ನು ಇಲ್ಲಿ ಚರ್ಚಿಸಲಾಗುವುದು.

ಚಿತ್ರ–೭. ದೂರ ದಾರಿ ನಿಸರ್ಗ

ಈ ನಿಸರ್ಗ ಚಿತ್ರವು ಜಲವರ್ಣದಲ್ಲಿ ವಾಶ್ ಮಾಧ್ಯಮದಿಂದ ಚಿತ್ರ ರಚನೆ ಮಾಡಲಾಗಿದ್ದು, ಈ ನಿಸರ್ಗ ಚಿತ್ರದ ಮುಖ್ಯವಸ್ತುವಾಗಿರುವ ಎತ್ತಿನ ಬಂಡಿಯನ್ನು ಕಡು ಕಂದು, ಕಂದು, ಕಂದು ಮಿಶ್ರಿತ ಹಳದಿ ಬಿಳಿ ಮಿಶ್ರಿತ ಹಳದಿ ಬಣ್ಣದಿಂದ ಚಿತ್ರಿಸಲಾಗಿದೆ. ಎತ್ತುಗಳನ್ನು ಬಿಳಿ, ಕಡು ಕಂದು ಬಣ್ಣಗಳಿಂದ ಚಿತ್ರಿತವಾಗಿದ್ದು, ಎತ್ತಿನ ಬಂಡಿಯಲ್ಲಿ ಹಿಂದೆ ಹೆಂಗಸನ್ನು ಕೆಂಪು ಬಣ್ಣದ ಬಟ್ಟೆಯನ್ನು ತೊಟ್ಟಿದು, ಮುಂದೆ ಎತ್ತಿನ ಬಂಡಿಯ ಚಾಲಕ ಕಪ್ಪು, ಕಂದು ಮತ್ತು ಬಿಳಿ ಮಿಶ್ರಿತ ಕಂದು ಬಣ್ಣದ ಬಟ್ಟೆಯನ್ನು ಚಿತ್ರಿಸಿದ್ದು ಕಂಡು ಬರುತ್ತದೆ. ಈ ಎತ್ತಿನ ಗಾಡಿಯ ಮುಂದೆ ಮತ್ತೊಂದು ಎತ್ತಿನ ಗಾಡಿಯು ಈ ಎತ್ತಿನ ಗಾಡಿಯ ಬಣ್ಣದಿಂದಂತೆ ಕಂಡು ಬರುತ್ತದೆ. ಚಿತ್ರದಲ್ಲಿ ವಿಶಾಲವಾದ ರಸ್ತೆಯನ್ನು ಬಿಳಿ ಮತ್ತು ಬಿಳಿ ಮಿಶ್ರಿತ ಕಂದು ಬಣ್ಣದಿಂದ ರಚಿಸಲಾಗಿದ್ದು, ರಸ್ತೆಯ ಬಲಭಾಗದಲ್ಲಿದ್ದ ನೆಲವನ್ನು ಕಡು ಹಸಿರು ಕಂದು, ಬಿಳಿ ಮಿಶ್ರಿತ ಕಂದು ಬಣ್ಣದಿಂದ ಚಿತ್ರಿಸಲಾಗಿದ್ದು,

ರಸ್ತೆಯ ಎಡಭಾಗದಲ್ಲಿ ಬಿಳಿ, ಕಂದು, ಕೆಂಪು ಮಿಶ್ರಿತ ಹಳದಿ, ಕಡು ಹಸಿರು ಬಣ್ಣದಿಂದ ವಿಶಾಲವಾದ ಖಾಲಿ ಸ್ಥಳ ಕಂಡು ಬರುತ್ತದೆ.

ರಸ್ತೆಯ ಬಲ ಭಾಗದಲ್ಲಿದ್ದ ಆಲದ ಮರವನ್ನು ಹಸಿರು, ಕಡು ಹಸಿರು, ಹಳದಿ, ಅಲ್ಲಲ್ಲಿ ಬಿಳಿ ಮಿಶ್ರಿತ ಹಸಿರು ಬಣ್ಣದಿಂದ ಚಿತ್ರಿಸಲಾಗಿದ್ದು ಕಂಡುಬರುತ್ತದೆ. ಚಿತ್ರದ ಎಡಭಾದ ಸ್ವಲ್ಪ ದೂರದಲ್ಲಿದ್ದ ಮರಗಳನ್ನು ಹಳದಿ ಮಿಶ್ರಿತ ಹಸಿರು, ಹಸಿರು, ಬಿಳಿ ಮಿಶ್ರಿತ ಹಳದಿ ಬಣ್ಣದಿಂದ ಚಿತ್ರಿಸಲಾಗಿದೆ. ದೂರದಲ್ಲಿ ನೀರಿನ ಹಳ್ಳವನ್ನು ಬಿಳಿ ಮತ್ತು ಹಳದಿ ಮಿಶ್ರಿತ ಬಿಳಿ ಬಣ್ಣದಿಂದ ತೋರಿಸಿದ್ದಾರೆ. ಹಳ್ಳಕ್ಕೆ ಹತ್ತಿರುವಂತೆ ಬೆಟ್ಟವನ್ನು ಕಂದು ಮತ್ತು ಬಿಳಿ ಮಿಶ್ರಿತ ಕಂದು ಬಣ್ಣದಿಂದ ಚಿತ್ರಿಸಿದ್ದಾರೆ. ಚಿತ್ರದಲ್ಲಿರುವ ಆಕಾಶವನ್ನು ಹಳದಿ ಮತ್ತು ಕಂದು ಬಣ್ಣದಿಂದ ನೀರು ಜಾಸ್ತಿಯಾಗಿ ಬಳಸಿ ಕುಂಚದಿಂದ ಒಂದು ಬಾರಿ ಎಳೆಯಲಾಗಿರುವುದು ಕಂಡು ಬರುತ್ತದೆ. ಒಟ್ಟಾರೆ ಈ ನಿಸರ್ಗ ಚಿತ್ರವನ್ನು ನೋಡುಗರಿಗೆ ಹಳ್ಳಿಯ ವಾತಾವರಣವನ್ನು ಕಟ್ಟಿಕೊಡುತ್ತದೆ.

ಚಿತ್ರ–೮. ನದಿ ದಾಟುತ್ತಿರುವ ಎತ್ತಿನ ಬಂಡಿಗಳ ನಿಸರ್ಗ

ಈ ಚಿತ್ರದಲ್ಲಿ ಭಾರ ಹೊತ್ತಿರುವ ಐದು ಎತ್ತಿನ ಬಂಡಿಗಳು ನದಿ ದಾಟುತ್ತಿರುವ ದೃಶ್ಯವನ್ನು ಚಿತ್ರದ ವಸ್ತು ವಿಷಯವನ್ನಾಗಿಸಿಕೊಂಡಿದ್ದಾರೆ. ಎತ್ತಿನ ಬಂಡಿಗಳು ಮತ್ತು ಎತ್ತುಗಳನ್ನು ಬೂದು ಮತ್ತು ಬಿಳಿ ಮಿಶ್ರಿತ ಬೂದು ಬಣ್ಣದಿಂದ ಚಿತ್ರಿಸಲಾಗಿದ್ದು, ನದಿಯ ವ್ಯಾಪ್ತಿಯು ವಿಶಾಲವಾಗಿ ಹರಡಿಕೊಂಡಿರುವಂತೆ ಮತ್ತು ನದಿಯಲ್ಲಿನ ನೀರು ಕಡಿಮೆ ಇರುವಂತೆ ಬಿಳಿ, ಬಿಳಿ ಮಿಶ್ರಿತ ಹಸಿರು ಮತ್ತು ಬಿಳಿ ಮಿಶ್ರಿತ ನೀಲಿ ಬಣ್ಣದಿಂದ ತೋರಿಸಿದ್ದಾರೆ. ನದಿಯ ಎಡ ಮತ್ತು ಬಲ ಭಾಗದಲ್ಲಿರುವ ನೆಲವನ್ನು ಹಳದಿ, ಕೆಂಪು ಮಿಶ್ರಿತ ಹಳದಿ, ಬಿಳಿ ಮಿಶ್ರಿತ ಹಳದಿ ಮತ್ತು ಕಂದು ಮಿಶ್ರಿತ ಹಳದಿ ಬಣ್ಣದಿಂದ ಚಿತ್ರಿಸಿದ್ದಾರೆ. ಚಿತ್ರ ನೋಡಿದರೆ ದೂರದ ಭಾವನೆ ಮೂಡುವ ಸಲುವಾಗಿ ಹಸಿರು, ಹಳದಿ ಮಿಶ್ರಿತ ಹಸಿರು, ಬಿಳಿ ಮಿಶ್ರಿತ ಕಂದು, ಮತ್ತು ಕಡು ಹಸಿರು ಬಣ್ಣದಿಂದ ವಿಶಾಲವಾದ ಪ್ರದೇಶವನ್ನು ಚಿತ್ರಿಸಿದ್ದು, ಈ ಚಿತ್ರದಲ್ಲಿ ದೂರದ ಭಾವನೆ ಇನ್ನೂ ಹೆಚ್ಚು ಮೂಡುವ ಸಲುವಾಗಿ ದೊಡ್ಡ ದೊಡ್ಡ ಬೆಟ್ಟವನ್ನು ಬಿಳಿ ಮತ್ತು ಬೂದು ಮಿಶ್ರಿತ ಬಿಳಿ ಬಣ್ಣದಿಂದ ಚಿತ್ರಿಸಿದ್ದಾರೆ. ಚಿತ್ರದ ಆಕಾಶವನ್ನು ತಿಳಿ ಹಸಿರು ಬಣ್ಣದಿಂದ ಒಂದು ಬಾರಿ ಕುಂಚದಿಂದ ಎಳೆದಿದ್ದಾರೆ.

ಈ ಮೇಲಿನ ಕಲಾಕೃತಿಗಳು ಪ್ರಕೃತಿ ಆಧ್ಯಯನದ ಚಿತ್ರಗಳಾಗಿವೆ. ನಿಸರ್ಗದ ವಿವಿಧ ದೃಶ್ಯಾವಳಿಗಳನ್ನು ತುಂಬಿ ಕಲಾತ್ಮಕವಾಗಿ ಈ ಮೇಲಿನ ಚಿತ್ರಗಳಲ್ಲಿ ವಿನ್ಯಾಸಗೊಳಿಸಿದ್ದಾರೆ. ಪ್ರಕೃತಿ ಚಿತ್ರಣ ಕಲಾವಿದರ ಸಾಮಾನ್ಯವಾಗಿ ಆಸಕ್ತಿಯ ಕ್ಷೇತ್ರವಾಗಿರುತ್ತದೆ. ಹೀಗಾಗಿ ಪ್ರತಿಯೊಬ್ಬ ಕಲಾವಿದನು ಪ್ರಕೃತಿ ಚಿತ್ರಣವನ್ನು ಸಹಜವಾಗಿ ಚಿತ್ರಣಮಾಡಿಯೇ ಇರುತ್ತಾರೆ. ಇದಕ್ಕೆ ಗೌಡರು ಹೊರತಾಗಿಲ್ಲ. ನೂರಾರು ನಿಸರ್ಗ ಚಿತ್ರಗಳನ್ನು ತಮ್ಮ ಕುಂಚದಿಂದ ಸೆರೆಹಿಡಿದ ಗೌಡರು ಜಲವರ್ಣದ ತಂತ್ರಗಾರಿಕೆಯನ್ನು ಮುಂದುವರಸಿದ್ದನ್ನು ನೋಡಬಹುದು.

ಶಂಕರಗೌಡ ಬೆಟ್ಟದೂರರ ಬಂಗಾಳಿ ಕಲಾಶೈಲಿ

ಪಾಶ್ಚಾತ್ಯ ಕಲೆಯ ಅಬ್ಬರದ ಪ್ರಚಾರ, ಪ್ರಭಾವ ಮತ್ತು ಶಿಕ್ಷಣದಿಂದಾಗಿ ಭಾರತೀಯ ಕಲೆಯು ಅವನತಿಯತ್ತ ಹೋಗುವ ಸಂದರ್ಭದಲ್ಲಿ ಭಾರತೀಯತೆಯನ್ನು ಉಳಿಸಿಕೊಳ್ಳುವ ದಿಸೆಯಲ್ಲಿ ಭಾರತದಲ್ಲಿ

ನಡೆದ ದೊಡ್ಡ ಕಲಾಚಳುವಳಿಯಾದರೆ ಬಂಗಾಲದ ಪುನರುಜ್ಜೀವನ ಕಲಾಪಂಥ. ಈ ಬಂಗಾಲ ಕಲಾಶೈಲಿ ನಮ್ಮ ದೇಶದ ಸಂಸ್ಕೃತಿ ಪರಂಪರೆಯನ್ನು ಉಳಿಸಿಕೊಳ್ಳುವ ಮತ್ತು ಅದನ್ನು ವಿಶ್ವದ ಜನತೆಗೆ ಪರಿಚಯಿಸುವ ಮಹಾನ್ ಉದ್ದೇಶದ ಈ ಕಲಾ ಚಳುವಳಿಯಲ್ಲಿ ಅನೇಕ ಜನ ಬಂಗಾಲ ಕಲಾವಿದರೊಂದಿಗೆ ಕರ್ನಾಟಕದ ಇಬ್ಬರು ಶ್ರೇಷ್ಠ ಕಲಾವಿದರು ತಮ್ಮದೇ ಆದ ಕೊಡುಗೆಗಳನ್ನು ಈ ಸ್ವದೇಶಿ ಕಲಾಚಳುವಳಿಗೆ ನೀಡಿದ್ದಾರೆ ಎಂಬುದು ಬಹಳಷ್ಟು ಜನರಿಗೆ ಗೊತ್ತಿಲ್ಲ. ಅವರಲ್ಲಿ ಕೆ. ವೆಂಕಟಪ್ಪ ಇನ್ನೊಬ್ಬರು ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಬೆಟ್ಟದೂರು ಗ್ರಾಮದ ಹಿರಿಯ ಕಲಾವಿದ ಶಂಕರಗೌಡ ಬೆಟ್ಟದೂರರು ಬಂಗಾಲಿ ಕಲಾಶೈಲಿ ಈ ಕೆಲವು ಪ್ರಮುಖ ಗುಣಲಕ್ಷಣಗಳನ್ನು ಹೊಂದಿದೆ.

ಕಾಗದದ ಮೇಲೆ ತೆಳುವಾಗಿ ಪದರು ಪದರಾಗಿ ಜಲವರ್ಣದಲ್ಲಿ ಕಲಾಕೃತಿ ರಚಿಸುವ ಸೂಕ್ಷ್ಮ ಹಾಗೂ ರೇಖಾ ಪ್ರಧಾನವಾದ ಆಕಾರಗಳನ್ನು ಚಪ್ಪಟೆ ಬಣ್ಣಗಳಲ್ಲಿ ಹಿತಮಿತವಾಗಿ ನೆರಳು ಬೆಳಕುಗಳೊಂದಿಗೆ ಮೂಡಿಸುತ್ತಾ ಕಲಾಕೃತಿಗಳ ನಿರ್ಮಾಣ ಮಾಡುವ ಈ ವಿಶಿಷ್ಟ ಶೈಲಿ ಬಂಗಾಳ ಕಲಾಶಾಲೆಯ ಮತ್ತು ಕಲಾವಿದರ ತಂತ್ರವಾಗಿದೆ.

೧೯೫೧-೫೫ರ ಅವಧಿಯಲ್ಲಿ ಕಲಾ ಶಿಕ್ಷಣವನ್ನು ಶಾಂತಿನಿಕೇತನದಲ್ಲಿ ಪಡೆದ ಗೌಡರು ಅಲ್ಲಿಯ ಕಲಾವಿದರಾದ ನಂದಲಾಲ್ ಬೋಸ್ ಹಾಗೂ ರಾಮಕಿಂಕರ್ ಬೈಸ್ ಅವರ ಪರಮ ಶಿಕ್ಷಕರಾಗಿ ಗೌಡರು ತಮ್ಮನ್ನು ಸಹಜವಾಗಿ ಬಂಗಾಲ ಕಲಾ ಪರಂಪರೆಗೆ ಒಡ್ಡಿಕೊಂಡರು.

ಬಂಗಾಲ ಕಲಾಶೈಲಿಯ ಪ್ರಮುಖ ಲಕ್ಷಣಗಳು

- ಕಲಾಶೈಲಿಯ ಕಲಾಕೃತಿಗಳು ವಿಶೇಷವಾಗಿ ಜಲವರ್ಣದಿಂದ ರಚನೆಯಾಗಿವೆ.
- ನೀರಿನಿಂದ ತೊಳೆಯುವ ತಂತ್ರ ಬಂಗಾಲ ಕಲಾಶೈಲಿಯ ಪ್ರಮುಖ ಗುಣವಿಶೇಷವಾಗಿದೆ.
- ಭಾರತೀಯ ಸನಾತನ ಸಂಸ್ಕೃತಿಯನ್ನು ಪ್ರತಿನಿಧಿಸುವ ಪುರಾಣ ಮಹಾಕಾವ್ಯ ಜನಪದ ಆಚರಣೆ, ನಂಬಿಕೆ ಮತ್ತು ಸಂಪ್ರದಾಯಿಕ ಚಿತ್ರಗಳನ್ನು ಆಯ್ಕೆ ಮಾಡಿಕೊಂಡು ಚಿತ್ರಿಸಿದ್ದಾರೆ.
- ರೇಖಾ ಪ್ರಾಧಾನ್ಯತೆಯನ್ನು ಕಡಿಮೆ ಮಾಡಿ ಬಣ್ಣದ ಗಾಢ ಲೇಪನದ ಹೊಸ ರೇಖೆಯನ್ನು ನಿರ್ಮಿಸುತ್ತಾರೆ.

ಈ ಮೇಲಿನ ಮುಖ್ಯವಾದ ಉದ್ದೇಶಗಳನ್ನಿಟ್ಟುಕೊಂಡು ಅನೇಕ ಕಲಾವಿದರು ಕಲಾಕೃತಿಗಳನ್ನು ರಚಿಸುವ ಮತ್ತು ಅವುಗಳನ್ನು ದೇಶ ವಿದೇಶಗಳಲ್ಲಿ ಪ್ರದರ್ಶಿಸಿ ಭಾರತೀಯ ಕಲೆಯ ವೈಶಿಷ್ಟ್ಯತೆಯನ್ನು ಜಗತ್ತಿಗೆ ತೋರಿಸಿದ ಕೀರ್ತಿ ಈ ಬಂಗಾಲ ಕಲಾಪರಂಪರೆಗೆ ಸೇರುತ್ತದೆ. ಸಂಸ್ಕೃತಿಯ ಪ್ರತಿಬಿಂಬವಾಗಿರುವ ಲಲಿತಕಲೆಗಳಲ್ಲಿ ಚಿತ್ರಕಲೆಯ ಪಾತ್ರ ಅತ್ಯಂತ ಮೌಲಿಕವಾದದ್ದು ಹಾಗೂ ಕಲಾವಿದನ ಅಭಿವ್ಯಕ್ತಿಯು ಇಲ್ಲಿ ಕುಂಚದ ನೆರವಿನಲ್ಲಿ ಫಲಿತಗೊಂಡು ನೋಡುಗರ ಚಿತ್ರ ಭಿತ್ತಿಯಲ್ಲಿ ಶಾಶ್ವತವಾದ ಸ್ಥಾನವನ್ನರಸುವುದು. ಕಲೆಯ ಆಂತರ್ಯವನ್ನು ಹೊಕ್ಕು ಅದರ ವೈವಿಧ್ಯ ಮತ್ತು ವೈರುಧ್ಯ ಅಂಶಗಳನ್ನು ಅತ್ಯಂತ ಸ್ಪಷ್ಟ ನಿಲುವಿಕೆಯಲ್ಲಿ ಹೊರಜಗತ್ತಿಗೆ ತೋರ್ಪಡಿಸುವುದು ಒಬ್ಬ ಕಲಾವಿದನ ಆದ್ಯ ಕರ್ತವ್ಯವೂ ಹೌದು. ಇಂತಹ ಕರ್ತವ್ಯವನ್ನು

ಶಂಕರಗೌಡ ಬಟ್ಟದೂರ ಅವರ ನಿಸರ್ಗ ಕಲಾಕೃತಿಗಳು





ಜಲವರ್ಣ ದೂರ ದಾರಿ ನಿಸರ್ಗ ಚಿತ್ರ



ಜಲವರ್ಣ ನದಿ ದಾಟುತ್ತಿರುವ ಎತ್ತಿನ ಬಂಡಿಗಳ ನಿಸರ್ಗ ಚಿತ್ರ

ಶಂಕರಗೌಡರು ತಮ್ಮ ಜೀವಿತಾವಧಿಯ ಸಾಧನೆಯಲ್ಲಿ ತೋರ್ಪಡಿಸಿದ್ದಾರೆ. ಕುಂಚ ಪ್ರಪಂಚ ವಿಶಿಷ್ಟ ನಿಲುವಿಕೆಯನ್ನು ತಮ್ಮ ಕಲಾಕೃತಿಗಳ ಮೂಲಕ ತಿಳಿಯಪಡಿಸುವುದಲ್ಲದೆ ತಮ್ಮ ಕೌಶಲ್ಯವನ್ನು ಓರೆಗೆ ಹಚ್ಚಿದ್ದಾರೆ ಮತ್ತು ಕಲಾ ಜಗತ್ತಿನಲ್ಲಿ ತಮ್ಮದೇಯಾದ ಛಾಪನ್ನು ಮೂಡಿಸಿದ್ದಾರೆ.[೯]

೫.೫. ನಾಡೋಜ. ಡಾ. ವಿ.ಟಿ. ಕಾಳೆ

ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಡ ರೈತ ಕುಟುಂಬದಲ್ಲಿ ತುಳಜಾರಾಮ ಕಾಳೆ ಮತ್ತು ಭರಮ್ಮವ ದಂಪತಿಗಳ ಎಂಟನೆಯ ಮಗನಾಗಿ ೧೯೩೪ರಲ್ಲಿ ವೆಂಕಟೇಶ ಕಾಳೆ ಅವರು ಜನಿಸಿದರು. ವೆಂಕಟೇಶ ತುಳಜರಾಮ ಕಾಳೆ ಇವರು ಈಗ ವಿ.ಟಿ. ಕಾಳೆ ಎಂದೇ ಪ್ರಸಿದ್ಧರಾಗಿದ್ದಾರೆ. ಹತ್ತು ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳನ್ನು ಹೊಂದಿದ್ದ ದೊಡ್ಡ ಸಂಸಾರವನ್ನು ನಿಭಾಯಿಸುವುದು ಇವರ ತಂದೆಯವರಿಗೆ ಕಠಿಣವಾಗಿತ್ತು. ಇಪ್ಪತ್ತೊಂದು ಎಕರೆ ವಾಲಿಕಾರಿಕೆಯ ಒಣ ಬೇಸಾಯದ ಭೂಮಿಯಿಂದ ಬರುವ ಉತ್ಪನ್ನ ಕುಟುಂಬ ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ. ಕಾರಣ ಒಣಬೇಸಾಯ ಅನಿಶ್ಚಿತ ಮಳೆಯಿಂದಾಗಿ ಬರಗಾಲ ಮೇಲಿಂದ ಮೇಲೆ ಉಂಟಾಗುತ್ತಿತ್ತು. ಇದೇ ವೇಳೆಯಲ್ಲಿ ಕೌಟುಂಬಿಕ ದುರಂತಗಳಿಂದಾಗಿ ಹಲವಾರು ತೊಂದರೆಗಳನ್ನು ಎದುರಿಸಿದ ಈ ಕುಟುಂಬ ಹುನಗುಂದವನ್ನು ಬಿಟ್ಟು ಬದುಕಿನ ಆಸರೆಗಾಗಿ ಗದುಗಿಗೆ ಬಂದು ನೆಲೆಸುತ್ತಾರೆ. ಇಲ್ಲಿ ಕಾಳೆಯವರ ಕಲಾಪ್ರಪಂಚ ಚಿಗುರೊಡೆಯಲು ಬಹು ಮುಖ್ಯವಾಗಿ ಕಾರಣವಾಗುತ್ತದೆ.[೧೦]

ಕಾಳೆಯವರಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡಲು ಕಾರಣವೆನೆಂದರೆ ಮನೆಯಲ್ಲಿ ಕಾಳೆಯವರ ಅಣ್ಣನೊಬ್ಬ ಪೆಂಟರ್‌ನಾಗಿ ಬೋರ್ಡಗಳನ್ನು ಬರೆಯುತ್ತಿದ್ದನು. ಕಾಳೆಯವರು ಅದನ್ನು ನೋಡುತ್ತಿದ್ದು. ಆಗ ಮುಂಬೈನ ಜೆ.ಜೆ. ಕಲಾಶಾಲೆಗೆ ಅನೇಕ ಜನ ವಿದ್ಯಾರ್ಥಿಗಳು ಚಿತ್ರಕಲಾಧ್ಯಯನಕ್ಕೆ ಪ್ರವೇಶ ಪಡೆಯುತ್ತಿದ್ದರು. ಆ ಸಂದರ್ಭದಲ್ಲಿ ಡ್ರಾಯಿಂಗ್ ಟೀಚರ್ಸ್ ಕೋರ್ಸ್ (ಡಿ.ಟಿ.ಸಿ) ಚಿತ್ರಕಲಾ ಕೋರ್ಸ್‌ಗೆ ಪ್ರವೇಶ ಪಡೆಯುವ ಸಲುವಾಗಿ ಕಾಳೆಯವರ ಅಣ್ಣನನಿಂದ ನಿಸರ್ಗಚಿತ್ರ, ಸ್ಮರಣಚಿತ್ರಗಳನ್ನು ವಿದ್ಯಾರ್ಥಿಗಳು ಮಾಡಿಸಿಕೊಂಡು ಜೆ.ಜೆ. ಕಲಾಶಾಲೆಯ ಪ್ರವೇಶ ಪರೀಕ್ಷೆಗಾಗಿ ಕಳುಹಿಸುತ್ತಿದ್ದರು. ಇದನ್ನು ಬಾಲಕ ಕಾಳೆಯವರು ಕುತೂಹಲದಿಂದ ಗಮನಿಸುತ್ತಿದ್ದರು. ಮನೆಯ ಈ ಪರಿಸರವೇ ಮುಂದೆ ಕಾಳೆಯವರಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡಲು ಪ್ರಮುಖ ಕಾರಣವೆಂದು ಹೇಳಬಹುದು.[೧೧]

ಗದುಗಿನಕ್ಕಿ ಇವರು ವಾಸಿಸುತ್ತಿದ್ದ ಪಕ್ಕದ ಮನೆಯಲ್ಲಿಯೇ ಚಿತ್ರಕಾರರಾದ ಎಮ್.ಸಿ. ಮುನವಳ್ಳಿಯವರು ಕಪ್ಪು ಬಣ್ಣದ ಪೌಡರ್ ಫಿನಿಷಿಂಗ್ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದರು. ದಿನಾಲು ಇದನ್ನು ಗಮನಿಸುತ್ತಿದ್ದ ಬಾಲಕ ಕಾಳೆಯವರ ಆಸಕ್ತ ಮನಸ್ಸು ಚಿತ್ರಕಲೆಯ ಕಡೆಗೆ ಇನ್ನೂ ವಿಶೇಶವಾಗಿ ಹರಿಯಿತು. ಪ್ರತಿದಿನವೂ ಮುನವಳ್ಳಿಯವರು ಚಿತ್ರ ಚಿತ್ರಿಸುತ್ತಿದ್ದಾಗ ಕಾಳೆಯವರು ಬಂದು ಕುತೂಹಲದಿಂದ ವೀಕ್ಷಿಸುವುದು ಮಾತ್ರವಲ್ಲದೇ ಚಿತ್ರ ಮುಗಿಯುವ ವರೆಗೆ ನಿಂತು ನೋಡುವುದು, ಬಿಡುವಿದ್ದಾಗ ಅವರ ಹತ್ತಿರ ಬಂದು ಕುಳಿತುಕೊಳ್ಳುವುದನ್ನು

೦೯. ಶರೀಫಸಾಬ ಮುತ್ತಣ್ಣ : ಕಲಾಪಿದ ಶಂಕರಗೌಡ ಬೆಟ್ಟದೂರ – ಕಲಾಜೀವನ ಮತ್ತು ಕಲಾಕೃತಿಗಳು (ಕಿ.ಪ್ರ), ಪು–

೧೦. ಡಾ. ಎಸ್. ಸಿ. ಪಾಟೀಲ : ನಾಡೋಜ ಡಾ. ವಿ.ಟಿ. ಕಾಳೆ, ಪು–೨

೧೧. ಅದೇ., ಪು–೩

ಮಾಡುತ್ತಿದ್ದರು. ಹೀಗೆ ಕಾಳೆಯವರಿಗೆ ಅರಿವಿಲ್ಲದಂತೆಯೇ ಅವರ ಸುಪ್ತಮನಸ್ಸು ಕಲೆಯೆಡೆಗೆ ಆಕರ್ಷಿತಗೊಂಡಿತ್ತು. ಒಂದು ದಿನ ಮುನವಳ್ಳಿಯವರು ಬಾಲಕ ಕಾಳೆ ಬಿಡಿಸಿದ ಚಿತ್ರಗಳನ್ನು ನೋಡಿ ಆಶ್ಚರ್ಯಗೊಳ್ಳುತ್ತಾರೆ. ಕಲೆಯ ಬಗೆಗೆ ಈ ಬಾಲಕನಿಗೆ ಅದಮ್ಯ ಉತ್ಸಾಹ, ಒಲವನ್ನು ಕಂಡು ಹರ್ಷಚಿತ್ತರಾಗಿ, ಕಲಾಗುರು ಟಿ.ಪಿ. ಅಕ್ಕಿಯವರ ಬಳಿಗೆ ಇವರನ್ನು ಕರೆತಂದು ಪರಿಚಯಿಸುತ್ತಾರೆ. ಅಕ್ಕಿಯವರು ಕಾಳೆಯವರ ಸುಪ್ತ ಕಲಾಪ್ರತಿಭೆಯನ್ನು ಗುತಿಸಿಸುತ್ತಾರೆ. ಅಲ್ಲಿಂದ ಕಾಳೆಯವರ ಕಲಾಜೀವನದ ಅಧ್ಯಯನ ಪ್ರಾರಂಭಗೊಂಡಿತೆನ್ನಬಹುದು.[೧೨]

೧೯೪೭ ಆಗಸ್ಟ್ ೧೫ ನಮಗೆ ಸ್ವಾತಂತ್ರ್ಯ ಸಿಕ್ಕ ದಿನ. ಆಗಿನ್ನೂ ಬಾಲಕನಾಗಿದ್ದ ಕಾಳೆಯವರು ಅಂದಿನ ದಿನದ ಸಂಭ್ರಮವನ್ನು ನೆನಪಿಸಿಕೊಳ್ಳುತ್ತಾರೆ. ಗದುಗಿನಲ್ಲಿ ಪ್ರಾಥಮಿಕ ಶಾಲೆಯ ಹೆಡ್ ಮಾಸ್ಟರ್ ಆಗಿದ್ದ ಸಿದ್ಧರಾಮ ಶೆಟ್ರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ದೊರೆತ ಅಂದಿನ ಮಧ್ಯರಾತ್ರಿ ಸಿದ್ದರಾಮ ಶೆಟ್ರು ಉಲ್ಲಾಸದಿಂದ ಓಡಾಡಿ ಭಾರತದ ರಾಷ್ಟ್ರೀಯ ಧ್ವಜವನ್ನು ಹಾರಿಸಿದ್ದರು. ಈ ರೀತಿಯ ಧೇಶಭಕ್ತ ಗುರುವೃಂದವನ್ನು ಹೊಂದಿದ ಕಾಳೆಯವರು, ಇವರಲ್ಲಿಯೂ ಅವರಂತೆಯೇ ಆದರ್ಶ, ತ್ಯಾಗ, ತಮ್ಮತನದ ರಾಷ್ಟ್ರೀಯ ಭಾವನೆಗಳು ತುಂಬಿಕೊಂಡಿರುವುದು ಮಾತ್ರವಲ್ಲದೇ ಮುಂದೆ ಅವರ ಕಲಾಕೃತಿಗಳಲ್ಲಿಯೂ ಈ ಅಂಶಗಳು ಅಭಿವ್ಯಕ್ತಗೊಳ್ಳುತ್ತ ಹೋಗಿರುವುದನ್ನು ಕಾಣಬಹುದು.[೧೩]

ಕಲಾಶಿಕ್ಷಣಕ್ಕಾಗಿ ಪಯಣ

೧೯೪೮ರಲ್ಲಿ ಮುನ್ಸಿಪಲ್ ಹೈಸ್ಕೂಲ್, ಗದಗ ಇಲ್ಲಿ ಎಂಟನೆಯ ತರಗತಿಗೆ ಪ್ರವೇಶ ಪಡೆದ ಕಾಳೆಯವರಿಗೆ ಟಿ.ಪಿ. ಅಕ್ಕಿಯವರ ಮಾರ್ಗದರ್ಶನ ದೊರಕಿದ್ದು ಅವರ ಜೀವನದ ಮಾರ್ಗವೇ ಬದಲಾಗಿ ಅದುವೇ ಅವರಿಗೆ ದಾರಿ ದೀಪವಾಯಿತ್ತೆನ್ನಬಹುದು. ವಿದ್ಯಾರ್ಥಿ ದೆಸೆಯಿಂದ ಹಿಡಿದು ಮುಂದೆ ಅವರ ಬದುಕಿನುದ್ದಕ್ಕೂ ದಿಕ್ಸೂಚಿಯಾಗಿ ಅವರ ಕಷ್ಟ ಸುಖಗಳಿಗೆ, ಬೇಕು ಬೇಡಗಳಿಗೆ ಸ್ಪಂದಿಸಿ ಅವರೊಬ್ಬ ಬಹುದೊಡ್ಡ ಕಲಾವಿದರಾಗಿ ರೂಪಗೊಳ್ಳಲು ಟಿ.ಪಿ. ಅಕ್ಕಿಯವರು ನೀಡಿದ ಪ್ರೋತ್ಸಾಹ ಅನನ್ಯವಾದುದ್ದು. ಟಿ.ಪಿ. ಅಕ್ಕಿಯವರಿಗೆ ವಿದ್ಯಾರ್ಥಿಗಳೆಂದರೆ ಪಂಚ ಪ್ರಾಣ. ಅದರಲ್ಲೂ ಪ್ರತಿಭಾವಂತ ವಿದ್ಯಾರ್ಥಿಗಳಿದ್ದರೆ ಅವರಿಗೆ ಏನೆಲ್ಲ ಸಹಾಯವನ್ನು ಮಾಡಲೂ ಇವರು ಮುಂದಾಗುತ್ತಿದ್ದರು. ಅವರ ಶಿಷ್ಯರಾಗಿದ್ದುದೇ ಒಂದು ಭಾಗ್ಯ, ಪುಣ್ಯ ವಿಶೇಷವೆಂಬ ಮಾತುಗಳು ಈಗಲೂ ಅವರ ವಿದ್ಯಾರ್ಥಿಗಳಲ್ಲಿ ಕೇಳಿಬರುತ್ತದೆ.[೧೪] ಕಾಳೆಯವರ ಮೆಚ್ಚಿನ ಗುರುಗಳು ಟಿ.ಪಿ. ಅಕ್ಕಿಯವರಲ್ಲದೆ ಡಾ.ಎಂ.ವಿ. ಮಿಣಜಗಿ, ಡಿ.ವಿ. ಹಾಲಭಾವಿ, ಸಿ.ಎನ್ ಪಾಟೀಲ್, ಎಂ.ಎ. ಚೆಟ್ಟಿ, ಅಮೀನಸಾಹೇಬ ಕಮಡೋಳಿ ಅಲ್ಲದೆ ಜೆ.ಜೆ. ಕಲಾಶಾಲೆಯ ಶಿಕ್ಷಕ ವೃಂದದವರ ಪ್ರಭಾವ ಇವರ ಮೇಲಾಗಿದೆ. "ವರ್ಣಮಾತ್ರಂ ಕಲಿಸಿದಾತ ಗುರು" ಒಂದು ಅಕ್ಷರ ಕಲಿಸಿದವರು ಗುರಗಳು ಎಂಬ ಭಾವನೆ ಕಾಳೆಯವರಲ್ಲಿದೆ.

ಕಲಾಶಿಕ್ಷಣ

ಕಲೆಯ ಅಭಿರುಚಿಯನ್ನು ಬೆಳೆಯಿಸಿಕೊಂಡಿದ್ದ ಕಾಳೆಯವರು ಕಲಾಶಿಕ್ಷಣವನ್ನೇ ಆಯ್ಕೆಮಾಡಿಕೊಂಡರು. ಗದಗಿನ ಮುನ್ಸಿಪಲ್ ಹೈಸ್ಕೂಲಿನಲ್ಲಿ ಎಲಿಮೆಂಟರಿ ಮತ್ತು ಇಂಟರ್ ಮೀಡಿಯೇಟ್ ಡ್ರಾಯಿಂಗ್ ಗ್ರೇಡ್

---

೧೨. ಡಾ. ಎಸ್. ಸಿ. ಪಾಟೀಲ : ನಾಡೋಜ ಡಾ. ವಿ.ಟಿ. ಕಾಳೆ, ಪು-೩

೧೩. ಅದೇ., ಪು-೪

೧೪. ಅದೇ.

ಪರಿಕ್ಷೆಗಳನ್ನು ಪಾಸಾದರು. ಆಗಿನ ಮುಂಬೈ ಸರಕಾರವು ನಡೆಸುತ್ತಿದ್ದ ಈ ಪರೀಕ್ಷೆಗಳಲ್ಲಿ ರ್‍ಯಾಂಕ್‌ನೊಂದಿಗೆ ಬಹುಮಾನಗಳನ್ನು ಪಡೆದುಕೊಂಡರು. ೧೯೫೨ರಲ್ಲಿ ಮುಂಬೈಯ ಜೆ.ಜೆ. ಕಲಾಶಾಲೆಯಿಂದ ಚಿತ್ರಕಲೆಯ ಗವರ್ನಮೆಂಟ್ ಡಿಪ್ಲೋಮಾ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆಗಿನ ಸಂದರ್ಭದಲ್ಲಿ ಕರ್ನಾಟಕದ ಕಲಾವಿದ್ಯಾರ್ಥಿಗಳು ಮುಂಬೈಗೆ ಹೋಗುವಾಗ ಹಣದ ಅಡಚಣೆ ಉಂಟಾಗುತ್ತಿತ್ತು. ಒಂದು ಹಂತದಲ್ಲಿ ಕಾಳೆಯವರ ಆಪ್ತ ಗುರುಗಳಾದ ಬಿ.ಎಸ್. ಚವ್ಹಾನ್, ಡಿ.ಎಫ್. ಪಾಟೀಲ ಮತ್ತು ಕಾಲವಾಡಮಠ ಎಂಬುವರು ಊರಲ್ಲಿ ಅವರಿವರನ್ನು ಬೇಡಿ ಹಣವನ್ನು ಸಂಗ್ರಹಿಸಿಕೊಟ್ಟು ಮುಂಬೈಗೆ ಕಳುಹಿಸಿದನ್ನು ಕಾಳೆಯವರು ಈಗಲೂ ನೆನಪಿಸುತ್ತಾರೆ. ಗುರುಗಳಾದ ಟಿ.ಪಿ. ಅಕ್ಕಿಯವರೇ ಸ್ವತಃ ಕಾಗದ, ಬಣ್ಣ ಮತ್ತು ಹಣವನ್ನು ಕೊಟ್ಟು ಮುಂಬೈಗೆ ಕಳುಹಿಸಿಕೊಟ್ಟಿದರಂತೆ. ಹೀಗೆ ಕಷ್ಟದ ದಿನಗಳಲ್ಲಿ ಇವರ ಕಲಾಶಿಕ್ಷಣ ನಡೆಯಿತು.[೧೫]

ಶಿಕ್ಷಕ ವೃತ್ತಿ

ವಿ.ಟಿ. ಕಾಳೆಯವರ ವೃತ್ತಿ ಜೀವನವನ್ನು ಎರಡು ಹಂತಗಳಲ್ಲಿ ಕಾಣಬಹುದು. ಮೊದಲ ಹಂತ ಗದಗಿನಲ್ಲಿ ಪ್ರಾರಂಭಗೊಂಡರೆ, ಎರಡನೆಯ ಹಂತ ಸಂಡೂರಿನಲ್ಲಿ ಮುಂದುವರಿದಿರುವುದು. ೧೯೫೨ರಲ್ಲಿ ಕಾಳೆಯವರು ತಾವು ಕಲಾಶಿಕ್ಷಣ ಪಡೆದ ಮಾತೃಸಂಸ್ಥೆ ವಿಜಯ ಕಲಾಮಂದಿರ ಗದಗಿನಲ್ಲಿಯೇ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದರು. ೧೯೬೪ರ ವರೆಗೂ ಇಲ್ಲಿಯೇ ಕಲಾಶಿಕ್ಷರರಾಗಿ ಸೇವೆ ಸಲ್ಲಿಸಿದ ವಿ.ಟಿ. ಕಾಳೆಯವರು ವಿದ್ಯಾಯಾರ್ಥಿಗಳಿಗೆ ಅಚ್ಚುಮೆಚ್ಚಿನ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳ ಬಗ್ಗೆ ಪ್ರೀತಿ, ಒಲವು, ಅಂತಃಕರಣವನ್ನು ಹೊಂದಿದ ಇವರು ಕಲಿಕೆಯ ವಿಷಯದಲ್ಲಿ ಶಿಸ್ತಿನ ಸಿಪಾಯಿಯಾಗಿದ್ದರು. ನಿಸರ್ಗಚಿತ್ರಣ, ವ್ಯಕ್ತಿಚಿತ್ರಣ, ಕರಡು ಚಿತ್ರಲೇಖನ(ಸ್ಕೆಚ್ಚಿಂಗ್), ಸಂಯೋಜನಾ ಚಿತ್ರಣ ಮುಂತಾದ ವಿಷಯಗಳನ್ನು ಇವರಿಂದ ಕಲಿತುಕೊಳ್ಳುವುದೇ ವಿದ್ಯಾರ್ಥಿಗಳಲ್ಲಿ ಒಂದು ಅಭಿಮಾನ ಮತ್ತು ಧನ್ಯತೆಯ ಪ್ರತೀಕವಾಗಿತ್ತು. ಕಲಾವಿದ್ಯಾರ್ಥಿಗಳಿಗೆ ಅವರು ತಿಳಿಸಿಕೊಡುತ್ತಿದ್ದ ವಿಧಾನ ಆಕರ್ಷಕವಾಗಿತ್ತು. ಬಣ್ಣಗಳ ಮಿಶ್ರಣ, ಕುಂಚಗಳ ಬಳಸುವಿಕೆ, ಪ್ಯಾಲೆಟ್ ಉಪಯೋಗಿಸುವಿಕೆ, ಪೆನ್ಸಿಲ್ ಹಿಡಿದು ಸ್ಕೆಚ್ಚ್ ಮಾಡುವ ವಿಧಿ-ವಿಧಾನಗಳು ವಿದ್ಯಾರ್ಥಿಗಳಿಗೆ ಸ್ಫೂರ್ತಿದಾಯಕವಾಗಿದ್ದವು. ಹೀಗೆ ಕಲಾತಂತ್ರದ ಹತ್ತು ಹಲವು ವಿಷಯಗಳನ್ನು ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವಂತೆ ಹೇಳಿಕೊಡುತ್ತಿದ್ದುದನ್ನು ಜೊತೆಗೆ ಆಗಾಗ ಕಲಾ ಇತಿಹಾಸದ ಪಾಠಗಳನ್ನು ರಸವತ್ತಾಗಿ ತಿಳಿಸುತ್ತಿದ್ದುದನ್ನು ಅವರ ವಿದ್ಯಾರ್ಥಿ ಡಾ. ಬಿ.ಕೆ. ಹಿರೇಮಠರು ಈಗಲೂ ಸ್ಮರಿಸುತ್ತಾರೆ. ಇವೆಲ್ಲಕ್ಕಿಂತ ಮಿಗಿಲಾಗಿ ಕಾಳೆಯವರಿಗೆ ತಾವು ವಿದ್ಯಾಭ್ಯಾಸ ಮಾಡಿದ ಕಲಾಶಾಲೆಯಲ್ಲಿಯೇ ಶಿಕ್ಷಕನಾಗಿ ಸೇವೆಸಲ್ಲಿಸುವ ಸದಾವಕಾಶ ಸಿಕ್ಕಿದ್ದರಿಂದ ಅವರ ಕಲಾಬದುಕಿಗೆ ಸ್ಫೂರ್ತಿ ದೊರೆತಂತಾಯಿತು. ವಿಜಯ ಕಲಾಮಂದಿರವು ಆಗ ಬೋಧನಾರಂಗವೇ ಸಾಧನಾರಂಗವೂ ಆಗಿ ಅವರ ಮುಂದಿನ ಕಲಾತ್ಮಕ ಬದುಕಿನ ಭವ್ಯಸೌಧಕ್ಕೆ ಅಡಿಪಾಯ ಹಾಕಿಕೊಟ್ಟಿತು. ಬೋಧನೆಯೊಂದಿಗೆ ಇವರ ಕುಂಚ ಈ ಹಂತದಲ್ಲಿ ಸಾವಿರಾರು ಕಲಾಕೃತಿಗಳ ರಚನಾವಿನ್ಯಾಸಕ್ಕೆ ಕಾರಣೀಭೂತವಾಯಿತು.[೧೬]

೧೯೬೦ರಲ್ಲಿ ಕಾಳೆಯವರು ಮದುವೆ ಮಾಡಿಕೊಂಡರು. ಇವರ ಕುಟುಂಬ ಬೆಳೆಯತೊಡಗಿತು. ಅಣ್ಣನ ಕುಟುಂಬದ ಜವಾಬ್ದಾರಿಯು ಇವರ ಮೇಲೆ ಬಿತ್ತು. ಅತ್ತಿಗೆ ಅಣ್ಣನ ಮಗಳನ್ನು ಪೋಷಿಸುವ

೧೫. ಡಾ. ಎಸ್. ಸಿ. ಪಾಟೀಲ : ನಾಡೋಜ ಡಾ. ವಿ.ಟಿ. ಕಾಳೆ, ಪು-೫

೧೬. ಅದೇ.

ಹೊಣೆಗಾರಿಕೆಯನ್ನು ಇವರು ನಿರ್ವಹಿಸುತ್ತಿದ್ದರು. ಈ ಪರಿಸ್ಥಿತಿಯಲ್ಲಿ ವಿಜಯ ಕಲಾಮಂದಿರದಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಅಷ್ಟಕ್ಕಷ್ಟೆ ಇತ್ತು. ಕಾರಣ ಸರಕಾರದ ಯಾವ ಆರ್ಥಿಕ ಸೌಲಭ್ಯಗಳು ಈ ಕಲಾಶಾಲೆಗೆ ಸಿಗುತ್ತಿರಲಿಲ್ಲ. ಅಕ್ಕಿಯವರಿಗೆ ಈ ಕಲಾಶಾಲೆಯ ನಿರ್ವಹಣೆ ಮಾಡುವುದು ದುಸ್ತರವಾಯಿತು. ಈ ಕಾರಣದಿಂದ ಕಾಳೆಯವರು ಅನಿವಾರ್ಯವಾಗಿ ಈ ಸಂಸ್ಥೆಯನ್ನು ಬಿಟ್ಟು ಮುಂದೆ ಕೆಲವೇ ದಿನಗಳಲ್ಲಿ ಅಂದರೆ ೧೯೬೪ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನ ರೆಸಿಡೆನ್ಸಿಯಲ್ ಶಾಲೆಯಲ್ಲಿ ಕಲಾಶಿಕ್ಷಕರಾಗಿ ಸೇವೆಯನ್ನು ಪ್ರಾರಂಭಿಸಬೇಕಾಯಿತು. ಇದು ಅವರಿಗೆ ಅನಿವಾರ್ಯದ ಸಂದರ್ಭವಾಗಿತ್ತು.[೧೭]

ನಿವೃತ್ತಿಯ ದಿನಗಳು

ಚಲನಶೀಲ ವ್ಯಕ್ತಿತ್ವವುಳ್ಳವರಿಗೆ ನಿವೃತ್ತಿಯ ನಂತರವೇ ನಿಜವಾದ ಬದುಕು ಆರಂಭವಾಗುತ್ತದೆ. ವೈಯಕ್ತಿಕ ಭಾವನೆಗಳ ನಿರಂತರ ಅಭಿವ್ಯಕ್ತಿಗೆ ವೃತ್ತಿಯೊಂದು ಅಂತಹವರಿಗೆ ತೊಡಕಾಗಿ ಕಂಡುಬರುತ್ತದೆ. ಈ ಮಾತು ಕಾಳೆಯವರಿಗೆ ಹೆಚ್ಚು ಅನ್ವಯವಾಗುತ್ತದೆ. ವಿ.ಟಿ. ಕಾಳೆಯವರು ಸಂಡೂರಿನಲ್ಲಿ ೧೯೯೨ರಲ್ಲಿ ತಮ್ಮ ಕಲಾಶಿಕ್ಷಕ ವೃತ್ತಿಯಿಂದ ನಿವೃತ್ತಿ ಹೊಂದಿದರೂ ಮತ್ತೆ ಐದು ವರ್ಷ ಇವರನ್ನು ಘೋರ್ಪಡೆಯವರು ತಮ್ಮ ಸಂಸ್ಥೆಯಲ್ಲಿ ಉಳಿಸಿಕೊಂಡರು. ಈ ಸಂದರ್ಭದಲ್ಲಿ ಕಾಳೆಯವರಿಂದ ಮಹತ್ವದ ಕಲಾಕೃತಿಗಳನ್ನು ಮಾಡಿಸಿಕೊಂಡು ತಮ್ಮ ಅರಮನೆಯಲ್ಲಿ ಸಂಗ್ರಹಿಸಿದ್ದಾರೆ. " ಈಗ ನಿವೃತ್ತಿಯ ನಂತರ ಕಲಾಕೃತಿಗಳನ್ನು ರಚಿಸಲು ನನಗೆ ಹೆಚ್ಚಿನ ಸಮಯ ದೊರಕುತ್ತಿದೆ. ಸೇವೆಯಲ್ಲಿದ್ದಾಗ ದೊರಕುತ್ತಿದ್ದ ಸ್ವಲ್ಪ ವೇಳೆ ನನ್ನ ಕಲಾಕೃತಿಗಳ ರಚನೆಗೆ ಸಾಕಾಗುತ್ತಿರಲಿಲ್ಲ. ಆದರೆ ಈಗ ನಾನು ಕಲಾಕೃತಿ ರಚನೆಯಲ್ಲಿ ಸಂಪೂರ್ಣ ತೊಡಗಿಸಿಕೊಡಿರುವುದರಿಂದ ಸಮಯ ಕಳೆದದ್ದೇ ಗೊತ್ತಾಗುತ್ತಿಲ್ಲ" ಎಂದು ಕಾಳೆಯವರು ಹೇಳುತ್ತಾರೆ.[೧೮]

ಕಲಾಚಟುವಟಿಕೆಗಳು

ವಿ.ಟಿ. ಕಾಳೆಯವರದು ಕಲೆಗಾಗಿ ಅರ್ಪಿಸಿಕೊಂಡ ಬದುಕು. ಅವರ ಕಲಾಸೇವೆ, ಕಲಾಚಟುವಟಿಕೆಗಳು ಹತ್ತು ಹಲವು. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ವಿದ್ಯಾರ್ಥಿಗಳ ಕಲಾಪ್ರತಿಭೆ ವಿಕಾಸಗೊಳ್ಳಲು ಮಕ್ಕಳ ಚಿತ್ರಕಲಾ ಸ್ಪರ್ಧೆ ಮತ್ತು ಪ್ರದರ್ಶನಗಳು, ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದ ಮಕ್ಕಳ ಸ್ಪರ್ಧೆಗಳು, ರಾಜ್ಯಮಟ್ಟದಲ್ಲಿ ನಡೆಸುವ ಕಲಾಪರೀಕ್ಷೆಗಳನ್ನು ಪ್ರತಿವರ್ಷವೂ ನಡೆಸುತ್ತಾ ಬಂದಿದ್ದಾರೆ. ಕಾಳೆಯವರು ರಾಜ್ಯ, ರಾಷ್ಟ್ರಮಟ್ಟದ ಕಾರ್ಯಾಗಾರ, ವಿಚಾರ ಸಂಕೀರ್ಣ, ಕಲಾಶಿಭಿರಗಳಲ್ಲಿ ತಾವೊಬ್ಬ ಕಲಾವಿದರಾಗಿ, ತಜ್ಞರಾಗಿ ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದು ಮಾತ್ರವಲ್ಲದೇ, ಶ್ರೇಷ್ಠ ಮಟ್ಟದ ಕಲಾಕೃತಿಗಳನ್ನು ರಚನೆ ಮಾಡಿದ್ದಾರೆ. ಅವುಗಳಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ಹೆಸರಿಸಬಹುದು.

೧೯೮೧ರಲ್ಲಿ ಹಂಪಿಯ ಸಮ್ಮೇಳನದ ಕಲಾಶಿಬಿರ, ೧೯೯೩ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವಕಲಾಕನ್ನಡ ಸಮ್ಮೆಳನದ ಕಲಾಶಿಬಿರ, ೧೯೯೩ರಲ್ಲಿ ಮಡಿಕೇರಿಯಲ್ಲಿ ನಡೆದ ಸಮಕಾಲೀನ ಕಲಾಶಿಬಿರ, ಲಲಿತಕಲಾ ಅಕಾಡೆಮಿಯ ಅನೇಕ ಕಲಾಶಿಬಿರಗಳು, ಹೊಸದುರ್ಗ ಸಮೀಪದ ಸಾಣೆಹಳ್ಳಿಯ ಕಲಾಶಿಬಿರ, ಹುಬ್ಬಳ್ಳಿ,

---

೧೭. ಡಾ. ಎಸ್. ಸಿ. ಪಾಟೀಲ : ನಾಡೋಜ ಡಾ. ವಿ.ಟಿ.ಕಾಳೆ, ಪು-೭

೧೮. ಅದೇ.

ಧಾರವಾಡ, ಗದಗ, ಮೈಸೂರ, ಹೈದರಾಬಾದ್, ಬೆಂಗಳೂರು, ವಿಜಾಪೂರ, ಬಿಳಗಿ, ಸಂಡೂರ, ಬಾಂಬೆ ಹೀಗೆ ಹಲವಾರು ಸ್ಥಳಗಳಲ್ಲಿ ಇವರು ಕಲಾಕೃತಿಗಳನ್ನು ನಿರ್ಮಾಣ ಮಾಡಿದ್ದಲ್ಲದೆ ಕಲಾವಿಮರ್ಶೆ, ಕಲಾಪ್ರದರ್ಶನ, ಕಲಾಬೆಳವಣಿಗೆಯ ಹಿನ್ನಲೆಯಲ್ಲಿ ವಹಿಸಿದ ಪಾತ್ರ ಅಪಾರವಾದುದು. ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಅನೇಕ ಸ್ಪರ್ಧೆಗಳಲ್ಲಿ ನಿರ್ಣಾಯಕರಾಗಿ ಮತ್ತು ಕಲಾಸಮ್ಮೇಳನ ಸಂಘಟಿತರಾಗಿಯೂ, ಕರ್ನಾಟಕ ಪ್ರೌಢಶಿಕ್ಷಣ ಮಂಡಳಿಯು ನಡೆಸುತ್ತಿರುವ ಉಚ್ಚ ಕಲಾಪರೀಕ್ಷೆಗಳ ಕಾರ್ಯದಲ್ಲಿ ಪರೀಕ್ಷಕರಾಗಿ, ಮೌಲ್ಯಮಾಪಕರಾಗಿ ತಪಾಸಣಾಧಿಕಾರಿಗಳಾಗಿ ಹೀಗೆ ಹತ್ತು ಹಲವು ಬಗೆಗಳಲ್ಲಿ ಅತ್ಯಂತ ಶ್ರದ್ಧೆಯಿಂದ ದುಡಿದ ವ್ಯಕ್ತಿತ್ವ ಇವರದು. ಯಾರೊಬ್ಬರೂ ಇವರ ಬಗ್ಗೆ ಬೆರಳು ತೋರಿಸದಂತೆ ಕಾರ್ಯ ನಿರ್ವಹಿಸಿದ ಚತುರತೆ ಇವರದಾಗಿದೆ.[೧೯]

ನಿಸರ್ಗ ಚಿತ್ರಗಳು

ನಿಸರ್ಗ ಚಿತ್ರಗಳನ್ನು ಯಥಾವತ್ತಾಗಿ ಚಿತ್ರಿಸುವುದು ಸಮಾನ್ಯವಾಗಿ ಪಾಶ್ಚಾತ್ಯ ಶೈಲಿಯಲ್ಲಿ ಕಂಡುಬಂದರೆ, ನಿಸರ್ಗದ ಸೌಂದರ್ಯವನ್ನು ಅನುಭವಿಸಿದ್ದರಿಂದ ಉಂಟಾಗುವ ಭಾವತೀವ್ರತೆಗಳನ್ನು ಅಭಿವ್ಯಕ್ತಪಡಿಸುವುದು ಭಾರತೀಯ ಕಲಾಪರಂಪರೆಯಾಗಿದೆ. ಭಾರತೀಯ ಕಿರುರೂಪ ಚಿತ್ರಗಳಲ್ಲಿ ಇದಕ್ಕೆ ಸ್ಪಷ್ಟವಾದ ನಿದರ್ಶನ ಕಂಡುಬರುತ್ತದೆ. ವಿ.ಟಿ. ಕಾಳೆಯವರ ನಿಸರ್ಗ ಚಿತ್ರರಚನಾ ಪದ್ಧತಿಯು ಪಾಶ್ಚಾತ್ಯವಾಗಿದ್ದರೂ ಆ ದೃಶ್ಯವನ್ನು ಅವರು ಅನುಭವಿಸಿ ಚಿತ್ರಿಸುವಲ್ಲಿ, ಸೂಕ್ತ ಬದಲಾವಣೆಗಳನ್ನು ಮಾಡಿಕೊಳ್ಳುವಲ್ಲಿ, ವರ್ಣವಿನ್ಯಾಸ ಮಾಡುವಲ್ಲಿ ಆಕಾರಗಳನ್ನು ಪನರ್ ರೂಪಿಸಿಕೊಂಡು ಸಂಯೋಜನೆ ಗೊಳಿಸುವಲ್ಲಿ, ಮನಸ್ಸಿನ ತುಡಿತಗಳನ್ನು ಕಲಾಕೃತಿಯಲ್ಲಿ ಬೆಸೆಯುವಲ್ಲಿ ಭಾರತೀಯತೆಯ ಪ್ರಭಾವ ಅವರಲ್ಲಿ ಕಂಡುಬರುತ್ತದೆ.

ನಮ್ಮಲ್ಲಿ ಕೆ. ವೆಂಕಟಪ್ಪ, ಎನ್. ಹನುಮಯ್ಯ ಮೊದಲಾದವರು ನಿಸರ್ಗ ಚಿತ್ರರಚನೆಯಲ್ಲಿ ತಮ್ಮದೇ ಆದ ವಿಶಿಷ್ಟ ಶೈಲಿಯಿಂದ ಪ್ರಸಿದ್ಧರಾಗಿದ್ದಾರೆ. ವೆಂಕಟಪ್ಪನವರು ಹೆಚ್ಚಾಗಿ ಜಲವರ್ಣ ಮಾಧ್ಯಮದಲ್ಲಿ ನೈಜ್ಯ ಶೈಲಿಯಲ್ಲಿ ಚಿತ್ರಿಸುವುದನ್ನು ರೂಢಿಸಿಕೊಂಡಿದ್ದಾರೆ, ಹನುಮಯ್ಯನವರು ತೈಲವರ್ಣ ಮಾಧ್ಯಮದಿಂದ ನಿಸರ್ಗ ದೃಶ್ಯಗಳಲ್ಲಿ ಭಾವನೆಗಳನ್ನು ಕೆಣಕುವಂತೆ ಚಿತ್ರಿಸಿದ್ದಾರೆ. ಈ ಇಬ್ಬರು ಹಿರಿಯ ಕಲಾವಿದರ ಶೈಲಿಗಿಂತ ಭಿನ್ನವಾದ, ಒಂದು ರೀತಿಯಲ್ಲಿ ರೋಮ್ಯಾಂಟಿಕ್ ಎನ್ನಬಹುದಾದ ಶೈಲಿಯಲ್ಲಿ ವಿ.ಟಿ. ಕಾಳೆಯವರ ನಿಸರ್ಗ ಚಿತ್ರಗಳು ಗೋಚರಿಸುತ್ತವೆ.

ಕಾಳೆಯವರ ಆಸಕ್ತಿಯ ಕ್ಷೇತ್ರಗಳಲ್ಲಿ ಒಂದಾದ ನಿಸರ್ಗ ಚಿತ್ರರಚನೆಯಲ್ಲಿ ಅವರದೇ ಆದ ವಿಭಿನ್ನ ಶೈಲಿಯ ಕುಂಚದ ಬೀಸುಗಳು, ವರ್ಣಸಂಯೋಜನೆ, ಆಕಾರಗಳ ಹೋದಾಣಿಕೆ, ಸ್ಥಳದ ಆಯ್ಕೆ, ಮುಂತಾದ ಅಂಶಗಳು ಅವರೊಬ್ಬ ಉತ್ತಮ ನಿಸರ್ಗ ಚಿತ್ರಕಾರರು ಎಂಬುದನ್ನುತೋರಿಸಿ ಕೊಡುತ್ತವೆ. ಇವರು ರಚನೆಮಾಡಿರುವ ಅನೇಕ ನಿಸರ್ಗಚಿತ್ರಗಳಲ್ಲಿ ಧರ್ಮಸ್ಥಳದ ಮಹಾದ್ವಾರ, ಶ್ರವಣಬೆಳಗೊಳದ ಮಾನಸ್ಥಂಭ, ಚಂದ್ರಗಿರಿಯ ದೃಶ್ಯ, ಇಂದ್ರಗಿರಿಯ ನೋಟ, ಸಂಡೂರು ಹಾಗೂ ಸುತ್ತಮುತ್ತಲಲಿನ ಅನೇಕ ನಿಸರ್ಗರಮ್ಯ ತಾಣಗಳು, ಮಡಿಕೇರಿಯ ಸುಂದರ ದೃಶ್ಯಗಳು, ಗೋವಾ ಕಡಲತೀರ ರಮ್ಯ ನೋಟಗಳು ಪ್ರಮುಖವಾಗಿವೆ. ಅಲ್ಲದೇ ತೈಲವರ್ಣದಲ್ಲಿ ಚಿತ್ರಿತವಾದ ಹಂಪಿಯ ಕಲ್ಲಿನ ತೇರು, ಕಮಲ್, ಮಹಲ್, ವಾಚ್ ಟವರ್, ಜೈನ ಮಂದಿರ ಹಾಗೂ ಸಂಡೂರಿನ ಹರಿಶಂಕರ ಗುತ್ತಿಯ ಕೋಟೆ ಮುಂತಾದವುಗಳನ್ನು ಹೆಸರಿಸಬಹುದು.

---

೧೯. ಡಾ. ಎಸ್. ಸಿ. ಪಾಟೀಲ : ನಾಡೋಜ ಡಾ. ವಿ.ಟಿ.ಕಾಳೆ, ಪು-೧೯

ನಾಡೋಜ. ಡಾ. ವಿ.ಟಿ. ಕಾಳೆಯವರ ನಿಸರ್ಗ ಕಲಾಕೃತಿಗಳು





ಜಲವರ್ಣ ಹಂಪಿಯ ಕಲ್ಲಿನ ರಥ



ಜಲವರ್ಣ ಶೀರ್ಷಿಕೆ ರಹಿತ

ಚಿತ್ರ–೯. ಕಲ್ಲಿನ ರಥ, ಹಂಪಿ

ಕಾಳೆಯವರ ನಿಸರ್ಗ ದೃಶ್ಯದಲ್ಲಿ ಹಂಪಿಯ ಕಲ್ಲಿನ ರಥವು ತೈಲವರ್ಣದಲ್ಲಿ ರಚಿತವಾಗಿದ್ದು, ಚಿತ್ರದ ಹಿನ್ನಲೆಯಲ್ಲಿ ನೀಲ ಶಾಂತ ಆಕಾಶ ಕಂಡುಬರುತ್ತದೆ. ದೂರದಲ್ಲಿ ಕಲ್ಲಿನ ಬೆಟ್ಟ ಕಂಡು ಬರುತ್ತದೆ. ಇನ್ನೊಂದು ಬದಿಯಲ್ಲಿ ಮಂಟಪವು ಕಂಡು ಬರುತ್ತದೆ. ಚಿತ್ರದ ಮುಖ್ಯ ಅಂಗವಾಗಿರುವ ಕಲ್ಲಿನ ರಥವು ಮುಧ್ಯದಿಂದ ಸ್ವಲ್ಪ ಎಡಕ್ಕಿದೆ ಮತ್ತು ರಥವು ಹಳದಿ, ನಿಂಬೆ ಹಳದಿ, ಕೇಸರಿ ಮಿಶ್ರಿತ ಬಿಳಿವರ್ಣದಿಂದ ಸೂರ್ಯನ ಬೆಳಕನ್ನು ರಥದ ಮೇಲೆ ಬಿದ್ದಿರುವುದನ್ನು ತೋರುತ್ತದೆ. ಕಡುಗೆಂಪು ಮತ್ತು ಕಂದು ಬಣ್ಣದಿಂದ ನೆರಳಿನ ಛಾಯಾಂಕನವನ್ನು ತೋರಿಸಿದ್ದಾರೆ. ಚಿತ್ರದಲ್ಲಿ ಕಲ್ಲಿನ ರಥದ ಎದುರುಗಡೆ ವ್ಯಕ್ತಿಯೊಬ್ಬ ನಿಂತು ನೋಡುತ್ತಿರುವುದನ್ನು ಕಂಡು ಬರುತ್ತದೆ; ಕಲ್ಲಿನ ರಥದ ಹಿಂದೆ ಮತ್ತೆ ಮುಂದೆ ವಿಶಾಲವಾದ ಖಾಲಿಸ್ಥಳವನ್ನು ತೋರಿಸಿದ್ದಾರೆ. ಚಿತ್ರವನ್ನು ನೋಡುಗರಿಗೆ ಮಂತ್ರ ಮುಗ್ಧರನ್ನಾಗಿದುತ್ತದೆ.

ಚಿತ್ರ–೧೦. ನಿಸರ್ಗ ಚಿತ್ರ

ಇನ್ನೊಂದು ನಿಸರ್ಗ ಚಿತ್ರದಲ್ಲಿ ಮೇಲೆ ಆಕಾಶವನ್ನು ನೀಲಿ ಮತ್ತು ಶ್ವೇತವರ್ಣದಿಂದ ಕೂಡಿದ್ದು ದೂರದಲ್ಲಿ ಮೇಲೆ ಸಾಲು ಕಂಭಗಳ ಮಂಟಪವಿದ್ದು ಕೆಳಗೆ ಅಕ್ಕ–ಪಕ್ಕದಲ್ಲಿ ಮರಗಳನ್ನು ಹಸಿರು, ಹಳದಿ ಮಿಶ್ರಿತ ಹಸಿರು ಮತ್ತು ಕಡು ಹಸಿರು ಬಣ್ಣದಿಂದ ಚಿತ್ರಿಸಲಾಗಿದೆ. ಹಾಗೇ ಕೆಳಗೆ ಬಂದಂತೆ ದೊಡ್ಡ ದೊಡ್ಡ ಬಂಡೆಗಳು ಅಲ್ಲಿ ಬಿದ್ದಿರುವುದನ್ನು ಕಂದು, ಕಡುಕಂದು, ಕಡುಗೆಂಪು, ಹಳದಿ ಮಿಶ್ರಿತ ಕಡುಗೆಂಪು ಮತ್ತು ಬಿಳಿವರ್ಣ ಮಿಶ್ರಿತ ಕಂದು ಬಣ್ಣದಲ್ಲಿ ರಚಿತಗೊಂಡಿವೆ; ಚಿತ್ರದ ಮುಂದೆ ನೀರು ಬ್ರಿಡ್ಜನ ಕೆಳಗಿನಿಂದ ಹರಿದು ಹೋಗುತ್ತಿರುವುದನ್ನು ಜಾಂಬಳಿ ಮಿಶ್ರಿತ ನೀಲಿ ಮತ್ತು ಬಿಳಿ ಬಣ್ಣದಲ್ಲಿ ರಚಿತವಾಗಿ ಕಂಡುಬರುತ್ತದೆ. ಚಿತ್ರದ ಬಲಭಾಗದಲ್ಲಿ ಕಂಬಗಳಿಂದ ಕೂಡಿದ ಕಟ್ಟಡ ಕಂಡು ಬರುತ್ತದೆ. ಬ್ರಿಡ್ಜ ಮೇಲೆ ಬಿಳಿ, ಕಂದು, ಕೆಂಪು, ಕಡುಗೆಂಪು ಹಳದಿ ಬಣ್ಣದಿಂದ ಚಿತ್ರತವಾಗಿರುವದನ್ನು ಕಂಡುಬರುತ್ತದೆ.

೫.೬. ಆರ್. ಎಂ. ಹಡಪದ

ಹಡಪದರವರು ಹುಟ್ಟಿದ್ದು ಇಂದಿನ ಬಾಗಲಕೋಟೆ ಜಿಲ್ಲೆಯ ಬಾದಾಮಿಯಲ್ಲಿ. ೧೯೩೦ರ ದಶಕದಲ್ಲಿ ಬಾದಾಮಿ ಅದೊಂದು ಪುಟ್ಟ ಹಳ್ಳಿ. ಚಾಲೂಕ್ಯರ ಕಾಲದ ಗುಹಾ ದೇವಾಲಯಗಳು ಮತ್ತು ಬಾದಾಮಿಯಿಂದ ೫ ಮೈಲಿಯಾಚೆ ಚಾಲೂಕ್ಯರ ದೇವತೆ ಬನಶಂಕರಿ ನೆಲೆಸಿರುವ ಪುಣ್ಯ ಸ್ಥಳ. ಇವುಗಳನ್ನು ಸಂದರ್ಶಿಸಲು ಬರುವ ಜನಗಳಿಂದ ಈ ಪ್ರದೇಶ ರಾಜ್ಯ, ರಾಷ್ಟ್ರ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವುದು ಗಮನಾರ್ಹ. ಆ ಸಂದರ್ಭದಲ್ಲಿ ಧಾರ್ಮಿಕ ಕ್ಷೇತ್ರವಾದ ಬನಶಂಕರಿಯ ದರ್ಶನಕ್ಕೆ ನಡೆಯುತ್ತ, ಕೆಲವು ಸಲ ಭಕ್ತರು ಎತ್ತಿನ ಬಂಡಿಗಳ ಮೂಲಕವೋ, ಉಳ್ಳವರು ಯಾವಾಗಲೊ ಒಂದು ಬಾರಿ ಬಂದು ಹೋಗುವ ಬಸ್ಸುಗಳನ್ನೇರಿ ಬರುತ್ತಿದ್ದರಿಂದ ಆ ಊರು ಜನರಿಂದ ತುಂಬಿರುತ್ತಿತ್ತು. ಊರಲ್ಲಿ ಒಂದು ಕನ್ನಡ ಪ್ರಾಥಮಿಕ ಶಾಲೆ, ಗ್ರಾಮ ಪಂಚಾಯಿತಿ ಕಟ್ಟೆ ಇವು ಊರಿನವರಿಗೆ ತುಂಬ ಪರಿಚಿತವೆನ್ನಬಹುದು. ಆದರೆ ಪಕ್ಕದಲ್ಲೇ ಚಾಲೂಕ್ಯ ಶಿಲ್ಪಿಗಳು ನಿರ್ಮಿಸಿದ ಚಾರಿತ್ರಿಕ ಗುಹಾ ದೇವಾಲಯಗಳ ಬಗ್ಗೆ, ಅವುಗಳ ಚಾರಿತ್ರಿಕ ಮಹತ್ವದ ಅರಿವು ಅವರಿಗೆ ಇರಲಿಲ್ಲ. ಬಿಡುವಿನ ವೇಳೆಯಲ್ಲಿ ದನ ಕಾಯಲೆಂದೋ, ಜೇನುಗೂಡುಗಳನ್ನು ಬಿಡಿಸಲೆಂದೋ,

ಹುಲಿಮನೆಯ ಆಟ, ಕಣ್ಣಾ ಮುಚ್ಚಾಲೆಯಾಟ ಆಡಲು ಅಥವಾ ವಿಸ್ಮಯ ಎನಿಸುವ ದೃಶ್ಯಗಳು ಆಗಿದ್ದವು. ಇಂಥ ಊರಿನ ಸಾಂಸ್ಕೃತಿಕ, ಅದರ ಐತಿಹಾಸಿಕ ಹಿನ್ನಲೆಗಳೇ ರುದ್ರಪ್ಪನಂಥವರನ್ನು ಕಲಾವಿದರನ್ನಾಗಿ ರೂಪಿಸಿದ್ದು.[೨೦]

ಬಾಲ್ಯದ ಜೀವನ

'ಸಂಸ್ಕೃತಿ' ಎಂಬ ಶಬ್ದ ಈಚೆಗೆ ಬಹುಮುಖ್ಯವಾದ ಅರ್ಥವನ್ನು ಪಡೆದು ಬೆಳೆಯುತ್ತಾ ಬಂದಿದೆ. ಮಾನವನ ಸಮುದಾಯಗಳಿಂದ ಹಿಡಿದು, ವೈಯಕ್ತಿಕವಾದ ಅಚರಣೆಗಳವರೆಗೂ ಅದರ ವ್ಯಾಪ್ತಿ ಹಬ್ಬಿದೆ. ಮಾನವ ಜನಾಂಗಗಳ ಇತಿಹಾಸವನ್ನು ಚಿತ್ರಿಸುವಾಗ ಬಳಸುವ ಇನ್ನೊಂದು ಪದ ನಾಗರೀಕತೆ ಎಂಬುದು. ಆಂಗ್ಲ ಭಾಷೆಯಲ್ಲಿ ಇದನ್ನು **'ಕಲ್ಚರ್'** ಮತ್ತು **'ಸಿವಿಲೈಝೇಷನ್'** ಎಂದು ಕರೆಯಲಾಗಿದೆ. ಇವೆರಡು ಪದಗಳನ್ನು ಅನೇಕ ವೇಳೆ ವಿದ್ವಾಂಸರು ಸಮಾನಾರ್ಥಗಳೆಂಬಂತೆ ಪ್ರಯೋಗಿಸಿರುವುದೂ ಉಂಟು.[೨೧]

ಸಂಸ್ಕೃತಿ ಎಂಬ ಪದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಇದ್ದೇ ಇರುತ್ತದೆ. ಆದರೆ ವಿಭಿನ್ನ ತಳಹದಿಯಲ್ಲಿ ಅದು ರೂಪಗೊಂಡಿರುವುದು. ಅವನ ವರ್ತನೆ, ಹಾವ-ಭಾವ, ಸೃಜನಶೀಲ ಅಭಿವ್ಯಕ್ತಿಯೂ ಅವು ಸಾಂಸ್ಕೃತಿಕ ಲೋಕದಲ್ಲಿ ಬೆಳಕಿಗೆ ಬರುವುದು. ಪ್ರಕೃತಿ ಸಹಜ ಕ್ರೀಯೆಯಾಗುತ್ತದೆ. ಉದಾಹರಣೆಗಾಗಿ ಹೆಸರಾಂತ ಕಲಾವಿದ ಕೆ.ಕೆ. ಹೆಬ್ಬಾರರ ರೇಖಾ ಚಿತ್ರಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಸಂಸ್ಕೃತಿಗಳು, ಅಲ್ಲಿನ ಬದುಕಿನ ಸಂಸ್ಕೃತಿಗಳು ಇದಕ್ಕಿಂತ ಹೆಚ್ಚಾಗಿ ಜನಪದರ ಜಾನಪದ ಕಲೆ ಯಕ್ಷಗಾನದ ಪ್ರಭಾವವು ಹೇರಳವಾಗಿ ಕಂಡುಬರುತ್ತದೆ. ಅವರ ಪ್ರತಿಯೊಂದು ಕೃತಿಯೂ ಅವರ ಹುಟ್ಟೂರಿನ ಪರಿಸರ ಸಂಸ್ಕೃತಿಗಳನ್ನೇ ಬಿಂಬಿಸುತ್ತಿದ್ದವು. ಕವಿಯಂತೆ, ಕಥೆಗಾರರಂತೆ ಅನುಭವಗಳನ್ನೇ ಕೃತಿಯ ಮೂಲಕ ಅಭಿವ್ಯಕ್ತಿಸುವುದು ಕಂಡುಬರುತ್ತದೆ.[೨೨]

ಜನವರಿ ೧೯೩೬ರಲ್ಲಿ ತಂದೆ ಮಲ್ಲಪ್ಪ ತಾಯಿ ಬಸಮ್ಮನವರಿಗೆ ಹಡಪದರು ಜನಿಸಿದರು. ತಾಯಿ ಬಸಮ್ಮ ಹೆಸರಿಗೆ ತಕ್ಕಂತೆ ಶರಣ ಸಂಸ್ಕೃತಿಯ ಅನುಯಾಯಿ. ಮಲ್ಲಪ್ಪನವರದು ಕ್ಷಾರಿಕ ವೃತ್ತಿಯಾದರೂ ಕಾಯಕಯೋಗಿ. ಹಠಯೋಗಿ. ಅಷ್ಟೇ ಅಲ್ಲ ಸಾಮಾಜಿಕ ಸ್ಥಿತ್ಯಂತರಗಳ ಪ್ರಜ್ಞೆ ಇರುವಂಥ ವ್ಯಕ್ತಿತ್ವ. ಹರಿದಿನಗಳಲ್ಲಿ ಓಲಗ ಊದುವ ತಂದೆಯ ಪಂಚೆಯನ್ನು ಹಿಡಿದುಕೊಂಡು ಹೊಗುವ ಬಾಲಕ ರುದ್ರಪ್ಪ ಓಲಗದ ಲಯಗಳನ್ನು ನೆನಪಿನಾಳದಲ್ಲಿಟ್ಟುಕೊಳ್ಳುವ ಶಕ್ತಿಯನ್ನು ಪಡೆದಿದ್ದಕ್ಕೆ ಹಡಪದರವರ ಇತ್ತಿಚೀನ ಲಯ ಕಲಾಕೃತಿಯೇ ಸಾಕ್ಷಿ. ರುದ್ರಪ್ಪನ ಅಪ್ಪನಿಗೆ ಬಲು ಭಾರದ ಸಂಸಾರವನ್ನು ಬಡತನದಲ್ಲಿಯೇ ಸಾಗಿಸಿಕೊಂಡು ಬಂದ ಮಲ್ಲಪ್ಪನ ಮನೆಯ ಪರಿಸರ, ಉದರದ ಕಿಚ್ಚನ್ನು ನಂದಿಸಲು ಬೇಕಾದ ಪರಿಸರವನ್ನು ಹೊಂದಿತ್ತೇ ವಿನಃ ರುದ್ರಪ್ಪನಂತಹ ಹುಡುಗನಿಗೆ ಕಲೆಯ ವಿದ್ಯೆಯನ್ನು ಹೇಳಿಕೊಡುವ ಕಲಾಶಾಲೆಯಾಗಿರಲ್ಲಿಲ್ಲ.

ಬಾದಾಮಿಯ ಕೃಷಿಕ ಮಲ್ಲಪ್ಪನದು ದೊಡ್ಡ ಸಂಸಾರ. ಎಂಟು ಜನ ಗಂಡು ಮಕ್ಕಳು ಕುಟುಂಬಕ್ಕೆ ಲಕ್ಷಣವಾಗಿದ್ದ ಒಬ್ಬ ಮಗಳು. ಇದು ಮಲ್ಲಪ್ಪನ ಸಂಸರ. ನಿತ್ಯ ಹನ್ನೊಂದು ಜನರ ಉದರಕ್ಕೆ ಅನ್ನ ನೀಡುವ

೨೦. ಡಾ. ಸಿದ್ಧಲಿಂಗಯ್ಯ ಹಿರೇಮಠ : ಕಲಾವಿದ ಆರ್.ಎಂ.ಹಡಪದ - ಒಂದು ಅಧ್ಯಯನ(ಪ್ರಕಟಿತ ಮಹಾಪ್ರಬಂಧ), ಪು-೧೭

೨೧. ಅದೇ., ಪು-೨೦

೨೨. ಅದೇ., ಪು-೨೧

ದುಡಿಮೆ ಮಲ್ಲಪ್ಪನಿಗೆ ಬೇಕಿತ್ತು. ಮುಂಜಾನೆ ಕ್ಷಾರಿಕ ಕಾಯಕವನ್ನು ಮುಗಿಸಿ ನೇಗಿಲನ್ನು ಹೊತ್ತು ಇರುವ ತುಂಡು ಹೊಲದಲ್ಲಿ ಬಂಗಾರದ ಬೆಳೆಯನ್ನು ತೆಗೆಯುವ ಹುಮ್ಮಸ್ಸು. ಮಣ್ಣಲ್ಲಿ ಮಣ್ಣಿನ ಮಗನಾಗಿ ಮಣ್ಣಾಟವಾಡುವ ಜೇಷ್ಠ ಪುತ್ರ ರುದ್ರಪ್ಪನಿಗೆ ಬಡತನದ ಬಿಸಿ ತಟ್ಟಿರಲಿಲ್ಲ, ಅದರ ಅರಿವು ಅವನಿಗಿರಲಿಲ್ಲ. ಅದು ಅವನ ಪ್ರಜ್ಞೆಗೂ ನಿಲುಕದ ವಿಷಯವಾಗಿತ್ತು.[೨೩]

ಹಡಪದವರು ತಮ್ಮ ಬಾಲ್ಯದ ದಿನಗಳನ್ನು ಕುರಿತು ಚಿಕ್ಕವರಿದ್ದಾಗ ಶಾಲೆ ರಜೆ ಸಿಕ್ಕಾಗ ಗುಡ್ಡದಲ್ಲಿ ತಿರುಗುತ್ತ ಜೇನುಗೂಡು ಬಿಡಿಸುತ್ತ ಹೋಗುತ್ತಿದ್ದರು. ಜೇನುತಪ್ಪ ತೇಲಿ ಹಾಕಿ ತಿನ್ನುತ್ತಿದ್ದರು. ಏನೋ ಒಂದು ತರಹ ಸಾಹಸ ಮಾಡಿದ ಹಾಗೆ ಆಗುತ್ತದೆ ಎಂದು ಹೇಳುತ್ತಾರೆ. ಇದರಲ್ಲಿ ಸಂತೋಷ ಸಿಗುತ್ತದೆಂದು ಹೇಳುತ್ತಾರೆ. ಹುಡುಗರೆಲ್ಲ ಆಟ ಆಡೋದು, ನೀರಲ್ಲಿ ಈಜಾಡೋದು ಮಾಡಿದ್ದೇವೆಂದು ಹೇಳುತ್ತಾರೆ. ಆದ್ರ ಅಲ್ಲಿ ಕಾಣ್ತತಲ್ಲಾ ಕಲ್ಲಿನ ಒಡ್ಡು ಕಟ್ಯರಲ್ಲ ಅಲ್ಲಿ ನಾವೇಲ್ಲ ಹೋಗಂಗಿಲ್ಲ. ಯಾಕಂದ್ರ ಅಲ್ಲಿಗೆ ಬ್ರಾಮುಂಡ್ರು ಅಷ್ಟ ಹೋಕ್ತಿದ್ರು. ಅಕಸ್ಮಾತ್ ನಾವೇನರ ಅಲ್ಲಿಗೆ ಹೋದ್ರ ಹಾರ್‍ವರು ಹಾರ್‍ಯಾಡಿ ಬಿಡ್ತಿದ್ರು ಎಂದು ನೆನಪಿನ ಬುತ್ತಿಯನ್ನು ಬಿಚ್ಚಿಟ್ಟರು. ಇವರ ಮಾತುಗಳಲ್ಲಿ ಮಾತಿನ ಮತೀಯ ತಾರತಮ್ಯವನ್ನು ಸೂಕ್ಷ್ಮವಾಗಿ ಗುರುತಿಸಬಹುದು.

ಗ್ರಾಮೀಣ ಬದುಕನ್ನೇ ನೆಚ್ಚಿಕೊಂಡ ಬಾದಾಮಿ ಎಂದೆಂದೂ ಅಂತರಾಷ್ಟ್ರೀಯ ಮಟ್ಟದಲ್ಲಿರುವ ಕನಸು ಕಂಡಿರಲಿಲ್ಲ. ತನ್ನಡೊಲೊಳಗೆ ಅಮೂಲ್ಯ ಐತಿಹಾಸಿಕ ಸಿರಿ ಸಂಪತ್ತನ್ನೇ ತುಂಬಿಕೊಂಡಿದ್ದರೂ ಬಾದಾಮಿಯ ರೈತನಿಗೆ ಅದರರಿವು ಆಗಲಿ ಐತಿಹಾಸಿಕ ಮಹತ್ವವಾಗಲಿ ಗೊತ್ತೇ ಇರಲಿಲ್ಲ. ರೈತ ನೆಚ್ಚಿಕೊಂಡಿದ್ದು ಭೂಮಿ, ಮಳೆ, ಬೆಳೆ ಆದರೆ ಬಾಲಕ ರುದ್ರಪ್ಪನಿಗೆ ಕೃಷಿಯ ಜ್ಞಾನ, ಆಸಕ್ತಿ ದೂರವಾಗಿಯೇ ಉಳಿದು ಬಾದಾಮಿ ಬನಶಂಕರಿಯ ಜಾತ್ರೆಯಲ್ಲಿನ ನಾಟಕಗಳು, ಬಯಲಾಟಗಳು, ಕುಣಿತಗಳು ತುಂಬ ಕುತೂಹಲಕಾರಿಯಾಗಿ ಕಂಡವು. ಅಷ್ಟೇ ಅಲ್ಲದೇ ಜಾತ್ರೆಯ ಸಂದರ್ಭದಲ್ಲಿ ಊರೊಳಗಿನ ಮಣ್ಣಿನ ಮನೆಗಳನ್ನು ಶೃಂಗಾರಗೊಳ್ಳುವುದು, ಬಾಗಿಲೆದುರಿಗೆ ಸೆಗಣಿಯಿಂದ ಸಾರಿಸಿ ಹಾಕಿದ ಚಿತ್ತಾರದ ರಂಗೋಲಿಯನ್ನು ದೃಷ್ಟಿನೆಟ್ಟು ನೋಡಿ ಅನುಭವಿಸಿ ಆನಂದಿಸುವ ಗುಣ ಬಾಲ್ಯದಲ್ಲಿಯೇ ರುದ್ರಪ್ಪನಲ್ಲಿತ್ತು. ಬಾಲಕ ರುದ್ರಪ್ಪನಿಗೆ ಮನೆಯ ಮಾಳಿಗೆಯ ಅಂಚುಗಳಲ್ಲಿ ಗೋಡೆಯಿಂದ ಹೊರಗೆ ತಲೆಹಾಕ್ಕಿದ್ದ ಸುಟ್ಟ ಮಣ್ಣಿನ ಹರ ಮಾಳಿಗೆಗಳು ಪುರಾಣೇತಿಹಾಸ ಕಾಲದ ಕೋಟೆ ಕೊತ್ತಲಗಳು ಮೇಲಿನ ಫಿರಂಗಿಗಳಂತೆ ಕಂಡಿದ್ದವು. ದೀಪಾವಳಿ ಹಬ್ಬದಲ್ಲಿ ರಾಜರವಿವರ್ಮನ ದೇವ ದೇವತೆಗಳ ಚಿತ್ರ ಪಟಗಳನ್ನು ಹಾಕಿರುತ್ತಿದ್ದರು. ಅವುಗಳನ್ನು ರುದ್ರಪ್ಪ ನಕಲಿಸುತ್ತಿದ್ದ. ಆಗಿನ ಕಾಲದಲ್ಲಿ ಹೆಣ್ಣು ಮಕ್ಕಳಲ್ಲಿ ಸ್ವಲ್ಪ ಶ್ರೀಮಂತರಿದ್ದರೆ ಮನೆಯಲ್ಲಿಯೇ ಇದ್ದುಕೊಂಡು ಕಸೂತಿ ಹಾಕುವುದು ಸಾಮಾನ್ಯವಾಗಿತ್ತು. ಅವುಗಳಿಗೆ ನಕ್ಷೆ ಹಾಕಲು ರುದ್ರಪ್ಪನಿಗೆ ಆಹ್ವಾನ ಹೋಗುತ್ತಿತ್ತು. ಅವರ ಮನೆಯಲ್ಲಿಯೇ ಕೂತು ಕಾಗದದ ಮೇಲೆ ಪ್ರಾಣಿ–ಪಕ್ಷಿ, ಎಲೆ ಬಳ್ಳಿ ಹೂವು, ಆನೆ, ಹುಲಿಯಂತಹ ನಕ್ಷೆಗಳನ್ನು ಬಿಡಿಸಿಕೊಡುತ್ತಿದ್ದನು. ಕೆಲವೊಮ್ಮೆ ನೇರವಾಗಿ ಬಟ್ಟೆಗಳಿಗೆ ಚಿತ್ರಿಸಿಕೊಡುತ್ತಿದ್ದ. ರುದ್ರಪ್ಪನ ನಕಲು ಮಾಡುವ ಮತ್ತು ಹಳೆಯದನ್ನು ಕುಲಂಕುಷವಾಗಿ ನೋಡಿ ಮಾಡುವ ಕೌಶಲ್ಯ ಬೆಳೆದು ಚಿತ್ರಕಲೆಯತ್ತ ಮನಸ್ಸು ಹೆಚ್ಚು ಕೇಂದ್ರೀಕೃತವಾಗಲು ಇಂತಹ ಅವಕಾಶಗಳು ಕಾರಣವಾಗಿರುವಂತಿವೆ.[೨೪]

---

೨೩. ಡಾ. ಸಿದ್ಧಲಿಂಗಯ್ಯ ಹಿರೇಮಠ : ಕಲಾವಿದ ಆರ್.ಎಂ.ಹಡಪದ – ಒಂದು ಅಧ್ಯಯನ(ಪ್ರಕಟಿತ ಮಹಾಪ್ರಬಂಧ), ಪು–೨೪

೨೪. ಅದೇ., ಪು–೨೬

ಹಡಪದ ಅವರ ಕಲಾಭ್ಯಾಸದ ಜೀವಂತ ಶಾಲೆ ಬಾದಾಮಿ. ಬಾಲ್ಯದ ದಿನಗಳು, ಅಲ್ಲಿನ ಆಟ, ಉತ್ಸಾಹದ ಸಾಹಸಗಳು ಆಗ ಪಡೆದ ಅನುಭವಗಳು ಕಲಾವಿದ ಹಡಪದರವರನ್ನು ರೂಪಿಸಿದವು. ಅಲ್ಲದೆ ಒಳ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬಿರಿದವು. ಇವೆಲ್ಲ ಅಂದಿನಿಂದ ಇಂದಿನವರೆಗೂ ಪ್ರಭಾವ ಬೀರುತ್ತಲೇ ಬಂದಿವೆ. ಪ್ರಪಂಚದ ಬಹುತೇಕ ಕಲಾವಿದರ ಮೇಲಾದ ಬಾಲ್ಯದ ದಿನಗಳ ಪ್ರಭಾವವನ್ನು ಒಂದಲ್ಲ ಒಂದು ಬಗೆಯಲ್ಲಿ ಕಾಣಬಹುದು. ಅವರ ಕಲಾ ರಚನೆಗಳ ವಿಶ್ಲೇಷಣೆಗೆ ಈ ಮೂಲ ಸೆಲೆಯ ಅರಿವು ನೆರವಾಗುತ್ತದೆ.[೨೫]

ಪ್ರಾಥಮಿಕ, ಪ್ರೌಢ ಶಿಕ್ಷಣದ ದಿನಗಳು

ಅಕ್ಷರ ಕಲಿಸಲು ತಂದೆ ಬಾಳಾಚಾರ್ ಮಾಸ್ತರ್‌ರ ಬಳಿ ಕರೆದೊಯ್ದರು. ಕಲಿಕೆಯ ಪ್ರಾರಂಭ ಸಾಂಪ್ರದಾಯಿಕವಾಗಿ ಆಗಬೇಕೆಂದು ತಂದೆಯ ಬಯಕೆ, ಮಾಸ್ತರರು ಶಿಷ್ಯರನ್ನು ಎದುರಿಗೆ ಕೂರಿಸಿ ವಿಧಿವತ್ತಾಗಿ ವಿದ್ಯಾಭ್ಯಾಸಕ್ಕೆ ನಾಂದಿ ಹಾಕಿದರು. ಸಗಣಿ ಸಾರಿಸಿದ ಹಸಿರು ನೆಲದ ಮೇಲೆ ಕೆಂಪು ಸುಣ್ಣದಿಂದ ಒಂದು ವೃತ್ತ ಬರೆದರು. ನಡುವೆ 'ಅ' ಬರೆದರು. ಬಾಲಕನಿಗೆ ಕಂಡದ್ದು ಅಕ್ಷರವಲ್ಲ ಹಸಿರು, ಕೆಂಪು ವೃತ್ತ ಅಕ್ಷರದ ಆಕಾರಗಳ ಸೂಕ್ಷ್ಮ ಸಂವೇದನೆ ಸಹಜವಾಗಿ ಬಂದಿತ್ತು. ವಂಶದಿಂದ ಬಂದದ್ದೆಂದರೆ ಸಂಗೀತ, ಮತ್ತು ಎಲ್ಲರಿಗೂ ಆಸಕ್ತಿ. ಕಲೆಯ ಸಂಸ್ಕಾರಕ್ಕೆ ಅಲ್ಲಿನ ಸಾಂಸ್ಕೃತಿಕ ಪರಿಸರ ಕಾರಣ ಎನಿಸುತ್ತೆ. ಮುಂದೆ ರುದ್ರಪ್ಪನ ವರ್ಣಮಾಲೆಗಳು ಕರಿ ಪಾಟೀಯ ಮೇಲೆ ಮೂಡತೋಡಗಿದಂತೆ ಬಾಲ್ಯದ ಚಿತ್ರಗಳು ನರ್ತಿಸತೊಡಗಿದವು.[೨೬]

ಬಾಳಾಚಾರರವರು ರುದ್ರಪ್ಪನಿಗೆ ಮೊದಲೂ ರ.ಡ.ಅ.ಆ ಅಕ್ಷರಗಳಿಂದ ವಿದ್ಯಾದಾನ ಮಾಡಿದರು. ಮಲ್ಲಪ್ಪನವರಿಗೆ ಆ ಅಕ್ಷರಗಳಲ್ಲಿ ಸಾಂಪ್ರದಾಯಿಕವಾದ ಏನೋ ಒಂದು ನಂಬಿಕೆ ಇತ್ತು. ಹೀಗಾಗಿ ಅ.ಆ.ಇ.ಈ ಬದಲು ರ.ಡ.ಅ.ಆ ಅಕ್ಷರಗಳಿಂದ ರುದ್ರಪ್ಪನ ಪ್ರಾಥಮಿಕ ಶಿಕ್ಷಣ ಸಾಂಪ್ರದಾಯಿಕವಾಗಿ ಪ್ರಾರಂಭ-ವಾಯಿತ್ತೆನ್ನಬಹುದು. ಬಾಳಾಚಾರರವರ ಮನೆಯಲ್ಲಿ ಮೂಡಿದ್ದ ಅಕ್ಷರಗಳಲ್ಲಿ ರುದ್ರಪ್ಪ ರೂಪಗಳನ್ನು, ಆಕಾರಗಳನ್ನು, ಬಣ್ಣಗಳನ್ನು ಗುತಿಸುತ್ತಿದ್ದರು.[೨೭]

ಅಕ್ಷರಗಳನ್ನು ಸುಂದರವಾಗಿ ಬರೆಯುತಿದ್ದ ರುದ್ರಪ್ಪ ಪಾಠಗಳಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಿದ್ದ. ಕಪ್ಪು ಹಲಗೆಯ ಮೇಲೆ ಶಿಕ್ಷಕರು ಹೇಳಿದ ಚಿತ್ರಗಳನ್ನು ಪಾಠದ ಸಾರವನ್ನು ಸುಂದರವಾಗಿ ಬರೆಯುತ್ತಿದ್ದ. ಅಂದಿನ ಸಂದರ್ಭದಲ್ಲಿ ವಾರಕ್ಕೆ ಅಥವಾ ಹದಿನೈದು ದಿನಗಳಿಗೊಮ್ಮೆ ಸರಸ್ವತಿ ಪೂಜೆಯನ್ನು ಶಾಲೆಯಲ್ಲಿ ಹಮ್ಮಿಕೊಳ್ಳುತ್ತಿದ್ದರು. ಪ್ರತಿ ತರಗತಿಗಳನ್ನು ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವನೆಯಿಂದ ಅಲಂಕರಿಸುತ್ತಿದ್ದರು. ಪ್ರತಿ ತರತಿಗಳ ಕಪ್ಪು ಹಲಗೆಯ ಮೇಲೆ ರುದ್ರಪ್ಪನನ್ನೇ ಕರೆದು ದೇವ ದೇವತೆಗಳ ಚಿತ್ರಗಳನ್ನು ಅವನಿಂದ ಬರೆಯಿಸುತ್ತಿದ್ದರು. ಬಾಲ್ಯದಲ್ಲಿಯೇ ಚಿತ್ರದ ಗೀಳು ಅಂಟಿಸಿಕೊಂಡ ರುದ್ರಪ್ಪ ಶಾಲೆಯಲ್ಲಿನ ಧಾರ್ಮಿಕ ವಿಧಿ-ವಿಧಾನಗಳಿಂದ ಸಾಕಷ್ಟು ಪ್ರಭಾವಿತನಾಗಿದ್ದನು.

೨೫. ಡಾ. ಸಿದ್ಧಲಿಂಗಯ್ಯ ಹಿರೇಮಠ : ಕಲಾವಿದ ಆರ್.ಎಂ.ಹಡಪದ - ಒಂದು ಅಧ್ಯಯನ(ಪ್ರಕಟಿತ ಮಹಾಪ್ರಬಂಧ), ಪು-೨೭

೨೬. ಅದೇ., ಪು-೨೮

೨೭. ಅದೇ., ಪು-೨೮

ರುದ್ರಪ್ಪ ಬಾದಾಮಿಯಲ್ಲಿ ೭ನೇ ತರಗತಿ ಮುಗಿಸಿ ಮುಂದೆ ಗುಳೆದಗುಡ್ಡ ಶಾಲೆಯಲ್ಲಿ ಎಸ್.ಎಸ್.ಸಿ ಮುಗಿಸಿದರು. ಬಾಗಲಕೋಟೆಯ ಪ್ರೌಢ ಶಿಕ್ಷಣ ರುದ್ರಪ್ಪನಿಗೆ ಅಷ್ಟು ಸುಲಭವಾಗಿರಲಿಲ್ಲ. ಮನೆಯ ಬಡತನದಲ್ಲಿ ವಿದ್ಯಾಭ್ಯಾಸ ಮಾಡುವುದು ತುಂಬ ಕಷ್ಟಕರವಾಗಿತ್ತು. ಬಾಗಲಕೋಟೆಯ ಪ್ರೌಢ ಶಿಕ್ಷಣ ಪಡೆಯುವ ಸಂದರ್ಭದಲ್ಲಿ ರುದ್ರಪ್ಪನ ಗುರು ಮಾತೆಯರಾಗಿದ್ದ ಲಾಜಮಿ ಎಂಬುವರು ಬಾಲ್ಯದಲ್ಲಿದ ಕಲಾ ಪ್ರತಿಭೆಯನ್ನು ಕಂಡು ತುಂಬ ಪ್ರೋತ್ಸಾಹವನ್ನು ನೀಡಿದರು. ಇವರಂತೆಯೇ ಬಸವೇಶ್ವರ ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದ ಹಾಗೂ ಸಂಗೀತ ಪ್ರೇಮಿಗಳಾಗಿದ್ದ ಪಂಚಾಕ್ಷರಪ್ಪ ಎಂಬುವರೂ ಕೂಡ ರುದ್ರಪ್ಪನ ಪ್ರತಿಭೆಗೆ ಮಾರು ಹೋಗಿ ಸಾಕಷ್ಟು ಸಹಕಾರವನ್ನು ನೀಡುತ್ತಿದ್ದರು. ತಮ್ಮ ಪಾಠ ಪ್ರವಚನ ಮುಗಿದ ಮೇಲೆ ರುದ್ರಪ್ಪ ರಚಿಸುತ್ತಿದ್ದ ಚಿತ್ರಗಳನ್ನು ನೋಡುತ್ತ ಸಂಗೀತವನ್ನು ನುಡಿಸುತ್ತಿದ್ದರು. ಪ್ರತಿ ತಿಂಗಳು ತಮ್ಮ ಸಂಬಳದಲ್ಲಿ ಬಣ್ಣ, ಕಾಗದ, ಪೆನ್ಸಿಲ್‌ಗಳನ್ನು ತಂದು ಕೊಟ್ಟು ಹಡಪದರವರಿಗೆ ನೈತಿಕ ಬೆಂಬಲವನ್ನೂ ಶೈಕ್ಷಣಿಕ ಸೂರ್ತಿಯನ್ನೂ ತುಂಬಿದರು. ರುದ್ರಪ್ಪ ಒಂದು ಮೂರ್ತಿ ಮಾಡಬೇಕೆಂದು ತನ್ನ ತುಡಿತವನ್ನು ಅವರಲ್ಲಿ ವ್ಯಕ್ತಪಡಿಸಿದಾಗ ಅವರೇ ಸ್ವತಃ ಗಾಡಿ ಎಳೆದುಕೊಂಡು ಮಣ್ಣನ್ನು ತಂದು ಕೊಡುವ ಸಹೃದಯ ತೋರಿದ್ದರು. ಅವರ ಪ್ರೇರಣೆಯಿಂದಲೇ ಬುದ್ಧನ ಮಣ್ಣಿನ ಶಿಲ್ಪವೊಂದನ್ನು ರಚಿಸಿ ಶಿಕ್ಷಕ ಸಮುದಾಯದವರಿಂದ ಪ್ರಶಂಸೆಗೊಳಗಾಗಿದ್ದರು ಹಡಪದರವರು. ಇವರ ಮಧ್ಯವೇ ಕಲಾವಿದ ಸೋಮಶೇಖರ ಸಾಲಿಮಠರವರ ಮನೆಗೆ ಹೋಗಿ ಅವರ ಕಲಾಕೃತಿಗಳನ್ನು ನೋಡಿಕೊಂಡು ಬರುವುದು ಇವರ ದಿನ ನಿತ್ಯದ ಕಾರ್ಯವಾಗಿತ್ತು. ಇಲ್ಲಿನ ಪ್ರೌಢ ಶಿಕ್ಷಣದ ಮಧ್ಯವೇ (೧೯೫೫) ಅಂದರೆ ಎಸ್.ಎಸ್.ಸಿ ಉತ್ತೀರ್ಣರಾಗುವ ಮೊದಲೇ ಹಡಪದರು ಖಾಸಗಿಯಾಗಿ ಟಿ.ಪಿ. ಅಕ್ಕಿಯವರ ಗದಗಿನ ವಿಜಯ ಕಲಾ ಮಂದಿರದಿಂದ ಮುಂಬಯಿಯ ಜೆ.ಜೆ. ಕಲಾಶಾಲೆಯ ಪರೀಕ್ಷೆಯನ್ನು ಕಟ್ಟಿ ಉತ್ತೀರ್ಣರಾಗಿದ್ದರು. ಹಡಪದರವರ ಕಲಾಸೃಷ್ಟಿಗೆ ಹಿಡಿದ ಕನ್ನಡಿ.

ಕಲಾ ಶಿಕ್ಷಣದ ದಿನಗಳು

ಭಾರತದಲ್ಲಿ ಕಲಾ ಶಿಕ್ಷಣದ ಇತಿಹಾಸವು ಇತ್ತೀಚೀನ ಶತಮಾನದಲ್ಲಷ್ಟೆ ಬೆಳೆದು ಬಂದಿದೆ. ಅದು ಪಡುವಣದಿಂದ ಬಂದ ವಿಕ್ಟೋರಿಯನ್ ಕಲಾ ಶಿಕ್ಷಣವನ್ನು ಅನಿವಾರ್ಯವಾಗಿ ಒಪ್ಪಿಕೊಂಡಿದ್ದೂ ಆಗಿದೆ. ಆಂಗ್ಲರು ಭಾರತೀಯರನ್ನು ಆಳುತ್ತಿರುವಾಗ ತಮ್ಮದೇ ಶೈಕ್ಷಣಿಕ ಪದ್ಧತಿಯನ್ನು ಒತ್ತಾಯವಾಗಿ ಭಾರತದಲ್ಲಿ ಬಿತ್ತಿದರು. ಅದರ ಪರಿಣಾಮವಾಗಿ ಮದ್ರಾಸ್, ಮುಂಬಯಿ, ಕಲ್ಕತ್ತಾಗಳಲ್ಲಿ ಆಂಗ್ಲ ಕಲಾವಿದರ ಅಧಿಕಾರಿಗಳ ಉಸ್ತುವಾರಿಯಲ್ಲಿ ಕಲಾಶಾಲೆಗಳು ಹುಟ್ಟಿಕೊಂಡವು. ಹೀಗೆ ಹುಟ್ಟಿಕೊಂಡ ಕಲಾ ಶಾಲೆಗಳಲ್ಲಿ ಮುಂಬಯಿಯ ಜೆ.ಜೆ. ಕಲಾಶಾಲೆಯೂ ಒಂದು. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರ ಆಳ್ವಿಕೆ ಕಾಲ ಮತ್ತು ಭಾರತೀಯ ಕಲಾ ಸಂಪ್ರದಾಯದ ಅಧಃ ಪತನದ ಕಾಲದಲ್ಲಿ ಈ ಕಲಾಶಾಲೆ ಪ್ರಾರಂಭವಾಯಿತು. ಲಂಡನ್ನಿನ ರಾಯಲ್ ಅಕಾಡೆಮಿ ಆಫ್ ಆರ್ಟ್ ಸಂಸ್ಥೆಯ ಮಾದರಿಯಲ್ಲಿ ಬ್ರಿಟೀಷರು ಸ್ಥಾಪನೆ ಮಾಡಿದ ಏಕೈಕ ಕಲಾಶಾಲೆ ಎಂದರೆ ಮುಂಬಯಿಯ ಸರ್.ಜೆ.ಜೆ.ಸ್ಕೂಲ ಆಫ್ ಆರ್ಟ್ ಆ್ಯಂಡ ಕ್ರಾಫ್ಟ್. ೧೮೫೭ ಮಾರ್ಚ ೨ ರಂದು ಈ ಕಲಾಶಾಲೆ ಅಸ್ತಿತ್ವಕ್ಕೆ ಬಂದಿತು. ಇದಕ್ಕೆ ಮೂಲ ಕಾರಣ ಪುರುಷ ಪಾರಶಿ ಮನೆತನದಲ್ಲಿ ಹುಟ್ಟಿದ ವಿಶಾಲ ಹೃದಯಿಯಾದ ಜೀಜಾಭಾಯಿ ಜೆಮ್‌ಶೇಡ್‌ಜಿ ಇಂತಹುದೇ ಕಲಾಶಾಲೆಯನ್ನು ಮದ್ರಾಸಿನಲ್ಲಿ

ಡಾ. ಹಂಟರ್ ಪ್ರಾರಂಭಿಸಿದರು. ಈ ಮುಖೇನ ಪ್ರಾರಂಭವಾದ ಕಲಾಶಾಲೆಯಲ್ಲಿ ನಂತರದ ವರ್ಷಗಳಲ್ಲಿ ಹಡಪದರವರು ಕಲಾಧ್ಯಾಯನ ಕೈಗೊಂಡರು.[೨೮]

ಹಡಪದ್ ಅವರು ಎಸ್.ಎಸ್.ಸಿ ನಂತರ ಕುಂಚ ಬ್ರಹ್ಮ ಡಾ.ಎಂ.ವಿ. ಮಿಣಜಗಿಯವರ ಹುಬ್ಬಳ್ಳಿಯ ವಿಜಯ ಮಹಾಂತೇಶ ಕಲಾಮಂದಿರದ ವಿದ್ಯಾರ್ಥಿಯಾಗಿದ್ದರು. ಅಲ್ಲಿ ಇಂಟರ್ ಮೀಡಿಯೆಟ್ ಮತ್ತು ಅಡ್ವಾನ್ಸ್ ಪೇಂಟಿಂಗ್ ಅಧ್ಯಯನವನ್ನು ಮಾಡಿ ಜೆ.ಜೆ. ಕಲಾಶಾಲೆಯಲ್ಲಿ ಡಿಪ್ಲೋಮಾ ಮುಗಿಸಿದರು.[೨೯] ಅದು ಆ ಕಾಲಕ್ಕೆ ಉನ್ನತ ಶಿಕ್ಷಣವೇ. ಆ ದೃಷ್ಟಿಯಿಂದ ಅವರು ಜೆ.ಜೆ. ಕಲಾಶಾಲೆಯ ವಿದ್ಯಾರ್ಥಿ. ವಾಸ್ತವವಾಗಿ ಅಲ್ಲಿಯ ಕಲಾ ಪದ್ಧತಿ, ಶೈಲಿಯ ಪರಂಪರೆ ಅವರ ಮೈ ಮನಗೂಡಬೇಕ್ಕಿತ್ತು ಆದರೆ ಹಾಗಾಗಲಿಲ್ಲ. ಅವರು ಶಾಲೆಯಲ್ಲಿ ಕಲಿತದ್ದಕ್ಕಿಂತ ಹೊರಗಡೆ ಕಲಿತದ್ದೆ ಹೆಚ್ಚು. ಪರೀಕ್ಷಾ ದೃಷ್ಟಿಯಿಂದ ವಾಸ್ತವಾದಿ ಹಾಗೂ ಅಲಂಕಾರಿಕ ಪದ್ಧತಿಯಲ್ಲಿ ಕಲಿಕೆ. ಭಾರತೀಯ ಪದ್ಧತಿ ಎಂದು ಕಲೆಯುತ್ತಿದ್ದರೂ ತಾಂತ್ರಿಕ ದೃಷ್ಟಿಯಿಂದ ಸಾವಿರಾರು ವರ್ಷಗಳು ನಡೆದು ಬಂದ ಭಾರತೀಯ ಕಲೆಯ ಬೆಳವಣಿಗೆಗೆ ವಿಶ್ಲೇಷಣೆ ಇತ್ಯಾದಿಗಳು ಅರಿವು ಮೂಡಿಸುತ್ತಿರಲಿಲ್ಲ. ಹಡಪದರವರು ಕಲಿಕೆಯ ದಿನಗಳಲ್ಲೇ ಪ್ರಕೃತಿ ಚಿತ್ರಗಳು, ಜಲವರ್ನದಲ್ಲಿ ರಚಿಸುತ್ತಿದ್ದರು. ನಂತರ ಜಲವರ್ಣದಲ್ಲಿ ಅನೇಕ ಪ್ರಯೋಗಗಳನ್ನು ಮಾಡುವುದರೊಂದಿಗೆ ಹಡಪದರು ಮೂರ್ತ ಮತ್ತು ಅಮೂರ್ತ ಕಲಾಕೃತಿಗಳು ರಚಿಸಿದ್ದನ್ನು ಇಲ್ಲಿ ಗಮನಿಸಬಹುದಾಗಿದೆ. ಹಡಪದರವರ ಕಲಾ ಪ್ರಯೋಗಗಳು ಮಾಧ್ಯಮದ ನಿರ್ಧಿಷ್ಟ ವ್ಯಾಕರಣಕ್ಕೆ ತಕ್ಕ ಹಾಗೆ ಬದ್ಧವಾಗಿಲ್ಲ. ತಮ್ಮಲ್ಲಿನ ಸುಪ್ತ ಪ್ರಜ್ಞೆಗೆ ತಕ್ಕಂತೆ ಕಾಗದಗಳನ್ನು ಜೊತೆಗೆ ವರ್ಣಗಳನ್ನು ಬಳಸಿಕೊಂಡಿರುವುದು ಇವರ ಕಲಾಕೃತಿಗಳ ತಾಂತ್ರ ವಿಶೇಷ.

ಹಡಪದರವರು ಜಲವರ್ಣದಲ್ಲಿ ಪಾರದರ್ಶಕ, ಅಪಾರದರ್ಶಕ ಹಾಗೂ ಮಿಶ್ರ ಮಾಧ್ಯಮದ ಕಲಾಕೃತಿಗಳನ್ನು ಆಧುನಿಕ ನೆಲೆಯಲ್ಲಿ ರಚಿಸಿದ್ದಾರೆ. ಇನ್ನೂ ಕೆಲವು ಪ್ರಕೃತಿ ಚಿತ್ರಗಳನ್ನು ಸಾಂಪ್ರದಾಯಿಕ ನೆಲೆಯಲ್ಲಿ ಚಿತ್ರಿಸಿದ್ದಾರೆ. ಒಮ್ಮೊಮ್ಮೆ ಬಣ್ಣದ ಟ್ಯೂಬ್‌ಗಳನ್ನೆ ಬಳಸಿ ವರ್ಣ ರೇಖೆಗಳಂತೆ ಎಳೆಯುವುದರ ಮೂಲಕ ವೈಶಿಷ್ಟ್ಯ ಪೂರ್ಣವಾದ ತಂತ್ರಗಾರಿಕೆಯನ್ನು ಪ್ರಕಟಪಡಿಸಿದ್ದಾರೆ. ವಿಶಿಷ್ಟ ರಚನಾ ಗುಣಗಳನ್ನು ಹೊದಿರುವ ಹಡಪದರವರ ಕೃತಿ ಸಮೂಹವನ್ನು ವಿಷಯ, ಸಂಯೋಜನೆ, ತಂತ್ರಗಾರಿಕೆ ಹಾಗೂ ವರ್ಣಭೇಧಗಳು ಅಧ್ಬುತಗಳಾಗಿವೆ. ಪ್ರಕೃತಿಯ ಚಿತ್ರಗಳ ಅಧ್ಯಯನವು ಶೈಕ್ಷಣಿಕ ಸಂದರ್ಭದಲ್ಲಿ ಮಹತ್ವದ ವಿಷಯವಾಗಿರುತ್ತದೆ. ಏಕೆಂದರೆ ವಿದ್ಯಾರ್ಥಿಗಳಿಗೆ ಯಥಾದರ್ಶನ ಸಿದ್ಧಾಂತ ಅರಿವು ಬರುವುದು ಪ್ರಕೃತಿ ಚಿತ್ರಗಳ ಅಧ್ಯಯನದಿಂದ. ಈ ವಿಷಯವನ್ನು ಆಸಕ್ತಿಯಿಂದ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಮುಂದಿನ ವಿಷಯಗಳಿಂದ ಭಾವಚಿತ್ರ, ಸ್ಥಿರಚಿತ್ರಣಗಳ ರಚೆಯಲ್ಲಿ ಪಕ್ವತೆಯನ್ನು ಸಾಧಿಸುತ್ತಾರೆ.

ಚಿತ್ರ-೧೧. ಲಾಲ್‌ಬಾಗ್ ಜಾತ್ರೆ

ಬೆಂಗಳೂರಿನ ಪ್ರಸಿದ್ಧ ಉದ್ಯಾನವನ ಲಾಲ್‌ಭಾಗ್. ಹಡಪದರವರು ಪ್ರಕೃತಿಯ ಸೌಂದರ್ಯವನ್ನು

೨೮ ಡಾ. ಸಿದ್ಧಲಿಂಗಯ್ಯ ಹಿರೇಮಠ : ಕಲಾವಿದ ಆರ್.ಎಂ.ಹಡಪದ – ಒಂದು ಅಧ್ಯಯನ(ಪ್ರಕಟಿತ ಮಹಾಪ್ರಬಂಧ), ಪು–೩೩

೨೯. ಅದೇ.

ಆರ್.ಎಂ. ಹಡಪದರವರ ನಿಸರ್ಗ ಕಲಾಕೃತಿಗಳು





ಜಲವರ್ಣ ಲಾಲ್ ಬಾಗ್ ಜಾತ್ರೆ



ಜಲವರ್ಣ ಸಾಂಚಿಯ ಬೀದಿ

ಆಸ್ವಾದಿಸಲು ಹೋದಾಗ ಲಾಲ್‌ಬಾಗ್‌ನಲ್ಲಿ ಜಾತ್ರೆ ನಡೆದ ಒಂದು ಸಂದರ್ಭದಲ್ಲಿ ರಚಿಸಿದ ಕಲಾಕೃತಿ ಇದು. ಜಲವರ್ಣದ ತಂತ್ರ ಸಾಧ್ಯತೆಗಳನ್ನು ಸಮರ್ಥವಾಗಿ ಬಳಸಿಕೊಂಡು ರಚಿಸಿದ ಈ ಚಿತ್ರಗಳಲ್ಲಿ ಜನಜಂಗುಳಿಯ ಹಾಗೂ ಜಾತ್ರೆಯ ಸಂದರ್ಭದಲ್ಲಿ ಹಾಕಲಾದ ಅಂಗಡಿಗಳ ನೋಟವನ್ನು ಇಲ್ಲಿ ಕಾಣುತ್ತೇವೆ. ಮರಗಿಡಳ ರಚನಾ ತಂತ್ರದಿಂದ ಉದ್ಯಾನವನದ ಸ್ವಚ್ಛಂದ ಪರಿಸರ ಇಲ್ಲಿ ಮೂಡಿದೆ. ಪ್ರಕೃತಿ ಚಿತ್ರದ ವ್ಯಾಕರಣವು ಇಲ್ಲಿನ ಸಂಯೋಜನೆಯಲ್ಲಿ ಸ್ಪಷ್ಟಗೊಂಡಿರುವುದರಿಂದ, ಹಡಪದರವರು ೬೦ರ ದಶಕದಲ್ಲಿ ಜಲವರ್ಣ ಮಾಧ್ಯಮದ ಉತ್ತಮ ಪ್ರಯೋಗವಾಗಿದೆ.

ಚಿತ್ರ–೧೨. ಸಾಂಚೀಯ ಬೀದಿ

ಸುಪ್ರಸಿದ್ಧ ಸಾಂಚೀಯ ಬೀದಿಯಲ್ಲಿ ಹಡಪದರವರು ರಚಿಸಿದ ಚಿತ್ರ ಇದು. ಹಿನ್ನಲೆಯಲ್ಲಿ ಸ್ತೂಪವಿರುವ ಕಲ್ಲಿನ ಬೆಟ್ಟ, ಮುನ್ನಲೆಯಲ್ಲಿ ಗ್ರಾಮದ ಮನೆಗಳು, ಗಿಡಗಳು ಹಾಗೂ ಬೀದಿಯು ಪ್ರಕೃತಿಯ ದೃಶ್ಯಾನುಭವವನ್ನು ನೀಡುತ್ತದೆ. ದೂರದ ಬೆಟ್ಟವು ವಾಯುಮಂಡಲದ ಕಣ್ಣೆಲೆಯ ಸಿದ್ಧಾಂತದ ಪ್ರಾಯೋಗಿಕ ಅನುಭವದ ವಿವರಣೆಗಳನ್ನು ಈ ಚಿತ್ರದಲ್ಲಿ ಸ್ಪಷ್ಟವಾಗಿ ಗೋಚರವಾಗಿಸುತ್ತದೆ. ದೂರದಲ್ಲಿನ ವಸ್ತುಗಳಿಗೆ ವಾಯು ಮಂಡಲ ಆವರಿಸಿರುವುದರಿಂದ ಆ ವಸ್ತು ಮಸುಕಾಗಿ ಕಾಣುತ್ತವೆ. ಆದರೆ ಹತ್ತಿರದ ವಸ್ತುಗಳು ವಿಕ್ಷಕನ ಸನಿಹಕ್ಕೆ ಇರುವುದರಿಂದ ಯಥಾದರ್ಶನ ಸಿದ್ದಾಂತದ ಅರಿವನ್ನು ನೀಡುತ್ತದೆ. ಹಾಗೆಯೇ ನೆರಳು ಬೆಳಕಿನ ವ್ಯತ್ಯಾಸವನ್ನು ಮನೆಗಳ ಮೇಲೆ ಬಿದ್ದ ಸೂರ್ಯನ ರಶ್ಮಿಯನ್ನಾಧರಿಸಿ ಹೇಳಬಹುದೆಂಬ ಸಿದ್ಧಾಂತವನ್ನು ಉದಹರಿಸುತ್ತದೆ.

ಪ್ರಶಸ್ತಿಗಳು : ಕರ್ನಾಟಕ ಲಲಿತಕಲಾ ಅಕಾಡೆಮಿ, ದಸರಾ ಕಲಾ ಪ್ರದರ್ಶನ, ಅಖಿಲ ಭಾರತ ಲಲಿತಕಲಾ ಮತ್ತು ಕುಶಲ ಕಲಾ ಪ್ರಶಸ್ತಿ, ೧೯೮೭–೯೦ರ ವರೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರು, ಕೇಂದ್ರ ಲಲಿತಕಲಾ ಅಕಾಡೆಮಿಯ ಸದಸ್ಯರು (ದೆಹಲಿ), ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯರು (ತಂಜಾವೂರ), ದಕ್ಷಿಣ ವಲಯ ಸಾಂಸ್ಕೃತಿಕ ಕೇಂದ್ರದ ಸದಸ್ಯರು (ನಾಗಪುರ), ೧೯೯೨–೯೫ರ ವರೆಗೆ ಸೆನೆಟ್ ಸದಸ್ಯರು ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೬ ರಲ್ಲಿ ಬೆಂಗಳೂರು ಕೆಂಪೇಗೌಡ ಪ್ರಶಸ್ತಿ, ೧೯೯೭ರಲ್ಲಿ ಗೌರವ ಡಿ.ಲಿಟ್ ಪ್ರಶಸ್ತಿಯಾದ 'ನಾಡೋಜ' ಪ್ರಶಸ್ತಿ ಕನ್ನಡ ವಿಶ್ವವಿದ್ಯಾಲಯದಿಂದ ನೀಡಲಾಗಿದೆ.

ಕಲಾ ಸಂಗ್ರಹ : ರಾಷ್ಟ್ರೀಯ ಕಲಾ ಸಂಗ್ರಹಾಲಯ, ನವದೆಹಲಿ, ಕೇಂದ್ರ ಲಲಿತ ಕಲಾ ಅಕಾಡೆಮಿ, ನವದೆಹಲಿ, ಲಲಿತ ಕಲಾ ಅಕಾಡೆಮಿಗಳು ಗೋವಾ ಮತ್ತು ಮದ್ರಾಸ್, ಇಸ್ರೋ, ಧರ್ಮಾರಾಂ ಕಾಲೇಜು ಬೆಂಗಳೂರು, ಜಾನಪದ ಲೋಕ ರಾಮನಗರ, ಖಾಸಗಿ ಸಂಗ್ರಹ ಮತ್ತು ಸಂಗ್ರಹಾಲಯಗಳು: ಭಾರತ, ಇಂಗ್ಲೆಂಡ್, ಯು.ಎಸ್.ಎ ಮತ್ತು ಜರ್ಮನಿಯಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

೫.೭. ವಿಜಯ ಸಿಂಧೂರ

ಬದುಕನ್ನು ಪ್ರೀತಿಸುವ ವಿ.ಜಿ. ಸಿಂಧೂರ, ಪ್ರಕೃತಿಯನ್ನು ತಮ್ಮ ಅಭಿವ್ಯಕ್ತಿಯ ಮೂಲ ಆಶಯವನ್ನಾಗಿಸಿಕೊಂಡಿರುವವರು. ತಾವು ಹುಟ್ಟಿದ ಮಣ್ಣು, ಮುಗಿಲು, ಆಕಾಶ, ಸುತ್ತಲಿನ ಮರಗಿಡ, ಪ್ರಾಣಿ, ಪಕ್ಷಿ, ಜನರನ್ನು ಪ್ರೀತಿಸುತ್ತ ತಮ್ಮ ಕಲಾಕೃತಿಗಳಲ್ಲಿ ಇವೆಲ್ಲವನ್ನು ತಂದುಕೊಳ್ಳುತ್ತ ಬದಿಕಿನ ಎಲ್ಲ

ಭಾಗವನ್ನು ಬಣ್ಣದಲ್ಲಿ ಹರಿಸಿ ಆನಂದಿಸುತ್ತಿರುವ ಕಲಾವಿದರು. ಜಮಖಂಡಿಯ ಶ್ರೀಮಂತ ಕುಟುಂಬದಲ್ಲಿ ೦೭.೦೬.೧೯೪೦ರಲ್ಲಿ ಸಿಂಧೂರರು ಜನಿಸಿದರು. ಸಿಂಧೂರರ ಅತ್ಯಂತ ಪ್ರೀತಿಯ ನಡುವೆ ಬಾಲ್ಯವನ್ನು ಕಂಡವರು. ೧೦ನೆಯ ವರ್ಷದ ಹುತುಹಲದ ಕಣ್ಣು ಮನೆಯಲ್ಲಿದ್ದ ರವಿವರ್ಮನ ಚಿತ್ರಗಳಲ್ಲಿನ ಪುರಾಣ ಪುರುಷರ; ರೂಪಗಳನ್ನು ಚೆನ್ನಾಗಿಯೇ ಗ್ರಹಿಸಿತು; ಪ್ರಾಥಮಿಕ ಪಾಠಶಾಲೆಯ ಅಕ್ಷರ, ಅಂಕಿ-ಸಂಖ್ಯೆಗಳೊಂದಿಗಿನ ಆಟದ ಜೊತೆ ಜೊತೆಗೆ ರಾಷ್ಟ್ರಧ್ವಜದ ಬಣ್ಣ ಹಾಗೂ ಸುತ್ತಲಿನ ಇನ್ನಿತರ ವಸ್ತುಗಳ ರೂಪದೊಂದಿಗೆ ಆಟವಾಡತೊಡಗಿದರು. ಜಲವರ್ಣದಲ್ಲಿ ದತ್ತಾತ್ರೇಯ, ಶಿವಪಾರ್ವತಿ, ಗಣಪತಿ, ನಂದಿ ಇತ್ಯಾದಿ ರೂಪಗಳನ್ನು ರೇಖಿಸಿ ಬಣ್ಣ ತುಂಬಿಸಿದರು. ಪೂಜಾರ್ಹ ವ್ಯಕ್ತಿಗಳ ರೂಪಗಳು ಮತ್ತು ರವಿವರ್ಮನ ಓಲಿಯೋಜನೆಯೂ ಹಳದಿ, ಕೆಂಪು, ಹಸಿರು ಮತ್ತು ಕಪ್ಪು ಬಣ್ಣಗಳ ಸಂಯೋಜನೆಯೂ ಅವರನ್ನು ಆಕರ್ಷಿಸಿರಬಹುದು. ಇಂದಿಗೂ ಹಾಗೆ ಚಿತ್ರಿಸಿರುವವುಗಳಲ್ಲಿ ಕೆಲವ, ಸಿಂಧೂರರ ಜಮಖಂಡಿಯ ಮನೆಯಲ್ಲಿ ಉಳಿದು ಕೊಂಡಿರುವುದು ಆ ಚಿತ್ರಗಳಿಗೆ ಅವರ ಮನೆಯವರು ನೀಡಿರುವ ಪ್ರಾಮುಖ್ಯತೆಯನ್ನು ತೋರುತ್ತದೆ; ಒಂದೆರಡು ರೇಖಾಚಿತ್ರಗಳೂ ಇವೆ. ಹೀಗೆ ತಮ್ಮ ಚಿತ್ರಕಲೆಯ ಸಂಬಂಧ ಬೆಳೆಸಿಕೊಂಡ ಸಿಂಧೂರರು ಅತ್ಯುನ್ನತ ಶಿಕ್ಷಣ ಪಡೆದು ಇಂಜನಿಯರ್ ಅಥವಾ ಡಾಕ್ಟರರಾಗಬೇಕೆಂಬ ಬಯಕೆ ಮನೆಯವರದು.

೧೯೫೯ರಲ್ಲಿ ಪ್ರೀ-ಯೂನಿವರಸಿಟಿಯ ತರಗತಿಯಲ್ಲಿ ವಿಜ್ಞಾನವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಳ್ಳುವಂತೆ ಮಾಡಿದ್ದೂ ಈ ಉದ್ದೇಶ ಸಾಧಿಸಲೆಂದೇ. ಆದರೆ ಕಾಲೇಜಿನ ತರಗತಿಗಳ ನಡುವೆ ರೇಖಿಸುತ್ತ-ಚಿತ್ರಿಸುತ್ತ ಕಾಲ ಕಳೆಯುತ್ತಿದ್ದ ಸಿಂಧೂರರಿಗೆ ೨ನೆಯ ವರ್ಷ ಪಿ.ಯೂ.ಸಿ.ಯಲ್ಲಿ ಗಣಿತ ಕೈಕೊಟ್ಟಿತು. ೧೯೬೧ರಲ್ಲಿ ಪುಣೆಯ ಅಭಿನಯ ಕಲಾ ವಿದ್ಯಾಲಯದ ಸಿರ್ಸಿಯ ಎಸ್.ಎಸ್. ಕಾಮತ್‌ರವರಲ್ಲಿ ಚಿತ್ರಕಲೆಯ ಅಭ್ಯಾಸ. ಭಾವಚಿತ್ರಕ್ಕೆ ಹೆಚ್ಚಿನ ಗಮನ. ನಂತರ ಮುಂಬಯಿಯಲ್ಲಿ ಸರ್ ಜೆ.ಜೆ. ಕಲಾಶಾಲೆಯಲ್ಲಿ ಚಿತ್ರಕಲೆಯನ್ನು ಕಲಿಯಲಾರಂಭಿಸಿದರು. ಸಿಂಧೂರರ ಗುರುಗಳಾದ ಶಂಕರ್ ರಾವ್ ಪಲ್ಸೀಕರ್‌ರವರ ಮಾರ್ಗದರ್ಶನದಲ್ಲಿ ಅತ್ಯಂತ ಆಸಕ್ತಿಯಿಂದ ಕಲಿತರು. ರಂಗಭೂಮಿ ಹಾಗೂ ಚಲನಚಿತ್ರ ನಟ ಅಮೋಲ್ ಪಾಲೇಕರ್ ಸಿಂಧೂರರ ಸಹಪಾಟಿಗಳಲ್ಲೊಬ್ಬರಾಗಿದ್ದರು. ೧೯೬೪ರಲ್ಲಿ ಚಿತ್ರಕಲೆಯಲ್ಲಿ ಸಿಂಧೂರರು ಡಿಪ್ಲೋಮಾ ಪದವಿ ಪಡೆದ ನಂತರ ೧೯೬೫ರಲ್ಲಿ ಅಲ್ಲಿಯೇ ಶಿಶ್ಯವೇತನದ ನೇರವಿನಂದ ಭಿತ್ತಿಚಿತ್ರಕಲೆಯನ್ನು ಅಭ್ಯಾಸ ಮಾಡಿದರು.[೩೦]

೧೯೭೫ರ ನಂತರ ಸಾರ್ವಜನಿಕವಾಗಿ ಹಲವು ಪ್ರಮುಖ ಕಲಾಪ್ರದರ್ಶನಗಳಲ್ಲಿ ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸುತ್ತ ಬಂದಿರುವ ಸಿಂಧೂರರು ೧೯೭೦-೮೦ರಲ್ಲೂ ಸುತ್ತಲಿನ ಪ್ರಕೃತಿಯ ಲೆಕ್ಕವಿಲ್ಲದಷ್ಟು ವರ್ಣಛಾಯೇ, ರೂಪಗಳನ್ನು ಅನ್ವೇಷಿಸುತ್ತ ಕೆಲವೊಮ್ಮೆ ಅಮೂರ್ತವಾಗಿಯೂ ಅಭಿವ್ಯಕ್ತಿಸುತ್ತ ನಡೆದಿದ್ದರು. ಪ್ರಕೃತಿ ಕಲಾವಿದರ ಮೊದಲ ಸ್ಫೂರ್ತಿ. ಅದನ್ನು ನಕಲು ಮಾಡುತ್ತ, ಅನುಸರಿಸುತ್ತ ಇಡುವ ಹೆಜ್ಜೆಗಳಲ್ಲಿ ಅಂತಿಮವಾಗಿ ತನ್ನನ್ನು ಕಂಡುಕೊಳ್ಳುವ ಕಲಾವಿದ ಇನ್ನೂ ಮುಂದೆ ಹೋಗಿ ಪ್ರಕೃತಿಯನ್ನು ಪ್ರಶ್ನಿಸುವ, ಅದನ್ನು ತನ್ನ ಗ್ರಹಿಕೆ, ಅನುಭವಗಳ ಸೆಳಕುಗಳ ಲೇಪನದಿಂದ ವಿಭಿನ್ನವಾಗಿ ಕಾಣುವ, ಕೆಲವೊಮ್ಮೆ ತನ್ನದೇ ರೀತಿಯಲ್ಲಿ ಅಭಿವ್ಯಕ್ತಿಸಿ ಹೊಸರೂಪವನ್ನು ಸೃಷ್ಟಿಸುವ ದೃಷ್ಟಿ ಹೊಂದುತ್ತಾನೆ. ಸಿಂಧೂರರು ಪ್ರಕೃತಿಯನ್ನು ಹಲವು ರೀತಿಗಳಲ್ಲಿ ನೋಡಿ, ಅನುಭವಿಸಿ ಅಭಿವ್ಯಕ್ತಿಸುವವರು. ಪ್ರಕೃತಿ ಅವರಿಗೆ ಸ್ಥಿತಜೀವ ಇದ್ದಂತೆ!

೩೦. ಕೆ. ವಿ. ಸುಬ್ರಹ್ಮಣ್ಯಂ : ವಿಜಯ ಸಿಂಧೂರ. ಪು-೨

ಕಲಾ ಇತಿಹಾಸ, ಅದರಲ್ಲೂ ಪಾಶ್ಚಿಮಾತ್ಯ ಕಲೆಯ ದಿಗ್ಗಜಗಳಾದ ವ್ಯಾನ್‌ಗಾಗ್, ಸಾರ್ಜೆಂಟ್, ಡೇಗಾಸ್‌ರವರ ಕಲಾಕೃತಿಗಳಲ್ಲಿನ ತಂತ್ರಗಳನ್ನು ಮೆಚ್ಚುವ ಸಿಂಧೂರರು ಸರ್ ಜೆ.ಜೆ. ಕಲಾಶಾಲೆಯಲ್ಲಿ ಕಲಿಯುತ್ತಿದ್ದಾಗ ಶಂಕರ್‌ರಾವ್, ಕಾಮತ್‌ಕರ್, ಪುಂಚಿತ್ತಾಯರವರುಗಳ ಸ್ನೇಹ. ಇವರೊಂದಿಗೆ ಆಗಾಗ ಸಂಗೀತ, ನೃತ್ಯ, ಕಾರ್ಯಕ್ರಮಗಳಿಗೆ ಹೋಗುತ್ತಿದ್ದರು; ಚಲನಚಿತ್ರಗಳನ್ನೂ ನೋಡುತ್ತಿದ್ದರು. ಸಿತಾರಾದೇವಿ, ಕಿಶನ್ ಮಹಾರಾಜ್‌ರಂಥ ಕಲಾವಿದರು ಸಿಂಧೂರರ ಮನಸ್ಸಿನ ಕ್ಯಾನುವಾಸಿನಲ್ಲಿ ಉಳಿದುಕೊಂಡಿದ್ದಾರೆ. ವಿಖ್ಯಾತ ಸಿತಾರ್ ವಾದಕ ರವಿಶಂಕರ್‌ರ ಮಗ ಶುಬೋಧ್ ಶಂಕರ್ ಚಿತ್ರಕಲೆಯನ್ನು ಜೆ.ಜೆ. ಕಲಾಶಾಲೆಯಲ್ಲಿ ಕಲಿಯುತ್ತಿದ್ದ ಸಂದರ್ಭ. ಪಲ್ಸಿಕರ್‌ರವರಿಂದ ಅಕ್ಷರ-ಭಾಷಾಜ್ಞಾನವೂ ಕಲಾವಿದನಿಗೆ ರೇಖೆ-ಬಣ್ಣ, ಮೈವಳಿಕೆ ತಂತ್ರಗಳಂತೆ ಬಹುಮುಖ್ಯ ಎಂಬುದನ್ನು ಸಿಂಧೂರರು ಕಲಿತರು. ಗಾಯ್ ತೊಂಡೆಯವರ ಅಮೂರ್ತ ಬಣ್ಣದ ಆಟಗಳು, ಆಲಮೇಲಕರ್‌ರ ರೇಖೆ, ಬಣ್ಣಗಳ ಅಲಂಕರಣವೂ ಆಕರ್ಷಿಸಿದ್ದು ಉಂಟು.

ಗುರು ಪಲ್ಸಿಕರ್‌ರ ಮಾತಿನಂತೆ ಕಲೆಯ ವೃತ್ತಿಯನ್ನು ಆಶ್ರಯಿಸದೆ ಊರಿಗೆ ಹಿಂತಿರುಗಿ ಚಿತ್ರಿಸಲಾರಂಭಿಸಿದರು. ಗಡಿಬಿಡಿಯ ಮುಂಬಯಿಯ ವಿಕ್ಷಿಪ್ತತೆಯಿಂದ ಶಾಂತ, ಸರಳ ಸೌಂದರ್ಯದ, ಬಿಸಿ ಉಸಿರಾಡುವ ಹವೆಯ ವಾತಾವರಣದ ನಡೂವೆಯೂ ಗ್ರಾಮ್ಯ ಮುಗ್ಧತೆಯನ್ನು ಅಪ್ಪಿಕೊಂಡ ಜಮಖಂಡಿಗೆ ಹಿಂತಿರಿಗಿದಾಗ ಮರಳಿ ಮಣ್ಣಿಗೆ ಬಂದಂಥ ಅನುಭವ. ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯುನ್ನತ ಮಟ್ಟದ ಕುಟುಂಬದ ಸಿಂಧೂರ ತಮ್ಮ ದತ್ತಕ ತಂದೆ ಶ್ರೀ ಗಂಗಪ್ಪನವರ ಪ್ರೀತಿಯ ಶಾಂತ ಪರಿಸರದಲ್ಲಿ ಬೆಳೆದವರು.

ಮುಂಬಯಿಯ ನಂತರ ಜಮಖಂಡಿ ಸಿಂಧೂರರಿಗೆ ಅತ್ಯಂತ ಸುಮಧುರ ವಾತಾವರಣವನ್ನೇ ನೀಡಿದೆ. ಸಾಂಸ್ಕೃತಿಕವಾಗಿಯೇ ಅಲ್ಲದೆ, ರಾಜಕೀಯವಾಗಿಯೂ ಪ್ರಾಮುಖ್ಯತೆ ಪಡೆದ ಕುಟುಂಬ. ಕರಿಯ ನೆಲ-ಹೊಲ, ಸುತ್ತಲಿನ ಮರಗಿಡ ಪಕ್ಷಿಗಳ ಚಿಲಿಪಿಲಿ, ಕೋಗಿಲೆಗಳ ಕುಹೂ, ಪ್ರತಿದಿನ ಪೂರ್ವದಲ್ಲಿ ಕಾಣಿಸಿಕೊಂಡು ಪಶ್ಚಿಮದಲ್ಲಿ ಮರೆಯಾಗುವ ಉರಿಯುವ ಸೂರ್ಯ, ಬದಲಾಗುವ ಬಣ್ಣಗಳ ನೂರಾರು ಛಾಯೆಗಳು ಸಿಂಧೂರರ ಬಾಲ್ಯದ ಸಂವೇದನೆಗಳನ್ನು ಬಡಿದೆಬ್ಬಿಸಿದರೆ, ಜಮಖಂಡಿಯ ಪೂರ್ವದಿಂದ ದಕ್ಷಿಣಕ್ಕೆ ನೆಲವನ್ನು ಅಪ್ಪಿ ಮಲಗಿರುವ ರಾಮತೀರ್ಥ ಗುಡ್ಡದ ಸಂಪರ್ಕ, ಸಂಬಂಧ ಅವರ ಅಭಿವ್ಯಕ್ತಿಗೆ ಅಸಾಮಾನ್ಯ ಆಕಾಂಕ್ಷೆಗಳನ್ನು ನೀಡಿದೆ. ಪ್ರತಿ ಸಂಜೆ ಹಾಗೂ ಸಮಯ ಸಿಕ್ಕಾಗಲೆಲ್ಲಾ ಅಲ್ಲಿನ ಅಂಕುಡೊಂಕು, ಕೆಕೆ. ಹೆಬ್ಬಾರರ ರೇಖೆಗಳ ಲಯವನ್ನು ನೆನಪಿಸುವ ರಸ್ತೆಗಳಲ್ಲಿ ನಡೆಯುತ್ತ, ಏರುತಗ್ಗುಗಳಲ್ಲಿ ಹತ್ತಿ ಇಳಿಯುತ್ತ, ಇಳಿಜಾರುಗಳಲ್ಲಿ ಮಕ್ಕಳಂತೆ ಬಗ್ಗಿ ನಡೆಯುತ್ತ, ಮನ ಬಂದೆಡೆ ಕುಳಿತು ಧ್ಯಾನದಲ್ಲಿದ್ದಂತೆ ಸೂರ್ಯಾಸ್ತಮಾನ ಸಮಯವನ್ನು ಅನುಭವಿಸುವ, ಅಲ್ಲಿನ ಬಣ್ಣಗಳನ್ನು ಸುತ್ತಲಿನ ಪ್ರಕೃತಿಯ ಆ ಮೊದಲಿನ ಹಾಗೂ ಆ ನಂತರದ ಬಣ್ಣಗಳೊಂದಿಗೆ ಹೋಲಿಸುತ್ತ, ಅವೆಲ್ಲದರ ನಿಗೂಢತೆಯನ್ನು ಮೆಲಕು ಹಾಕುತ್ತಾ ಮನೆಯತ್ತ ಹೊರಡುವ ಸಿಂಧೂರರ ಮನಸ್ಥಿತಿಯಲ್ಲಿ ಮುಂದಿನ ಕಲಾಕೃತಿಯೊಂದರ ಸ್ಕೆಚ್ಚ್ ಮೂಡಿರುತ್ತದೆ. ಈ ಎಲ್ಲದರ ನಡುವೆ ಮುಂಬಯಿಯ ಜೆ.ಜೆ. ಕಲಾಶಾಲೆಯೊಂದರ ರೊಮ್ಯಾಂಟಿಕ್ ಸಂವೇದನೆಗೆ ಪೂರಕವಾಗಿ ಅಕೆಡೆಮಿಕ್ ಕಲಿಕೆ ಕಾರಣದಿಂದ ಪ್ರಾರಂಭದ ಹಂತದಲ್ಲಿ ಪಶ್ಚಿಮದ ಕಲೆಯ, ಕಲಾವಿದರ ಪ್ರಭಾವ. ಆದರೆ ಸಿಂಧೂರರು ಅತ್ಯಂತ ತೀವ್ರವಾಗಿ ಚಿತ್ರಿಸಲಾರಂಭಿಸಿದ ೧೯೬೫ ಹಾಗೂ ೧೯೭೦ರ ನಡುವೆ ಈ ಪ್ರಭಾವ

ಹಲವು ಬದಲಾವಣೆಗಳಿಗೆ ಒಳಪಟ್ಟಿದೆ. ೧೯೬೦ರ ದಶಕದಲ್ಲಿ ನೈಜ್ಯರೂಪ ಸಂಯೋಜನೆಗಳಿಗೆ ಇದ್ದ ಪ್ರಾಮುಖ್ಯತೆ ೧೯೭೦ರಲ್ಲಿಲ್ಲ. ಇಲ್ಲಿ ಪಶ್ಚಿಮದ ಮಾಧ್ಯಮ, ಶೈಲಿ, ರೂಪ, ತಂತ್ರ ಇತ್ಯಾದಿಗಳನ್ನು ನಮ್ಮ ನೆಲದ ಸೊಗಡಿಗೆ, ವಸ್ತುವಿಗೆ ಹೊಂದಿಸುವ ಪ್ರಯತ್ನಗಳು ನಡೆದವು. ೧೯೭೦ರಲ್ಲಿ ಇವೆಲ್ಲದರ ಸಮರಸದಂಥ ಅಭಿವ್ಯಕ್ತಿಗಳನ್ನು ನಾವು ಸಿಂಧೂರರಲ್ಲಿ ಕಾಣುತ್ತೇವೆ.

ಭಾರತೀಯ ಪರಂಪರೆಯ ಕೌಟುಂಬಿಕ ಜೀವನದ, ಧಾರ್ಮಿಕ ಶ್ರದ್ಧೆ, ಪೂಜೆಗಳಲ್ಲಿ ತಮ್ಮನ್ನು ನಿರ್ದಿಷ್ಟ ಸಮಯಗಳಲ್ಲಿ ತೊಡಗಿಸಿಕೊಳ್ಳುವ ಸಿಂಧೂರ ಕೆಲವೊಮ್ಮೆ ಸಂಗೀತದ ಧ್ವನಿಸುರುಳಿಗಳ ಗಾನಲಹರಿಯಲ್ಲಿ ಚಿತ್ರಿಸುವುದೂ ಉಂಟು. “ಸ್ವರ ಹಚ್ಚಿದರೆ ಸ್ವರ್ಗಕ್ಕೆ ಹೋಗುತ್ತೇನೆ” ಎಂದು ಖ್ಯಾತ ಗಾಯಕಿ ಗಂಗುಬಾಯಿ ಹಾನಗಲ್ ಹೇಳಿದರೆ “ಬಣ್ಣ ಹಚ್ಚಿದರೆ ಸ್ವರ್ಗಕ್ಕೆ ಹೋಗುತ್ತೇನೆ” ಎಂದು ಹೇಳುವ ಸಿಂಧೂರರು ೭ಬಣ್ಣಗಳನ್ನು ೭ ಸ್ವರಗಳಿಗೆ ಹೋಲಿಸುತ್ತಾರೆ. ಹೀಗೆ ಬಣ್ಣದ ಹುಚ್ಚು ಹಿಡಿದಂತೆ ಚಿತ್ರಿಸುವ ಅವರು “ಆನಂದ ಕೊಡದ ಪೇಂಟಿಂಗ್‌ನಿಂದ ಏನು ಪ್ರಯೋಜನ” – ಎನ್ನುತ್ತಾರೆ. ವಿವರಣೆ ಅಪೇಕ್ಷಿಸುವ ಕಲಾಕೃತಿಗಳ ಸೃಷ್ಟಿ ಅನಗತ್ಯ ಎಂದೂ ಹೇಳುತ್ತಾರೆ.[೩೧]

ಬಣ್ಣಗಳ ಆಟಕ್ಕೆ ಪ್ರಾರಂಭದಿಂದಲೂ, ತೈಲವರ್ಣ ಮಾಧ್ಯಮದ ಬಗ್ಗೆಯೇ ಆಸಕ್ತಿ ಬೆಳೆಸಿಕೊಂಡ ಸಿಂಧೂರರು ೧೯೮ರಲ್ಲೂ ತೈಲವರ್ಣಗಳನ್ನು ಅತ್ಯಂತ ಆಸಕ್ತಿಯಿಂದ ದುಡಿಸಿಕೊಳ್ಳುತ್ತಿದ್ದರು. ತೈಲವರ್ಣಗಳನ್ನು ದುಡಿಸಿಕೊಳ್ಳುತ್ತಲೇ “ರಫ್ ಆದ ವಸ್ತುಗಳನ್ನು ರಫ್ ಆಗಿಯೇ ಚಿತ್ರಿಸಬೇಕು” – ಎನ್ನುವ ಸಿಂಧೂರರು ಆ ಮಾಧ್ಯಮದ ಹಲವು ಸಾಧ್ಯತೆಗಳನ್ನು ಕಂಡು ಕೊಂಡಿರುವರು. ಮೃದುವಾದ ಲೇಪನದ ನಡುವೆಯೂ ರೂಪಗಳ ವಿಕೃತಿಯನ್ನು ಎಲ್ಲಿ ಅಗತ್ಯವೆನಿಸುತ್ತದೆಯೋ ಅಲ್ಲಿ ಮಾಡಬೇಕು ಎಂದು ಹೇಳುವ ಅವರು ಅಭಿಪ್ರಾಯಿಸುತ್ತಾರೆ. ಅವರ ರಾಕ್ಸ್ ಆಫ್ ಶ್ರವಣ ಬೇಳಗೋಳ ಕೃತಿ ಮಾಲೆಯೇ ಅಲ್ಲದೆ ಆ ನಂತರದ ಅವರ ಎಲ್ಲ ಭೂ–ದೃಶ್ಯಗಳು ಹಾಗೂ ವಿಶಿಷ್ಟ ಸ್ಥಿತಜೀವಗಳಲ್ಲಿ ಈ ಅಂಶವನ್ನು ಗಮನಿಸಬಹುದು. ವಿಕೃತ ಸೌಂದರ್ಯದ ನಡುವೆ ಪ್ರಕೃತಿ ಇವರಿಂದ ಹಲವು ಹೊಸ ರೂಪಗಳಲ್ಲಿ ಕಾಣಿಸಿಕೊಂಡಿದೆ. ನಿಸರ್ಗಚಿತ್ರಗಳ ಕಲಾಪ್ರಕಾರಗಳನ್ನು ತಮ್ಮ ವಿಶಿಷ್ಟ ಕೊಡುಗೆಯಿಂದ ಶ್ರೀಮಂತಗೊಳಿಸಿದ್ದಾರೆ. ಸಿಂಧೂರರು ತಮ್ಮದೇ ಆದ ಗುರುತನ್ನು ಹೊಂದಿರುವುದು ವಿಕೃತಿಯನ್ನು ದುಡಿಸಿಕೊಂಡಿರುವ ರೀತಿಯಿಂದಲೇ ಎನ್ನಬಹುದು.[೩೨]

ಸುತ್ತಲಿನ ಪ್ರಕೃತಿಯ ಫಲಗಳಾಗಿರುವ ಚಿಟ್ಟೆ, ಹೂ ಇತ್ಯಾದಿಗಳು ಸಿಂಧೂರರ ಕ್ಯಾನ್‌ವಾಸ್‌ನಲ್ಲಿ ವಿಕೃತಿಯನ್ನು ಸುಂದರವಾಗಿ ದುಡಿಸಿಕೊಂಡಿವೆ. ವಿಕೃತ–ಸೌಂದರ್ಯದ ಕಾರಣದಿಂದಲೇ ಆ ರೂಪಗಳ ಸೌಂದರ್ಯ ಅಷ್ಟೇನೂ ಸಿಹಿಯಾದ ಬಣ್ಣಗಳಿಲ್ಲದೆಯೂ ಆಕರ್ಷಿಸುತ್ತದೆ. ಈ ಸುತ್ತಲಿನ ಪ್ರಕೃತಿ, ಪ್ರಕೃತಿಯ ಫಲಗಳಾದ ಜೀವ ಸಂಕುಲದ ಅಧ್ಯಯನ, ಅವುಗಳ ಕುರಿತ ಪ್ರೀತಿ, ಅವಲೋಕನಗಳ ಧ್ಯಾನದಂತೆ ಸಿಂಧೂರರ ರೂಪಗಳು ಮೂಡಿಬಂದಿವೆ.

೧೯೮೦ರ ರಾಕ್ಸ್ ಆಫ್ ಶ್ರವಣಬೆಳಗೋಳ ಕೃತಿಗಳು ಆ ಸಂದರ್ಭ ಹಾಗೂ ಇಂದಿನ ಸಂದರ್ಭದಲ್ಲೂ,

---

೩೧. ಕೆ. ವಿ. ಸುಬ್ರಹ್ಮಣ್ಯಂ : ವಿಜಯ ಸಿಂಧೂರ, ಪು–೮

೩೨. ಅದೇ.

ತಮ್ಮ ರೂಪ, ಕಲ್ಪನಾ ಸಾಮರ್ತ್ಯ, ಮಿಶ್ರ ಮಾಧ್ಯಮವನ್ನು ದಶಕಗಳ ಹಿಂದೆಯೇ ದುಡಿಸಿಕೊಂಡ ಕಾರಣಗಳಿಂದ ವಿಭಿನ್ನವಾಗಿ ನಿಲ್ಲುತ್ತವೆ. ದೊಡ್ಡಪಾತ್ರೆಯ ನೀರಿನಲ್ಲಿ ಅಗತ್ಯವೆನಿಸಿದ ತೈಲ ವರ್ಣಗಳನ್ನು ಸ್ಪ್ರೇ ಮಾಡಿ ನೀರಿನ ಮೇಲೆ ಉಂಟಾದ ಬಣ್ಣಗಳ ವೈವಳಿಕೆ ಹಾಗೂ ಛಾಯೆಗಳನ್ನು ಕಾಗದಗಳ ಮೇಲೆ ಮೃದುವಾಗಿ ಒತ್ತಿ ಪ್ರಿಂಟ್ ಪಡೆದು ಅವನ್ನು ಪುನಃ ಚಿತ್ರಿಸಬೇಕೆಂದಿರುವ ಕ್ಯಾನ್‌ವಾಸ್‌ನ ಮೇಲೆ ಕೋಲಾಜ್ ಮಾಡಿ ನಿರ್ವಹಿಸಿಕೊಂಡಿರುವ ರೀತಿ ವಿಶಿಷ್ಟವಾದದ್ದು. ಶ್ರವಣಬೆಳಗೊಳದ ಬಂಡೆಗಳನ್ನು, ಆ ಸಂದರ್ಭದಲ್ಲಿ ಬಂಡೆಗಳನ್ನು ತಮ್ಮ ಅಭಿವ್ಯಕ್ತಿಯ ಆಳಕ್ಕೆ ತಂದುಕೊಂಡಿದ್ದ ಹಲವು ಕಲಾವಿದರಿಗಿಂತ ವಿಭಿನ್ನವಾಗಿ ಸಿಂಧೂರರು ತಂದುಕೊಂಡಿದ್ದರು. ಈ ಕೃತಿಗಳಲ್ಲಿ ಗೊಮ್ಮಟನ ಛಾಯಾಚಿತ್ರಗಳನ್ನೂ ಸಹ ಕೋಲಾಜ್ ಮಾಡಿದ್ದದ್ದು ಪರಿಣಾಮಕಾರಿಯಾಗಿತ್ತು, ಶ್ರವಣಬೆಳಗೋಳದ ಬಂಡೆಗಳ ಮೇಲೆ ನಡೆದಾಡಿದ ಅನುಭವ ಅಭಿವ್ಯಕ್ತಿಗೊಂಡ ರೀತಿಯಿದು! ಅಲ್ಲಿನ ಬಂಡೆಗಳು ಕ್ಯಾನ್‌ವಾಸ್‌ನ ಮೇಲೆ ರೂಪಾಂತರಗೊಂಡ ಪ್ರಕೀಯೆ. ಸುತ್ತಲಿನ ವಸ್ತುಗಳನ್ನು ಕಲಾವಿದನೊಬ್ಬ ಕಲೆಯಾಗಿಸುವುದು ಹೇಗೆ? ಎಂಬ ಪ್ರಶ್ನೆಗೆ ಉತ್ತರದಂತೆ ಈ ರಾಕ್ಸ್ ಆಫ್ ಶ್ರವಣಬೆಳಗೊಳ ಕೃತಿಗಳು ಮೂಡಿವೆ. ಇಲ್ಲಿ ಬಾಲ್ಯದ ಸಂವೇದನೆಯೂ ಸಾಕಷ್ಟು ಪ್ರಭಾವ ಬೀರಿದೆ.

ಗಣೇಶನ ಕುರಿತ ಹಲವಾರು ಕೃತಿಗಳು ಸಿಂಧೂರರಿಗಿರುವ ದೈವಿಕ ಕೂತುಹಲ, ಶ್ರದ್ಧೆಗಳನ್ನು ಬಿಂಬಿಸುತ್ತವೆ. "ಬಟರ್‌ಫ್ಲಾಯ್ ಹಾಗೂ ನಿವ್ಯೂ ಬಟರ್‌ಫ್ಲಾಯ್" ಕೃತಿಗಳಲ್ಲಿ ಹೂವಿನ ಬಣ್ಣಗಳ ಆಕರ್ಷಣೆಗೆ ಹಾರಿ ಬರುವ, ಆಕರ್ಷಣೆ, ಚಂಚಲತೆಗಳ ಚಿಟ್ಟೆಗಳ ರೂಪ ಮತ್ತು ಬಣ್ಣಗಳು ಪ್ರಕೃತಿಯ ಸೋಜಿಗಮಯ ಸುಕೋಮಲತೆಯನ್ನು ಅನುಭವಕ್ಕೆ ತರುವಂತೆ ಮೂಡಿಬಂದಿವೆ.

ಮೇಕೆಗಳನ್ನು ವಸ್ತುವಾಗಿ ಆಯ್ಕೆ ಮಾಡಿಕೊಂಡು ಚಿತ್ರಿಸಿರುವ ಹಲವು ಕೃತಿಗಳಲ್ಲಿ ಆಡುಗಳ ರೂಪದ ಹಿನ್ನಲೆ ಮುನ್ನಲೆಗಳಲ್ಲಿನ ಗ್ರಾಮೀಣ ಪರಿಸರ, ಅಮೂರ್ತ ಬಣ್ಣದ ಬೀಸುಗಳ ನಡುವೆ ತನ್ನ ಆತ್ಮವನ್ನು ಸಾಕ್ಷಾತ್ಕಾರಗೊಳಿಸಿಕೊಂಡಿದೆ. 'ಅಮೂರ್ತ ಅಭಿವ್ಯಕ್ತಿ'ಯ ಕುಂಚದ ಬೀಸುಗಳನ್ನು ನೆನಪಿಸುವ, ಗ್ರಾಮ್ಯ ಪರಿಸರದ ಅತ್ತಿತ್ತ ಅತ್ಯಂತ ಚಪ್ಪಟೆಯಾಗಿ ರಮ್ಯ ಭಾವ ಮೂಡುವಂತೆ ಬಣ್ಣಗಳನ್ನು ಲೇಪಿಸಲಾಗಿದೆ. ನೆಪಮಾತ್ರಕ್ಕಿರುವ ಸ್ಪಷ್ಟ ಮೇಕೆಗಳ ರೂಪದ ಅತ್ತಿತ್ತಲಿನ ಅಮೂರ್ತ ಪ್ರಕೃತಿ ಪರಿಸರವೇ ಮುಖ್ಯವಾಗುವುದೂ ಕುತೂಹಲಕಾರಿ. ಆದರೆ ಕಲೆಯನ್ನು ಸೃಷ್ಟಿಸುವ ಕಲಾವಿದನ ವಸ್ತುವಿನ ಆಯ್ಕೆಯ ಪ್ರಶ್ನೆ. ಯಾವುದಾದರೂ ಆಗಬಹುದು. ಇಂಥ ಆಯ್ಕೆ ನಡೆದು ಬಂದ ಹಾದಿಯನ್ನು ಕಲಾ ಇತಿಹಾಸದಲ್ಲಿ ಗಮನಿಸಿದರೆ ಜನರ ಉಪೇಕ್ಷೆಗೆ ಒಳಗಾದ ಹಲವು ಪ್ರಾಣಿ, ಪಕ್ಷಿಗಳನ್ನು ತಮ್ಮ ಕಲಾಕೃತಿಗಳಲ್ಲಿ ಸುಂದರವಾಗಿ ತಂದುಕೊಂಡಿರುವ ಅಪರೂಪದ ಹಲವರ ನಡುವೆ, ಸಿಂಧೂರರೂ ಆಡುಗಳ ತಮ್ಮ ಕೃತಿಗಳಿಂದ ತಮ್ಮ ಹಾಜರಿಯನ್ನು ದಾಖಲಿಸಿಕೊಂಡಿದ್ದಾರೆ.

ಸಿಂಧೂರರು ಆಪ್ತತೆಯಿಂದ ಅಪ್ಪಿಕೊಂಡಿರುವ ಜಮಖಂಡಿಯ ತಮ್ಮ ಬದುಕಿಗೆ ನೆರಳು, ನಿದ್ರೆ, ನೆಮ್ಮದಿಗೆ ಆಸರೆಯಾಗಿರುವ, ವಾಸದ ಮನೆಯ ಒಳ-ಹೊರಗಿನ ಭಾಗಗಳ ಪ್ರತಿ ಇಂಚಿಂಚು ಸ್ಥಳವನ್ನೂ ಪ್ರೀತಿಸುವ ಅವರು ಅವೆಲ್ಲವೂಗಳ ಹೋರರೂಪಗಳನ್ನೇ ಅಲ್ಲದೆ, ಅವುಗಳೊಳಗಿನ ಆತ್ಮೀಯ ಸಂಬಂಧಗಳನ್ನೂ ತಮ್ಮ "ಸ್ಪಾಟ್ಸ್ ಆಫ್ ಮೈ ಹೋಮ್ ಟೌನ್" ಎಂಬ ಕೃತಿಗಳಲ್ಲಿ ಬಿಂಬಿಸಿದ್ದಾರೆ. ಸಿಂಧೂರರ ಮನೆಯ

ಮೊಗಸಾಲೆಯ ಮೆಟ್ಟಿಲುಗಳ ಬದಿಯ ಕುಂಡವೊಂದರಲ್ಲಿ ಬೊಗಸೆ ನೀರಿಗೆ ಹೂ ಬಿಟ್ಟು ತನ್ನ ಸೌಂದರ್ಯವನ್ನು, ಪ್ರಕೃತಿಯ ಜೀವಧ್ವನಿಯನ್ನು ಪ್ರದರ್ಶಿಸುತ್ತಿದ್ದ ಮುಳ್ಳುಗಿಡವೊಂದು ಪ್ರತಿದಿನ ನೀರು ಹಾಕಿ ಸಲಹುತ್ತಿದ್ದ ಸಿಂಧೂರರಿಗೆ ತನ್ನ ಮುಳ್ಳುಗಳ ಜೊತೆ ಸುಕೋಮಲ ಹೂವುಗಳನ್ನು, ಬಣ್ಣಗಳನ್ನು ಪ್ರದರ್ಶಿಸುತ್ತಿದ್ದ ರೀತಿಯಿಂದ ಅವರು ಅದನ್ನು ಚಿತ್ರಿಸಲೇಬೇಕಾದಂಥ ಒತ್ತಡ, ಚಿತ್ರಿಸಿ ಆನಂದಿಸಿದರು.[೩೩]

ಅಕಾಡೆಮಿಕ್ ಕಲಾವ್ಯಾಕರಣ ಮೀರಿ ಸಿಂಧೂರರು "ಮೈ ಹೋಮ್ ಟೌನ್" ಕೃತಿಗಳಲ್ಲಿ ರೂಪಗಳನ್ನು ಕ್ಯಾನ್‌ವಾಸ್‌ನಲ್ಲಿ ಸಂಯೋಜಿಸಿರುವ ರೀತಿ ವಿಭಿನ್ನವಾಗಿದೆ. ಗೋಡೆಯ ಹಗ್ಗದ ಉದ್ದಕ್ಕೂ ಒಣಗಲು ಹಾಕಿದ ಬಟ್ಟೆಗಳ ಕೃತಿಯೊಂದರಲ್ಲಿನ ಬಾಗಿಲು, ಗೋಡೆಗಳು, ಬಟ್ಟೆಗಳ ರೂಪಗಳ ನಡುವಿನ ಪ್ರತ್ಯೇಕತೆ ತೋರುವ ಒಳಬಣ್ಣಗಳು, ಹೊರಬಣ್ಣಗಳನ್ನು ಸೀಳಿಕೊಂಡು ತಮ್ಮನ್ನು ನಮಗೆ ತೋರಿಸಿಕೊಳ್ಳುವ ಕಾತರ, ಸುಂದರ. ಈ ವಿಧಾನದ ರೇಖಾ ರೂಪಗಳ ನಡುವೆ ಎಕ್ಸ್‌ಪ್ರೆಷನಿಸ್ಟ್‌ರ ನಿರ್ವಹಣೆಯ ಬಣ್ಣ ಲೇಪಿಸಿಕೊಂಡು ಮೂಡಿಬಂದ ಹತ್ತು-ಹಲವು ಕೃತಿಗಳು ಈ ಕೃತಿಮಾಲೆಯಲ್ಲಿ ಮೂಡಿಬಂದಿವೆ.

ಪ್ರಾರಂಭದಿಂದ ಇಂದಿನವರೆಗೂ ರೊಮ್ಯಾಂಟಿಕ್ ಸಂವೇದನೆಯ ಸಿಂಧೂರರು ಬಾದಾಮಿ, ಐಹೊಳೆ, ಪಟ್ಟದಕಲ್ಲು ಉಬ್ಬು ಶಿಲ್ಪಗಳ ರೇಖಾಲಾಲಿತ್ಯ ಮತ್ತು ಅವುಗಳ ಬೃಹತ್ ರೂಪಗಳನ್ನು ೧೯೯೨ರಲ್ಲಿ ತಮ್ಮ ಕ್ಯಾನ್‌ವಾಸಿನಲ್ಲಿ ಸಂಯೋಜಿಸಿದ್ದಾರೆ. ತ್ರಿವಿಕ್ರಮ, ನಟರಾಜ, ಮೊದಲಾದ ರೂಪಗಳನ್ನು ಸಿಂಧೂರರ ಕೃತಿಗಳಲ್ಲಿ ಗಮನಿಸಿದಾಗ ಇಡೀ ಕ್ಯಾನ್‌ವಾಸಿನಲ್ಲಿ ರೂಪಗಳನ್ನು ಹರಡಿ ಅವುಗಳ ಬೃಹದತೆ ಮತ್ತು ಭವ್ಯತೆಗಳನ್ನು ಮೆರೆದಿದ್ದಾರೆ. ಈ ಕೃತಿಗಳಿಗೆ, ರೇಖೆಗಳಿಗೆ ವಿಶಿಷ್ಟ ಪ್ರಾಧಾನ್ಯತೆ ನೀಡಲಾಗಿದೆ. ಬಾದಾಮಿ ಚಾಲುಕ್ಯರ ಶಿಲ್ಪಿಗಳ ಮೂಲ ರೇಖಾಚಿತ್ರಗಳನ್ನು ಪುನರ್‌ರೂಪಿಸಿ ಅವಕ್ಕೆ ಸಮಕಾಲೀನ ಲೇಪವನ್ನು ತಮ್ಮ ತೈಲವರ್ಣಗಳಿಂದ ಸಿಂಧೂರರು ನೀಡಿದ್ದಾರೆ.

"ಮರದ ಗುಂಪಿನಲ್ಲಿ ನಿಂತು ನಾನೇ ಮರವಾಗಿ ಆನಂದಿಸುತ್ತೇನೆ" – ಎನ್ನುವ ಸಿಂಧೂರ ೧೯೭೦ರಲ್ಲಿ ತಮ್ಮ ರೊಮ್ಯಾಂಟಿಕ್ ಸಂವೇದನೆಯ ಭಾವಧಾರೆಯನ್ನು ಹಲವು ಕೃತಿಗಳಲ್ಲಿ ಧಾರೆಯೆರೆದಿದ್ದಾರೆ. ಸೂರ್ಯೋದಯ ಮತ್ತು ಸೂರ್ಯಾಸ್ತಗಳ ಕುರಿತು ಚಿತ್ರಿಸಿರುವ ಕೃತಿಗಳಲ್ಲಿನ ಅವರ ಆಶಯ ಪುನಃ ಪ್ರಕೃತಿ ಪ್ರೇಮವೇ ಆಗಿದೆ. ಬಣ್ಣಗಳ ಬೆಡಗಿಗೆ ಮೂಲ ಕಾರಣನಾಗಿರುವ ಸೂರ್ಯ ಪೂರ್ವ ಹಾಗೂ ಪಶ್ಚಿಮಗಳಲ್ಲಿ ಕಾಣುವ ರೀತಿಯಲ್ಲಿ ಬದಲಾಗುವ ಬಣ್ಣಗಳ ಮಾಯಾಜಾಲ, ಪ್ರಕೃತಿ, ನೆಲ-ನೀರು, ಗಿಡ-ಮರ, ಹಕ್ಕಿಗಳ ಬಣ್ಣ, ಬೆಳಕು-ನೆರಳು, ಆ ಮೂಲಕ ಮೂಡುವ ರೇಖೆ-ರೂಪಗಳು ಇವೆಲ್ಲ ಸಿಂಧೂರರನ್ನು ಕಾಡಿದ ರೀತಿ ಕ್ಯಾನ್‌ವಾಸಿನಲ್ಲಿ ಕಂಡುಕೊಂಡ ರೀತಿ ಪ್ರಕೃತಿಯ ಜೀವಧ್ವನಿಯನ್ನೇ ಅನುಭವಕ್ಕೆ ತರುವಂಥದ್ದು. ಪ್ರಕೃತಿಯ ರೂಪ-ಬಣ್ಣಗಳು ಕ್ಯಾನ್‌ವಾಸಿನ ಮೇಲೆ ಪಡೆದ ರೂಪಾಂತರ, ಬಣ್ಣಗಳ ಛಾಯಾಂತರಗಳ ಹಲವು ನೋಟಗಳು "ಇಂಪ್ರೆಷನಿಸಂ ಆಫ್ ಸನ್‌ರೈಸ ಆಂಡ್ ಸನ್‌ಸೆಟ್" ಕೃತಿ ಸಂಕುಲವಾಗಿ ವೀಕ್ಷರಿಗೆ ಹಲವು ಆಯಾಮಗಳ ಅನುಭವಗಳನ್ನು ನೀಡಬಲ್ಲವಾಗಿವೆ. ಪ್ರಕೃತಿಯ ಬಣ್ಣ-ಬೆಡಗು-ಬಿನ್ನಾಣಗಳ ಹಲವು ಮುಖಗಳ ಹೊರ ಮತ್ತು ಒಳನೋಟಗಳ ಈ ಕೃತಿಗಳಲ್ಲಿ ರೊಮ್ಯಾಂಟಿಕ್ ಭಾವ ವೈಭವದ ನಡುವೆಯೂ

೩೩. ಕೆ. ವಿ. ಸುಬ್ರಹ್ಮಣ್ಯಂ : ವಿಜಯ ಸಿಂಧೂರ, ಪು-೧೩

ಕಲವು ಬಣ್ಣ ಪ್ರಾಮುಖ್ಯತೆ ಪಡೆದ ಹಲವು ಕೃತಿಗಳೂ ಮೂಡಿಬಂದಿವೆ. ಅಂಥ ಕೃತಿಯೊಂದರಲ್ಲಿ ಮುಳುಗುತ್ತಿರುವ ಸೂರ್ಯನ ರೋಮಾಂಚನಗೊಳಿಸುವ ಅಮೂರ್ತ ದೃಶ್ಯ ಸಂಯೋಜನೆಯಿದೆ. ಸೂರ್ಯನ ಮುಂಜಾನೆಯ ಮತ್ತು ಸಂಜೆಯ ಬಣ್ಣಗಳು, ಆಗಸ ಮತ್ತು ಸುತ್ತಲಿನ ಪ್ರಕೃತಿಯಲ್ಲಿ ಆ ಸಂದರ್ಭದಲ್ಲಿ ಕಾಣಿಸಿಕೊಳ್ಳುವ ವೈವಿಧ್ಯಮಯ ಬಣ್ಣಗಳ ಛಾಯೆಗಳು, ಕಲಾಕೃತಿ ಸೃಷ್ಟಿಯಾಗುವ ಸಮಯದ ಆನಂದವನ್ನು ನೀಡುವಂತಿವೆ. ಕೆಂಪು, ಕಪ್ಪು, ಕಂದು, ಬಿಳುಪು, ಕಂದು ಹಾಗೂ ಕೇಸರಿಗಳ ಸಂಯೋಜನೆ, ಪ್ರಕೃತಿಯ ಶಾಂತ ಸುಂದರ ಅನುಭವ ನೀಡುತ್ತವೆ.

ಕೆಲವು ಕೃತಿಗಳಲ್ಲಿ ಪ್ರಕೃತಿಯು ಅಮೂರ್ತದೃಶ್ಯವಾಗಿ ರೂಪಗೊಂಡಿದ್ದು ಸೂರ್ಯನ ಬಿಂಬ ಪ್ರತಿಬಿಂಬವಾಗಿರುವ ಅಸ್ಪಷ್ಟತೆ ಸುಂದರ. ತಮ್ಮ ಹುಟ್ಟು ನೆಲದ ಬಗೆಗಿನ ಸಿಂಧೂರರ ಅನಂತ ಪ್ರೀತಿ ಇಂಥ ಸೌಂದರ್ಯ ಸೃಷ್ಟಿಗೆ ಕಾರಣವಾಗಿದೆ. ಈ ಕಾರಣದಿಂದ ಒಬ್ಬನೇ ಸೂರ್ಯನ ಹಲವು ಮುಖ, ಸಂದರ್ಭಗಳನ್ನು ಅವರು ಕಂಡಿರುವ ರೀತಿ ಅಪೂರ್ವವಾಗಿದೆ. ಈ ಕೃತಿಗಳಲ್ಲಿ ಅವರ ಊರಿನ ಸುತ್ತಮುತ್ತ ಕಾಣುವ ಮಣ್ಣು, ಇಟ್ಟಿಗೆ, ಒಣ ಎಲೆಗಳೂ ಕಂದು ಬಣ್ಣವನ್ನು ಲೇಪಿಸಿಕೊಂಡಿವೆ. ಇಂಪ್ರೆಷನಿಸ್ಟ್ ಮತ್ತು ಅಮೂರ್ತ ಎಕ್ಸ್‌ಪ್ರೆಷನಿಸ್ಟ್ ಕಲಾವಿದರು ಬಣ್ಣಗಳನ್ನು ನಿರ್ವಹಿಸಿಕೊಂಡಿರುವುದು ಸಿಂಧೂರರ ಕಲಾಕೃತಿಗಳಲ್ಲಿ ನೋಡಬಹುದು. ಆದರೆ ಈ ಕೃತಿಗಳ ಜೀವಧ್ವನಿ ಸಿಂಧೂರರ ಸುಂದರ ಬದುಕಿನ ಸುಂದರ ಸಂವೇದನೆಯಿಂದ ಶಕ್ತಿಯನ್ನು ಪಡೆದುಕೊಂಡಿದೆ ಎಂಬುದು ಮುಖ್ಯವಾಗುರುತ್ತದೆ.

ಈ ಮೊದಲೇ ಹೇಳಿರುವಂತೆ ಸೂರ್ಯ ಹಾಗೂ ಪರಿಸರದ ನಡುವಿನ ಆಲಿಂಗನದ ಅನಂತ ಆಟದ ವೈವಿಧ್ಯಮಯ ಪ್ರಕ್ರಿಯೆಯಲ್ಲಿ ಸೂರ್ಯನ ಶಾಖ–ಬೆಳಕುಗಳಿಗೆ ಸ್ಪಂದಿಸಿ, ಅವಲಂಬಿಸಿ, ಅಸಂಖ್ಯಾತ ಬಣ್ಣ–ಛಾಯೆಗಳನ್ನು ಪಡೆದುಕೊಳ್ಳುವ ಪ್ರಕೃತಿ ಸೂರ್ಯನಿಗೆ ಋಣಿ. ಈ ಬಣ್ಣಗಳ ಬೆಡಗಿನ ಧ್ಯಾನದಲ್ಲಿ ಅವುಗಳ ಅಲೌಕಿಕ, ಆನಂದಮಯ ಅನುಭವವನ್ನು ತಮ್ಮದಾಗಿಸಿಕೊಂಡು ಸಿಂಧೂರರು ಅಭಿವ್ಯಕ್ತಿಸಿದ್ದಾರೆ. ಪ್ರಖರ ಬೆಳಕಿನ ಬಣ್ಣಗಳ ಜೊತೆಗೆ, ಅಂದರೆ ನೋಡುವ ಸಾಮಾನ್ಯ ಕಣ್ಣುಗಳನ್ನೇ ಅಲ್ಲದೆ ಸಂವೇದನಾಶೀಲ, ಅಸಾಮಾನ್ಯ ಕಣ್ಣುಗಳ ಗಮನವನ್ನು ಸೆಳೆಯುವ ಕಪ್ಪು, ಕಂದು, ತಿಳಿ ನೇರಳೆ, ಬಣ್ಣಗಳ ಸಂಯೋಜನೆಯೂ ಮೂಡಿ ಬಂದಿವೆ. ಇಂಥ ಕೃತಿಯೊಂದರಲ್ಲಿ ಕಪ್ಪು ಬಣ್ಣದ ವೈಭವಿಕರಣವೂ ಇದೆ! ಸೂರ್ಯ ಹಾಗೂ ಅವನನ್ನು ಅವಲಂಬಿಸಿದ ಸಸ್ಯಗಳ ಉಸಿರಾಟವೂ ಕೆಲವು ಕಲಾಕೃತಿಯೊಂದರ ಬಿಳಿಯ ಬಣ್ಣದ ಛಾಯಾಂತರಗಳ ವೈವಿಧ್ಯ ಸುಂದರ; ಕುತೂಹಲಕಾರಿ.

ಮುಂಬೈನ "ಟೈಮ್ಸ್ ಆಫ್ ಇಂಡಿಯಾ" ಪತ್ರಿಕೆಯ ಖ್ಯಾತ ಕಲಾವಿಮರ್ಶಕ ಶ್ರೀ ಜ್ಞಾನೇಶ್ವರ ನಾಡಕರ್ಣಿ ಮತ್ತು "ಫೈನಾನ್ಸಿಯಲ್ ಎಕ್ಸ್‌ಪ್ರೆಸ್", "ದ ಮಿಡ್ ಡೇ", ದ ಡೈಲಿ" ಹಾಗೂ ಇನ್ನಿತರ ಪ್ರಾದೇಶಿಕ ಕಲಾವಿರ್ಶಕರು ಹೇಳುವಂತೆ – ಸಿಂಧೂರರು ಗ್ರಾಮಿಣ ಪ್ರದೇಶದ ಪರಿಶುದ್ಧ ವಾತವರಣದಲ್ಲಿದ್ದುಕೊಂಡು, 'ತನ್ನತನ'ವನ್ನು ಉಳಿಸಿಕೊಂಡು ನೋಡುಗರ ಮನಸ್ಸಿನ ಮೇಲೆ "ಸಿಂಧೂರ ಶೈಲಿ"ಯ ಆಳವಾದ ಪ್ರಭಾವ ಬೀರುತ್ತಾರೆ. ವಿಷಯಕ್ಕನುಗುಣವಾದ ಮೋಹಕ ಹಾಗೂ ಪ್ರಸನ್ನ ವರ್ಣಗಳು ನೋಡುಗರನ್ನು ಸ್ವರ್ಗೀ ಆನಂದದೆಡೆ ಸೆಳೆದೊಯ್ಯುತ್ತವೆ. ಹೀಗೆ ಪ್ರಕೃತಿಯನ್ನು ಪ್ರೀತಿಸುತ್ತ ಕಲಾಸೃಷ್ಟಿಯಲ್ಲಿ ತೊಡಗಿರುವ ಸಿಂಧೂರರ ಸೌಂದರ್ಯದ ಅನ್ವೇಷಣೆ ನಿರಂತರವಾದುದು.

ವಿಜಯ ಸಿಂಧೂರ ಅವರ ನಿಸರ್ಗ ಕಲಾಕೃತಿಗಳು





ತೈಲವರ್ಣ   ಸೂರ್ಯೋದಯದ-ಸೂರ್ಯಾಸ್ಥದ ಗ್ರಹಿಕೆಗಳು 1



ತೈಲವರ್ಣ   ಸೂರ್ಯೋದಯದ-ಸೂರ್ಯಾಸ್ಥದ ಗ್ರಹಿಕೆಗಳು 2

ಇವರು ಸುಮಾರು ೧೫ ಏಕವ್ಯಕ್ತಿ ಕಲಾ ಪ್ರದರ್ಶನಗಳು, ಆರು ಗುಂಪು ಕಲಾ ಪ್ರದರ್ಶನಗಳು ರಾಜ್ಯ ಮತ್ತು ಹೊರ ರಾಜ್ಯಗಳಲ್ಲಿ ಮಾಡಿದ್ದಾರೆ; ಒಂಬತ್ತು ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ. ಕೇಂದ್ರ ಮತ್ತು ರಾಜ್ಯ ಲಲಿತಕಲಾ ಅಕಾಡೆಮಿ, ಬಾಂಬೆ ಆರ್ಟ್ ಸೊಸ್ಯಟಿ ಹೀಗೆ ಹಲವಾರು ಪ್ರಶಸ್ತಿಗಳನ್ನು ಪಡೆದ್ದಾರೆ. ಮುಂಬಯಿ, ಪೂನಾ ಬೆಂಗಳೂರು, ಬಿಜಾಪೂರ, ಬಾಗಲಕೋಟೆ, ಜಮಖಂಡಿ, ಕೇಂದ್ರ ಲಲಿತ ಕಲಾ ಅಕಾಡೆಮಿ ನವ ದೆಹಲಿ, ಕರ್ನಾಟಕ ಲಲಿತಕಲಾ ಅಕಾಡೆಮಿ, ಚೆನ್ನೈ, ಕಲ್ಕತ್ತ, ಪಶ್ಚಿಮ ಬಂಗಾಳ, ನಾಗಪೂರ ಮತ್ತು ಹಲವಾರು ಖಾಸಗಿ ಸಂಗ್ರಹಾಲಯಗಳಲ್ಲಿ ಇವರ ಕಲಾಕೃತಿಗಳು ಸಂಗ್ರಹಗೊಂಡಿವೆ.

ಚಿತ್ರ-೧೩. ಇಂಪ್ರೇಷನ್ ಆಫ್ ಸನ್ ರೈಸ್ ಆಂಡ್ಯ್ ಸನ್‌ಸೆಟ್ಟ್ -೧

ಈ ಕೃತಿಯೂ ತೈಲವರ್ಣಗಳಲ್ಲಿ ರಚಿತವಾಗಿದ್ದು, ಸೂರ್ಯೋದಯದ ಮತ್ತು ಸೂರ್ಯಾಸ್ತದ ನಿಸರ್ಗ ದೃಶ್ಯವನ್ನು ಅಮೂರ್ತ ಶೈಲಿಯಲ್ಲಿ ಸೆರೆ ಹಿಡಿಯಲಾಗಿದೆ. ಈ ಕಲಾಕೃತಿಯಲ್ಲಿ ಕೆಂಪ್ಪು, ಬಿಳಿ, ಕಂದು, ಹಳದಿ, ಕೆಂಪು ಮಿಶ್ರಿತ ನೀಲಿ, ಬಿಳಿ ಮಿಶ್ರಿತ ನೀಲಿ ಬಣ್ಣಗಳಿಂದ ನಿಸರ್ಗ ಚಿತ್ರವನ್ನು ಸಿಂಧೂರರು ತಮ್ಮ ಅಮೂರ್ತ ಶೈಲಿಯಲ್ಲಿ ಚಿತ್ರಿಸಿದ್ದಾರೆ.

ಚಿತ್ರ-೧೪. ಇಂಪ್ರೇಷನ್ ಆಫ್ ಸನ್ ರೈಸ್ ಆಂಡ್ಯ್ ಸನ್‌ಸೆಟ್ಟ್ -೨

ಈ ಕೃತಿಯೂ ಕೂಡಾ ತೈಲವರ್ಣದಿಂದ ಚಿತ್ರಿಸಲಾಗಿದ್ದು, ಈ ಕಲಾಕೃತಿಯಲ್ಲಿಯೂ ಸಹ ಸೂರ್ಯೋದಯದ ಮತ್ತು ಸೂರ್ಯಾಸ್ತದ ನಿಸರ್ಗ ದೃಶ್ಯವನ್ನು ಅಮೂರ್ತ ಶೈಲಿಯಲ್ಲಿ ಸೆರೆ ಹಿಡಿಯಲಾಗಿದೆ. ಈ ಕಲಾಕೃತಿಯಲ್ಲಿ ಪ್ರಧಾನವಾಗಿ ಹಳದಿ ಬಣ್ಣವನ್ನಿಟ್ಟುಕೊಂಡು ಇದರ ಜೊತೆಗೆ ಬೀಳಿ ಮಿಶ್ರಿತ ನೀಲಿ, ಕಪ್ಪು, ಹಳದಿ ಮಿಶ್ರಿತ ಕಪ್ಪು, ಕಡು ಹಳದಿ ಮತ್ತು ಬಿಳಿ ಮಿಶ್ರಿತ ಹಳದಿ ಬಣ್ಣಗಳಿಂದ ಅಮೂರ್ತ ಶೈಲಿಯಲ್ಲಿ ಚಿತ್ರಿಸಲಾಗಿದೆ.

೫.೮. ನಾಡೋಜ ಡಾ. ಜೆ. ಎಸ್. ಖಂಡೇರಾವ್

ಇವರ ಪೂರ್ಣ ಹೆಸರು ಜಗದೇವಪ್ಪ. ತಂದೆ ತಾಯಿ ಶಂಕರಪ್ಪ ಮತ್ತು ಬಸಮ್ಮ ಖಂಡೇರಾವರು. ಇವರು ೦೧-೧೧-೧೯೪೦ ರಂದು ಜನಿಸಿದರು. ಇವರಿಗೆ ನಾಲ್ಕು ಜನ ಅಕ್ಕಂದಿರಿದ್ದಾರೆ. ಇವರು ಜನಿಸಿದ ಎರಡನೇ ದಿನದಂದು ಇವರು ತಮ್ಮ ತಾಯಿಯನ್ನು ಕಳೆದುಕೊಂಡರು. ಎರಡನೆ ತಾಯಿಯಾಗಿ ಬಂದ ಶ್ರೀಮತಿ ಶಿವಮ್ಮನ ಆಶ್ರಯದಲ್ಲಿ ಬೆಳೆದರು. ಈ ತಾಯಿಯಿಂದ ಆರು ಜನ ಸಹೋದರರನ್ನು ಮತ್ತು ಇಬ್ಬರು ಸಹೋದರಿಯನ್ನು ಪಡೆದ ಇವರದು ತುಂಬು ಕುಟುಂಬ.[೩೪]

ಇವರ ಪ್ರಾಥಮಿಕ ಶಿಕ್ಷಣ 'ಆಸಿಫ್‌ಗಂಜ್' ಶಾಲೆಯಲ್ಲಿ ನಡೆಯಿತು. ಇವರಲ್ಲಿ ಪ್ರಥಮವಾಗಿ ಚಿತ್ರಕಲೆಯ ಬಗ್ಗೆ ಆಸಕ್ತಿಯನ್ನು ಗುರುತಿಸಿದವರು ಶಂಕರರಾವ್, ಆಳಂದಕರ್, ಮಾಧ್ಯಮಿಕ ಶಿಕ್ಷಣದಲ್ಲಿ ಇವರಿಗೆ ಪ್ರೇರೆಪಿಸಿದವರೆಂದರೆ ಮಹ್ಮದ್ ಶರೀಫ್ ಮತ್ತು ವಿ.ಎಸ್. ಭಂಕೂರರವರು. ಅಭ್ಯಾಸ ಮಾಡುತ್ತಿರುವಾಗಲೇ,

---

೩೪. ಡಾ. ಮಲ್ಲಿಕಾರ್ಜುನ ಸಿ. ಬಾಗೋಡಿ : ನಾಡೋಜ ಡಾ. ಜೆ. ಎಸ್. ಖಂಡೇರಾವ್, ಪು-೫

ಸೈಯದ್ ಹುಸೇನರೆಂಬ ಕಲಾ ಗುರುಗಳ ಮಾರ್ಗದರ್ಶನ ದೊರೆಯಿತು. ಒಂಬತ್ತನೆ ತರಗತಿಯಲ್ಲಿ ಕಲಿಯುತ್ತಿರುವಾಗ ಮುಂಬಯಿಗೆ ಹೋಗಿ ಎಲಿಮೆಂಟರಿ ಪೇಟಿಂಗ್ ಪರೀಕ್ಷೆಯಲ್ಲಿ ಉತ್ತೀರ್ಣರಾದರು. ಆದರೆ ಇವರ ತಂದೆಗೆ ಇದಾವುದೂ ಇಷ್ಟವಿರಲಿಲ್ಲ. ಇದರ ಬದಲಾಗಿ ಯಾವುದಾದರೊಂದು ಹಣಗಳಿಸುವ ವಿದ್ಯಾಭ್ಯಾಸವನ್ನು ಕೈಗೊಳ್ಳಬೇಕೆಂಬುದು ಅವರ ಬಯಕೆಯಾಗಿತ್ತು. ಆಗತಾನೇ ಕಲಬುರ್ಗಿಯಲ್ಲಿ ಶ್ರೀ ಮಹಾದೇವಪ್ಪ ರಾಂಪುರೆಯವರು ಪ್ರಾರಂಭಿಸಿದ್ದ ಇಂಜಿನಿಯರಿಂಗ್ ಕಾಲೇಜ್ ಅಥವಾ ಪಾಲಿಟೆಕ್ನಿಕ್‌ನಲ್ಲಿ ವಿದ್ಯಾಭ್ಯಾಸ ಮಾಡಬೇಕೆಂಬುದು ತಂದೆಯವರ ಆಸೆಯಾಗಿತ್ತು. ಒಂದು ವೇಳೆ ತಂದೆಯವರ ಇಚ್ಛೆಯೇ ಕೈಗೊಡಿದ್ದರೆ ಇಂದು ಕರ್ನಾಟಕಕ್ಕೆ ಒಬ್ಬ ಖ್ಯಾತ ಕಲಾವಿದ ದೊರೆಯದಂತಾಗುತ್ತಿತ್ತು. ಹಾಗಾಗದಿರುವುದೇ ಕರ್ನಾಟಕ ಕಲಾಕ್ಷೇತ್ರದ ಸೌಭಾಗ್ಯವೆಂದು ಹೇಳಬಹುದು.

ಕಲಾಶಿಕ್ಷಣ

ತಂದೆಯವರ ಅರೆಮನಸ್ಸಿನ ಒಪ್ಪಿಗೆ ಪಡೆದು ಖಂಡೇರಾವರು ಮುಂಬಯಿಗೆ ವ್ಯಾಸಂಗಕ್ಕೆ ಹೋಗುವಲ್ಲಿ ಸಫಲರಾದರು. ಜೆ.ಜೆ. ಕಲಾಶಾಲೆಯಲ್ಲಿ ಆಗ ಶಿರಗಾಂವಕರ್ ಎಂಬುವವರು ಪೇಂಟಿಂಗ್ ವಿಭಾಗದ ಮುಖ್ಯಸ್ಥರಾಗಿದ್ದರು. ಖಂಡೇರಾವರು ಹೈದರಾಬಾದಿನಲ್ಲಿ ಕಲಾ ಪರೀಕ್ಷೆಗಾಗಿ ಮಾಡಿದ್ದ ಹಲವಾರು ಶ್ರೇಷ್ಠ ಮಟ್ಟದ ಕಲಾಕೃತಿಗಳನ್ನು ವೀಕ್ಷಿಸಿ ಅವರನ್ನು ಪ್ರೇರೇಪಿಸಿ ಇಂಟರ್ ಮೀಡಯೆಟ್ ಪೇಂಟಿಂಗ್ ತರಗತಿಗೆ ಪ್ರವೇಶ ದೊರಕಿಸಿಕೊಟ್ಟರು. ಜೆ.ಜೆ. ಕಲಾಶಾಲೆಯಲ್ಲಿದ್ದಾಗ ಅವರಿಗೆ ಆರ್ಥಿಕ ಬಿಕ್ಕಟ್ಟು ಉಂಟಾಯಿತು. ಇದಾವುದಕ್ಕೂ ಅವರು ದೃತಿಗೆಡದೆ ಛಲದಿಂದ ಮುನ್ನುಗ್ಗಿದರು. ಜೀವನದಲ್ಲಿ ಗುರಿ ಮುಟ್ಟುವುದೊಂದೇ ಅವರ ಏಕೈಕ ಹಂಬಲವಾಗಿತ್ತು. ಈ ಕಷ್ಟಕರ ಜೀವನದಲ್ಲಿ ಇವರಿಗೆ ಆಸರೆಯಾಗಿ ನಿಂತವರೆಂದರೆ ಶ್ರೀ.ಜೆ.ಎಸ್. ದಂಡಾವತಿಮಠವರು. ಇವರು ನೂತನ ಕಲಾ ಮಂದಿರದ ಕಲಾ ಶಿಕ್ಷರಾಗಿದ್ದರು, ಇವರನ್ನು ಖಂಡೇರಾವರು ಈಗಲು ಸ್ಮರಿಸುತ್ತಾರೆ.

ಖಂಡೇರಾವರು ಇಂಟರ್ ಮೀಡಿಯೆಟ್ ಪರೀಕ್ಷೆ ನೂತನ ಕಲಾಮಂದಿರದಲ್ಲಿ ಮುಗಿಸಿ ಮುಂದೆ ಡಿಪ್ಲೋಮಾ ಅಂತಿಮ ಪರೀಕ್ಷೆಯು ದಂಡಾವತಿ ಪಠ್‌ರವರ ಸಹಾಯದಿಂದಲೇ ಪರೀಕ್ಷೆ ಕಟ್ಟಿ ಉತ್ತೀರ್ಣರಾದರು. ಭಾವಚಿತ್ರ, ನಿಸರ್ಗ ಚಿತ್ರ ರಚಿಸುವುದರಲ್ಲಿ ಪ್ರಾವಿಣ್ಯತೆ ಪಡೆದಿದ್ದ ಇವರು ಆಗಿನ ಪ್ರತಿಭಾವಂತ ವಿದ್ಯಾರ್ಥಿಗಳ ಸಾಲಿನಲ್ಲಿ ಒಬ್ಬರಾಗಿದ್ದರು. ಕಲಾ ಪರೀಕ್ಷೆಯಲ್ಲಿ ಅಂತಿಮ ತರಗತಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ೧೯೬೩ ರಲ್ಲಿ ಡಿಪ್ಲೋಮಾ ಮುಗಿಸಿದರು.

ವೃತ್ತಿ ಜೀವನ ಮತ್ತು ಕಲಾಸೇವೆ

೧೯೬೫ ರಲ್ಲಿ "ದಿ ಐಡಿಯಲ್ ಫೈನ್ ಆರ್ಟ ಸಂಸ್ಥೆ" ಎಂಬ ಹೆಸರಿನೊಂದಿಗೆ ಕಲಾಶಾಲೆ ಸ್ಥಾಪಿಸಿದರು. ಕೇವಲ ಐದು ವಿದ್ಯಾರ್ಥಿಗಳೊಡನೆ ಪ್ರಾರಂಭವಾದ ಡಿಪ್ಲೋಮಾ ಪ್ರಥಮ ತರಗತಿಗೆ ಖಂಡೇರಾವ್‌ರವರೊಬ್ಬರೆ ಅಧ್ಯಾಪಕರು. ಇವರ ವಿದ್ಯಾರ್ಥಿಗಳ್ಯಾರೆಂದರೆ ವಿ.ಜಿ. ಅಂದಾನಿ, ಎಂ.ಬಿ. ಲೋಹಾರ, ಬಸವರಾಜ ಉಪ್ಪಿನ, ಎಸ್.ಬಿ. ಉಪ್ಪಿನ್, ಮಂಗಳಾ ಪಂಡಿತರಿದ್ದರು. ವಿದ್ಯಾರ್ಥಿಗಳಲ್ಲಿ ಕಲಾಪ್ರಜ್ಞೆ ಮೂಡಿಸುವಲ್ಲಿ

ಖಂಡೇರಾವರು ಹೆಚ್ಚಿನ ಆಸಕ್ತಿ ಹೊಂದಿದ್ದರು. ಆಗಾಗ್ಗೆ ಶಾಲೆಯಲ್ಲಿ ಸಾಹಿತಿಗಳ ಚರ್ಚಾಕೂಟಗಳನ್ನು ಏರ್ಪಡಿಸುತ್ತಾ ವಿದ್ಯಾರ್ಥಿಗಳಿಗೆ ಇತರ ಸಾಂಸ್ಕೃತಿಕ ರಂಗಗಳ ಪರಿಚಯವನ್ನು ಮಾಡಿಕೊಡುತ್ತಿದ್ದರು. ಡಿಪ್ಲೋಮಾ ಕೋರ್ಸಿನ ಎಲ್ಲ ತರಗತಿಗೆ ಇವರೊಬ್ಬರೆ ಕಲಾ ಶಿಕ್ಷಕರಾಗಿ ಹಗಲಿರುಳೆನ್ನದೆ ದುಡಿದ ಇವರ ಅಚಲ ಪ್ರಯತ್ನದಿಂದ ಫಲಿತಾಂಶ ಅತಿ ಉನ್ನತ ಮಟ್ಟದ್ದಾಗಿರುತಿತ್ತು. ೧೯೬೮ ರಲ್ಲಿ ಕರ್ನಾಟಕ ಲಲಿತ ಕಲಾ ವಾರ್ಷಿಕ ಪ್ರದರ್ಶನದಲ್ಲಿ ಇವರ "ಮಳೆಯ ನಂತರ" ಎಂಬ ಜಲವರ್ಣ ಕೃತಿಗೆ ಪ್ರಶಸ್ತಿ ಲಭಿಸಿತು. ಕೃತಿಯು ಈಗ ಸಿಂಗಾಪುರದ ಪ್ರತಿಷ್ಠಿತ ಕಲಾ ಸಂಗ್ರಹಾಲಯದಲ್ಲಿದೆ.

೧೯೭೧ರಲ್ಲಿ ಡಾ. ಶರಣಬಸವಪ್ಪ ಅಪ್ಪನವರ ಇಚ್ಛೆಯಂತೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದ ಪದವಿ ಶಿಕ್ಷಣದಲ್ಲಿ ಬಿ.ಎ ಚಿತ್ರಕಲೆಯನ್ನು ಮುಖ್ಯ ವಿಷಯವನ್ನಾಗಿ ಪ್ರಾರಂಭಿಸುವುದಕ್ಕೆ ವಿಶ್ವವಿದ್ಯಾಲದಿಂದ ಅನುಮತಿ ದೊರಕಿತು. ಎರಡೂ ಕಲಾ ಶಾಲೆಗಳಲ್ಲಿಯೂ ದುಡಿಯುವ ಜವಾಬ್ದಾರಿ ಖಂಡೇರಾವರೆ ವಹಿಸಿಕೊಂಡರು. ದಿ ಐಡಿಯಲ್ ಫೈನ್ ಆರ್ಟ ಸಂಸ್ಥೆಯ ಜವಾಬ್ದಾರಿ ತಮ್ಮ ವಿದ್ಯಾರ್ಥಿಯಾದ ವಿ.ಜಿ. ಅಂದಾನಿಯವರಿಗೆ ವಹಿಸಿಕೊಟ್ಟು ಶರಣಬಸವೇಶ್ವರ ಕಲಾ ಮಹಾವಿದ್ಯಾಲದಯಲ್ಲಿ ಕಲಾ ವಿಭಾಗಕ್ಕೆ ಮುಖ್ಯಸ್ಥರಾಗಿ ನೇಮಕಗೊಂಡರು. ಪುನಃ ಮತ್ತೊಂದು ವಿಭಾಗವನ್ನು ಕಟ್ಟಿ ಬೆಳೆಸುವ ಹೊಣೆಗಾಗರಿಕೆ ಇವರ ಮೇಲಿತ್ತು. ೧೯೮೨ ರಲ್ಲಿ ಸ್ನಾತಕೊತ್ತರ ಚಿತ್ರಕಲಾ ವಿಭಾಗದ ಪ್ರಾಧ್ಯಾಪಕರಾಗಿ ನೇಮಕಗೊಂಡು ಈ ವಿಭಾಗದ ರೀಡರ್ ಆಗಿ ೧೯೯೮ ರಲ್ಲಿ ಡಿಸೆಂಬರ್ ೩೧ ರಂದು ನಿವೃತ್ತರಾದರು. ೨೧ ವರ್ಷಗಳ ಅವಧಿಯಲ್ಲಿ ತಮ್ಮ ಪ್ರಾಮಾಣಿಕತೆ ಕಠಿಣ ಶ್ರಮ ಮತ್ತು ದೂರದೃಷ್ಠಿಯಿಂದ ಈ ವಿಭಾಗವನ್ನು ಉನ್ನತ ಸ್ಥಾನಕ್ಕೇರಿಸಿದರು. ಈ ಸಾಲಿನಲ್ಲಿ ಶಂಕರ ನವಲಬಾ. ವಿ.ಬಿ, ಬಿರಾದಾರ್. ಎ.ಎಸ್, ಪಂಚಾಳ್, ಕೆ. ವಿಜಯರಾವ್, ಉಮೇಶ್.ಎಂ, ಮತ್ತು ಶಿವಾನಂದ ಬಂಟನೂರರವರನ್ನು ಹೆಸರಿಸಬಹುದು. ಕಲಾ ಶಾಲೆಯನ್ನು ಕಟ್ಟಿ ಬೆಳೆಸುವ ಪರಿಶ್ರಮದಲ್ಲಿಯೂ ಇವರ ಸೃಜನಶೀಲತೆ ಜೀವಂತವಾಗಿದ್ದಿತು. ಅನೇಕ ಏಕ ವ್ಯಕ್ತಿ ಪ್ರದರ್ಶನಗಳನ್ನು ಏರ್ಪಡಿಸುತ್ತ ಹಲವಾರು ಸಮೂಹ ಪ್ರದರ್ಶನಗಳಲ್ಲಿ ಭಾಗವಹಿಸುತ್ತ ಕಾರ್ಯಶೀಲತೆಯನ್ನು ಕಾಯ್ದುಕೊಂಡು ಬಂದರು. ಅನೇಕ ಪ್ರಶಸ್ತಿ ಪುರುಸ್ಕಾರಗಳು ಅವರಿಗೆ ಈ ಅವಧಿಯಲ್ಲಿಯೇ ದೊರಕಿವೆ.

ಕಲಾ ಸೇವೆ


ಜೆ.ಎಸ್. ಖಂಡೇರಾವ್ ಅವರು ಅಕಾಡೆಮಿಕ್ ಶೈಲಿಯ ಸಂಯೋಜನೆ ಚಿತ್ರ, ಭಾವಚಿತ್ರ ಮತ್ತು ಹೆಚ್ಚಾಗಿ ನಿಸರ್ಗ ಚಿತ್ರಗಳನ್ನು ರಚಿಸುತ್ತಾರೆ. ಇವರ ಒಲವನ್ನು ಅವರ ಕಲಾಜೀವನದ ಎಲ್ಲಾ ಹಂತದಲ್ಲಿಯೂ ಕಾಣಬಹುದು. ಅನೇಕ ವರ್ಷಗಳ ಸಾಧನೆಯಿಂದ ಜಲವರ್ಣ ಮತ್ತು ತೈಲವರ್ಣ ಮಾಧ್ಯಮದ ನಿಸರ್ಗ ಚಿತ್ರಗಳಲ್ಲಿ ಪ್ರಭುತ್ವ ಮತ್ತು ಸ್ವಂತಿಕೆ ಪಡೆದು ಕಲಾವಲಯದಲ್ಲಿ ತಮ್ಮದೇ ಆದ ಪ್ರತ್ಯೇಕ ಸ್ಥಾನವನ್ನು ಗಳಿಸಿಕೊಂಡರು. ಇವರ ಚಿತ್ರದಲ್ಲಿ ಗಮನಿಸಬೇಕಾದ ಅತೀ ಮಹತ್ವದ ವಿಷಯವೆಂದರೆ ಚಿತ್ರಣಕ್ಕಾಗಿ ಆರಿಸಿಕೊಳ್ಳುವ ದೃಶ್ಯದಲ್ಲಿಯ ಭೂಭಾಗ ಮತ್ತು ನಿರ್ವಹಣೆ. ಹಲವಾರು ವಸ್ತುಗಳನ್ನೊಳಗೊಂಡು ದೃಶ್ಯಗಳನ್ನು ಸಂಯೋಜನೆಗೆ ಆರಿಸಿಕೊಳ್ಳುವುದಕ್ಕೆ ಬದಲಾಗಿ ಕೆಲವೊಂದು ಸಾರಿ ಅತಿ ಸಾಮಾನ್ಯ ವಸ್ತುವನ್ನೇ ಚಿತ್ರಣಕ್ಕಾಗಿ ಆರಿಸಿಕೊಂಡು ಅದರ ಸಂಪೂರ್ಣ ವಿವರಗಳನ್ನು ವೈಭವಿಕರಿಸುತ್ತ ಚಿತ್ರದಲ್ಲಿ ಜೀವಂತಿಕೆಯನ್ನು ತರುವುದು ಇವರ ವಿಶಿಷ್ಠತೆ. ೧೯೮೦ ರಲ್ಲಿ "ಬ್ರೋಕನ್ ಗ್ಲಾಸ್" ಎಂಬ ಶಿರ್ಷಿಕೆಯ ಸೃಜನಶೀಲ ನಿಸರ್ಗ ಚಿತ್ರಕ್ಕೆ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪ್ರಶಸ್ತಿ ದೊರೆಯಿತು.

ನಾಡೋಜ ಡಾ. ಜೆ.ಎಸ್. ಖಂಡೇರಾವ್‌ರವರು ನಿಸರ್ಗ ಚಿತ್ರದಲ್ಲಿ ಕರ್ನಾಟಕದ ಖ್ಯಾತ ಕಲಾವಿರಂದು ಗುರುತಿಸಲಾಗಿದೆ. ಬಹುತೇಕವಾಗಿ ಇವರ ಜಲವರ್ಣ ಮಾಧ್ಯಮದ ಈ ಪ್ರಕೃತಿ ನೈಸರ್ಗಿಕವಾದಂತಹ ಗಿಡ, ಬಳ್ಳಿ, ಬೆಟ್ಟ, ಗುಡ್ಡ, ನದಿ ಮೊದಲಾದವುಗಳು ಹಾಗೂ ಮಾನವನಿರ್ಮಿತ ಭೂಕಟ್ಟಡಗಳು ಹೀಗೆ ಅನೇಕ ಕೃತಿಗಳನ್ನು ನಿರ್ಮಿಸಿದ್ದಾರೆ. ಇವರ ನಿಸರ್ಗ ಚಿತ್ರದಲ್ಲಿ ನೆರಳು–ಬೆಳಕಿನ ಪ್ರಭಾವ ಸ್ಪಷ್ಟವಾಗಿ ಗುರುತಿಸಬಹುದು. ಇವರು ಜಲವರ್ಣ ಮತ್ತು ತೈಲವರ್ಣದಲ್ಲಿ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ. ಇವರು ಹೇಳುವ ಪ್ರಕಾರ ನಿಸರ್ಗ ಚಿತ್ರಗಳೆಂದರೆ ಭೂಮಿಯ ಮೇಲಿನ ಆಕಾರ, ಸ್ವರೂಪ ಇವುಗಳ ಬಗ್ಗೆ ಆಳವಾದ ಅಧ್ಯಯನವಾಗಿದೆ ನಿಸರ್ಗದಲ್ಲಿ ಹಲವಾರು ರೀತಿಯ ಬಣ್ಣಗಳ ಸ್ವರೂಪವನ್ನು ನಾವು ಕಾಣಬಹುದು. ನಿಸರ್ಗ ಚಿತ್ರ ರಚಿಸುವಾಗ ಅದರಿಂದಾಗುವ ಸಂತೋಷ ಮತ್ತೊಂದಿಲ್ಲಾ ಎಂದು ಹೇಳುತ್ತಾರೆ.

ಖಂಡೇರಾವ್‌ರವರ ಪ್ರಕಾರ ಒಂದು ನಿಸರ್ಗ ಚಿತ್ರ ರಚಿಸಬೇಕಾದರೆ ಅವರಿಗೆ ಮೊದಲು ಸಂಯೋಜನೆಯ ಬಗ್ಗೆ ಜ್ಞಾನ ಹೊಂದಿರಬೆಕು. ಬಣ್ಣಗಳ ಅರಿವು ಇರಬೆಕು. ಅದರದ್ದೇ ಆದ ಕೆಲವು ವಿಧಿ ವಿಧಾನ ಮತ್ತು ತತ್ವಗಳನ್ನು ಒಳಗೊಂಡಿರುತ್ತವೆ. ಇದನ್ನು ಅರಿಯುವುದು ಕಲಾವಿದನ ಕರ್ತವ್ಯವಾಗಿದೆ. ನಿಸರ್ಗ ಚಿತ್ರ ಬಿಡಿಸಲು ಸೂರ್ಯನ ಬೆಳಕು ಪ್ರಧಾನವಾಗಿರುತ್ತದೆ. ಒಂದು ವಸ್ತುವಿನ ಮೇಲೆ ಸೂರ್ಯನ ಬೆಳಕು ಯಾವ ರೀತಿ ಹಾದು ಹೋಗಿದೆ ಎಂದು ಇವರ ಕೃತಿಗಳಲ್ಲಿ ಸ್ಪಷ್ಟವಾಗಿ ತೋರಿಸಬಹುದು. ಇದರಿಂದ ನಮಗೆ ಆ ದೃಶ್ಯವು ನಮ್ಮ ಕಣ್ಣೆದುರಿಗೆ ಬಂದಂತೆ ಭಾಸವಾಗುತ್ತದೆ. ಇವರು ಹೆಚ್ಚಾಗಿ ನಿಸರ್ಗದಲ್ಲಿ ಯಾವ ರೀತಿಯ ಬಣ್ಣಗಳಿವೆಯೋ ಅವುಗಳನ್ನು ತಮ್ಮ ಚಿತ್ರದಲ್ಲಿ ಹಾಕುವ ಪ್ರಯತ್ನ ಮಾಡಿದ್ದು ಕಂಡುಬರುತ್ತದೆ. ಇವರಿಂದ ಒಬ್ಬ ಶ್ರೇಷ್ಠ ಕಲಾವಿದ ಆಗಬೇಕಾದರೇ ನಿರಂತರ ಪ್ರಯತ್ನದಿಂದ ಸಾಧನೆಯ ಮಾರ್ಗಕಾಣಬಹುದು. ದಿನನಿತ್ಯ ಬೇರೆ ಬೇರೆ ಸ್ಥಳಗಳಿಗೆ ಹೋಗಿ ಸ್ಕೆಚ್‌ಗಳು ಮಾಡಬೇಕು. ಸ್ಥಳದಲ್ಲಿಯೇ ಚಿತ್ರಗಳ ಬಣ್ಣಗಳನ್ನು ತುಂಬಬೇಕು, ಇದರಿಂದ ಬಣ್ಣಗಳ ಪರಿಜ್ಞಾನ ಬೆಳೆಯುತ್ತದೆ ಎಂದು ಹೇಳುತ್ತಾರೆ. ಲಲಿತಕಲಾ ಅಕಾಡೆಮಿಯ ವತಿಯಿಂದ ನಿಸರ್ಗ ಚಿತ್ರಕಲೆಯಲ್ಲಿ ನಿರಂತರವಾಗಿ ನಾಲ್ಕು ಬಾರಿ ಪ್ರಶಸ್ತಿಯನ್ನು ಪಡೆದಿದ್ದಾರೆ.

ನಿಸರ್ಗ ಚಿತ್ರಗಳನ್ನು ಬಿಡಿಸಲು ವಿವಿಧ ಐತಿಹಾಸಿಕ ಸ್ಥಳಗಳಿಗೆ ಹೋಗಿ ಚಿತ್ರಗಳನ್ನು ರಚಿಸಿದ್ದಾರೆ. ಇವುಗಳಲ್ಲಿ ವಿಶೇಷವಾದುವು ಎಂದರೆ ಹಂಪಿ, ಐಹೊಳೆ, ಪಟ್ಟದಕಲ್ಲು, ಬದಾಮಿ ಹಾಗೂ ಗುಲಬರ್ಗಾದ ಸುತ್ತಮುತ್ತಲಿನ ಅನೇಕ ಹಳ್ಳಿಗಳಲ್ಲಿಯ ಚಿತ್ರಗಳನ್ನು ಬಿಡಿಸಿದ್ದಾರೆ. ಇವರು ರಚಿಸಿದ ಅನೇಕ ಕಲಾಕೃತಿಗಳು ದೇಶ ಹಾಗೂ ಹೊರದೇಶದ ಸಂಗ್ರಹಾಲಯದಲ್ಲಿ ಇವೆ. ನೈಜ್ಯ ನಿಸರ್ಗ ಚಿತ್ರಗಳ ಜೊತೆಗೆ ಸೃಜನಾತ್ಮಕ ನಿಸರ್ಗ ಚಿತ್ರಗಳು ಕೂಡಾ ರಚಿಸಿದ್ದಾರೆ. ಖಂಡೇರಾವರು ತಮ್ಮ ನಿಸರ್ಗ ಚಿತ್ರಗಳಲ್ಲಿ ನೆರಳು ಮತ್ತು ಬೆಳಕು ಬಣ್ಣಗಳಿಂದ ತುಂಬ ಅದ್ಭುತವಾಗಿ ರಚಿಸುತ್ತಾರೆ. ಒಂದು ಭಾಗದಲ್ಲಿ ನೆರಳು ಅಥವಾ ಬೆಳಕು ತೋರಿಸಿದರೆ ನಿಜವಾಗಿಯೂ ಹೌದು ನೆರಳು ಇದೆ ಅಥವಾ ಬಿಸಿಲು ಇದೆ ಎಂದು ಭಾಸವಾಗುತ್ತದೆ. ಇವರು ಜಲವರ್ಣದಲ್ಲಿ ಹೆಚ್ಚಾಗಿ ಹಳದಿ, ಕೆಂಪು, ಹಸಿರು, ನೀಲಿ ಮತ್ತು ಕಂದುಕೆಂಪು ಬಣ್ಣವನ್ನು ಉಪಯೋಗಿಸುತ್ತಾರೆ. ಮತ್ತು ತೈಲವರ್ಣದಲ್ಲಿ ಹಳದಿ, ನೀಲಿ, ಕಂದುಕೆಂಪು, ಕಂದುಹಸಿರು ಬಣ್ಣವನ್ನು ನಿಸರ್ಗ ಚಿತ್ರಗಳಲ್ಲಿ ಬಣ್ಣಗಳನ್ನು ಉಪಯೋಗಿಸುತ್ತಿದ್ದರು. ಖಂಡೇರಾವರು ಸಾಂಪ್ರದಾಯಿಕ ಶೈಲಿಯಲ್ಲಿಯೂ ಮತ್ತು ಸೃಜನಶೀಲ ತಮ್ಮದೇ ಆದ ಶೈಲಿಯಲ್ಲಿಯೂ ನಿಸರ್ಗ ಚಿತ್ರಗಳನ್ನು ಬಿಡಿಸಿದವರಾಗಿದ್ದಾರೆ.

ನಾಡೋಜ. ಡಾ. ಜೆ.ಎಸ್. ಖಂಡೇರಾವರ ನಿಸರ್ಗ ಕಲಾಕೃತಿಗಳು





ಜಲವರ್ಣ ಚಿತ್ತಾಪೂರದ ನಾಗಾವಿಯಲ್ಲಮನ ದೇವಸ್ಥಾನ



ತೈಲವರ್ಣ

ಕಾಳಗಿ ಹಳ್ಳಿಯ ದೃಶ್ಯ

ಚಿತ್ರ-೧೫. ಚಿತ್ತಪೂರದ ನಾಗಾವಿ ಯಲ್ಲಮ್ಮನ ದೇವಸ್ಥಾನ

ಈ ದೃಶ್ಯವು ಜಲವರ್ಣದಲ್ಲಿ ರಚಿಸಲಾಗಿದ್ದು, ದೇವಸ್ಥಾನದ ಮುಖ್ಯದ್ವಾರ ಮತ್ತು ಮುಖ್ಯದ್ವಾರದ ಮುಂದೆ ಇರುವ ರಸ್ತೆ, ಪಕ್ಕದಲ್ಲಿ ಇರುವ ಗುಡಿಸಲಿನ ಮನೆಗಳನ್ನು ಚಿತ್ರ ರಚನೆಯ ವಸ್ತು ವಿಷಯವನ್ನಾಗಿಸಿಕೊಂಡಿದ್ದಾರೆ. ಕೆಂಪು, ನೇರಳೆ, ನೀಲಿ, ಕಡುನೀಲಿ, ಬೂದು ಬಣ್ಣದಿಂದ ಬಣ್ಣದಿಂದ ಆಕಾಶವನ್ನು ರಚಿಸಿದ್ದಾರೆ. ಸ್ವಲ್ಪ ದೂರದಲ್ಲಿ ದೇವಸ್ಥಾನದ ಮುಖ್ಯದ್ವಾರವಿದ್ದು, ಹಳದಿ, ಹಳದಿ ಮಿಶ್ರಿತ ಬಿಳಿ ಮತ್ತು ಕಂದು ಬಣ್ಣದಿಂದ ರಚಿಸಲಾಗಿದೆ. ಪಕ್ಕದಲ್ಲೇ ಕಂದು, ಹಳದಿ, ಕಡುಹಳದಿ, ಹಸಿರು ಮಿಶ್ರಿತ ನೀಲಿ ಬಣ್ಣವನ್ನು ಗುಡಿಸಲಿನ ಛಪ್ಪರವನ್ನಾಗಿಸಿದ್ದಾರೆ. ಗುಡಿಸಲಿನ ಮುಂದೆ ಮತ್ತು ದೇವಸ್ಥಾನದ ಹಿಂದೆ ಇರುವ ಟೆಂಗಿನ ಮರವನ್ನು ಹಸಿರು, ಕಡು, ಹಸಿರು, ತಿಳಿ ಹಸಿರು ಅಲ್ಲಲ್ಲಿ ಕೆಂಪು ಮತ್ತು ಕಂದು ಬಣ್ಣದಿಂದಲೂ ರಚಿಸಿದದ್ದಾರೆ. ದೇವಾಲಯ ಮತ್ತು ಗುಡಿಸಲಿನ ಮುಂದೆ ಇರುವ ರಸ್ತೆಯ ಮೇಲೆ ಬಿದ್ದಿರುವ ಬಿಸಿಲನ್ನು ಹಳದಿ, ಕಟು ಹಳದಿ, ಕಂದು ಮತ್ತು ಕಡು ಕಂದು ಬಣ್ಣದಿಂದ ಬಿಸಿಲನ್ನು ಪ್ರಖರ ವರ್ಣಗಳಿಂದ ತೋರಿಸಿದ್ದಾರೆ; ಇದೇ ರಸ್ತೆ ಮೇಲೆ ಬಿದ್ದಿರುವ ಮನೆಗಳ ನೆರಳನ್ನು ನೇರಳೆ, ನೀಲಿ ಮತ್ತು ತಿಳಿಗೆಂಪು ವರ್ಣಗಳಿಂದ ತೋರಿಸಿದ್ದಾರೆ. ದೇವಸ್ಥಾನದ ಮುಖ್ಯದ್ವಾರದ ಗೋಡೆಯನ್ನು ಹಳದಿ ತಿಳಿಹಳದಿ ಬಣ್ಣಗಳಿಂದ ಬಿಸಿಲನ್ನು ತೋರಿಸಿದ್ದಾರೆ. ಗುಡಿಸಲಿನ ಗೋಡೆಯ ಮೇಲೆ ಬಿದ್ದಿರುವ ಬಿಸಿಲಿನ ಭಾಗವನ್ನು ಯಾವುದೇ ಬಣ್ಣ ಬಳಸದೆ ಬಿಳಿ ಹಾಳೆಯನ್ನು ಹಾಗೆಯೇ ಬಿಟ್ಟಿದ್ದಾರೆ. ಇದು ಇವರ ನಿಸರ್ಗ ಚಿತ್ರಗಳಲ್ಲಿನ ಒಂದು ತಂತ್ರವೆಂದು ಹೇಳಬಹುದು.

ಚಿತ್ರ-೧೬. ಕಾಳಗಿಯಲ್ಲಿನ ಓಣಿಯೊಂದರ ಭೂದೃಶ್ಯ

ಈ ಕೃತಿಯು ತೈಲವರ್ಣದಲ್ಲಿ ಚಿತ್ರಿಸಲಾಗಿದ್ದು, ಇಲ್ಲಿ ಹಳ್ಳಿಯಲ್ಲಿನ ಸುಣ್ಣ ಹಚ್ಚಿದ ಗೋಡೆಯ ಮನೆಗಳು ರಸ್ತೆ ಮೇಲೆ ಅಲ್ಲಲ್ಲಿ ಬಿದ್ದಿರುವ ಕಲ್ಲುಗಳನ್ನು ಸೌಮ್ಯವರ್ಣದಿಂದ ಚಿತ್ರಿಸಲಾಗಿದ್ದು, ಓಣೀಯ ರಸ್ತೆ ಮತ್ತು ಕಟ್ಟಡಗಳನ್ನು ಯಥಾರೂಪದರ್ಶನವಾಗಿ ಚಿತ್ರಿಸಿದ್ದಾರೆ. ಕ್ಯಾನ್‌ವಾಸಿನಲ್ಲಿ ಒಂದು ಮೂರು ಭಾಗದಷ್ಟು ಮನೆ ಮತ್ತು ರಸ್ತೆಯನ್ನು ಮತ್ತು ಒಂದು ಭಾಗದಷ್ಟು ಆಕಾಶವನ್ನು ಚಿತ್ರಿಸಿದ್ದು ಕಂಡು ಬರುತ್ತದೆ. ನೀಲಿ, ಬಿಳಿನೀಲಿ, ಹಳದಿ, ಕಂದುಕೆಂಪು, ಹಳದಿ ಮಿಶ್ರಿತ ಬಿಳಿಬಣ್ಣಗಳ ಆಕಾಶವು ಕಂಡು ಬರುತ್ತದೆ. ಕಂದುಗೆಂಪು, ತಿಳಿಹಳದಿ, ಕಡುಹಳದಿ, ಹಸಿರು ಮಿಶ್ರಿತಬಿಳಿ, ಮತ್ತು ಬಿಳಿ ಬಣ್ಣಗಳಿದ ಚಿತ್ರಿಸಲಾಗಿದ್ದು, ಹಳದಿಗೋಡೆಯ ಮೇಲೆ ನೆರಳು ಬಿದ್ದಿರುವುದನ್ನು ಕಡು ಹಳದಿ ಬಣ್ಣದಿಂದ ನೆರಳಿನ ಛಾಯೆಯನ್ನು ಅದ್ಭುತವಾಗಿ ತೋರಿಸಿದ್ದಾರೆ. ರಸ್ತೆಯ ಮೇಲೆ ಬಿದ್ದಿರುವ ನೆರಳನ್ನು ಕಡು ಹಸಿರು ಬಣ್ಣದಿಂದ ನೆರಳಿನ ಛಾಯಾಂಕನವನ್ನು ತೋರಿಸಿದ್ದಾರೆ. ದೂರದಲ್ಲಿ ಹಸಿರು ಮಿಶ್ರಿತ ನೀಲಿ ಬಣ್ಣದಿಂದ ಮವನ್ನು ರಚಿಸಲಾಗಿದ್ದು, ಸ್ವಲ್ಪ ಮುಂದೆ ಇರುವ ಕಂಬವನ್ನು ಹಳದಿ ಮತ್ತು ಬಿಳಿ ಮಿಶ್ರಿತ ಹಳದಿ ಬಣ್ಣಗಳಿಂದ ರಚಿಸಲಾಗಿದೆ.

೫.೯. ಎ. ಬಿ. ಬಿರಾದರ

ಪಿ.ಬಿ. ಬಿರಾದರರು ಗುಲಬರ್ಗಾ ಜಿಲ್ಲೆಯ ವೆಂಕಟ ಬೇನೂರಿನಲ್ಲಿ ೪ನೇ ಡಿಸೆಂಬರ್ ೧೯೫೯ರಲ್ಲಿ

ಬಸವಣಪ್ಪ ಮತ್ತು ಗಂಗಮ್ಮ ಎಂಬ ದಂಪತಿಗಳಿಗೆ ದ್ವಿತೀಯ ಪುತ್ರನಾಗಿ ಜನಿಸಿದ್ದಾರೆ. ವೆಂಕಟ ಬೇನೂರು ಗುಲಬರ್ಗಾದಿಂದ ೧೫ ಕಿ.ಮೀ ಅಂತರದಲ್ಲಿದೆ. ಶ್ರೀ ಮಾಹಾಲಿಂಗೇಶ್ವರ ಶರಣರು ತಪಸ್ಸು ಮಾಡಿ ಪವಾಡಗಳನ್ನು ತೋರಿ ಐಕ್ಯವಾದ ಪುಣ್ಯ ಸ್ಥಳವಿದು. ಇವರ ಮನೆಯಲ್ಲಿ ಶರಣರು, ಸಾಧು ಸಂತರ. ಪರಶಿವನ ಆರಾಧನೆ, ಪೂಜೆ ನಿರಂತರವಾಗಿ ನಡೆಯುತ್ತಿದ್ದವು. ಇವರ ಪಾಲಕರು ವಿದ್ಯಾವಂತರಲ್ಲದಿದ್ದರೂ ವಿನಯಶೀಲರು. ಭಕ್ತಿ ಸಂಪನ್ನರೂ ಆಗಿದ್ದರು. ಇವರ ತಂದೆ ಬಸವಣ್ಣಪ್ಪ ಅವರು ದ್ವಿಕಾಲ ಲಿಂಗಪೂಜೆ ಮಾಡುತ್ತಿದ್ದರು. ಪರಿಶ್ರಮ ಜೀವಿಗಳು ಆಗಿದ್ದರು. ಇವರ ತಾಯಿ ಜನಪದ ಶ್ರೀಮಂತಿಕೆಯ ಅನುಭವ ಪಡೆದವರಾಗಿದ್ದರು. ತಮ್ಮ ದೈನಂದಿನ ಕಾರ್ಯದಲ್ಲಿ ತೊಡಗಿದಾಗ ಭಕ್ತಿಗೀತೆ, ಜನಪದ ಗೀತೆಗಳನ್ನು ಹಾಡುತ್ತಿದ್ದರು. ತಂದೆ ಮತ್ತು ತಾಯಿಯ ಆದರ್ಶ ಗುಣಗಳು ಬಿರಾದಾರರಿಗೆ ಸಹಜವಾಗಿಯೇ ಬಂದವು.

ಬಿರಾದಾರರವರು ಕೃಷಿ ಮನೆತನದಲ್ಲಿ ಹುಟ್ಟಿ ಬೆಳೆದವರು, ಓದು-ಬರಹ ಹಾಗೂ ಕಲೆಯಲ್ಲಿ ಎಷ್ಟೊಂದು ಆಸಕ್ತಿಯಿತ್ತೋ, ಕೃಷಿಯಲ್ಲಿಯೂ ಕೂಡ ಅಷ್ಟೇ ಆಸಕ್ತಿಯನ್ನು ಹೊಂದಿದ್ದರು. ಒಕ್ಕಲುತನದ ಎಲ್ಲಾ ಕೆಲಸಗಳು ಬಿರಾದಾರರಿಗೆ ಬಾಲ್ಯದಿಂದಲೇ ರೂಢಿಗತವಾಗಿದ್ದವು. ಬಿಡುವಿನ ವೇಳೆಯಲ್ಲಿ ಸ್ವತಃ ಬಿರಾದರರೂ ಒಕ್ಕಲುತನದ ಕೆಲಸ ಕಾರ್ಯಗಳನ್ನು ಮಾಡುತ್ತಿದ್ದರು. ಇವರು ಬಾಲ್ಯದಲ್ಲಿ ಜೇಡಿ ಮಣ್ಣಿನಿಂದ ಚಿತ್ರ ರಚನೆ, ನಕಾಶೆ, ನಿಸರ್ಗ ಚಿತ್ರ ಮುಂತಾದವುಗಳನ್ನು ರಚಿಸುವುದನ್ನು ಆಸಕ್ತಿಯಿಂದ ನೋಡಿ ಮಾಡಿ ಹವ್ಯಾಸ ಬೆಳೆಸುಕೊಂಡು, ಕಲಾಗ್ಯಾಲರಿ, ಕಲಾ ಶಾಲೆಗಳಲ್ಲಿ ಮತ್ತು ಕಲಾ ಪ್ರದರ್ಶನ ವೀಕ್ಷಿಸಿಸುತ್ತಿದ್ದರು. ಜೊತೆಗೆ ತಂದೆಯವರ ಜೇಡಿ ಮಣ್ಣಿನ ರಚನೆಯಗಳನ್ನು ಗಮನಿಸುತ್ತಿದ್ದರು.

ವೆಂಕಟ ಬೇನೂರು ಒಂದು ಅತ್ಯಂತ ಚಿಕ್ಕ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಹುಟ್ಟಿದ ಬಿರಾದಾರರು ಶ್ರೇಷ್ಠ ಕಲಾವಿದನಾಗಬೇಕೆಂಬ ಕನಸು ಕಂಡದ್ದು ನಿಜಕ್ಕೂ ಆಶ್ಚರ್ಯವೇ ಸರಿ. ಈ ಗ್ರಾಮದಲ್ಲಿ ಬಡತನ ತಾಂಡವವಾಡುತ್ತಿತ್ತು. ಹಲವಾರು ಮೂಲ ಸೌಕರ್ಯಗಳಿಲ್ಲದೆ ಕಗ್ಗತ್ತಲೆಯ ನೆಲೆಯಾಗಿತ್ತು. ಗುಲಬರ್ಗಾದಿಂದ ಕೇವಲ ೧೫ ಕಿ.ಮೀ. ದೂರದಲ್ಲಿದ್ದರೂ ೧೯೬೦ ರ ದಶಕದಲ್ಲಿ ವಿದ್ಯುತಚ್ಚಕ್ತಿಯಿಂದ ವಂಚಿತವಾಗಿರುವ ಸಂದರ್ಭದಲ್ಲಿ ಬಿರಾದಾರರು ಚಿಮಣಿ, ಕಂದಲಿನ ಬೆಳಕಿನಲ್ಲಿ ಓದಬೇಕಾಗಿತ್ತು. ಇಂತಹ ಕಷ್ಟ ಕಾರ್ಪಣ್ಯಗಳ ನಡುವೆಯೂ ಓದು, ಬರಹ, ಕಲೆ, ಸಂಗೀತ, ನಾಟಕ ಮುಂತಾದವುಗಳ ಅಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ತಮ್ಮೂರಿನಲ್ಲಿ ನಡೆಯುತ್ತಿದ್ದ ಭಜನೆ, ಸಣ್ಣಾಟ, ಬಯಲಾಟ, ನಾಟಕ ಮುಂತಾದವುಗಳ ಪ್ರದರ್ಶನಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುತ್ತಿದ್ದರು. ಪಾತ್ರಧಾರಿಗಳಿಗೆ ಬಣ್ಣ ಹಚ್ಚಿ ಮೀಸೆ ತೀದ್ದಿ ರಂಗ ಪ್ರದರ್ಶನಕ್ಕೆ ಅವರನ್ನು ತಯಾರಿಸುತ್ತಿದ್ದಾಗಲೇ ಈ ಕಾರ್ಯದಲ್ಲಿ ಅವರಿಗೆ ಪೂರ್ಣತಲ್ಲೀನತೆ, ತನ್ಮಯತೆ ತಂದಂತಾಗುತ್ತಿತ್ತು. ರಂಗಮಂಟಪದ ವರ್ಣಮಯ ಪರಿಕರಗಳ ವಿನ್ಯಾಸ ವಿವಿದ ಆಕೃತಿ ಚಿತ್ರಗಳು ಅವರನ್ನು ಆಕರ್ಷಿಸುತ್ತಿದ್ದವು. ಬಾಲ್ಯದ ಶ್ರೀಮಂತ ಅನುಭವ ರೂಪದೃಶ್ಯ ಕಲೆಯ ಕಡೆಗೆ ಒಲಿಯುವಂತೆ ಮಾಡಿತು. ಈ ಗ್ರಾಮದ ಜನರು ಮುಖ್ಯ ಕಸಬು ಒಕ್ಕಲುತನ, ನಗರದ ಸಮೀಪದಲ್ಲಿದ್ದರೂ, ಗ್ರಾಮೀಣ ಸೊಗಡನ್ನು ಈಗಲೂ ಉಳಿಸಿಕೊಂಡು ಬಂದಿದ್ದಾರೆ. ಮಾನವೀಯ ಸಂಬಂಧಗಳನ್ನು ಜೀವಂತವಾಗಿರಿಸಿಕೊಂಡಿರುವ ಈ ಗ್ರಾಮದ ಜನರು ಬಿರಾದಾರ ಅವರನ್ನು ಅಕ್ಕರೆಯಿಂದ ಕಂಡು ಪೋಷಿಸಿ ಬೆಳೆಸಿದರು.

ವಿ.ಬಿ. ಬಿರಾದಾರವರು ಅಜ್ಜ ಅಂಬಾರಾವ್, ಇವರು ಶಿಕ್ಷಕರಾಗಿದ್ದರಿಂದ ಅಂಬಾರಾವ್ ಮಾಸ್ತರರಂದೇ ಖ್ಯಾತರಾಗಿದ್ದರು. ಇವರು ಉಪಳಾಂವ ಗ್ರಾಮದವರು. ಅಂಬಾರಾವ್ ಮಾಸ್ತರರ ಮೊಮ್ಮಗನಾದ ಬಿರಾದಾರರನ್ನು ರಾಮಾಯಣ, ಮಹಾಭಾರತ, ಶಿವಲೀಲಾಮೃತ, ಶರಣಬಸವೇಶ್ವರರ ಪುರಾಣ, ಪಂಚತಂತ್ರ ಮುಂತಾದ ಮಹಾಗ್ರಂಥಗಳನ್ನು ಓದಿ ಹೇಳುತ್ತಿದ್ದರು. ಕೆಲವೊಮ್ಮೆ ಬಿರಾದಾರರಿಂದಲೂ ಓದಿಸುತ್ತಿದ್ದರು. ಇದು ಅವರಲ್ಲಿ ಶಿಕ್ಷಣದ ಬಗೆಗೆ ಆಸಕ್ತಿಯನ್ನು ಮೂಡಿಸಿತ್ತಲ್ಲದೆ ವ್ಯಕ್ತಿತ್ವದ ಮೇಲೆ ಗಾಢವಾದ ಪರಿಣಾಮವನ್ನು ಉಂಟುಮಾಡಿತ್ತು. ನಮ್ಮ ಅಜ್ಜ ಅಂಬಾರಾವ್ ಅವರು ಬಾಲ್ಯದಲ್ಲಿಯೇ ನನಗೆ ರಾಮಾಯಣ, ಮಹಾಭಾರತದ ಕಥೆಗಳನ್ನು ಹೇಳಿಕೊಡುತ್ತಿದ್ದರು. ಅಲ್ಲದೆ ನನ್ನಿಂದಲೂ ಓದಿಸುತ್ತಿದ್ದರು. ಇದರ ಪ್ರತಿಫಲವಾಗಿ ನಾನು ಕಲಾವಿದನಾಗಿ ಬೆಳೆಯಲು ಮತ್ತು ವರ್ಣರಂಜಿತ ಕಲ್ಪನೆ ಶಕ್ತಿ ಮಾಡಲು ಕಾರಣವಾಯಿತು ಎಂದು ಸ್ವತಃ ಬಿರಾದಾರರು ಅಭಿಪ್ರಾಯ ಪಡುತ್ತಾರೆ. ಬಿರಾದಾರರ ಅಜ್ಜನ ಊರಾದ ಉಪಳಾಂವದಲ್ಲಿ ಮಹಾಭಾರತ ಮತ್ತು ರಾಮಾಯಣ ಓದಿದಂತೆ ಆ ಊರಿನ ಗೋವಿಂದಪ್ಪನವರು ದೇವಾಲಯದ ಗೋಡೆಗಳ ಮೇಲೆ ಬರೆಯುತ್ತಿದ್ದ ಚಿತ್ರದ ಕಡೆಗೆ ಬಿರಾದಾರರು ಆಕಷಿತರಾದರು. ಗೋವಿಂದಪ್ಪನವರ ಚಿತ್ರಗಳಿಂದ ಪ್ರಭಾವಿತರಾದ ಬಿರಾದಾರರ ಮನಸ್ಸಿನಲ್ಲಿ ಕಲಾವಿದನಾಗಬೇಕೆಂಬ ಆಸೆ ಚಿಗುರೊಡೆಯಿತು. ನಾರಿನ ಕುಂಚದಿಂದ ಲಕ್ಷ್ಮೀ, ಸರಸ್ವತಿ, ಶಿವಲಿಂಗ, ನಂದಿ ಮುಂತಾದ ಚಿತ್ರಗಳನ್ನು ಗೋಡೆಯ ಮೇಲೆ ಅತ್ಯಂತ ಲೀಲಾಜಾಲವಾಗಿ ಬಿಡಿಸುವಾಗ ಅವರ ಕುಂಚದ ಲಯ ಕೈ ಚಳಕಕ್ಕೆ ಮನ ಸೋತು ನೋಡುತ್ತಾ ಆನಂದಿಸುತ್ತಿದ್ದರು. ಕಲೆಯ ಬಗ್ಗೆ ಇವರ ಆಸಕ್ತಿ ಕುದುರಿಸಲು ಗೋವಿಂದಪ್ಪನವರು ಬಿಡಿಸಿದ ಚಿತ್ರಗಳ ಪ್ರಭಾವ ಅತಿ ಮುಖ್ಯವಾದದ್ದು.

ಬಿರಾದಾರರು ಬಾಲ್ಯ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಪಡೆದರು. ಶ್ರೀ ಶಾಂತಪ್ಪ ಮಾಸ್ತರ್ ಕಲಬುರ್ಗಿ ಅವರು ಅಕ್ಷರಾಭ್ಯಾಸ, ಲೆಕ್ಕ, ಓದು ಇತ್ಯಾದಿಗಳನ್ನು ಮನಮುಟ್ಟುವಂತೆ ಭೋದಿಸುತ್ತಿದ್ದರು. ಬಾಲಕ ಬಿರಾದಾರರು ಆಗಲೇ ಗೀಚುತಿದ್ದ ಚಿತ್ರಗಳನ್ನು ನೋಡಿ ಇನ್ನೂ ಬರೆಯಲು ಪ್ರೇರೇಪಿಸುತ್ತಿದ್ದರು. ಹುಟ್ಟೂರಿನಲ್ಲಿ ಬಾಲ್ಯ ಶಿಕ್ಷಣ ಮುಗಿಸಿದ ನಂತರ ಮುಂದಿನ ವ್ಯಾಸಂಗಕ್ಕಾಗಿ ಹರಸೂರಿಗೆ ಹೋಗಬೇಕಾಯಿತು. ಹರಸೂರು ಬೇನೂರಿನಿಂದ ಸುಮಾರು ಹತ್ತು ಕಿ.ಮೀ ದೂರದಲ್ಲಿತ್ತು. ಬೇನೂರಿನಿಂದ ಹರಸೂರಿಗೆ ಹೋಗಲು ಯಾವುದೇ ರೀತಿಯ ಬಸ್ಸಿನ ವ್ಯವಸ್ಥೆ ಇರಲಿಲ್ಲ. ಹಾಗಾಗಿ ದಿನನಿತ್ಯ ನಡೆದುಕೊಂಡೇ ಹೋಗಬೇಕಾಗಿತ್ತು. ಹರಸೂರಿನ ಶಾಲೆಯಲ್ಲಿ ಪ್ರೌಢಶಿಕ್ಷಣವನ್ನು ಮುಗಿಸಿದ ಬಿರಾದಾರರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೇರೆ ಕಡೆಗೆ ಹೋಗಬೇಕಾಯಿತು.

ಬಿರಾದಾರರು ೧೯೭೬ರಲ್ಲಿ ಹರಸೂರಿನ ಸರಕಾರಿ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು, ಆ ವರ್ಷ ಹತ್ತನೇ ತರಗತಿಯಲ್ಲಿ ಐವತ್ತು ಜನ ವಿದ್ಯಾರ್ಥಿಗಳು ಇದ್ದರು. ಈ ಐವತ್ತು ಜನ ವಿದ್ಯಾರ್ಥಿಗಳಲ್ಲಿ ತೇರ್ಗಡೆಯಾದವರು ಕೇವಲ ಇಬ್ಬರು ವಿದ್ಯಾರ್ಥಿಗಳು ಮಾತ್ರ. ತೇರ್ಗಡೆಯಾದ ಆ ಇಬ್ಬರು ವಿದ್ಯಾರ್ಥಿಗಳಲ್ಲಿ ಬಿರಾದಾರರು ಒಬ್ಬರು. ಈ ಯಶಸ್ಸು ಅವರ ಬಗೆಗೆ ಅನೇಕ ಜನರಲ್ಲಿ ಕುತೂಹಲವನ್ನುಂಟು ಮಾಡಿತ್ತು. ಇವರ ಪ್ರತಿಭೆ ಮತ್ತು ಕಲಾಭಿರುಚಿಯನ್ನು ಅರಿತ ಪೋಷಕರು ಹಾಗೂ ಗುರುಗಳು ಉನ್ನತ ವ್ಯಾಸಂಗಕ್ಕಾಗಿ ಗುಲಬರ್ಗಾಕ್ಕೆ ಕಳುಹಿಸಿಕೊಟ್ಟರು. ಗುಲಬರ್ಗಾದ ಶರಣಬಸವೇಶ್ವರ

ಕಲಾ ಮಹಾವಿದ್ಯಾಲಯದಲ್ಲಿ ಪ್ರಥಮ ಪಿಯುಸಿಯಲ್ಲಿ ಚಿತ್ರಕಲೆಯನ್ನು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡರು. ಅದೇ ಸಮಯದಲ್ಲಿ ಶರಣಬಸವೇಶ್ವರ ಕಲಾಮಹಾವಿದ್ಯಾಲಯಲದಲ್ಲಿ ಚಿತ್ರಕಲಾವಿದರಾದ ಜೆ.ಎಸ್. ಖಂಡೇರಾವ್ ಅವರ ಪರಿಚಯವಾಯಿತು. ಬಿರಾದಾರರು ಕಲೆಯ ಬಗೆಗೆ ತಮಗಿರುವ ಆಸಕ್ತಿಯನ್ನು ಖಂಡೇರಾವ ಅವರ ಎದುರಿಗೆ ಮುಕ್ತವಾಗಿ ಹೇಳಿಕೊಂಡರು. ಇವರ ಕಲಾಸಕ್ತಿಯನ್ನು ಮೆಚ್ಚಿಕೊಂಡ ಖಂಡೇರಾವ್ ಅವರು ಅನೇಕ ರೀತಿಯ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು.

ಬಿರಾದಾರರು ಮತ್ತು ಅವರ ಸ್ನೇಹಿತರು ಕಲಾಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳಬೇಕೆಂಬ ಗುರಿಯನ್ನು ಇಟ್ಟುಕೊಂಡು ಕಲಾಕ್ಷೇತ್ರದ ಹೊಸ ಹೊಸ ಸಾಧ್ಯತೆಗಳ ಕುರಿತು ಚಿಂತನ ಮಂಥನ ನಡೆಸುತ್ತಿದ್ದರು. ಈ ಬಗೆಯ ಚರ್ಚೆಗಳಿಂದ ಕಲೆಯಲ್ಲಿ ಆಳವಾಗಿ ಇಳಿಯಲು ಸಾಧ್ಯವಾಯಿತು. ಖಂಡೇರಾವ ಅವರ ಮಾರ್ಗದರ್ಶನದಲ್ಲಿ ಸ್ಕೆಚ್ಚಿಂಗ್ ಮಾಡಲು ಸಹಪಾಠಿಗಳಾದ ಶಂಕರ ನವಲಬಾ, ಜಗದೇವ ಗಾಜರೆ ಮತ್ತು ರಘುಪಾಲರೆಡ್ಡಿ ಇವರ ಜೊತೆಯಲ್ಲಿ ನಗರದ ವಿವಿಧ ಸ್ಥಳಗಳಿಗೆ ಹೋಗಿ ದಿನನಿತ್ಯ ನೂರಕ್ಕೂ ಹೆಚ್ಚು ಸ್ಕೆಚ್ಚುಗಳನ್ನು ಮಾಡುತ್ತಿದ್ದರು. ಬೆಳಗ್ಗೆ ನಿಸರ್ಗ ಚಿತ್ರಗಳನ್ನು ಜಲವರ್ಣದಲ್ಲಿ ಚಿತ್ರಿಸಿ ದೈನಂದಿನ ಡೈರಿ ಪೂರ್ತಿಗೊಳಿಸುತ್ತಿದ್ದರು. ಇದು ಬಿರಾದಾರ ಮತ್ತು ಅವರ ಗೆಳೆಯರ ನಿತ್ಯ ಕಾಯಕವಾಗಿತ್ತು. ಎಂತಹ ಪರಿಸ್ಥಿತಿಯಲ್ಲಿಯೂ ಈ ಕೆಲಸವನ್ನು ತಪ್ಪದೆ ಮಾಡಬೇಕೆಂಬುದು ಈ ಗೆಳೆಯರ ನಡುವಿನ ಒಪ್ಪಂದವಾಗಿತ್ತು. ಹೀಗೆ ನಿರಂತರ ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ತಮ್ಮ ಬೆಳವಣಿಗೆಯನ್ನು ಕಂಡುಕೊಂಡರು.

ಕಲೆ ಎಂಬುದು ಅವರ ಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿತು. ಗೆಳೆಯರ ನಡುವಿನ ಒಪ್ಪಂದದಂತೆ ಇದು ತಪ್ಪದ ಕಾರ್ಯವಾಗಿತ್ತು. ಚಿತ್ರಗಳನ್ನು ಡೈರಿಯಲ್ಲಿ ಬಿಡಿಸದಿದ್ದರೆ ದಂಡ ಹಾಕಲಾಗುತಿತ್ತು. ಬಿಡಿಸಿದ ಚಿತ್ರಗಳನ್ನು ಖಂಡೇರಾವ್ ಅವರಿಗೆ ತೋರಿಸಿ ಮಾರ್ಗದರ್ಶನ ಪಡೆಯುತ್ತಿದ್ದರು. ಇವರ ಕಲಾಸಕ್ತಿಯನ್ನು ಗಮನಿಸಿದ ಖಂಡೇರಾವ್ ಅವರು ಬೆನ್ನು ತಟ್ಟಿ ಪ್ರೋತ್ಸಾಹಿಸುತ್ತಿದ್ದರು. ಖಂಡೇರಾವ್ ಅವರು ಸೂಚಿಸಿದ ಸಲಹೆಗಳನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದ ಬಿರಾದಾರ ಅವರು ಕಲಾಕೃತಿ ನಿರ್ಮಾಣದ ಸಂದರ್ಭದಲ್ಲಿ ಖಂಡೇರಾವ್ ಅವರ ಸಲಹೆಯನ್ನು ಬಳಸಿಕೊಳ್ಳುತ್ತಿದ್ದರು. ಖಂಡೇರಾವರು ಸೂಚಿಸಿದಂತೆ ಸೂಕ್ತ ತಯಾರಿ ಮಾಡಿಕೊಂಡು ಅಭ್ಯಸಿಸಿದ ಬಿರಾದಾರರು ಸೊಲ್ಲಾಪುರದ ಶ್ರೀ ಸಿದ್ರಾಮೇಶ್ವರ ಹೈಸ್ಕೂಲಿನಲ್ಲಿ 'ಎ' ಗ್ರೇಡ್‌ನೊಂದಿಗೆ ಉತ್ತೀರ್ಣರಾದರು. ತದನಂತರ ೧೯೭೭ರಲ್ಲಿ ಕಲಬುರಗಿಯ ಪ್ರತಿಷ್ಠಿತ ಕಲಾ ಸಂಸ್ಥೆ ದಿ ಐಡಿಯಲ್ ಫೈನ್ ಆರ್ಟನಲ್ಲಿ ಡಿ.ಎಂ.ಸಿ ಕೋರ್ಸಿಗೆ ಪ್ರವೇಶ ಪಡೆದುಕೊಂಡರು. ಆ ಸಂಸ್ಥೆಯಲ್ಲಿ ಖ್ಯಾತ ಕಲಾವಿದರಾದ ವಿ.ಜಿ. ಅಂದಾನಿ, ಎಂ.ಬಿ. ಲೋಹಾರ, ಬಸವರಾಜ ಉಪ್ಪಿನ ಮುಂತಾದವರು ಬಿರಾದಾರರ ಚಿತ್ರಕಲೆಯ ಓರೆ-ಕೋರೆಗಳನ್ನು ತಿದ್ದಿ ಮಾರ್ಗದರ್ಶನ ನೀಡಿದರು. ಬಿರಾದಾರರ ಜೊತೆಗೆ ಚಿತ್ರಕಲೆಯಲ್ಲಿ ಅಭ್ಯಸಿಸಿದ ಮೋಹನ ಸೀತನೂರು, ಬಸವರಾಜ ಜಾನಿ, ಕಿಶೋರ ಕುಮಾರ ಮೊದಲಾದವರು ಪ್ರಸಿದ್ಧ ಕಲಾವಿದರಾಗಿ ಖ್ಯಾತಿಗಳಿಸಿದ್ದಾರೆ.

ಖಂಡೇರಾವರು ಬಿರಾದಾರರಿಗೆ ಕಲೆಯ ಅರಿವಿನ ನೆರವನ್ನು ನೀಡುವುದರ ಜೊತೆಗೆ ಆರ್ಥಿಕ ನೆರವನ್ನು ನೀಡಿ ಪ್ರೋತ್ಸಾಹಿಸಿದರು. ಗುರುಶಿಷ್ಯರ ನಡುವಿನ ಬಾಂಧವ್ಯ ಅತ್ಯಂತ ಸಮೀಪವಾದಂತೆ ಬಿರಾದಾರರು

ಗುರುಗಳ ಅಚ್ಚುಮೆಚ್ಚಿನ ಶಿಷ್ಯರಾದರು. ಇದರ ಪರಿಣಾಮವಾಗಿ ಖಂಡೇರಾವ್ ಅವರು ಬಿರಾದಾರ ಅವರಿಗೆ ಕಲೆಯ ಸೂಕ್ಷ್ಮತೆಗಳನ್ನು ಸಮೀಪದಿಂದ ತಿಳಿಸಿಕೊಟ್ಟರು.

ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಬಿ.ಎ ಪದವಿಯಲ್ಲಿ ಚಿತ್ರಕಲೆಯನ್ನು ಐಚ್ಛಿಕ ವಿಷಯವಾಗಿ ಬೋಧಿಸುತ್ತಿದ್ದರು. ೧೯೭೦ರಲ್ಲಿ ಬಿರಾದಾರರು ಇದೇ ಕಾಲೇಜಿನಲ್ಲಿ ಬಿ.ಎ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದರು. ಅದೃಷ್ಟವೇನೋ ಎಂಬಂತೆ ಬಿರಾದಾರರಿಗೆ ಮತ್ತೊಮ್ಮೆ ಖಂಡೇರಾವ್ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡುವ ಅವಕಾಶ ದೊರೆಯಿತು. ಬಿರಾದಾರರಿಗೆ ಪಠ್ಯಕ್ರಮದ ಭೋಧನೆಯೊಂದಿಗೆ ತಮ್ಮ ಮುಂಬೈ ನಗರದ ಪರಿಸರ, ಜೆ.ಜೆ. ಸ್ಕೂಲ್ ಆರ್ಟನ ವಿಶೇಷತೆ ಅವರ ಚಿತ್ರಕಲಾ ಗುರುಗಳಾದ ದಂಡಾವತಿಮಠ ಅವರ ಕುರಿತು ತಿಳಿಸಿದ ವಿವಿರಗಳು ಬಿರಾದಾರವರ ಮೇಲೆ ಪ್ರಭಾವ ಬೀರಿ ಕಲಾಕ್ಷೇತ್ರಕ್ಕೆ ದುಡಿಯಲು ಅವರನ್ನು ಪ್ರೇರೇಪಿಸಿದವು. ಜೊತೆಗೆ ಕಲಬುರಗಿಯ ಸಮೀಪದಲ್ಲಿರುವ ಐತಿಹಾಸಿಕ ಮತ್ತು ಕಲಾಕುಸುರಿಗಳಿಂದ ಖ್ಯಾತವಾದಿದ್ದ ಕಾಳಗಿ, ಹಂಪಿ, ಐಹೊಳೆ, ಪಟ್ಟದಕಲ್ಲು ಮೊದಲಾದ ಸ್ಥಳಗಳಿಗೆ ಕರೆದುಕೊಂಡು ಹೋಗಿ ಚಿತ್ರರಚನೆಯಲ್ಲಿ ತೊಡಗಿಸುತ್ತಿದ್ದರು.

೧೯೮೧ರಲ್ಲಿ ಚಿತ್ರಕಲೆಯಲ್ಲಿ ಡಿಪ್ಲೋಮಾ ವ್ಯಾಸಂಗ ಮಾಡಲು ಬೆಂಗಳೂರಿಗೆ ಹೋದರು. ಬೆಂಗಳೂರಿನ ಕೇನ್ ಕಲಾಶಾಲೆಯಲ್ಲಿ ಚಿತ್ರಕಲಾ ಡಿಪ್ಲೋಮಾಗೆ ಪ್ರವೇಶ ಪಡೆದರು. ಆರ್.ಎಂ. ಹಡಪದರು ಇದೇ ಶಾಲೆಯಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಗ ಬಿರಾದಾರರಿಗೆ ಹಡಪದರ ಪರಿಚಯವಾಯಿತು. ಹಡಪದರ ಪೋರ್ಟ್ರೇಟ್, ಲ್ಯಾಂಡ್‌ಸ್ಕೇಪ್, ಡ್ರಾಯಿಂಗ್, ಸ್ಕೆಚ್ ಮೊದಲಾದ ಕಲಾಕೃತಿಗಳನ್ನು ವಿಕ್ಷಿಸಿ ಕಲಾಕೃತಿಯ ವಿನ್ಯಾಸ, ಬಣ್ಣಗಳ ಬಳಕೆ ಕಂಡು ಅವುಗಳ ಪ್ರಭಾವಕ್ಕೆ ಒಳಗಾದರು. ಅಲ್ಲದೆ ಬಿರಾದಾರರು ಹಡಪದರ ಜೊತೆ ಕಲೆಯ ಕುರಿತು ಆಗಾಗ ಚರ್ಚೆಗಳನ್ನು ಮಾಡುತ್ತಿದ್ದರು. ಇದು ಬಿರಾದಾರರಲ್ಲಿ ಕಲೆಯ ಸೂಕ್ಷ್ಮತೆಗಳನ್ನು ತಿಳಿಯಲು ಸಹಕಾರಿಯಾಯಿತು.

ಹಡಪದರು ತರಗತಿಯಲ್ಲಿ ಭೋಧನೆ ಮಾಡುವುದರ ಜೊತೆಗೆ ಕೆಲವು ಕಲಾಕೃತಿಗಳ ಪ್ರಾಯೋಗಿಕವಾಗಿ ರಚನೆಯನ್ನು ಮಾಡಿ ತೋರಿಸುತ್ತಿದ್ದರು. ಎಲ್ಲಾ ಕಲಾಶೈಲಿಯಲ್ಲಿ ಪ್ರಬುದ್ಧತೆಯನ್ನು ಪಡೆದವರಾಗಿದ್ದರು. ಜೊತೆಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷತೆ ಚಿತ್ರಗಳು ಬಿಡುವಿಲ್ಲದೆ ವಿದ್ಯಾರ್ಥಿಗಳಿಗೆ ಹೇಳಿಕೊಡುತ್ತಿದ್ದರು. ವಿದ್ಯಾರ್ಥಿಗಳ ಜೊತೆಗೆ ಸಂಕೋಚವಿಲ್ಲದೆ ಆತ್ಮೀಯತೆಯಿಂದ ಬೆರೆಯುತ್ತಿದ್ದರು. ಅಲ್ಲದೆ ವಿದ್ಯಾರ್ಥಿಗಳಿಗೆ ಸದಾ ಮಾರ್ಗದರ್ಶನ ಮಾಡುತ್ತಿದ್ದರು. ಹಡಪದರು ಅತ್ಯಂತ ಸರಳರೂ, ಸಜ್ಜನಶೀಲರೂ ಆಗಿದ್ದರು. ಕಲೆಯಲ್ಲಿ ಶ್ರೀಮಂತ ಅನುಭವವನ್ನು ಪಡೆದುಕೊಂಡಿದ್ದ ಹಡಪದರು ಉತ್ತಮ ಉಪನ್ಯಾಸಕರೂ ಆಗಿದ್ದರು. ಹೀಗಾಗಿ ವಿದ್ಯಾರ್ಥಿಗಳ ನೆನಪಿನಂಗಳದಲ್ಲಿ ಎಂದೂ ಮರೆಯಲಾಗದ ವ್ಯಕ್ತಿಯಾಗಿ ಉಳಿದರು. ಒಟ್ಟಾರೆ ಕೆನ್ ಕಲಾಶಾಲೆಯಲ್ಲಿ ಬಿರಾದಾರರ ಕಲಾಕೃತಿಗಳ ರಚನೆಗೆ ಪ್ರೇರಣೆ ಮತ್ತು ಪ್ರೋತ್ಸಾಹ ದೊರೆಯಿತು. ದೆಹಲಿಯಲ್ಲಿ ಟ್ರೈನಾಲೆ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಲಾಯಿತು. ಇದು ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನವಾದ್ದರಿಂದ ಶ್ರೇಷ್ಟ ಕಲಾವಿದರು ಮತ್ತು ಅವರ ಕಲಾಕೃತಿಗಳು ಇಲ್ಲಿ ಪ್ರದರ್ಶನಗೊಂಡವು. ಕೆನ್ ಕಲಾಶಾಲೆಯ ವತಿಯಿಂದ ಬಿರಾದಾರರು ಮತ್ತು ಗೆಳೆಯ ಶಂಕರ ಅವರಿಗೆ ದೆಹಲಿಯಲ್ಲಿ ಏರ್ಪಡಿಸಲಾದ ಟ್ರೈನಾಲೆ ರಾಷ್ಟ್ರಮಟ್ಟದ ಚಿತ್ರಕಲಾ ಪ್ರದರ್ಶನದಲ್ಲಿ

ಪಾಲ್ಗೊಳ್ಳಲು ದೆಹಲಿಗೆ ಹೋಗುವ ಅವಕಾಶ ದೊರೆಯಿತು. ಶಂಕರ ಮತ್ತು ಬಿರಾದಾರರು ಕೂಡಿ ಯೂಥ್ ರೈಟರ್ಸ್ ಮತ್ತು ಆರ್ಟಸ್ಟ್ ಬೆಂಗಳೂರಿನಲ್ಲಿ ಒಂದು ವಾರ ಜಲವರ್ಣ ಚಿತ್ರಕಲಾ ಪ್ರದರ್ಶನದಲ್ಲಿ ಭಾಗವಹಿಸಿದರು.

ಕಲಬುರಗಿಯಲ್ಲಿ ಪೂಜ್ಯ ಡಾ. ಶರಣಬಸಪ್ಪ ಅಪ್ಪರವರು ಚಿತ್ರಕಲಾ ಶಿಕ್ಷಣವನ್ನು ಸ್ನಾತಕೊತ್ತರ ಮಟ್ಟದಲ್ಲಿ ಪ್ರಾರಂಭಿಸಲು ಯೋಚಿಸಿ ಗುಲಬರ್ಗಾ ವಿಶ್ವವಿದ್ಯಾಲದಿಂದ ೧೯೮೨ರಲ್ಲಿ ಮಾನ್ಯತೆ ಪಡೆದರು. ದಕ್ಷಿಣ ಭಾರತದಲ್ಲಿಯೇ ಪ್ರಥಮವಾಗಿ ವಿಶ್ವವಿದ್ಯಾಲಯ ಮಟ್ಟದಲ್ಲಿ ಎಂ.ಎ ಕೋರ್ಸ್‌ನ್ನು ಪ್ರಾರಂಭಿಸಿದರು. ಪೂಜ್ಯ ಡಾ. ಅಪ್ಪ ಅವರು ಜೆ.ಎಸ್. ಖಂಡೇರಾವ್‌ರವರನ್ನು ನಿರ್ದೇಶಕರನ್ನಾಗಿ ನೇಮಿಸಿದರು. ಅದೇ ವರ್ಷ ಎಂ.ಎ. ಕಲಾ ಪದವಿಗೆ ಏಳು ಜನ ವಿದ್ಯಾರ್ಥಿಗಳು ಪ್ರವೇಶ ಪಡೆದರು. ಅವರುಗಳೆಂದರೆ, ವಿ. ಬಿ. ಬಿರಾದಾರ, ಶಂಕರ ನವಲಬ, ರಘುಪಾಲರೆಡ್ಡಿ, ಶ್ರೀಮತಿ ಲಕ್ಷ್ಮೀ ಜಂಬಲದಿನ್ನಿ, ಶ್ರೀಮತಿ ಚಿತ್ರಲೇಖ ಪಾಟೀಲ, ಶ್ರೀಮತಿ ಶಾಂತಲಾ ನಿಷ್ಠಿ ಮತ್ತು ಧನಂಜಯರವರು. ಸಮಾನ ಮನಸ್ಥಿತಿಯವರಾಗಿದ್ದ ಬಿರಾದಾರ ಮತ್ತು ಅವರ ಗೆಳೆಯರು ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಂಡರು. ಹಗಲಿರುಳೆನ್ನದೆ ಕಲೆಯ ಅಭ್ಯಾಸದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಇವರ ಕಲಾಭಿರುಚಿಗೆ ಭೋಧಕರು ಉತ್ತೇಜನ ನೀಡುತ್ತಿದ್ದರು. ಹೊಸ ಹೊಸ ಕಲಾಕೃತಿಗಳನ್ನು ನಿರ್ಮಿಸಲು ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸುತ್ತಿದ್ದರು. ಕಲಾಕೃತಿ ಪ್ರದರ್ಶನ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ಮತ್ತೊಬ್ಬ ಗುರುಗಳಾದ ಎ.ಎಸ್. ಪಾಟೀಲರು ಕಲೆಯ ಇತಿಹಾಸವು, ಸೌಂದರ್ಯಶಾಸ್ತ್ರ ಮನೋವಿಜ್ಞಾನ ಮತ್ತು ಶರಣಸಾಹಿತ್ಯ ಭಾರತೀಯ ಪರಂಪರೆ ಮುಂತಾದವುಗಳ ಬಗ್ಗೆ ಉಪನ್ಯಾಸವನ್ನು ನೀಡಿ ವಿದ್ಯಾರ್ಥಿಗಳಲ್ಲಿ ಚೈತನ್ಯವನ್ನು ಮೂಡಿಸುತ್ತಿದ್ದರು. ಇದಲ್ಲದೆ ಅನೇಕ ಅತಿಥಿ ಉಪನ್ಯಾಸಕರ ಮಾರ್ಗದರ್ಶನಗಳು ಇವರಿಗೆ ತುಂಬಾ ಪ್ರಯೋಜನಕಾರಿಯಾಗಿದೆ.

ಶಂಕರ ಪಳಸಿಕರ್ ಮತ್ತು ಮೃಗಾಂಕ ಜೋಷಿ ಮುಂಬೈನ ಸರ್ ಜೆ.ಜೆ. ಕಲಾ ಶಾಲೆಯಲ್ಲಿ ಪ್ರಾಧ್ಯಾಪಕರರು ಭಾವಚಿತ್ರ ಮತ್ತು ಪ್ರಾತ್ಯಕ್ಷಿತೆ ಮಾಡಲು ಕಲಬುರಗಿಯಲ್ಲಿ ವಾರಗಟ್ಟಲೆ ಇರುತ್ತಿದ್ದರು. ಇದಲ್ಲದೆ ಎಸ್.ಕೆ. ಲಾಹೋಟಿ, ಹೈದರಾಬಾದಿನ ಗೌರಿಶಂಕರ ಜೆ.ಎನ್.ಟಿ ಚಿತ್ರ ಶಾಲೆಯ ಚಿತ್ರಕಲಾ ಪ್ರಾಧ್ಯಾಪಕರು ಅನೇಕ ಸಲ ಚಿತ್ರ ರಚನೆಯ ಪ್ರಾತ್ಯಕ್ಷತೆ ಮತ್ತು ಗ್ರಾಫಿಕ್ ಕಲೆಯ ಪ್ರಾತ್ಯಕ್ಷತೆ ನೀಡುತ್ತಿದ್ದರು. ಆವಾಗ ಗ್ರಾಫಿಕ್ಸ್ ವಿಭಾಗದಲ್ಲಿ ಲಿಥೋ ಮತ್ತು ಎಚ್ಚಿಂಗ್ ಉಪನ್ಯಾಸಕ್ಕಾಗಿ ಎಸ್.ಎಸ್. ಮುನ್ನೊಳ್ಳಿ ಹೈದರಾಬಾದ ಅತಿಥಿ ಉಪನ್ಯಾಸಕರಾಗಿದ್ದರು. ಭಿತ್ತಿ ಚಿತ್ರರಚನೆ(ಮ್ಯೂರಲ್ ಪೇಂಟಿಂಗ್) ಬೋಧಿಸಲು ಪೀಟರ್ ಲೂಯಿಸ್, ಮಾಜಿ ಅಧ್ಯಕ್ಷರು ಕರ್ನಾಟಕ ಲಲಿತಕಲಾ ಅಕಾಡೆಮಿ ಇವರು ತಂತ್ರಗಳ ಬಗ್ಗೆ ಉಪನ್ಯಾಸ ನೀಡಿದ್ದಲ್ಲದೆ, ಎರಡು ಮ್ಯೂರಲ್‌ಗಳು ಅವರೊಡನೆ ಕೂಡಿ ಮಾಡಿದ ಅನುಭವ ಅವಿಸ್ಮರಣೀಯ.

ಪ್ರೇಸ್ಕೋ ಮಾಧ್ಯಮದಲ್ಲಿ ಒಂದು ನಟರಾಜ ಹಾಗೂ ಶರಣಬಸವೇಶ್ವರ ಜೀವನ ಚರಿತ್ರೆಯ ಮ್ಯೂರಲ್ ಎಗ್ಗ ಎಮಲ್ಸನ್ ಪದ್ಧತಿಯ ಮ್ಯೂರಲ್ ಮಾಡಲು ಮಾರ್ಗದರ್ಶನ ನೀಡಿದರು. ಇನ್ನೊಂದು ಮ್ಯೂರಲ್ ಮಾಡಲು ಖ್ಯಾತ ಭಿತ್ತಿ ಚಿತ್ರ ಕಲಾವಿದರಾದ ಮುಂಬೈ ಪ್ರಭುರವರು ಬಂದಿದ್ದರು. ಇವರ ಮಾರ್ಗದರ್ಶನದಲ್ಲಿ ಟೆಂಪರಾ ಭಿತಿಚಿತ್ರ ರಚನೆಯಾಯಿತು. ಇದೇ ಅವಧಿಯಲ್ಲಿ ಆರ್.ಎಂ. ಹಡಪದರವರು ಭಾವಚಿತ್ರ ಮತ್ತು ಸಂಯೋಜನೆ ಚಿತ್ರಗಳ ಪ್ರಾತ್ಯಕ್ಷತೆ ಮತ್ತು ಡಿ.ಎ. ಶೆಟ್ಟಿಯವರು ಲೈಫ್ ಪೇಂಟಿಂಗ್ ಮತ್ತು ಭಾವಚಿತ್ರ

ಪ್ರಾತ್ಯಕ್ಷತೆ ನೀಡಿದರು. ನಾಗಪೂರದಿಂದ ವಾಮನ್ ಚಿಂಚೋಳಕರ್ ಖ್ಯಾತ ಕಲಾವಿದರು ಬಂದು ಸಂಯೋಜನೆಯ ಬಗ್ಗೆ ಉಪನ್ಯಾಸ ಮತ್ತು ಪ್ರಾತ್ಯಕ್ಷತೆ ನೀಡುತ್ತಿದ್ದರು.

ಬಿರಾದಾರರು ನಿಸರ್ಗ ಚಿತ್ರ ಕಲಾವಿದರಾಗಿದ್ದಾರೆ. ಇವರು ನಿಸರ್ಗದ ಅನೇಕ ಚಿತ್ರಗಳನ್ನು ರಚಿಸಿದ್ದಾರೆ. ನಿಸರ್ಗ ಚಿತ್ರಗಳ ಮೂಲಕವೇ ಅನೇಕ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಇವರಿಗೆ ಗ್ರಾಮಾಂತರ ಪ್ರದೇಶಗಳ ಚಿತ್ರ ರಚನೆಯ ಬಗ್ಗೆ ಹೆಚ್ಚು ಕುತೂಹಲವಿರುವುದನ್ನು ಅವರ ನಿಸರ್ಗ ಚಿತ್ರಗಳ ಮೂಲಕ ತಿಳಿದುಕೊಳ್ಳಬಹುದು. ಬಿರಾದಾರರು ನಿಸರ್ಗ ಚಿತ್ರಗಳನ್ನು ವಿದ್ಯಾರ್ಥಿ ದಿಶೆಯಿಂದ ಹಿಡಿದು ಇಲ್ಲಿಯವರೆಗೂ ರಚನೆಮಾಡುತ್ತಲೇ ಬಂದಿದ್ದಾರೆ. ಇವರು ಜಲವರ್ಣದಲ್ಲಿ ಸಾಕಷ್ಟು ನಿಸರ್ಗ ಚಿತ್ರಗಳನ್ನು ಚಿತ್ರಿಸಿದ್ದಾರೆ. ಕರ್ನಾಟಕದಲ್ಲಿ ಬೆಂಗಳೂರು, ಹಂಪಿ, ವಿಜಯಪುರ, ಯಾದಗಿರಿ, ಸುರಪುರ ಮತ್ತು ಕಲಬುರಗಿಯ ಸುತ್ತಮುತ್ತಲಿನ ಹಳ್ಳಿಗಳ ಅನೇಕ ನಿಸರ್ಗ ಚಿತ್ರಗಳನ್ನು ರಚಿಸಿದ್ದಾರೆ. ಮತ್ತು ವಿದ್ಯಾರ್ಥಿಗಳಿಗೂ ಒಳ್ಳೆಯ ಮಾರ್ಗದರ್ಶನವನ್ನು ನೀಡುತ್ತ ಪ್ರೋತ್ಸಾಹಿಸುತ್ತಾರೆ. ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಮೂಡಿಸುವುದಲ್ಲದೆ ಸ್ವತಃ ತಾವೇ ವಿದ್ಯಾರ್ಥಿಗಳ ಜೊತೆಗೂಡಿ ನಿಸರ್ಗ ಚಿತ್ರಗಳನ್ನು ಮಾಡುತ್ತಾರೆ.

ಚಿತ್ರ–೧೭. ಶ್ರೀಕೃಷ್ಣದೇವಾಲಯದ ಪ್ರವೇಶ ದ್ವಾರ

ಈ ಮೇಲಿನ ಶೀರ್ಷಿಕೆಯ ಕಟ್ಟಡವನ್ನು ಚಿತ್ರದ ವಸ್ತು–ವಿಷಯವನ್ನಾಗಿ ಮಾಡಿಕೊಂಡಿದ್ದಾರೆ. ಪ್ರವೇಶದ್ವಾರದ ಮೇಲಿರುವ ಶಿಖರವನ್ನು ಬಿಳಿ ಮಿಶ್ರಿತ ಕೆಂಪು, ಹಳದಿ ಮಿಶ್ರಿತ ಕೆಂಪು, ಕಡುಗೆಂಪು ಮತ್ತು ಕಡು ನೇರಳೆ ಬಣ್ಣಗಳಿಂದ ಚಿತ್ರಿಸಿದ್ದಾರೆ. ಶಿಖರದ ಕೆಳಗಿನ ಸಾಲು ಕಂಬಗಳ ಮಂಟಪವನ್ನು ಹಳದಿ, ತಿಳಿಹಳದಿ, ಹಳದಿ ಮಿಶ್ರಿತ ಬಿಳಿ, ಕಡುಹಸಿರು ಬಣ್ಣಗಳಿಂದ ಚಿತ್ರಿಸಿದ್ದಾರೆ. ಪ್ರವೇಶದ್ವಾರ ಮುಂದೆ ಇರುವ ಕಟ್ಟಡವನ್ನು ಹಳದಿ, ಹಸಿರು, ಕಡುಕಂದು, ನೀಲಿ ಮಿಶ್ರಿತ ಹಸಿರು ಬಣ್ಣದಿಂದ ರಚಿಸಿದ್ದಾರೆ. ನೆಲದ ಮೇಲೆ ಬಿಸಿಲು ಬಿದ್ದಿರುವ ಭಾಗವನ್ನು ತಿಳಿನೀಲಿ ಮತ್ತು ನೆರಳು ಬಿದ್ದಿರುವ ಭಾಗವನ್ನು ಕಡುನೀಲಿ ಬಣ್ಣದಿಂದ ರಚಿಸಿದ್ದಾರೆ. ಇವರ ನಿಸರ್ಗ ಚಿತ್ರಗಳಲ್ಲಿ ಬಿಸಿಲು ಮತ್ತು ನೆರಳಿನ ಭಾಗವನ್ನು ಅದ್ಭುತವಾಗಿ ಚಿತ್ರಿಸುವ ತಂತ್ರವನ್ನು ಕಾಣಬಹುದು. ದೂರದಲ್ಲಿ ಕಂದು ಬಣ್ಣದಿಂದ ಅಸ್ಪಷ್ಟವಾಗಿ ಕಾಣುವ ಬೆಟ್ಟವನ್ನು ಚಿತ್ರಿಸಿದ್ದಾರೆ.

ಚಿತ್ರ–೧೮. ಹಂಪಿಯ ಆಂಜನೆಯ ದೇವಸ್ಥಾನ

ಈ ಚಿತ್ರವು ಜಲವರ್ಣದಲ್ಲಿ ಚಿತ್ರಿಸಲಾಗಿದೆ. ದೇವಾಲಯವು ಚಿಕ್ಕದಾಗಿದ್ದು, ಹಳದಿ, ತಿಳಿಹಳದಿ, ಹಸಿರು, ಕಡುಹಸಿರು, ಮತ್ತು ನೀಲಿ ಬಣ್ಣದಿಂದ ಒಂದುಕಡೆಯ ಗೋಡೆಯನ್ನು ಚಿತ್ರಿಸಲಾಗಿದ್ದು ಇನ್ನೊಂದು ಕಡೆ ಗೋಡೆಯಗೆ ಯಾವ ಬಣ್ಣವು ಹಚ್ಚದೆ ಹಾಳೆಯೂ ಹಾಗೆಯೇ ಬಿಟ್ಟಿದ್ದಾರೆ. ಖಾಲಿ ಬಿಟ್ಟಿರುವ ಜಾಗವನ್ನು ಪ್ರಖರ ಬಿಸಿಲು ಬಿದ್ದಿರುವ ಹಾಗೆ ಕಾಣಿಸುತ್ತದೆ. ಈ ತಂತ್ರವು ಸುಲಭವಾಗಿ ಎಲ್ಲರಿಗೂ ಬರುವುದಿಲ್ಲ. ಇಂಥಹ ತಂತ್ರವನ್ನು ಬಿರಾದಾರರು ಕರಗತ ಮಾಡಿಕೊಂಡಿದ್ದಾರೆ. ಕಡುಕಂದು, ತಿಳಿಕಂದು, ಕಡುಹಸಿರು, ಹಸಿರು, ತಿಳಿ ಹಳದಿ ಬಣ್ಣಗಳಿಂದ ದೇವಸ್ಥಾನದ ಗೋಪುರವನ್ನು ಚಿತ್ರಿಸಿದ್ದಾರೆ. ದೇವಾಲಯದ ಮುಂದೆ ಹಸಿರು, ಕಡುಹಸಿರು ಕಂದುಗೆಂಪು, ಹಸಿರು ಮಿಶ್ರಿತ ನೀಲಿ ಬಣ್ಣದಿಂದ ಮರಗಳನ್ನು ಚಿತ್ರಿಸಿದ್ದಾರೆ.

ವಿ.ಬಿ. ಬಿರಾದಾರವರ ನಿಸರ್ಗ ಕಲಾಕೃತಿಗಳು





ಜಲವರ್ಣ ಶ್ರೀ ಕೃಷ್ಣ ದೇವಾಲಯದ ಪ್ರವೇಶ ದ್ವಾರ



ಜಲವರ್ಣ ಹಂಪಿಯ ಆಂಜನೇಯ ದೇವಸ್ಥಾನ

ದೇವಾಲಯದ ಮುಂದೆ ಇರುವ ಕಲ್ಲಿನ ನೆಲವನ್ನು ಕೆಂಪು ಮಿಶ್ರಿತ ಹಳದಿ, ಹಳದಿ ಮಿಶ್ರಿತ ಹಸಿರು, ಹಸಿರು ಮಿಶ್ರಿತ ನೀಲಿ ಬಣ್ಣಗಳಿಂದ ಚಿತ್ರಿತವಾಗಿದ್ದು, ದೇವಾಲಯದ ಹಿಂದಿರುವ ಬೆಟ್ಟವನ್ನು ನೀಲಿ ಬಣ್ಣದಿಂದ ಚಿತ್ರಿಸಲಾಗಿದ್ದು, ಆಕಾಶವನ್ನು ಮೇಲೆ ನೀಲಿ ಬಣ್ಣದಿಂದ ಚಿತ್ರಿಸಿ ಕೆಳಗೆ ಬರುತ್ತ ತಿಳಿನೀಲಿ ಬಣ್ಣವನ್ನು ಕುಂಚದ ಸಹಾಯದಿಂದ ಎಳೆಯಲಾಗಿದೆ. ವಿ.ಬಿ. ಬಿರಾದಾರ ರವರ ಏಕವ್ಯಕ್ತಿ, ಗುಂಪು ಪ್ರದರ್ಶನಗಳು, ಶಿಬಿರಗಳು ಮತ್ತು ಸಂದ ಪ್ರಶಸ್ತಿ ಪುರಸ್ಕಾರಗಳು ಈ ಕೆಳಗಿನಂತಿವೆ.

ಪ್ರಶಸ್ತಿಗಳು : ದಸರಾ ಕಲಾ ಪ್ರದರ್ಶನ ಮೈಸೂರು, ಕರ್ನಾಟಕದ ಲಲಿತಕಲಾ ಅಕಾಡೆಮಿ, ಬೆಂಗಳೂರು. ಆಲ್ ಇಂಡಿಯಾ ಚಿತ್ರಕಲಾ ಪ್ರದರ್ಶನ, ವಿಜಯಪುರ. ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ. ಆಲ್ ಇಂಡಿಯಾ ಚಿತ್ರಕಲಾ ಪ್ರದರ್ಶನ, ಭಾಲಕಿ. ರಾಜ್ಯ ಚಿತ್ರಕಲಾ ಪ್ರದರ್ಶನ, ಹುಬ್ಬಳ್ಳಿ. (ಮೇರಿಟ್). ಆಲ್ ಇಂಡಿಯಾ ಚಿತ್ರಕಲಾ ಪ್ರದರ್ಶನ, ನಾಗ್‌ಪೂರ್. (ಮೇರಿಟ್). ಹೈದರಾಬಾದ ಆರ್ಟ್ಸ್ ಸೋಸೈಟಿ, ಹೈದರಾಬಾದ (ಮೇರಿಟ್). ಮತ್ತು ಕಲಬುರಗಿ ಕಂಪು ಸೇರಿ ಒಟ್ಟು ಒಂಬತ್ತು ಪ್ರಶಸ್ತಿಗಳು ಲಭಿಸಿವೆ.

ಏಕವ್ಯಕ್ತಿ ಕಲಾ ಪ್ರದರ್ಶನಗಳು : ವೆಂಕಟಪ್ಪ ಆರ್ಟ ಗ್ಯಾಲರಿ, ಬೆಂಗಳೂರು. ಆರ್ಟ ಪ್ಲಾಝಾ ಗ್ಯಾಲರಿ, ಮುಂಬಯಿ. ಗ್ರಿಂಡ್‌ಲೇ ಬ್ಯಾಂಕ್ ಗ್ಯಾಲರಿ, ಮುಂಬಯಿ. ಅಪಿಜೇ ಆರ್ಟ ಗ್ಯಾಲರಿ, ನವದೆಹಲಿ. ತಾಜ ಆರ್ಟ ಗ್ಯಾಲರಿ, ಮುಂಬಯಿ. ಟುಡೇ ಆರ್ಟ ಗ್ಯಾಲರಿ, ಪುಣೆ. ಜಹಾಂಗೀರ ಆರ್ಟ ಗ್ಯಾಲರಿಗಳಲ್ಲಿ ಒಟ್ಟು ಎಂಟು ಬಾರಿ ಕಲಾ ಪ್ರದರ್ಶನಗಳನ್ನು ಮಾಡಿದ್ದಾರೆ.

ಗುಂಪು ಕಲಾ ಪ್ರದರ್ಶನಗಳು : ಬೆಂಗಳೂರು, ಮುಂಬಯಿ, ಚೆನ್ನೈ, ನವದೆಹಲಿ, ಹೈದರಾಬಾದ್, ಕಲಬುರಗಿ, ಚಿಕ್ಕಮಂಗಳೂರು ಮತ್ತು ಪುಣೆ ಹೀಗೆ ೨೦ಕ್ಕೂ ಹೆಚ್ಚು ಗುಂಪು ಕಲಾ ಪ್ರದರ್ಶನಗಳನ್ನು ಮಾಡಿದ್ದಾರೆ.

ಕಲಾಶಿಬಿರಗಳು : ಬೆಂಗಳೂರು, ಮುಂಬಯಿ, ಮೈಸೂರು, ಗದಗ್, ಹುಬ್ಬಳ್ಳಿ, ವಿಜಯಪುರ, ರಾಯಚೂರ, ಧಾರವಾಡ, ಮಂಡ್ಯ, ರಾಜಸ್ಥಾನ್, ಪಂಜಾಬ್, ಚಿಕ್ಕಮಂಗಳೂರು ಹೀಗೆ ೧೭ ಕಲಾಶಿಬಿರಗಳಲ್ಲಿ ಭಾಗವಹಿಸಿದ್ದಾರೆ.

□□□

ಅಧ್ಯಾಯ : ಆರು

ನಿಸರ್ಗ ಚಿತ್ರಕಲೆಯ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿ

ಮಾನವನ ಮನಸ್ಸು ನೂರಾರು ಕೆಲಸ, ಯೋಚನೆಗಳಿಂದ ತುಂಬಿಕೊಂಡು ಇರುತ್ತದೆ. ಆ ಗೊಂದಲದಿಂದ ತಪ್ಪಿ ಆತ ಯಾವುದಾದರೊಂದು ಅನುಭವವನ್ನು ಕುರಿತು ಧ್ಯಾನಮಾಡುವುದಕ್ಕೆ ತಕ್ಕ ಆವರಣ ಬೇಕಾಗುತ್ತದೆ. ಮನಸ್ಸಿಗೆ ನೆಮ್ಮದಿ ಬೇಕಾಗುತ್ತದೆ. ನಿಸರ್ಗದ ಶೋಭೆಯನ್ನು ನೋಡುವಾಗಲೇ, ಗಾನದ ಇಂಪಿನಲ್ಲಿ ತಲ್ಲೀನವಾಗುವುದರಿಂದಲೋ, ಇನ್ನೊಂದು ಕಲಾಸೃಷ್ಟಿಯನ್ನು ಕಂಡು ಆನಂದ ಮುಖಿಯಾಗಿರುವಾಗಲೋ ಕಟುವಾದ ಯಾವುದೊಂದು ಅನುಭವದಿಂದಲೋ ನಮ್ಮ ಮನಸ್ಸು ಏಕಾಗ್ರಗೊಳ್ಳುವುದುಂಟು. ಆಗ ತನ್ನ ಅನುಭವದ ಚಿತ್ರ, ಎಷ್ಟು ಹಿಂದೆ ನಡೆದ ಘಟನೆಯಾದರೂ ಒಮ್ಮೆಗೆ ಕಂಗೊಳಿಸುತ್ತದೆ. ಅದರ ಹಿಂದು ಮುಂದುಗಳೆಲ್ಲ ಚಿತ್ರ ಪಂಕ್ತಿಯಂತೆ ಕಣ್ಣೆದುರು ಕುಣಿದಾಡುತ್ತವೆ. ಇದನ್ನೇ ಕಲಾವಿದನ "ದರ್ಶನ" ಎನ್ನಬಹುದು. ಆತ ಆಗ ಉದ್ದೇಶಪೂರ್ವಕವಾಗಿಯೇ, ಒಂದು ಕವನ ಬರೆಯುವುದಕ್ಕೋ, ನಾಟಕ, ಕಾದಂಬರಿಗಳ ಸೃಷ್ಟಿಗೋ, ಚಿತ್ರ ನಿರ್ಮಾಣಕ್ಕೋ, ಸಂಗೀತ ರಚನೆಗೋ ಕುಳಿತುಕೊಳ್ಳುತ್ತಾನೆ. ಮನಸ್ಸನ್ನು ಆವರಿಸಿದ ಈ ದರ್ಶನ ಬಲವಾಗಿದ್ದರೆ, ಸ್ವಾಭಾವಿಕವಾಗಿ ಆತ ಭಾವಾವೇಶದಲ್ಲಿ ತಲ್ಲೀನನಾಗುತ್ತಾನೆ. ತನ್ನ ಧರ್ಶನದ ಸ್ಥೂಲರೂಪ ಅವನ ಕಣ್ಮುಂದೆ ಕುಣಿದಾಡುತ್ತದೆ. ಕಾವ್ಯವೆಂದರೇ ಕವನ ಸಂದೇಶ ಚಿತ್ರವಾದರೆ ಚಿತ್ರವಸ್ತು, ಅದರ ಮುಖ್ಯ ರೇಖೆಗಳು–ಗೀತವಾದರೆ ಭಾವನಾ ಲಹರಿ–ಕಾದಂಬರಿಯಾದರೆ ಮುಖ್ಯ ಪಾತ್ರಗಳು, ಸನ್ನಿವೇಶಗಳು–ಶಿಲ್ಪವಾದರೆ ಅದರ ಬಹಿರಾಕಾರ, ಅದರ ಅಂತರಂಗ– ಇವೆಲ್ಲ ಅವನಿಗೆ ಗೋಚರವಾಗುತ್ತವೆ. ತರ್ಕ, ಉದ್ದೇಶ, ಚಿಂತನೆ ಇವುಗಳನ್ನು ಆತ ಎಳೆದು ತಂದು ಸೇರಿಸಬೇಕಾಗಿಲ್ಲ. ಅವನ ದರ್ಶನ ಆಳವಾಗಿದ್ದರೆ– ತನಗೆ ಬೇಕಾದ ಸಾರವನ್ನು, ಪ್ರತಿ ವಿಚಾರಕ್ಕೆ ತಕ್ಕ ಅಲಂಕಾರಗಳನ್ನು, ಪೋಷಕ ದ್ರವ್ಯಗಳನ್ನು ಅನುಭವದಿಂದ ಸೆಳೆದುಕೊಂಡು ಬೆಳೆಯುತ್ತದೆ. ಆ ಕಾಲದಲ್ಲಿ ಅವನ ಊಹೆ ಅವನನ್ನೇ ಬೆರಗುಗೊಳಿಸುವ ಚಿತ್ರಣಕ್ಕೆ ಸಹಾಯಕವಾಗುತ್ತದೆ, ಆದರೆ ಇವೆಲ್ಲ ಅವನ ಸತ್ಯಾನುಭವಗಳಾಗಿರಬೇಕು. ಜೀವನದಲ್ಲಿ ಒಂದಲ್ಲಾ ಒಂದು ದಿನ ಗಳಿಸಿದ ವಿವಿಧ ಅನುಭವಗಳೂ, ಅವನ್ನಾಧರಿಸಿದ ಸೊಗಸುಗಳೂ ಆಗಿರಬೇಕು. ಅವನ ಕೃತಿ ಈ

ಬಗೆಯಲ್ಲಿ ಅರಿವಿದ್ದೂ ಇಲ್ಲದಂತೆ ತನ್ನ ಪ್ರವಾಹವನ್ನು ಸಾಗಿಸಿಕೊಂಡು ಕೊನೆಗೊಳ್ಳಬೇಕು. ಇಲ್ಲಿ ಬುದ್ಧಿಯ ತರ್ಕ ಸರಣಿಗೆ ಯಾವ ಕೆಲಸವೂ ಇಲ್ಲ. ವಿಶಾಲವಾದ ಹೃದಯವೇ ಕಲಾಸೃಷ್ಟಿಯ ಕೆಲಸವನ್ನು ಮಾಡಿಸಬೇಕು. ಮನರಂಜನೆಗಾಗಿ, ಚಮತ್ಕಾರ ಪ್ರದರ್ಶನಕ್ಕಾಗಿ ಹಿಡಿದು ತರುವ ವ್ಯಕ್ತಿಗಳು, ಅಲಂಕಾರಗಳು ಕಾಲಿರಿಸಿಕೊಡದು. ಅಂಥವು ಕೇವಲ ಬುದ್ಧಿ ಜನ್ಯವಾದುವು. ಬುದ್ಧಿ ಮಾಡಬೇಕಾದ ಕೆಲಸ ಈ ಮೊದಲೇ ಕಲಾವಿದನ ಜೀವನದಲ್ಲಿ ಉಂಟಾಗಿ, ಅವನ ಭಾವನೆಗೊಂದು ಹದವನ್ನು ತರುವ ಶಕ್ತಿಗಳಾಗಿರಬೇಕೇ ಹೊರತು, ಆ ಮೇಲೆ ಅಂದರೆ ಕಲೆಯ ನಿರ್ಮಾಣದ ಕಾಲದಲ್ಲಿ, ಹೊಗಿನಿಂದ ಮೇಲೆ ಹೊರೆಸುವ ಪ್ರಯತ್ನಗಳಾಗಬಾರದು.

ಬೆಳೆಗೆ ಬೀಜ ಬೇಕು, ಕ್ಷೇತ್ರ ಬೇಕು, ಸಾರಬೇಕು, ಮಳೆ ಮುಗಿಲುಗಳು ಬೇಕು. ಅನುಕೂಲವಾದ ಉಷ್ಣಮಾನ ಉಂಟಾಗಬೇಕು. ಬೀಜ ಮೊಳೆತು ಸಸಿಯಾಗಬೇಕು. ಕಲೆಯ ಹುಟ್ಟು ಹೀಗೆನೆ. ಜೀವನದ ಪ್ರಮುಖವಾದ ಯಾವುದಾದರೊಂದು ಅನುಭವವೇ ಅದರ ಪಾಲಿನ ಬೀಜ ಆ ಅನುಭವ ಕಲಾವಿದನ ಜೀವನದಲ್ಲಿ ಎಂದಾದರೊಂದು ದಿನ ಉಂಟಾಗಿರಬೇಕು. ಅದರ ಪರಿಣಾಮ ತೀವ್ರವಾದಷ್ಟು, ಅಸಾಮಾನ್ಯವಾದಷ್ಟು ತಾಳಿಕೆಯಗುಣ ಅದರಲ್ಲಿ ಹೆಚ್ಚು ಹೆಚ್ಚಾಗುತ್ತದೆ. ಸಮಯ ಸರಿದು ಅದು ಮರವೆಯಾದಂತೆ ಕಂಡರೂ, ಸತ್ತು ಹೋಗುವುದಿಲ್ಲ. ಅನಂತರ ಅನುಭವಗಳಿಂದ ಅದು ಜಡವಾಗಿ ಇಲ್ಲವೆ ಹುದುಗಿ ಹೋದರೆ, ಈ ಅನುಭವ ಕಲಾ ಸೃಷ್ಟಿಗೆ ಕಾರಣವಾಗದೆ ಹೋಗಬಹುದು. ಬದಲು ಅನಂತರ ಬಂದ ಅನೇಕಾನುಭವಗಳು ಅದಕ್ಕೆ ಪುಷ್ಟಿ ಕೊಟ್ಟರೆ, ಇಲ್ಲವೆ ಸಾರವನ್ನು ಒದಗಿಸುತ್ತ ಬಂದರೆ, ಎಂದಾದರೊಂದು ದಿನ, ಈ ಬೀಜ ಮೈಯೊಡೆದು ಬೆಳಕಿಗೆ ಬರಲು ಬಯಸುತ್ತದೆ. ಯಾವುದಾದರೊಂದು ದಿನ ಕಲಾವಿದನ ಮನಸ್ಸಿನಲ್ಲಿ, ಮಳೆ ಬಂದುಹೋದ ನಿಸರ್ಗದಂತೆ, ಶಾಂತಿ ಒದಗಿದಾಗ, ಅನುಕೂಲ ಆವರಣ ಒದಗಿದಾಗ, ಈ ಹುದುಗಿದ್ದ ಅನುಭವ ಬೀಜ, ಜೀವ ತಾಳಿ ಕುಣಿದಾಡಲು ಹವಣಿಸುತ್ತದೆ.

೬.೧. ಅಮೀನ ಸಹೇಬ ಕಮಡೋಳಿ

ಇವರಿಗೆ ಶಾಲೆಗೆ ಸೇರಿಸಿದಾಗ ಬೇರೆ ವಿಷಯಕ್ಕಿಂತ ಆಸಕ್ತಿಯಿದ್ದುದು ಕಲೆಯಲ್ಲಿ. ಮುಂದೆ ಗುರುಗಳು ಮುಂಬಯಿಯ ಜೆ.ಜೆ. ಕಲಾಶಾಲೆಗೆ ಸೇರಲು ಸೂಚಿಸಿದರು. ಕಮಡೋಳಿಯವರಿಗೆ ಇದು ಮೊದಲ ಪ್ರೋತ್ಸಾಹ ದೊರೆಯಿತೆಂದು ಹೇಳಬಹುದು. ಇವರ ಆಸಕ್ತಿಗೆ, ಅಭಿಲಾಶೆಯನ್ನು ಪೂರ್ತಿಗೊಳಿಸಲು ಇವರ ಅಣ್ಣ ಇಮಾಮ ಸಾಹೇಬರು ಬೆಂಗಾವಲಾಗಿ ನಿಂತರು. ಇದರಿಂದ ಕಮಡೋಳಿಯವರಿಗೆ ಇನ್ನಷ್ಟು ಪ್ರೇರಣೆ ದೊರೆಯಿತು. ಮುಂದೆ ಜೆ.ಜೆ. ಕಲಾಶಲೆಗೆ ಪ್ರವೇಶ ಪಡೆದರು. ವಿದ್ಯಾರ್ಥಿ ಜೀವನದಲ್ಲಿದ್ದಾಗ ಪ್ರತಿಭಾ ಪುರಸ್ಕಾರ ಶಿಷ್ಯ ವೇತನಗಳನ್ನು ಪಡೆಯುವುದರ ಮುಖಾಂತರ ಪ್ರೇರಿತಗೊಂಡು ಬಂದ ಅವಕಾಶಗಳೆಲ್ಲಾ ಸುಪಯೋಗಗೊಳಿಸುತ್ತಿದ್ದರು. ಕಲಾಶಾಲೆಯಲ್ಲಿ ನಡೆಯುತ್ತಿದ್ದ ಕಲಾಪ್ರದರ್ಶನದಲ್ಲಿ ಉತ್ತಮ ಕಲಾಕೃತಿಯ ಪ್ರಶಸ್ತಿ ಯಾವಾಗಲು ಇವರಿಗೆ ಬರುತಿದ್ದು ಇದರಿಂದಲೂ ಕಲಾ ಜೀವನದಲ್ಲಿ ನೆಲೆಸುವಲ್ಲಿ ಪ್ರೇರಣೆ ದೊರೆಯುತಿತ್ತೆಂದು ಹೇಳಬಹುದು. ಮುಂಬಯಿ ಆರ್ಟ್ ಸೋಸೈಟಿಯು ಏರ್ಪಡಿಸಿದ್ದ ಕಲಾ ಪ್ರದರ್ಶನದಲ್ಲಿ ಇವರ ಕಲಾಕೃತಿಗೆ ಬಹುಮಾನ ದೊರೆಯಿತು. ಇದರಿಂದಲೂ ಕಲೆಗೆ ಇನ್ನಷ್ಟು ಪ್ರೇರಣೆ ದೊರೆಯಿತೆಂದು ಹೇಳಬಹುದು. ಇವರ ನಿಸರ್ಗ ಚಿತ್ರಗಳಲ್ಲಿ ಹೆಚ್ಚಾಗಿ ಹಳೆಯ ಸ್ಮಾರಕಗಳು ಕಂಡು ಬರುತ್ತವೆ ಮತ್ತು

ಮುಂಬಯಿನ ವಿವಿಧ ಸ್ಥಳಗಳ ಸ್ಮಾರಕಗಳನ್ನು ಚಿತ್ರಿಸಿದ್ದಾರೆ. ಇವರು ಜಲವರ್ಣದಲ್ಲಿ ನಿಸರ್ಗ ಚಿತ್ರಗಳನ್ನು ರಚಿಸುತ್ತಾರೆ ಮತ್ತು ಮುಂಬಯಿಯ ಪ್ರಕೃತಿ, ಸಂಸ್ಕೃತಿ ಪ್ರಭಾವವು ಕಾಣುತ್ತದೆ.

೬.೨. ಎಂ.ಎ. ಚೆಟ್ಟಿ

ಇವರು ಐದನೆ ತರಗತಿಯಲ್ಲಿದ್ದಾಗ ಚಿತ್ರಗಳನ್ನು ಬಿಡಿಸುವುದು ನೋಡಿ ಕಲಾಶಿಕ್ಷರಾಗಿದ್ದ ನಾಯಕ ಮಾಸ್ತರ ದಿನ ಹೀಗೆ ಚಿತ್ರ ಬಿಡಿಸು ಮುಂದೆ ಒಂದುದಿನ ದೊಡ್ಡ ಕಲಾವಿದನಾಗುತ್ತಿಯ ಎಂದು ಪ್ರೋತ್ಸಾಹಿಸಿದರು. ಇದರಿಂದ ಕಲಾ ಪ್ರಪಂಚದಲ್ಲಿ ಸ್ಥಿರವಾಗಿ ನಿಲ್ಲಲು ಕಾರಣವಾಯಿತು. ಬಾಲ್ಯದ ಮಿತ್ರರಾದ ಅಥಣಿಯ ಶ್ರೀ ಆರ್.ಪಿ ಕುಲಕರ್ಣಿಯವರು ತಮ್ಮ ಲೇಖನದಲ್ಲಿ ಚೆಟ್ಟಿಯವರಿಗೆ ಪಠ್ಯದ ವಿಷಯಕ್ಕಿಂತಲೂ ಹೆಚ್ಚಾಗಿ ಚಿತ್ರಕಲೆ ರಚಿಸುವಲ್ಲಿ ಆಸಕ್ತಿ ಹೆಚ್ಚಿದೆ ಎಂದು ಉಲ್ಲೇಖಿಸಿದ್ದಾರೆ. ಚೆಟ್ಟಿಯವರು ಎಲಿಮೆಂಟರಿ ಪರೀಕ್ಷೆಯಲ್ಲಿ ಉತ್ತೀರ್ಣರಾರಿಂದಲೂ ಕಲೆಯ ಕಡೆಗೆ ಇನ್ನೂ ಮನವು ವಾಲಿತು. ಉನ್ನತ ವ್ಯಾಸಂಗಕ್ಕಾಗಿ ಶಿರಸಂಗಿ ಲಿಂಗರಾಜ ಟ್ರಸ್ಟ್ ಫಂಡಿನಿಂದ ಸ್ಕಾಲರ್‌ಶಿಪ್ ಹಣವು ದೊರೆಯಿತು. ಈ ಅನುಕೂಲತೆಯಿಂದ ಮುಂಬಯಿಯ ಜೆ.ಜೆ. ಕಲಾಶಾಲೆಗೆ ಸೇರಿದರು. ಸತತ ಆರು ವರ್ಷಗಳ ಕಾಲ ಡ್ರಾಯಿಂಗ್ ಮತ್ತು ಪೇಂಟೀಂಗ್‌ನಲ್ಲಿ ಅಭ್ಯಾಸ ಮಾಡಿ ಡಿಪ್ಲೋಮಾದಲ್ಲಿ ಚಿನ್ನದ ಹಾಗೂ ಬೆಳ್ಳಿಯ ಪದಕದೊಂದಿಗೆ ಪದವಿ ಪಡೆದುಕೊಂಡರು. ಇದರಿಂದಲೂ ಚಿತ್ರಕಲೆಯಲ್ಲಿ ಮುಂದೆ ಸಾಗಲು ಪ್ರೇರಣೆ ದೊರೆಯಿತ್ತೇನ್ನಬಹುದು. ಮುಂಚೆ ಸೊಲ್ಲಾಪೂರದಲ್ಲಿದ್ದಾಗ ಮನೆಯ ಪರಿಸ್ಥಿತಿ ಗಂಭೀರವಾಗಿದೆಂದು ತಿಳಿದು ಬಂದಾಗ ತಮ್ಮ ಚಿತ್ರಗಳನ್ನು ಮಾಡಿ ಮಾರಿದ ಹಣದಿಂದ ಮನೆಗೆ ಬೇಕಾದ ವಸ್ತುಗಳನ್ನು ಕಳುಹಿಸುತ್ತಿದ್ದರು. ಇದರಿಂದ ಚೆಟ್ಟಿಯವರಿಗೆ ಒಂದು ಖಚಿತವಾಯಿತು. ಅದು ಎನೆಂದರೆ ತನ್ನ ಚಿತ್ರಗಳಿಂದ ಜೀವನವನ್ನು ನಡೆಸಬಹುದು ನಡೆಸಬಹುದೆಂದು ತಿಳಿದು. ಇನ್ನಷ್ಟು ಪ್ರೇರಿತವಾಗಿ ಕಲಾ ಜೀವನಕ್ಕೆ ಸಮರ್ಪಿಸಿಕೊಂಡು ಅಸಂಖ್ಯಾತ ನಿಸರ್ಗ ಚಿತ್ರಗಳು ರಚನೆ ಮಾಡಿದ್ದಾರೆ. ಇವರು ಜಲವರ್ಣದಲ್ಲಿ ಮತ್ತು ತೈಲವರ್ಣದಲ್ಲಿ ನಿಸರ್ಗ ಚಿತ್ರಗಳನ್ನು ಮಾಡಿದ್ದಾರೆ. ಮುಂಬಯಿನ ಹಳೆಯ ಕಟ್ಟಡಗಳ ವಿನ್ಯಾಸಕ್ಕೆ ಪ್ರಭಾವಿತರಾಗಿ ಕಟ್ಟಡಗಳ ಚಿತ್ರ ರಚಿಸಿದ್ದಾರೆ.

೬.೩. ಎಂ.ವಿ.ಮಿಣಜಗಿ

ಚಿಕ್ಕವರಿರುವಾಗಲೇ ಇವರಿಗೆ ಚಿತ್ರಕಲೆ, ಸಂಗೀತದಲ್ಲಿ ಆಸಕ್ತಿ ಇತ್ತು. ಇವರು ಮರಾಠಿ ಮಾಧ್ಯಮದಲ್ಲಿ ಪ್ರಾಥಮಿಕ ಶಿಕ್ಷಣ ಮುಗಿಸಿದ್ದಾರೆ. ಒದುವುದಕ್ಕಿಂತಲೂ ಚಿತ್ರ ಬರೆಯುವುದರಲ್ಲಿ ಹೆಚ್ಚು ಆಸಕ್ತರಾಗಿರುತಿದ್ದರು. ಮುಂದಿನ ಕಲಾ ಶಿಕ್ಷಣಕ್ಕಾಗಿ ಮುಂಬಯಿಯ ಜೆ.ಜೆ. ಕಲಾಶಾಲೆಗೆ ಸೇರಿದರು. ಸತತ ಪರಿಶ್ರಮದಿಂದ "ಆರ್ಟ ಮಸ್ಟರ್" ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಇದರಿಂದ ಕಲೆಯಲ್ಲಿ ಮುಂದುವರಿಯಲು ಸ್ಪೂರ್ತಿ ಸಿಕ್ಕಿದಂತಾಯಿತು ಮತ್ತು "ಡಿಪ್ಲೋಮಾ ಇನ್ ಪೇಂಟೀಂಗ್" ನಲ್ಲಿಯೂ ಪ್ರಥಮ ಶ್ರೇಣಿಯಲ್ಲಿ ಪಾಸಾದರು. ಇದರಿಂದಲೂ ಕಲಾ ಜೀವನದಲ್ಲಿ ಮುನ್ನುಗ್ಗಲು ಪ್ರೇರಣೆ ದೊರೆಯಿತೆಂದು ಹೇಳಬಹುದು. ಇವರ ಆಸಕ್ತಿ, ಪರಿಶ್ರಮದಿಂದ ಇಂಗ್ಲೇಂಡಿನ "ರಾಯಲ್ ಕಾಲೇಜ ಆಫ್ ಆರ್ಟ" ನಲ್ಲಿ ಪ್ರವೇಶ ಪಡೆದು ಸರ್ ವಿಲಿಯಂ ರಾಥನ್ ಮಾರ್ಗದರ್ಶನದಲ್ಲಿ ಕಲಾ ವ್ಯಾಸಂಗ ಮಾಡಿ ಅಲ್ಲಿನ ಕಲಾಪರಂಪರೆಯನ್ನು, ವಿವಿಧ ತಂತ್ರ ಶೈಲಿಗಳನ್ನು ಅರಿತು ಮರಳಿ ಸ್ವದೇಶಕ್ಕೆ ಬಂದು ಕಲಾ ಜೀವನದಲ್ಲಿ ಉಳುಮೆ ಮಾಡುವುದನ್ನು

ಮುಂದುವರೆಸಿದರು. ಪ್ರಕೃತಿಯ ಸೌಂದರ್ಯಕ್ಕೆ ಪ್ರೇರಣೆ ಮತ್ತು ಪ್ರಭಾವಕ್ಕೊಳಗಾಗಿ ಇಡೀ ತಮ್ಮ ಜೀವನವನ್ನೇ ಕಲೆಗಾಗಿ ಮೀಸಲಾಗಿಸಿದರು.

೬.೪. ಶಂಕರಗೌಡ ಬೆಟ್ಟದೂರ

ಶಂಕರಗೌಡರು ಚಿಕ್ಕವರಿದ್ದಾಗ ಅಂದರೆ ಸುಮಾರು ೧೪ ವರ್ಷವಿದ್ದಾಗ ಇವರ ಅಣ್ಣನಾದ ಚನ್ನಬಸಪ್ಪನವರ ಚಿತ್ರಗಳನ್ನು ಗೌಡರ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ದಿನಪತ್ರಿಕೆ, ವಾರಪತ್ರಿಕೆ, ಮ್ಯಾಗ್‌ಜಿನ್‌ನಲ್ಲಿ ಬರುವ ಚಿತ್ರಗಳನ್ನು ನಕಲು ಮಾಡಲು ಪ್ರಯತ್ನಿಸುತ್ತಿದ್ದರು. ಐದನೆ ತರಗತಿಯಲ್ಲಿದ್ದಾಗ ಪ್ರಕೃತಿ ಚಿತ್ರಗಳನ್ನು ಯಥಾವತ್ತಾಗಿ ಚಿತ್ರಿಸಲು ಪ್ರಯತ್ನ ಮಾಡುತ್ತಿದ್ದು. ದಿನ ಮತ್ತು ವಾರ ಪತ್ರಿಕೆಗಳಲ್ಲಿ ಬರುವ ನಂದಲಾಲ ಬೋಸ್ ರವರ ಚಿತ್ರಗಳು ಇವರ ಮನಸ್ಸಿನ ಮೇಲೆ ಹೆಚ್ಚು ಪ್ರಭಾವ ಬೀರಿದವು. ಹೆಸರಾಂತ ಸಾಹಿತಿಯಾದ ವೀರೇಶರವರಿಂದ ಮತ್ತು ಡಾ. ಪಂಚಾಕ್ಷರಿ ಹೀರೆಮಠರಿಂದ ಚಿತ್ರಕಲೆಯಲ್ಲಿ ಮುಂದೆ ಸಾಗಲು ಪ್ರೇರಣೆ ದೊರೆಯಿತು. ಮುಂದೆ ಶಾಂತಿನಿಕೇತನದಲ್ಲಿ ಪ್ರವೇಶ ಪಡೆದಾಗ ನಂದಲಾಲ ಬೋಸ್‌ರವರು ಪ್ರಾಚಾರ್ಯರಾಗಿದ್ದರು. ಇದರಿಂದ ಚಿತ್ರಕಲೆಗೆ ತುಂಬಾನೆ ಪ್ರೇರಣೆ, ಪ್ರಭಾವ ದೊರೆಯಿತು.

ಗೌಡರ ಕಲಾಕೃತಿಗಳಲ್ಲಿ ಬಣ್ಣಗಳ ಪ್ರಭುದ್ಧತೆ ಹಾಗೂ ರೇಖೆಗಳ ಲಾಲಿತ್ಯಗಳು ಉನ್ನತ ಮಟ್ಟದಲ್ಲಿವೆ. ಇವರು ಹೆಚ್ಚಾಗಿ ನಿಸರ್ಗಚಿತ್ರಗಳನ್ನು ಜಲವರ್ಣದಿಂದ ರಚಿಸುತಿದ್ದರು. ಗೌಡರ ಉನ್ನತ ವ್ಯಾಸಂಗಕ್ಕಾಗಿ ಶಾಂತಿನೀಕೆತನದಲ್ಲಿರುವುದರಿಂದ ಸಹಜವಾಗಿಯೇ ಬಂಗಾಳ ಕಲಾಪರಿಸರ ಮತ್ತು ನಂದಲಾಲರ ಪ್ರಭಾವ ಗೌಡರ ನಿಸರ್ಗಚಿತ್ರಗಳಲ್ಲಿ ಕಾಣಬಹುದು. ಇವರು ನಿಸರ್ಗ ಚಿತ್ರಗಳನ್ನು ಜಲವರ್ಣದಿಂದ ಬಫ್ ಪೇಪರ್‌ನಲ್ಲಿ ಮಾಡುತ್ತಿದ್ದರು.

೬.೫. ನಾಡೋಜ ಡಾ. ವಿ.ಟಿ. ಕಾಳೆ

ಕಾಳೆಯವರ ಅಣ್ಣನೊಬ್ಬ ಪೆಂಟರ್‌ನಾಗಿ ಬೋರ್ಡ್‌ನ್ನು ಬರೆಯುತ್ತಿದ್ದರು ಇದನ್ನು ದಿನ ನೋಡುವುದರಿಂದ ಕಾಳೆಯವರಿಗೆ ಚಿತ್ರಕಲೆಯಲ್ಲಿ ಆಸಕ್ತಿ ಮೂಡಿರುವುದು ಕಂಡುಬರುತ್ತದೆ. ಕಾಳೆಯವರ ಕುಟುಂಬ ಮುಂದೆ ಗದುಗಿಗೆ ಸ್ಥಳಾಂತರಗೊಂಡಾಗ ಮನೆಯ ಪಕ್ಕದಲ್ಲಿಯೇ ಚಿತ್ರಕಾರರಾದ ಎಮ್.ಸಿ. ಮುನವಳ್ಳಿಯವರು ಕಪ್ಪು ಬಣ್ಣದ ಪೌಡರ್ ಮೂಲಕ ಚಿತ್ರಗಳನ್ನು ರಚಿಸುತ್ತಿದ್ದರು ಇದನ್ನು ಗಮನಿಸುತ್ತಿದ್ದ ಬಾಲಕ ಕಾಳೆಯವರಿಗೆ ಚಿತ್ರಕಲೆಯಲ್ಲಿ ಇನ್ನಷ್ಟು ಆಸಕ್ತಿ ಮೂಡಿತೆಂದು ಹೇಳಬಹುದು. ಮುಂದೆ ಶಾಲೆಯಲ್ಲಿ ಟಿ.ಪಿ. ಅಕ್ಕಿಯವರಿಂದಲೂ ಪ್ರೇರಿತಗೊಂಡರೆನ್ನಬಹುದು. ಪಾಶ್ಚಾತ್ಯ ಶೈಲಿಗೆ ಪ್ರಭಾವಿತರಾಗಿ ಅನೇಕ ನಿಸರ್ಗ ಚಿತ್ರಗಳು ಪಾಶ್ಚಾತ್ಯ ಶೈಲಿಯಲ್ಲಿ ರಚನೆಗೈದಿದ್ದಾರೆ. ಕಾಳೆಯವರು ಸಾಂಪ್ರದಾಯಿಕ ಶೈಲಿಯ ರಾಗಮಾಲಾ ಸರಣಿ ಚಿತ್ರಗಳನ್ನು ನೋಡಬಹುದು ಮತ್ತು ನವ್ಯ ಶೈಲಿಯ ಮೂರ್ತ ಮತ್ತು ಅಮೂರ್ತ ಶೈಲಿಯ ಕಲಾಕೃತಿಗಳನ್ನು ನೋಡಬಹುದು. ಇವರ ಕಲಾಕೃತಿಗಳು ಜಲವರ್ಣ ಮತ್ತು ತೈಲವರ್ಣದಲ್ಲಿವೆ. ಇವರ ಅಮೂರ್ತ ಶೈಲಿಯ ಕಲಾಕೃತಿಗಳಲ್ಲಿ ಸಂದರ್ಭಕ್ಕನುಗುಣವಾಗಿ ನಿಸರ್ಗವನ್ನು ಬಳಸಿಕೊಂಡಿರುವುದನ್ನು ಕಾಣಬಹುದು ಹಾಗೂ ಪವಾಡ ಪುರುಷರ ಮತ್ತು ಮಠಾಧೀಶರ ಜೀವನ ಚರಿತ್ರೆಯ ಸಂಯೋಜನೆಯ ಚಿತ್ರಗಳ ಹಿಂಭಾಗದಲ್ಲಿ ಗಿಡ-ಮರ, ಮನೆ-ಮಠ ಮತ್ತು ಪ್ರಾಣಿ-ಪಕ್ಷಿಗಳನ್ನು ಕಾಣಬಹುದಾಗಿದೆ.

೬.೬. ಆರ್. ಎಂ. ಹಡಪದ

ಹಡಪದರಿಗೆ ಚಿಕ್ಕವರಿರುವಾಗಲೇ ಕಲೆಯಲ್ಲಿ ಆಸಕ್ತಿ ಇತ್ತೆಂದು ಹೇಳಬಹುದು ಯಾಕೆಂದರೆ ಹರಪದರು ಬಾಲಕರಾಗಿರುವಾಗ ಇವರ ತಂದೆಯವರು ಬಾಳಾಚಾರ ಗುರುಗಳ ಅಕ್ಷರ ಇದ್ಯಾಭ್ಯಾಸ ಮಾಡಲು ಬಿಟ್ಟಾಗ ಹಡಪದರಿಗೆ ಕಂಡದ್ದು ಅಕ್ಷರವಲ್ಲ. ಹಸಿರುಬಣ್ಣ, ಕೆಂಪುವೃತ್ತ, ಅಕ್ಷರದ ಆಕಾರಗಳು ಆ ವಯ್ಯಸಿಗೆ ಬಾಲಕನಿಗೆ ಬಣ್ಣ, ಆಕಾರಗಳ ಸೂಕ್ಷ್ಮ ಸಂವೇದನೆಯು ಸಹಜವಾಗಿಯೇ ಬಂದಿತ್ತು. ಸಂಗೀತ ಪ್ರೇಮಿಗಳಾಗಿದ್ದ ಪಂಚಾಕ್ಷರಪ್ಪನವರು ಹಡಪದರ ಕಲಾಸಕ್ತಿಯನ್ನು ನೋಡಿ ಪ್ರತಿ ತಿಂಗಳು ತಮ್ಮ ಸಂಬಳದಿಂದ ಹಡಪದರಿಗೆ ಬಣ್ಣ, ಕಾಗದ, ಪೆನ್ಸಿಲ್ ಮತ್ತು ಕುಂಚಗಳನ್ನು ತಂದು ಕೊಡುತ್ತಿದ್ದರು; ಸ್ವತಃ ಪಂಚಾಕ್ಷರೆ ಎತ್ತಿನಗಾಡಿ ತೆಗೆದುಕೊಂಡು ಹೋಗಿ ಹಡಪದರವರಿಗೆ ಮಣ್ಣಿನ ಮೂರ್ತಿಗಳು ಮಾಡುವ ಸಲುವಾಗಿ ಮಣ್ಣನ್ನು ತಂದು ಕೊಡುತ್ತಿದ್ದರು. ಇವರ ಸಹಾಯದಿಂದಲೂ ಕಲೆಯಲ್ಲಿ ಮುಂದೆ ಸಾಗಲು ಸಹಾಯ ಮತ್ತು ಪ್ರೇರಣೆ ದೊರೆಯಿತೆಂದು ಹೇಳಬಹುದು.

ಬಾದಾಮಿಯಲ್ಲಿದ್ದಾಗ ಹಡಪದರು ಬಾಲ್ಯದ ಹುಡುಗರ ಜೊತೆ ಆಟ, ನೋಟ, ಜೇನು ಬಿಡಿಸಿ ತಿನ್ನುವುದು ಬೆಟ್ಟಗಳನ್ನು ಹತ್ತುವುದು. ದಿನವಿಡಿ ತಮ್ಮೂರಿನ ವಿಶಾಲವಾದ ಪರಿಸರದಲ್ಲಿರುವುದರಿಂದ ಸಹಜವಾಗಿಯೇ ಪ್ರಕೃತಿಯನ್ನು ಆಸ್ವಾದಿಸುವ ಶಕ್ತಿ ಬಂತು. ತಮ್ಮೂರಿನ ಜಾತ್ರೆ ಇದ್ದಾಗ ಊರಲ್ಲಿರುವ ಎಲ್ಲ ಮನೆಗಳು ಸಾರಿಸಿ ಮನೆಯ ಒಳಗೆ ಮತ್ತು ಹೊರಗೆ ಶೃಂಗರಿಸುವುದನ್ನು ಮತ್ತು ಊರಿನ ಜಾತ್ರೆಯ ಸೊಬಗು ಕಂಡು ವಿಸ್ಮಿತರಾಗುತ್ತಿದ್ದರು. ಈ ಬಾಲ್ಯದ ನೆನಪುಗಳೇ ಇವರ ಕೆಲವು ಮೂರ್ತ ಮತ್ತು ಅಮೂರ್ತ ಕಲಾಕೃತಿಗಳಾಗಿವೆ.

ಜೆ.ಜೆ. ಕಲಾಶಾಲೆಯಲ್ಲಿದ್ದಾಗ ಭಾರತೀಯ ಸಾಂಪ್ರದಾಯಿಕ ಶೈಲಿಯಲ್ಲದೇ ಪಾಶ್ಚಾತ್ಯ ಕಲಾಶೈಲಿಯೂ ಕರಗತ ಮಾಡಿಕೊಂಡರು. ಇವರ ಜಲವರ್ಣ ನಿಸರ್ಗ ಚಿತ್ರಗಳಲ್ಲಿ ತಿಳಿಯಾಗಿ ಬಣ್ಣಗಳನ್ನು ಹಾಳೆಗೆ ಹಚ್ಚುವ ಪರಿ ತುಂಬ ವಿಭಿನ್ನವಾಗಿದೆ ಮತ್ತು ತೈಲವರ್ಣ ಚಿತ್ರಗಳಲ್ಲಿ ಕಣ್ಣಿಗೆ ಹಿತವಾದ ಬಣ್ಣಗಳನ್ನು ಚಪ್ಪಟೆಯಾಗಿ ಕ್ಯಾನ್‌ವಾಸಿಗೆ ಹಚ್ಚುವ ರೀತಿ ವಿಶಿಷ್ಟವಾಗಿದೆನ್ನಬಹುದು. ಜಲವರ್ಣ ಮತ್ತು ತೈಲವರ್ಣಗಳಲ್ಲದೇ ಅಕ್ರಾಲಿಕ್, ಇಂಡಿಯನ್ ಇಂಕ್, ಪೋಸ್ಟರ್ ಮತ್ತು ಪೆನ್ಸಿಲಿನಿಂದ ಕಲಾಕೃತಿಗಳನ್ನು ರಚಿಸಿದ್ದಾರೆ. ನಿಸರ್ಗ ಚಿತ್ರಗಳಲ್ಲದೇ ಭಾವಚಿತ್ರ, ಮೂರ್ತ ಸಂಯೋಜನೆಯ ಮತ್ತು ಅಮೂರ್ತ ಸಂಯೋಜನೆಯ ಚಿತ್ರಗಳನ್ನು ರಚಿಸುತ್ತಾರೆ. ಪೇಂಟಿಂಗ್ ಜೊತೆಗೆ ಗ್ರಾಫಿಕ್‌ನ ವುಡ್‌ಕಟ್ ಮತ್ತು ಲಿಥೋದಲ್ಲಿಯೂ ಕಲಾಕೃತಿಗಳನ್ನು ಮಾಡಿದ್ದಾರೆ.

೬.೭. ವಿಜಯ ಸಿಂಧೂರ

ಸಿಂಧೂರರು ಚಿಕ್ಕವರಿದ್ದಾಗ ದತ್ತಾತ್ರೇಯ, ಶಿವಪಾರ್ವತಿ, ಗಣಪತಿ, ನಂದಿ ಹೀಗೆ ಅನೇಕ ಚಿತ್ರಗಳನ್ನು ರೇಖೆಗಳಿಂದ ಚಿತ್ರಿಸಿ ಬಣ್ಣವನ್ನು ತುಂಬುತ್ತಿದ್ದರು. ಮನೆಯಲ್ಲಿರುವ ಕ್ಯಾಲೆಂಡರ್‌ಗಳಲ್ಲಿನ ರವಿವರ್ಮನ ಓಲಿಯೋಗ್ರಾಫ್ ಚಿತ್ರಗಳು ಮತ್ತು ಬಣ್ಣಗಳು ಇವರನ್ನು ಹಿಡಿಸಿದವು. ಜೆ.ಜೆ ಕಲಾಶಾಲೆಯಲ್ಲಿ ಕಲಾಭ್ಯಾಸಕ್ಕೆ

ತೊಡಗಿದಾಗ ಶಂಕರ್ ಪಲ್ಸೀಕರ್‌ರ ಮಾರ್ಗದರ್ಶಕರಿಂದಲೂ ಕಲಾ ಜೀವನದಲ್ಲಿ ಮುಂದೆ ಸಾಗಲು ಇನ್ನೂ ಪ್ರೇರಣೆ ದೊರೆತಂತಾಯಿತು. ಪಾಶ್ಚಾತ್ಯ ಕಲೆಯ ದಿಗ್ಗಜರುಗಳಾದ ವ್ಯಾನ್‌ಗಾಗ್, ಸಾರ್ಜಂಟ್ ಮತ್ತು ಡೇಗಾಸ್‌ರ ಕಲಾಕೃತಿಗಳಲ್ಲಿನ ತಂತ್ರಗಳಿಂದ ಪ್ರಭಾವಿತರಾದರು.

ಜೆ.ಜೆ. ಕಲಾಶಾಲೆಯಲ್ಲಿದ್ದಾಗ ಶಂಕರ್‌ರಾವ್ ಪಲ್ಸೀಕರ್, ದಂಡಾವತಿ ಮಠ, ಜತಿನ್‌ದಾಸ್ ಕಾಮ್‌ಕರ್ ಮತ್ತು ಪುಂಚಿತ್ತಾಯವರ ಬಣ್ಣಗಾರಿಕೆ ಮತ್ತು ಕುಂಚಗಾರಿಕೆಯಿಂದ ಪ್ರಭಾವಿತರಾದರು. ಗಾಯ್‌ತೋಂಡೆಯವರ ಅಮೂರ್ತ ಬಣ್ಣದ ಕಲಾಕೃತಿಗಳು, ಆಲಮೇಲ್‌ಕರ್‌ರ ರೇಖೆ, ಬಣ್ಣಗಳ ಅಲಂಕರಣವೂ ಆಕರ್ಷಿಸಿದ್ದು ಕಂಡುಬರುತ್ತದೆ. ಮುಖ್ಯವಾಗಿ ತಮ್ಮೂರಿನ ಜಮಖಂಡಿಯ ವಾತಾವರಣದಿಂದ ತುಂಬ ಪ್ರೇರಿತಗೊಂಡು ಅಲ್ಲಿನ ಪರಸರವನ್ನು ಪ್ರಾಣಿ–ಪಕ್ಷಿಗಳನ್ನು, ಜನರನ್ನು ಪ್ರೀತಿಸುತ್ತಿದ್ದರು ಇದರಿಂದಾಗಿ ಅವರ ಚಿತ್ರಗಳಲ್ಲಿ ನಿಸರ್ಗವನ್ನು ಕಾಣಬಹುದು. ದಿನಾಲೂ ಮತ್ತು ಸಮಯ ಸಿಕ್ಕಾಗ ಗುಡ್ಡವನ್ನೇರಿ ಸೂರ್ಯ ಉದಯಿಸುವ ಮತ್ತು ಸೂರ್ಯ ಮುಳುಗುವುದನ್ನು ನೋಡಿ ಮರಳಿ ಮನೆಗೆ ಬರುವಾಗ ನೋಡಿದ ದೃಶ್ಯಗಳನ್ನು ಯೋಚಿಸುತ್ತಿದ್ದರು ನಂತರ ನೋಡಿದ ದೃಶ್ಯವನ್ನು ಸಿಂಧೂರವರು ತಮ್ಮದೇ ಆದ ಅಮೂರ್ತ ಶೈಲಿಯಲ್ಲಿ ನಿಸರ್ಗ ಚಿತ್ರಗಳನ್ನು ಬಿಡಿಸುತ್ತಿದ್ದರು. ಹೀಗೆ ಸಿಂಧೂರರ ಕಲಾಕೃತಿಗಳ ಶೈಲಿ, ತಂತ್ರವನ್ನು ನೋಡಬಹುದಾಗಿದೆ.

೬.೮. ನಾಡೋಜ ಡಾ. ಜೆ. ಎಸ್. ಖಂಡೇರಾವ್

ಜೆ.ಎಸ್.ಖಂಡೇರಾವರು ಪ್ರಾಥಮಿಕ ಮತ್ತು ಪ್ರೌಢ ಹಂತದ ಶಿಕ್ಷಣದಲ್ಲಿ ಭೂಗೋಳ ವಿಷಯಕ್ಕೂ ಸಂಬಂದಿಸಿದಂತೆ ದೇಶ, ರಾಜ್ಯ ಮತ್ತು ವಿವಿಧ ಜಿಲ್ಲೆಗಳ ನಕಾಶೆ ಚಿತ್ರಗಳನ್ನು ಬರೆದು ಅದರಲ್ಲಿ ವಿವಿಧ ಬಣ್ಣಗಳನ್ನು ತುಂಬುತ್ತಿದ್ದರು. ಡಿಸೈನ್, ಫ್ರೀಹ್ಯಾಂಡ್ ಡ್ರಾಯಿಂಗ್, ರೇಖಾಚಿತ್ರಗಳ ಸಂಬಂಧಿಸಿದಂತೆ ಚಿತ್ರ ರಚನೆ ಮಾಡಿದ್ದಾರೆ. ಚಿತ್ರಕಲೆಯಲ್ಲಿ ಆಸಕ್ತಿ ಹೆಚ್ಚಾದಂತೆಲ್ಲ ನಿಸರ್ಗಚಿತ್ರ ಇಲ್ಲವೆ ಭೂದೃಶ್ಯ ಚಿತ್ರಗಳನ್ನು ಚಿತ್ರಸಿದ್ದಾರೆ. ಹೀಗೆ ಇವರಿಗೆ ಚಿತ್ರಕಲೆಯ ಪ್ರೇರಣೆ ದೊರಕಿತೆಂದು ಹೇಳಬಹುದು.

ಉನ್ನತ ಶಿಕ್ಷಣಕ್ಕಾಗಿ ಮುಂಬಯಿಗೆ ಹೋದಾಗ ಮುಂಬಯಿನ ವಿ.ಟಿ. ರೈಲು ನಿಲ್ದಾಣ ಮತ್ತು ಚೌಪಾಟಿಯ ಈ ಎರಡು ಸ್ಥಳಗಳು ಅಂಕನೆ ಚಿತ್ರ ರಚನೆಗೆ ಆಕರಗಳನ್ನು ಒದಗಿಸುವ ತಾಣಗಳಾಗಿದ್ದರೆ, ಕಟ್ಟಿಯ ಹಲಗೆ ಇಲ್ಲವೆ ಮಣೆ, ಅದರ ಮೇಲೆ ಇಡಲಾಗಿರುವ ಬಿಸ್ಕೆಟ್ಟುಗಳ ಡಬ್ಬಿ, ಭರಣಿ, ಪಿಂಗಾಣಿ ಪಾತ್ರೆಗಳು, ಗ್ಲಾಸು, ಪಾತ್ರೆ; ಹೀಗೆ ಕೆಲ ವಸ್ತುಗಳನ್ನು ಚಿತ್ರಣಕ್ಕೆಂದು ಬಳಸಿಕೊಂಡಿದ್ದಾರೆ. ಇನ್ನುಳಿದಂತೆ ನಿಸರ್ಗ ವಿಷಯಕ್ಕೆ ಸಂಬಂಧಿಸಿದಂತೆ ಹೂ, ಬಳ್ಳಿ, ಎಲೆಗಳನ್ನು ಚಿತ್ರದ ವಸ್ತುಗಳನ್ನಾಗಿಸಿದ್ದಾರೆ.

ರೇಖಾ ಚಿತ್ರದ ವಿಷಯಕ್ಕೆ ಬಂದಾಗ ಲಂಭರೇಖೆ, ತ್ರಿಕೋನ, ಆಯತಾಕಾರ, ತ್ರಿಭುಜ ಇತ್ಯಾದಿ ವಿನ್ಯಾಸಗಳು ಇವರ ಚಿತ್ರರಚನೆಯಲ್ಲಿ ವಸ್ತುಗಳಾಗಿವೆ. ನಂತರಉಯದ ದಿನಗಳಲ್ಲಿ ಜಲವರ್ಣ ಮಾಧ್ಯಮದಲ್ಲಿ ನಿಸರ್ಗಚಿತ್ರ ಇಲ್ಲವೆ ಭೂದೃಶ್ಯಗಳನ್ನು ಸಾಕಷ್ಟು ಪ್ರಮಾಣದಲ್ಲಿ ಚಿತ್ರಸಿದ್ದಾರೆ. ಹಸಿರಿನಿಂದ ಕಂಗೊಳಿಸುವ ವಿಶಾಲವಾದ ಮೈದಾನ, ಪ್ರಾಚೀನ ಕಟ್ಟಡಗಳು, ಗಿಡ–ಮರಗಳು ಮುಂತಾದವುಗಳನ್ನು ಚಿತ್ರಗಳಲ್ಲಿ ಸಂಯೋಜಿಸಿದ್ದಾರೆ. ಹೀಗೆ ನಿಸರ್ಗದಿಂದ ಮತ್ತು ತಮ್ಮ ಸುತ್ತ ಮುತ್ತಲಿನ ಪ್ರದೇಶದಿಂದ ಚಿತ್ರರಚನೆಗೆ ಪ್ರೇರಿತಗೊಂಡರು.

ಇವರು ನಿಸರ್ಗ ಚಿತ್ರಗಳನ್ನು ತೈಲವರ್ಣದಲ್ಲಿ ರಚಿಸಿದ್ದಾರೆ. ಇವರು ರಚಿಸಿದ ನಿಸರ್ಗ ಚಿತ್ರಗಳಲ್ಲಿ ಮುಖ್ಯವಾಗಿ ಎದ್ದು ಕಾಣುವುದೆನೆಂದರೆ ಭೂದೃಶ್ಯ ಚಿತ್ರದಲ್ಲಿ ಕಟ್ಟಡಗಳ ಮೇಲೆ ಬಿದ್ದಿರುವ ನೆರಳು–ಬೆಳಕನ್ನು ತೋರಿಸುವುದು ತುಂಬ ಕಷ್ಟದ ಕೆಲಸ; ಇವರ ಚಿತ್ರಗಳಲ್ಲಿ ನೆರಳು–ಬೆಳಕನ್ನು ತುಂಬ ಮಾರ್ಮಿಕವಾಗಿ ಮತ್ತು ಸರಳವಾಗಿ ಬೇರ್ಪಡಿಸಿರುದನ್ನು ಕಾಣುತ್ತೇವೆ. ಅಂದರೆ ಕಟ್ಟಡಗಳ ಮೇಲೆ ಸೂರ್ಯನ ಬೆಳಕು ಬಿದ್ದು ಕಟ್ಟಡದ ಮೇಲೆ ಮತ್ತೊಂದು ಭಾಗಕ್ಕೆ ನೆರಳು ಬಿದ್ದಿರುವ ಛಾಯಾಂಕನವನ್ನು ತೋರಿಸುವ ಈ ತಂತ್ರಗಾರಿಕೆ ನಿಜಕ್ಕೂ ನೋಡುಗರನ್ನು ಮಂತ್ರ ಮುಗ್ಧರನ್ನಾಗಿಸುತ್ತದೆ. ನಿಸರ್ಗ ಚಿತ್ರಗಳಲ್ಲಿನ ದೃಶ್ಯವನ್ನು ದೂರ, ಸಮೀಪ, ಆಳ ಮತ್ತು ಎತ್ತರವನ್ನು ತೋರಿಸುವ ತಂತ್ರ ವಿಭಿನ್ನವಾಗಿದೆ. ಇವರ ಚಿತ್ರ ರಚನೆಯ ತಂತ್ರವೆನೆಂದರೆ ಮುಖ್ಯವಾಗಿ ಇವರು ತೈಲವರ್ಣದಲ್ಲಿ ಕ್ಯಾನ್‌ವಾಸಿನ ಮೇಲೆ ಚಿತ್ರಗಳನ್ನು ರಚಿಸುತ್ತಾರೆ ಮತ್ತು ಇವರ ಚಿತ್ರಗಳಲ್ಲಿ ಸೌಮ್ಯವರ್ಣಗಳನ್ನೇ ಬಳಸುತ್ತಾರೆ ಇವರ ಚಿತ್ರ ನೋಡಿದವರನ್ನು ಹಾಗೆಯೇ ನೋಡುವ ಹಾಗೆ ಮಾಡುತ್ತವೆ. ಚಿತ್ರ ರಚನೆಯ ನಂತರ ರಚಿಸಿದ ಮೇಲೆ ತೈಲವರ್ಣದ ಹಾಳಾಗಿರುವ ಕುಂಚಗಳ ಸಹಾಯದಿಂದ ಗೀಚುತ್ತಾರೆ ಇದರಿಂದ ಒಂದು ತರಹದ ಮೈವಳಿಕೆ(ಟೆಕ್ಷರ್) ಚಿತ್ರ ಫಲಕದ ಮೇಲೆ ಉಂಟಾಗುತ್ತದೆ ಮತ್ತು ರಚಿಸಿದ ಚಿತ್ರಗಳು ವಿಭಿನ್ನವಾಗಿ ಮತ್ತು ಸುಂದರವಾಗಿ ಕಾಣಿಸುತ್ತವೆ.

ಇವರ ಪಾಶ್ವಾತ್ಯ ಶೈಲಿಯಲ್ಲಿ ಭಾರತೀಯ ಪ್ರಕೃತಿ ಸೌಂದರ್ಯ, ಭಾರತೀಯ ಮಹಾನ್ ನಗರಗಳ ಕಟ್ಟಡಗಳು, ರಸ್ತೆ ಬೀದಿಗಳು, ಹಳ್ಳಿಯ ಸೊಗಡು, ಮನೆ, ಗುಡಿಸಲುಗಳು, ಐತಿಹಾಸಿಕ ಸ್ಮಾರಕಗಳು ಇವರ ನಿಸರ್ಗ ಕಲಾಕೃತಿಗಳಿಂದ ರಚಿತವಾಗಿವೆ. ಅಲ್ಲದೇ ನಿಸರ್ಗ ಚಿತ್ರಗಳು ಮೂರ್ತ ಮತ್ತು ಅಮೂರ್ತ ಶೈಲಿಯಲ್ಲಿ ರಚಿಸಿದ್ದಾರೆ.

೬.೯. ವ್ಹಿ.ಬಿ. ಬಿರಾದಾರ

ಇವರು ಬಾಲ್ಯದಲ್ಲಿ ಜೇಡಿ ಮಣ್ಣಿನಿಂದ ಚಿತ್ರ ರಚನೆ, ನಕಾಶೆ, ನಿಸರ್ಗಚಿತ್ರ ಮುಂತಾದವುಗಳನ್ನು ರಚಿಸುವುದನ್ನು ಆಸಕ್ತಿಯಿಂದ ನೋಡುತ್ತಿದ್ದರು, ತಮ್ಮೂರಲ್ಲಿ ನಡೆಯುತ್ತಿದ್ದ ಸಣ್ಣಾಟ, ದೊಡ್ಡಾಟ ಮತ್ತು ನಾಟಕ ಪ್ರದರ್ಶನದಲ್ಲಿ ಸಕ್ರೀಯವಾಗಿ ಭಾಗಿಯಾಗುತ್ತಿದ್ದರು ಮತ್ತು ಪಾತ್ರಧಾರಿಗಳಿಗೆ ಬಣ್ಣ ಹಚ್ಚಿ ಮೀಸೆ ತಿದ್ದಿ ತೀಡಿ ರಂಗ ಪ್ರದರ್ಶನಕ್ಕೆ ಅವರನ್ನು ತಯಾರಿಸುತ್ತಿದ್ದಾಗಲೇ ಬಿರಾದಾರರಿಗೆ ಪೂರ್ಣ ತಲ್ಲಿನತೆ, ತನ್ಮಯತೆ ಮತ್ತು ಚಿತ್ರಕಲೆಯಲ್ಲಿ ಅಸಾಧರಣವಾದ ಸಾಧನೆಯನ್ನು ಮಾಡಲು ಮನಸ್ಸು ಸದಾ ಮಿಡಿಯುತ್ತಿತ್ತೆಂದು ಕಂಡುಬರುತ್ತದೆ.

ಬಿರಾದಾರರ ಅಜ್ಜನ ಊರಾದ ಉಪಳಾಂವನಲ್ಲಿ ಗೋವಿಂದಪ್ಪನವರು ದೇವಾಲಯದ ಗೋಡೆಗಳ ಮೇಲೆ ಬರೆಯುತಿದ್ದ ಚಿತ್ರದ ಕಡೆಗೆ ಪ್ರಭಾವಿತರಾದರು. ಗೋವಿಂದಪ್ಪನವರ ಚಿತ್ರಗಳು ಮತ್ತು ಅವರ ಕುಂಚದ ಕೈಚಳಕಕ್ಕೆ ಇನ್ನು ಪ್ರಭಾವಿತರಾಗಿ ನಾನು ಕಲಾವಿದನಾಗಬೇಕೆಂಬ ಆಸೆ ಜನ್ಮತಾಳಿತು. ಲಕ್ಷ್ಮೀ, ಸರಸ್ವತಿ, ಶಿವಲಿಂಗ, ನಂದಿ ಮುಂತಾದ ಗೋವಿಂದಪ್ಪನವರು ಬಿಡಿಸಿದ ಚಿತ್ರಗಳನ್ನು ನೋಡಿ ಪ್ರಭಾವಿತರಾದರು. ಬಾಲ್ಯದ ಶಿಕ್ಷಣದಲ್ಲಿ ಶಾಂತಪ್ಪ ಮಾಸ್ತರ್ ರವರು ಬಿರಾದಾರರು ಗೀಚುತಿದ್ದ ಚಿತ್ರಗಳನ್ನು ನೋಡಿ ಇನ್ನೂ ಚಿತ್ರ ಬಿಡಿಸಲು ಪ್ರೋತ್ಸಾಹಿಸುತ್ತಿದ್ದರು. ಮುಂದೆ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಪಿ.ಯು.ಸಿ

ನಲ್ಲಿ ಚಿತ್ರಕಲೆಯನ್ನು ಐಚ್ಛಿಕ ವಿಷಯವಾಗಿ ಆಯ್ಕೆ ಮಾಡಿಕೊಂಡಾಗ ತರಗತಿಯಲ್ಲಿ ಜೆ.ಎಸ್. ಖಂಡೇರಾವರು ಉಪನ್ಯಾಸಕರಾಗಿದ್ದರು ಇವರಲ್ಲಿ ಬಿರಾದರರು ಕಲೆಯಲ್ಲಿ ತಮಗಿರುವ ಆಸಕ್ತಿಯನ್ನು ಮುಕ್ತವಾಗಿ ಹೇಳಿಕೊಂಡರು.

ಬಿರಾದಾರರು ಮತ್ತು ಅವರ ಗೆಳೆಯರು ಕಲಾಕ್ಷೇತ್ರದಲ್ಲಿ ತಮ್ಮನ್ನು ಗುರುತಿಸಿಕೊಳ್ಳಬೇಕೆಂಬ ಗುರಿಯನ್ನು ಇಟ್ಟುಕೊಂಡು ಸದಾಕಾಲ ಗೆಳೆಯರೊಂದಿಗೆ ಸತತ ಚಿತ್ರಕಲೆಯ ಚಿಂತನ-ಮಂಥನ ಮತ್ತು ಚರ್ಚೆಗಳನ್ನು ಮಾಡುವುದರಿಂದ ಕಲೆಯಲ್ಲಿ ಆಳವಾಗಿ ಇಳಿಯಲು ಸಾಧ್ಯವಾಯಿತೆಂದು ತಿಳಿಯಬಹುದು ಮತ್ತು ಉಪನ್ಯಾಸಕರಾದ ಖಂಡೇರಾವರ ಮಾರ್ಗದರ್ಶನದಲ್ಲಿ ಸ್ಕೆಚ್ಚಿಂಗ್, ಡ್ರಾಯಿಂಗ್ ಮಾಡಲು ನಗರದ ವಿವಿಧ ಸ್ಥಳಗಳಿಗೆ ಹೋಗಿ ನೂರಕ್ಕೂ ಹೆಚ್ಚು ಸ್ಕೆಚ್ಚುಗಳನ್ನು ಮಾಡುತಿದ್ದರು.

ಮುಂದೆ ಗುಲಬರ್ಗಾದಲ್ಲಿ ಡಿ.ಎಂ.ಸಿ ಮಾಡಿದಾಗ ಖ್ಯಾತ ಕಲಾವಿದರಿಂದ ವಿ.ಜಿ. ಅಂದಾನಿ, ಎಂ.ಬಿ.ಲೋಹಾರ, ಬಸವರಾಜ ಉಪ್ಪಿನ್ ಮುಂತಾದವರಿಂದ ತಮ್ಮ ಕಲೆಗೆ ತಿದ್ದುವ ಮುಖಾಂತರ ಇನ್ನಷ್ಟು ಪ್ರೇರಣೆ ದೊರೆಯಿತು. ಖಂಡೇರಾವರು ಮುಂಬಯಿನ ಜೆ.ಜೆ. ಕಲಾಶಾಲೆಯ ಅನುಭವಗಳನ್ನು ಹಂಚಿಕೊಳ್ಳುತ್ತಿದ್ದರು. ನಂತರ ಕೆನ್ ಕಲಾಶಾಲೆಯಲ್ಲಿ ಡಿಪ್ಲೋಮಾ ಮಾಡಿದಾಗ ಆರ್. ಎಂ. ಹಡಪದರ ನಿಸರ್ಗಚಿತ್ರ(ಲ್ಯಾಂಡ್‌ಸ್ಕೆಪ್)ಗಳು, ಡ್ರಾಯಿಂಗ್, ಪೋಟ್ರೇಟ್, ಸ್ಕೆಚ್ಚ್ ಮೊದಲಾದುಗಳನ್ನು ನೋಡಿ ಬಿರಾದಾರರಿಗೆ ಇನ್ನು ಪ್ರೇರಣೆ, ಪ್ರಭಾವ ಸಿಕ್ಕಿತು. ಗುಲಬರ್ಗಾದಲ್ಲಿ ಶರಣಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿದ್ದಾಗ ಎಂ.ಎ. ಡ್ರಾಯಿಂಗ್ ಮತ್ತು ಪೇಂಟಿಂಗ್‌ನಲ್ಲಿದ್ದಾಗ ಅನೇಕ ಅಥತಿ ಉಪನ್ಯಾಸಕರಾದ ಜೆ.ಜೆ. ಕಲಾಶಾಲೆಯ ಶಂಕರ್ ಪಳಸೀಕರ್, ಮೃಗಾಂಕ್ ಜೋಶಿ, ಹೈದರಾಬಾದಿನ ಗೌರಿಶಂಕರರವರು, ಪೀಟರ್ ಲೂಯೀಸ್‌ರವರ ಕಲಾಕೃತಿಗಳಿಗೆ ತುಂಬಾನೆ ಪ್ರೇರಣೆ ದೊರೆಯಿತು.

ಮುಖ್ಯವಾಗಿ ಕರ್ನಾಟಕದ ಖ್ಯಾತ ಕಲಾವಿದರಾದ ಜೆ.ಎಸ್. ಖಂಡೇರಾವರು ನಿಸರ್ಗ ಚಿತ್ರ ರಚಿಸುವ ಸಲುವಾಗಿ ವಿದ್ಯಾರ್ಥಿಗಳನ್ನು ಬಾದಾಮಿ, ಹಂಪಿ, ಐಹೊಳೆ, ಪಟ್ಟದಕಲ್ಲು ಮತ್ತು ಗುಲಬರ್ಗಾದ ಸುತ್ತ-ಮುತ್ತ ಹಳ್ಳಿಗಳಿಗೆ ಕರೆದುಕೊಂಡು ಹೋಗಿ ಅಲ್ಲಿ ಸ್ವತಃಹ ಖಂಡೇರಾವರೇ ನಿಸರ್ಗ ಚಿತ್ರಗಳನ್ನು ಮಾಡಿ ತೊರಿಸುತ್ತಿದ್ದರು. ಇದರಿಂದ ಬಿರಾದಾರರು ತುಂಬಾನೆ ಪ್ರಭಾವಕ್ಕೊಳಗಾಗಿ ಖಂಡೇರಾವರ ತರಹವೇ ಇವರ ನಿಸರ್ಗ ಚಿತ್ರದ ಶೈಲಿಯು ಕಂಡು ಬರುತ್ತದೆ. ಇವರಿಬ್ಬರಲ್ಲಿ ವ್ಯತ್ಯಾಸವೆನೆಂದರೆ ಖಂಡೇರಾವರು ತೈಲವರ್ಣದಿಂದ ಕ್ಯಾನ್‌ವಾಸಿನ ಮೇಲೆ ನಿಸರ್ಗ ಚಿತ್ರಗಳನ್ನು ಮಾಡುತ್ತಾರೆ. ಬಿರಾದಾರು ಜಲವರ್ಣದಿಂದ ಬಫ್ ಪೇಪರ್, ಹ್ಯಾಂಡ್‌ಮೇಡ್ ಪೇಪರಲ್ಲಿ ನಿಸರ್ಗ ಚಿತ್ರಗಳನ್ನು ಮಾಡುತ್ತಾರೆ. ಇವರ ಚಿತ್ರದ ವಿಶೇಷತೆ ಎನೆಂದರೆ ನಿಸರ್ಗ ಚಿತ್ರವನ್ನು ರಚಿಸುವಾಗ ಬಣ್ಣಗಳ ಮಿಶ್ರಣದಿಂದ ನೆರಳು-ಬೆಳಕನ್ನು ಅಧ್ಬುತವಾಗಿ ತೋರಿಸುತ್ತಾರೆ. ಒಂದು ಕ್ಷಣನೋಡಿದರೆ ನಿಜವಾಗಿಯೂ ಸೂರ್ಯನ ಬೆಳಕು ಹೀಗೆ ಬೀಳುತ್ತದೆನೋ ಅನ್ನುವ ಹಾಗೆ ಚಿತ್ರವನ್ನು ರಚಿಸುತ್ತಾರೆ.

❑❑❑

ಅಧ್ಯಾಯ : ಏಳು

ಸಮಾರೋಪ

ಪ್ರಸ್ತುತ ಕರ್ನಾಟಕದ ನಿಸರ್ಗ ಚಿತ್ರಕಲೆ (ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯಡಿ ಎಂ.ಫಿಲ್ ಪದವಿಗಾಗಿ ಅಧ್ಯಯನ ಮಾಡಲಾಗಿದೆ. ಕರ್ನಾಟಕದಲ್ಲಿ ಅನೇಕ ಕಲೆಗಳು ಬೆಳೆದು ಬಂದಿವೆ. ವಿವಿಧ ಕಲಾಶೈಲಿಯನ್ನು ವಿವಿಧ ಕಲಾವಿದರು ಬೆಳೆಸಿಕೊಂಡು ಬಂದಿದ್ದಾರೆ. ಇತ್ತೀಚಿನ ನವ ಯುಗದಲ್ಲಿ ಪ್ರಾಕೃತಿಕ ಮತ್ತು ಸಾಂಪ್ರದಾಯಿಕ ಶೈಲಿಗಳ ಬದಲಾಗಿ ಬೇರೆ ಬೇರೆ ಕಲೆಗಳು ಆವರಿಸಿಕೊಂಡಿವೆ. ಈ ನಿಸರ್ಗ ಚಿತ್ರಕಲೆಯಲ್ಲಿ ಅನೇಕ ಹಿರಿಯ ಕಲಾವಿದರು ಉಳುಮೆಯನ್ನು ಮಾಡಿದ್ದಾರೆ/ಮಾಡುತ್ತಿದ್ದಾರೆ. ಕರ್ನಾಟಕದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕವನ್ನು ವ್ಯಾಪ್ತಿಗೊಳಿಸಲಾಗಿದೆ. ಈ ಉತ್ತರ ಕರ್ನಾಟಕದ ಭಾಗದ ನಿಸರ್ಗ, ನಿಸರ್ಗ ಚಿತ್ರಕಲೆ ಮತ್ತು ನಿಸರ್ಗ ಚಿತ್ರಕಲಾವಿದರ ಬದುಕು ಮತ್ತು ಅವರ ಕಲಾಕೃತಿಗಳನ್ನು ಅಧ್ಯಯನ ಮಾಡಿ ವಿವರಣೆ ನೀಡಲಾಗಿದೆ.

ಪ್ರಸ್ತುತ ಸಂಪ್ರಬಂಧದಲ್ಲಿ ಏಳು ಅಧ್ಯಾಯಗಳು ಇದ್ದು, ಕರ್ನಾಟಕದ ನಿಸರ್ಗ ಚಿತ್ರಕಲೆಯಲ್ಲಿ ಉತ್ತರ ಕರ್ನಾಟಕವನ್ನು ವ್ಯಾಪ್ತಿಗೋಳಿಸಿಕೊಳ್ಳಲಾಗಿದ್ದು, ಈ ಅಧ್ಯಯನಕ್ಕೆ ಮುಖ್ಯವಾಗಿ ಎರಡು ರೀತಿಯ ವಿಧಾನವನ್ನು ಅನುಸರಿಸಲಾಗಿದೆ. ಒಂದನೆಯದು ಮೂಲ ಆಕರ ಸಾಮಗ್ರಿ ಆಗಿದ್ದು, ಎರಡನೆಯದು ಆನುಷಂಗಿಕ ಆಕರ ಸಾಮಗ್ರಿಯಾಗಿದೆ. ಈ ಎರಡು ವಿಧಾನಗಳಿಂದ ಉತ್ತರ ಕರ್ನಾಟಕದ ನಿಸರ್ಗ ಚಿತ್ರಕಲೆ, ಕಲಾವಿದರು ಮತ್ತು ಅವರ ಕಲಾಕೃತಿಗಳ ಅಧ್ಯಯನವನ್ನು ಮಾಡಲಾಗಿದೆ.

ಈ ಸಂಪ್ರಬಂಧದಲ್ಲಿ ರಚಿಸುವ ಉತ್ತರ ಕರ್ನಾಟಕದ ಪ್ರಮುಖ ಹಿರಿಯ ಕಲಾವಿದರ ಬದುಕು ಮತ್ತು ಕಲಾಕೃತಿಗಳನ್ನು ಆಧರಿಸಿ ಕಲೆಗೆ ಪೂರಕವಾಗಿ ಕ್ಷೇತ್ರಕಾರ್ಯ ಮತ್ತು ಸಂದರ್ಶನ ಮಾಡಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕಲೆಹಾಕಿ ತಲಸ್ಪರ್ಶಿಯಾಗಿ ಅಧ್ಯಯನ ಮಾಡಲಾಗಿದೆ. ಇವುಗಳನ್ನು ಅಧ್ಯಯನದ ಮೂಲ ಆಕರ ಸಾಮಗ್ರಿಯನ್ನಾಗಿಸಲಾಗಿದೆ.

ಪ್ರಸ್ತುತ ಸಂಪ್ರಬಂಧದಲ್ಲಿ ಪ್ರಕಟಿತ, ಅಪ್ರಕಟಿತ ಕೃತಿಗಳು, ಗೆಝಟೀಯರಗಳು, ವಿಶ್ವಕೋಶಗಳು, ಗ್ರಂಥಸೂಚಿಗಳು, ಶಬ್ದಕೋಶಗಳು, ಪ್ರಮುಖ ಕಲಾವಿದರು ರಚಿಸಿದ ಕಲಾಕೃತಿಗಳ ನೆಲೆಗೆ ತೆರಳಿ ಛಾಯಾ ಚಿತ್ರಣ ಮಾಡಿಕೊಂಡಿದೆ ಕೆಲವು ಸಂದರ್ಭದಲ್ಲಿ ಕಲಾವಿದರ ಕಲಾಕೃತಿಗಳು ಲಭ್ಯವಾಗದಿದ್ದಾಗ ಅವರು ರಚಿಸಿರುವ ಕಲಾಕೃತಿಗಳ ಛಾಯಾಚಿತ್ರಗಳನ್ನು ಆನುಷಂಗಿಕ ಆಕರವಾಗಿ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ನಿಸರ್ಗ ಚಿತ್ರಕಲೆಯು ಹೇಗೆ ಬೆಳೆದು ಬಂದಿದೆ. ಈ ನಿಸರ್ಗ ಚಿತ್ರಕಲೆಯ ನೆಲೆ ಹಿನ್ನಲೆಯ ಬಗ್ಗೆ ವಿವರಿಸಲಾಗಿದೆ. ಜಗತ್ತಿನ ಎಲ್ಲಾ ಕಲೆಗಳಲ್ಲಿ ನಿಸರ್ಗ ಚಿತ್ರಕಲೆಯೂ ಪ್ರಮುಖವಾಗಿದ್ದು, ಈ ಕಲೆಯನ್ನು ವಿಶ್ವದ್ಯಾಂತ ಅನೇಕ ಖ್ಯಾತ ಕಲಾವಿದರು ತಮ್ಮ ಅಭಿವ್ಯಕ್ತಿಯ ಪ್ರಮುಖ ಸಾಧನವನ್ನಾಗಿ ಮಾಡಿಕೊಂಡು ಕಲಾಕೃತಿಗಳನ್ನು ರಚಿಸಿದ್ದು ಕಂಡುಬರುತ್ತದೆ. ಮೊದ ಮೊದಲು ಜಗತ್ತಿನ ಎಲ್ಲಾ ದೇಶಗಳಲ್ಲಿ ನಿಸರ್ಗ ಚಿತ್ರಕಲೆಯನ್ನು ಸಾಂಪ್ರದಾಯಿಕ ಕಟ್ಟಲೆಗಳಲ್ಲಿ, ಧರ್ಮದ ಅಧೀನದಲ್ಲಿ ಅಥವ ಧರ್ಮ ಪ್ರಚಾರಕ್ಕಾಗಿ, ವ್ಯಾಪಾರಕ್ಕಾಗಿ, ರಾಜ–ಮಹಾರಾಜರನ್ನು, ಶ್ರೀಮಂತ ವರ್ಗದವರನ್ನು ಮನವೊಲಿಸಲು ಮತ್ತು ಧರ್ಮದ ಹಿನ್ನಲೆಯಲ್ಲಿ ರಚಿತವಾದ ಕಥೆಗಳು, ಜಾತಕ ಕಥೆಗಳು ಆಧರಿಸಿ ಚಿತ್ರಗಳನ್ನು ರಚಿಸುತ್ತಿದ್ದರು. ಗ್ರಂಥಗಳಲ್ಲಿ ಬರುವ ಸನ್ನಿವೇಶಗಳಿಗೆ ತಕ್ಕಂತೆ ದೇವ–ದೇವತೆಗಳ ಚಿತ್ರಗಳನ್ನು ರಚಿಸುತ್ತಿದ್ದರು. ಚಿತ್ರದ ಮುಖ್ಯ ವಸ್ತು ವಿಷಯಗಳು ದೇವ–ದೇವತೆಗಳಾದರೆ ಚಿತ್ರಗಳ ಹಿನ್ನಲೆಯಲ್ಲಿ ಒಂದಲ್ಲ ಒಂದು ತರಹದ ಪ್ರಕೃತಿಯನ್ನು ರಚಿಸುತ್ತಿದ್ದರು. ಹೀಗೆ ರಾಜ–ಮಹಾರಾಜರ ಮತ್ತು ಶ್ರೀಮಂತ ವರ್ಗದವರ ಭಾವಚಿತ್ರಗಳಲ್ಲಿ ಅಥವಾ ಸಂಯೋಜನೆಯ ಚಿತ್ರಗಳಲ್ಲಿ ನಿಸರ್ಗವನ್ನು ಹಿನ್ನಲೆಯಾಗಿ ಬಳಸಿಕೊಂಡಿರುವುದನ್ನು ಕಂಡು ಬಂದಿದೆ. ಪಾಶ್ಚಾತ್ಯ ಅನೇಕ ಕಲಾಕೃತಿಗಳ ಸಂಯೋಜನೆಯ ಚಿತ್ರಗಳಲ್ಲಿ ನಿಸರ್ಗವನ್ನು ಪ್ರಮುಖವಾಗಿಟ್ಟುಕೊಂಡರೂ ಪ್ರಕೃತಿಯಲ್ಲಿ ವಿಹರಿಸುವಂತೆ ಮನುಷ್ಯರ ಚಿತ್ರಗಳನ್ನು ಮೂಲ ವಸ್ತು ವಿಷಯವನ್ನಾಗಿಸಿ ನಿಸರ್ಗ ಚಿತ್ರಕಲೆಯನ್ನು ಮೂಲಚಿತ್ರದ ಹಿನ್ನಲೆಯಾಗಿ ಬಳಸಿಕೊಂಡು ಚಿತ್ರಿಸಿದ್ದನ್ನು ಕಂಡುಬರುತ್ತದೆ.

ಅಧ್ಯಾಯ ಮೂರರಲ್ಲಿ ನಿಸರ್ಗ ಚಿತ್ರಕಲೆಯ ರಚನಾ ವಿಧಿ–ವಿಧಾನಗಳನ್ನು ಮತ್ತು ಪರಿಕರಗಳನ್ನು ಒಳಗೊಂಡಿದ್ದು ಯಾವ ಯಾವ ಬಣ್ಣಗಳಿಂದ ಹೇಗೆ ನಿಸರ್ಗ ಚಿತ್ರಗಳು ಮಾಡುವುದು ಸೂಕ್ತ ಮತ್ತು ಯಾವ ಬಣ್ಣಗಳಿಂದ ನಿಸರ್ಗ ಚಿತ್ರಗಳು ಮಾಡುವುದು ಸೂಕ್ತವಲ್ಲ. ಒಂದು ವೇಳೆ ಚಿತ್ರಗಳು ಮಾಡಿದರೆ ಹೇಗೆ ಮೂಡಿ ಬರುತ್ತದೆ ಎಂಬುದನ್ನು ಹೇಳಲಾಗಿದೆ. ವಿವಿಧ ಬಣ್ಣಗಳ ಗುಣಧರ್ಮವನ್ನು ಹೇಳಲಾಗಿದ್ದು, ಆ ಬಣ್ಣಗಳು ಯಾವ ರೀತಿಯಾಗಿ ಹಾಳೆಯ ಮೇಲೆ ಅಥವ ಕ್ಯಾನ್‌ವಾಸಿನ ಮೇಲೆ ಕಾರ್ಯನಿರ್ವಹಿಸುತ್ತವೆ ಎನ್ನುವುದು ಹೇಳಲಾಗಿದೆ. ನಿಸರ್ಗ ಚಿತ್ರಕಲೆಗೆ ಏನೇನು ಬೇಕು ಎಲ್ಲ ಪರಿಕರಗಳ ಬಗ್ಗೆ ವಿವರಿಸಲಾಗಿದೆ. ಈ ನಿಸರ್ಗ ಚಿತ್ರಕಲೆಯಲ್ಲಿ ಯಾವ ಯಾವ ವಿಧಗಳಿವೆ ಮತ್ತು ಆ ವಿಧಗಳಲ್ಲಿ ಹೇಗೆ ನಿಸರ್ಗ ಚಿತ್ರಗಳನ್ನು ಮಾಡಬೇಕೆಂದು ವಿವರಣೆ ನೀಡಲಾಗಿದೆ.

ನಿಸರ್ಗ ಚಿತ್ರಗಳ ವಸ್ತು ವೈವಿಧ್ಯತೆ ಮತ್ತು ಮಾಧ್ಯಮಗಳಾವವೆಂದು **ಅಧ್ಯಾಯ ನಾಲ್ಕನ್ನಾಗಿ** ಮಾಡಿ ನಿಸರ್ಗ ಚಿತ್ರಗಳಲ್ಲಿ ವಸ್ತು–ವಿಷಯಗಳಾವವು. ಬಣ್ಣಗಳ ವೈವಿಧ್ಯತೆಗಳನ್ನು ವಿವರಿಸಲಾಗಿದ್ದು, ವಿವಿಧ ಮಾಧ್ಯಮಗಳಲ್ಲಿ ನಿಸರ್ಗ ಚಿತ್ರ ರಚಿಸುವ ವಿಧಾನದ ಬಗ್ಗೆ ವಿವರಿಸಲಾಗಿದೆ. ಬಣ್ಣಗಳ ವರ್ಗೀಕರಣ,

ಯಾವ ಯಾವ ಬಣ್ಣಗಳು ಬೇರೆಸಿದರೆ ಯಾವ ಬಣ್ಣ ಹುಟ್ಟುತ್ತದೆ, ಬಣ್ಣಗಳ ವಿವಿಧ ಮಾಧ್ಯಮಗಳಾವವು, ಪ್ರಖರ ವರ್ಣಗಳು, ಸೌಮ್ಯ ವರ್ಣಗಳು, ವಿರೋಧ ವರ್ಣಗಳು, ಪಾರದರ್ಶಕ ಮತ್ತು ಅಪಾರದರ್ಶಕ ವರ್ಣಗಳ ಬಗ್ಗೆ ಸ್ಥೂಲವಾಗಿ ವಿವರಿಸಲಾಗಿದೆ.

ಪಾಶ್ಚಾತ್ಯ, ಭಾರತ ಮತ್ತು ಕರ್ನಾಟಕದಲ್ಲಿ ಅನೇಕ ಪ್ರಖ್ಯಾತ ನಿಸರ್ಗ ಚಿತ್ರಕಾರರಾಗಿದ್ದುದನ್ನು ನಮಗೆ ಗೊತ್ತು. **ಅಧ್ಯಾಯ ಐದರಲ್ಲಿ** ಉತ್ತರ ಕರ್ನಾಟಕದ ಪ್ರಮುಖ ನಿಸರ್ಗ ಚಿತ್ರಕಲಾವಿದರನ್ನು ಅದರಲ್ಲಿ ಕೆಲವರನ್ನು ಆರಿಸಿಕೊಂಡು ಅಧ್ಯಯನಕ್ಕೆ ಒಳಪಡಿಸಿ ಅವರ ಜೀವನ ಮತ್ತು ಅವರ ಕಲಾಕೃತಿಗಳ ಬಗ್ಗೆ ಚರ್ಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ಕಲಾವಿದರ ಮೇಲಾದ ಪ್ರಭಾವ, ಪ್ರೇರಣೆ, ತಂತ್ರ ಮತ್ತು ಶೈಲಿಯಾಗಿದ್ದು, ಇದರಲ್ಲಿ ಉತ್ತರ ಕರ್ನಾಟಕದ ಪ್ರಕೃತಿ ಕಲಾವಿದರ ಮೇಲೆ ಪ್ರಭಾವ, ಪ್ರೇರಣೆ ಹೇಗೆ ಬೀರಿದೆ. ಯಾರಿಂದ ಹೇಗೆ ಪ್ರೇರಿತಗೊಂಡರು, ಇವರ ನಿಸರ್ಗ ಚಿತ್ರ ರಚಿಸುವ ತಂತ್ರಗಳೇನು? ಮತ್ತು ಯಾವ ಶೈಲಿಯಲ್ಲಿ ನಿಸರ್ಗ ಚಿತ್ರಗಳನ್ನು ಮಾಡಿದ್ದಾರೆ/ಮಾಡುತ್ತಿದ್ದಾರೆಂಬುದನ್ನು ವಿವರವಾಗಿ ಹೇಳಲಾಗಿದೆ.

ಅಧ್ಯಾಯ ಏಳನ್ನು ಸಮಾರೋಪವನ್ನಾಗಿಸಿ ಈ ಕರ್ನಾಟಕದ ನಿಸರ್ಗ ಚಿತ್ರಕಲೆ (ಉತ್ತರ ಕರ್ನಾಟಕದ ಪ್ರಾತಿನಿಧಿಕ ಕಲಾವಿದರನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯದ ಅಧ್ಯಯನವನ್ನು ಮಾಡಿದ ಇಡೀ ಆರು ಅಧ್ಯಾಯಗಳಲ್ಲಿನ ಅಂಶಗಳನ್ನು ಏಳನೆಯ ಅಧ್ಯಾಯವಾದ ಸಮಾರೋಪದಲ್ಲಿ ವಿವರಣೆ ಕೊಡಲಾಗಿದೆ.

ಅಧ್ಯಯನದ ಫಲಿತಗಳು

೧. ಉತ್ತರ ಕರ್ನಾಟಕದ ನಿಸರ್ಗ ಚಿತ್ರಕಲಾವಿದರ ಜೀವನ ಮತ್ತು ಅವರ ಕಲಾಕೃತಿಗಳನ್ನು ವಿವಿರವಾಗಿ ತಿಳಿದುಕೊಳ್ಳಬಹುದು.

೨. ಅಧ್ಯಯನಕೊಳಪಡಿಸಿದ ಕಲಾವಿದರು ಹೆಚ್ಚಾಗಿ ಸ್ವಯಂ ಪ್ರೇರಿತವಾದುದು ಬಾಲ್ಯದಿಂದಲೇ ಎನ್ನಬಹುದು, ಇತರ ಕಲಾವಿದರ ಕಲಾಕೃತಿಗಳು ನೋಡುವುದರಿಂದ ಮತ್ತು ಸುತ್ತ-ಮುತ್ತಲಿನ ಪರಿಸರಕ್ಕೆ ಮನಸೋತು ಪ್ರಕೃತಿಯಿಂದ ಪ್ರೇರಣೆಗೊಂಡು ತಮ್ಮನ್ನು ತಮಗೆ ನಿಸರ್ಗ ಚಿತ್ರಗಳನ್ನು ಮಾಡುವಲ್ಲಿ ತೊಡಗಿಸಿಕೊಂಡಿರುವುದು ಕಾಣಬಹುದು.

೩. ಕಲಾವಿದರಲ್ಲಿ ಕೆಲವರು ಸ್ವತಂತ್ರ ಪೂರ್ವದಲ್ಲಿ ಜನಿಸಿದವರು ಇನ್ನೂ ಕೆಲವರು ಸ್ವತಂತ್ರ ನಂತರದಲ್ಲಿ ಜನಿಸಿದರು. ಕೆಲವು ಕಲಾವಿದರು ನಿಸರ್ಗ ಚಿತ್ರಕಲೆಯ ಜೊತೆಗೆ ಸ್ವತಂತ್ರ ಸಂಗ್ರಾಮದಲ್ಲಿ ಭಾಗವಹಿಸಿದ್ದವರು ಇದ್ದಾರೆ. ಸ್ವತಂತ್ರ ನಂತರದ ಕಲಾವಿದರುಗಳು ಕಲೆಗಾಗಿಯೇ ತಮ್ಮ ಜೀವನವನ್ನು ಅರ್ಪಿಸಿಕೊಂಡಿದ್ದಾರೆ.

೪. ಅಧ್ಯಯನಕ್ಕೊಳಪಡಿಸಿದ ಕಲಾವಿದರೆಲ್ಲರೂ ಎಸ್.ಎಸ್.ಸಿ, ಎಸ್.ಎಸ್.ಎಲ್.ಸಿ/ಹತ್ತನೆ ತರಗತಿಯ ನಂತರ ಉನ್ನತ ಕಲಾ ಶಿಕ್ಷಣಕ್ಕಾಗಿ ಖ್ಯಾತ ಮುಂಬಯಿಯ ಸರ್ ಜೆ.ಜೆ. ಕಲಾಶಾಲೆಗೆ ಮತ್ತು ಶಾಂತಿನೀಕೆತನದ ಕಲಾಶಾಲೆಗೆ ಸೇರಿರುವುದು ಕಂಡುಬರುತ್ತದೆ.

೫. ಕಲಾವಿದರ ಕಲಾ ಶಿಕ್ಷಣ ನಂತರ ಕೆಲವು ಕಲಾವಿದರು ಸ್ವತಂತ್ರವಾಗಿ ಕಲಾಕೃತಿಗಳು ಮಾಡುವುದು ಮತ್ತು ಪ್ರದರ್ಶಿಸುವುದನ್ನು ಮಾಡಿದ್ದಾರೆ ಕೆಲವರು ಕಲಾಕೃತಿಗಳ ರಚನೆಯ ಜೊತೆಗೆ ಕಲಾಗುರುಗಳಾಗಿ ಮತ್ತು ಉಪನ್ಯಾಸಕರಾಗಿಯೂ ಕೆಲಸ ಮಾಡಿದ್ದಾರೆ/ಮಾಡುತ್ತಿದ್ದಾರೆ.

೬. ಯಾವ ಯಾವ ಬಣ್ಣಗಳು ಹೇಗಿರುತ್ತವೆ, ಅವುಗಳ ಗುಣಧರ್ಮಗಳಾವವು ಅವುಗಳನ್ನು ಬಳಸುವುದು ಹೇಗೆಂದು ತಿಳಿದುಕೊಳ್ಳಬಹುದಾಗಿದೆ.

೭. ಎರಡೆರು ಬಣ್ಣಗಳ ಮಿಶ್ರಣದಿಂದ ಮತ್ತೊಂದು ಹೊಸ ಬಣ್ಣವು ಪಡೆದುಕೊಳ್ಳುವುದು ಹೇಗೆಂದು ತಿಳಿದುಕೊಳ್ಳಬಹುದು.

೮. ಕಲಾವಿದರ ಬದುಕು ಹೇಗಿರುತ್ತದೆಂಬುದನ್ನು ಈ ಅಧ್ಯಯನದಿಂದ ತಿಳಿದುಕೊಳ್ಳಬಹುದು.

೯. ಅಧ್ಯಯನಕ್ಕೊಳಪಡಿಸಿದ ಕೆಲವು ಕಲಾವಿದರು ಕರ್ನಾಟಕದ ಲಲಿತ ಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

೧೦. ಉತ್ತರ ಕರ್ನಾಟಕದ ಇನ್ನೂ ಅನೇಕ ಕಲಾವಿದರು ಬೆಳಕಿಗೆ ಬರದೆ ಹಾಗೆ ಉಳಿದಿದ್ದಾರೆ, ಅವರ ಅಧ್ಯಯನವನ್ನು ಮಾಡಬಹುದೆಂದು, ಆ ಕಲಾವಿದರನ್ನು ಅವರ ಕಲಾಕೃತಿಗಳನ್ನು ನಾಡಿನ ಜನತೆಗೆ ತಿಳಿಸಬಹುದೆಂದು ಈ ಮೂಲಕ ಹೇಳಬಹುದು.

❑❑❑

ಅನುಬಂಧ - ೧

ಸಂಕ್ಷೇಪಗಳು

ಕ.ವಿ.ವಿ.ಧಾ	:	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಕ.ವಿ.ವಿ.ಹಂ	:	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಕ.ಲ.ಅ.ಬೆಂ	:	ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು
ಚಿ.ಪ.ಬೆಂ	:	ಚಿತ್ರಕಲಾ ಪರಿಷತ್ತು, ಬೆಂಗಳೂರು
ಪ್ರ.ಮೈ.ವಿ.ವಿ.	:	ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ
ಪ್ರ.ಕ.ವಿ.ವಿ	:	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ
ಪು	:	ಪುಟ
ಅ.ಪ್ರ	:	ಅಪ್ರಕಟಿತ
ಮ.ಪ್ರ	:	ಮಹಾಪ್ರಬಂಧ
ಸಂ.	:	ಸಂಪಾದಕರು
ಪ್ರ.ಸಂ.	:	ಪ್ರಧಾನ ಸಂಪಾದಕರು
ಲೇ	:	ಲೇಖಕರು
ಸಂ.ಪ್ರ	:	ಸಂಪ್ರಬಂಧ
ಕಿ.ಪ್ರ	:	ಕಿರುಪ್ರಬಂಧ
ಪ್ರ:	:	ಪ್ರಕಾಶಕರು

ಅನುಬಂಧ - ೨

ಗ್ರಂಥಋಣ

೦೧. **ಅಮೀನಸಾಹೇಬ ಕಮಡೊಳ್ಳಿ** — **ಹಿರೇಮಠ ಬಿ. ಕೆ**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೪

೦೨. **ಆರ್. ಎಂ. ಹಡಪದ್** — **ಕೃಷ್ಣಯ್ಯ ಎಂ. ಎಚ್.**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೭(ದ್ವಿತೀಯ ಆವೃತ್ತಿ)

೦೩. **ಇಂಪ್ರೆಶನಿಸಂ** — **ಅ. ಲ. ನರಸಿಂಹನ್**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೫

೦೪. **ಎಂ.ವಿ. ಮಿಣಜಿಗಿ** — **ಗವೀಶ ಹಿರೇಮಠ**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೮೩

೦೫. **ಕನ್ನಡ ಸಂಶೋಧನಾ ಶಾಸ್ತ್ರ** — **ಡಾ. ಎಂ. ಎಂ. ಕಲಬುರ್ಗಿ**
ಪ್ರ: ಸ್ವಪ್ನಾ ಬುಕ್ ಹೌಸ್, ಬೆಂಗಳೂರು
೨೦೧೫

೦೬. **ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ** — **ಫಾಲಾಕ್ಷ**
ಪ್ರ: ಶಶಿ ಪ್ರಕಾಶನ, ತಿಪಟೂರು
೧೯೯೬

೦೭. **ಕರ್ನಾಟಕ ಕಲಾವಾರ್ತೆ (೮೭ನೇ ಸಂಚಿಕೆ)** — **ಸಂ. ಅ.ಲ. ನರಸಿಂಹನ್**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ಜುಲೈ-ಸೆಪ್ಟಂಬರ್. ೨೦೧೧

೦೮. **ಕರ್ನಾಟಕ ಚರಿತ್ರೆ (ಸಂಪುಟ-೧)** — **ಪ್ರೊ. ಷೇಕ್ ಅಲಿ**
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೫

೦೯. **ಕರ್ನಾಟಕದ ಚಿತ್ರಕಲೆಯಲ್ಲಿ ಬಣ್ಣದ ಬಳಕೆ** — **ಕೆ. ವಿ. ಕಾಳೆ**
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೦

೧೦. **ಕರ್ನಾಟಕದಲ್ಲಿ ಚಿತ್ರಕಲೆ** — **ಡಾ. ಶಿವರಾಮ ಕಾರಂತ**
ಪ್ರ: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ,
ಮೈಸೂರು. ೧೯೭೧

೧೧. **ಕಲಾಕೋಶ** — **ಪ್ರಸಂ. ಪಿ. ಆರ್. ತಿಪ್ಪೇಸ್ವಾಮಿ**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೪

೧೨. **ಕಲಾಚರಿತ್ರೆ** — **ಎನ್. ಮರಿಶಾಮಾಚಾರ್**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೨

೧೩. **ಕಲಾಪ್ರಪಂಚ** — **ಡಾ. ಶಿವರಾಮ ಕಾರಂತ**
ಪ್ರ: ಸ್ವಪ್ನಾ ಬುಕ್ ಹೌಸ್, ಬೆಂಗಳೂರು
೨೦೦೮ (ದ್ವಿತೀಯ ಆವೃತ್ತಿ)

೧೪. **ಕಲಾವಿದ ಆರ್. ಎಂ. ಹಡಪದ ಒಂದು ಅಧ್ಯಯನ** — **ಡಾ. ಸಿದ್ಧಲಿಂಗಯ್ಯ ಹಿರೇಮಠ**
ಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ,
ಹಂಪಿ.

೧೫. **ಕಲಾವಿದ ಎಂ.ಎ. ಚೆಟ್ಟಿಯವರ ಜೀವನ ಮತ್ತು ಕಲಾಕೃತಿಗಳು** — **ಡಾ. ಲಕ್ಷ್ಮೀದೇವಿ ಗವಾಯಿ**
ಪ್ರಕಟಿತ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೦೨

೧೬. **ಕಲಾವಿದ ಶಂಕರಗೌಡ ಬೆಟ್ಟದೂರ ಕಲಾಜೀವನ ಮತ್ತು ಕಲಾಕೃತಿಗಳು** — **ಶರೀಫಸಾಬ ಮುತ್ತಣ್ಣ**
ಅಪ್ರಕಟಿತ ಕಿರುಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. **ಕಲಿಕೆಯಲ್ಲಿ ಕಲೆ** — **ಅನು. ದಿವ್ಯಾಜ್ಯೋತಿ**
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು. ೨೦೦೯

೧೮. **ಕಲೆ ಅನುಭವ ಮತ್ತು ಅನುಭಾವ** — **ಚಂದ್ರಕಾಂತ ಕುಸನೂರ**
ಪ್ರ: ಮಾಲಗತ್ತಿ ಪ್ರಿಂಟಿಂಗ್, ಮತ್ತು ಪಬ್ಲಿಷಿಂಗ್ ಹೌಸ್, ಬೆಳಗಾವಿ. ೧೯೯೦

೧೯. **ಕಲೆ ಮತ್ತು ರಸಸ್ವಾದನೆ** — **ಸಂ. ಕೃಷ್ಣಯ್ಯ ಎಂ.ಎಚ್**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮

೨೦. **ಚಿತ್ರಕಲಾ ದರ್ಪಣ** — **ವಿ. ಟಿ. ಕಾಳೆ**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೭

೨೧. **ಚಿತ್ರಕಲಾ ಪ್ರಪಂಚ** — **ಪ್ರ.ಸಂ. ಪಿ.ಆರ್. ತಿಪ್ಪೇಸ್ವಾಮಿ**
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು. ೨೦೦೮

೨೨. **ಚಿತ್ರಕಲಾವಿದ ಜೆ. ಎಸ್. ಖಂಡೇರಾವ್ ಒಂದು ಅಧ್ಯಯನ** — **ಮಲ್ಲಿಕಾರ್ಜುನ ಸಿ. ಬಾಗೋಡಿ**
ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ, ಕ.ವಿ.ವಿ. ಹಂಪಿ. ೨೦೦೨

೨೩. **ಚೌಕಟ್ಟಿನಾಚೆ...** — **ಚಿದಾನಂದ ಸಾಲಿ**
ಪ್ರ: ಶ್ರೀನರಹಂ ತೀರ್ಥ ದಾಸ ಸಾಹಿತ್ಯ ಅಧ್ಯಯನ ಕೇಂದ್ರ, ರಾಯಚೂರು. ೨೦೦೯

೨೪. **ಜಾಗತಿಕ ಚಿತ್ರಕಲೆ** — **ಬಿ.ಪಿ. ಬಾಯಿರಿ**
ಪ್ರ: ಪ್ರತಿಭಾ ಗ್ರಂಥಮಾಲೆ, ಧಾರವಾಡ ೧೯೮೫

೨೫. ಡ್ರಾಯಿಂಗ್ ಶಿಕ್ಷಕ (ಸಚಿತ್ರ) — ಅಮೀನಸಾಹೇಬ ಕಮಡೋಳಿ
ಪ್ರ: ಭಾರತೀಯ ಸಾಹಿತ್ಯ ಮಂದಿರ, ಧಾರವಾಡ
೧೯೪೭

೨೬. ದೃಶ್ಯಕಲಾ — ಎನ್. ಮರಿಶಾಮಾಚಾರ್
ಪ್ರ: ಸಿ.ಎಂ.ಎನ್. ಪ್ರಕಾಶನ, ಬೆಂಗಳೂರು
೨೦೦೧

೨೭. ದೃಶ್ಯಕಲಾ ವಿಮರ್ಶೆ — ಅಂದಾನಿ ವಿ.ಜಿ.
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೧೯೯೯

೨೮. ನಾಡೋಜ ಡಾ. ಜೆ. ಎಸ್. ಖಂಡೇರಾವ್ — ಡಾ. ಮಲ್ಲಿಕಾರ್ಜುನಬಾಗೋಡಿ
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೩

೨೯. ನಾಡೋಜ ಡಾ. ವಿ.ಟಿ. ಕಾಳೆ — ಡಾ. ಎಸ್.ಸಿ. ಪಾಟೀಲ
ಪ್ರ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,
ಹಂಪಿ. ೨೦೧೩

೩೦. ನಿಜದನೆಲೆ — ಸಂ. ಡಾ. ಎಸ್. ಸಿ. ಪಾಟೀಲ, ಸತ್ಯಾನಂದ ಪಾತ್ರೋಟ
ಡಾ. ಬಿ. ಆರ್. ಹಿರೇಮಠರ ಅಭಿನಂದನಾ ಗ್ರಂಥ
ವೈರಾಗ್ಯದ ಮಲ್ಲಣಾರ್ಯ ಪ್ರಕಾಶನ,
ಬಸವೇಶ್ವರ ವಿದ್ಯಾವರ್ಧಕ ಸಂಘ, ಬಾಗಲಕೋಟ
೨೦೦೩

೩೧. ನಿಸರ್ಗ ಚಿತ್ರಕಲಾವಿದ ಜೆ.ಎಸ್. ಖಂಡೇರಾವ್ ಒಂದು ಅಧ್ಯಯನ — ಸಿದ್ದಮ್ಮ ಪಾಟೀಲ
ಅಪ್ರಕಟಿತ ಎಂ.ವಿ.ಎ ಕಿರುಪ್ರಬಂಧ,
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

೩೨. ಬಾರೋಕ ಕಲೆ — ಡಾ. ಎಸ್. ಸಿ. ಪಾಟೀಲ
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೯

೩೩. ಭಾರತೀಯ ಕಲೆ — ಎನ್. ಮರಿಶಾಮಾಚಾರ್
ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ,
ಬೆಂಗಳೂರು. ೨೦೦೯

೩೪. ಭಾರತೀಯ ಚಿತ್ರಕಲೆ — ಅನು. ಪಿ.ಆರ್. ತಿಪ್ಪೇಸ್ವಾಮಿ
ಪ್ರ: ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ,
ನವದೆಹಲಿ. ೧೯೭೦

೩೫. ವರ್ಣಾವರ್ಣ — ಚಿ. ಸು. ಕೃಷ್ಣಶೆಟ್ಟಿ
ಪ್ರ: ಚಿತ್ತಾರ ಪ್ರಕಾಶನ, ಬೆಮಲ್ ಬಡಾವಣೆ,
ರಾಜರಾಜೇಶ್ವರಿನಗರ, ಬೆಂಗಳೂರು. ೧೯೯೮

೩೬. ವಿಜಯ ಸಿಂಧೂರ — ಸುಬ್ರಹ್ಮಣ್ಯಂ ಕೆ.ವಿ.
ಪ್ರ: ಕರ್ನಾಟಕ ಲಲಿತಕಲಾ ಅಕಾಡೆಮಿ,
ಬೆಂಗಳೂರು. ೨೦೦೦

❑❑❑